

ಶ್ರೀ

ಕ್ರಾಂತಿ ಗಂಗೋತ್ರಿ

ಅ.ಪ.ತಿ

ಕ್ರಾಂತಿಗಂಗೋತ್ರಿ



ಲಕ್ಕಪ್ಪ ಅ. ಶಿರಹಟ್ಟಿ

ಶಿವಶಕ್ತಿ ಪ್ರಕಾಶನ :: ರಾಯಚೂರು

ಶ್ರೀ ಬಸವ ಭುವನದ ಶಾಂತಮೂರ್ತಿ,
ಸೊಸೆ ಸೌಭಾಗ್ಯವತಿ, ಸುಮಿತ್ರಾದೇವಿಗೆ.
ಮಂಗಲಾಶಯದೊಡನೆ —

10-11-70

ಲಕ್ಷ್ಮಣ ಶಿರಹಟ್ಟಿ

[illegible]

([illegible])

[illegible]

[illegible]

ಕ್ರಾಂತಿಗಂಗೋತ್ರಿ

(ಅಕ್ಕನಾಗಮ್ಮನವರ ಚರಿತ್ರೆ)

ಲಕ್ಕಪ್ಪ ಅ. ಶಿರಹಟ್ಟಿ

ಶಿವಶಕ್ತಿ ಪ್ರಕಾಶನ :: ರಾಯಚೂರು

ಲಿಂ. ಚುಕ್ಕಿ ಶಿವಮ್ಮನವರ ಸ್ಮಾರಕ ಗ್ರಂಥಮಾಲೆ : ೧

ಪ್ರಕಾಶಕರು :

ಚುಕ್ಕಿ ಬಂಧುಗಳು
ಶಿವಶಕ್ತಿಪ್ರಕಾಶನ
ಅಮರನಿವಾಸ, ಕೋಟೆ ರಾಯಚೂರು

ಪ್ರತಿಗಳು : ೧೦೦೦

ನವೆಂಬರ್ ೯, ೧೯೭೦

ಬೆಲೆ : ನಾಲ್ಕು ರೂಪಾಯಿ

ಮುಖಪುಟ : ಶ್ರೀ ಚಂದ್ರಕಾಂತ ಕುಸನೂರ

ಅಚ್ಚುಮಾಡಿದವರು :

ಜನತಾ ಪ್ರಿಂಟರಿ, ಅರಬ್ ಮೊಹಲ್ಲಾ
ರಾಯಚೂರು

ಮುಡಿಪು



ಲಿಂ. ಚುಕ್ಕಿ ಶಿವಮ್ಮನವರ
ಪುಣ್ಯಸ್ಮರಣೆಗಾಗಿ

—ಪ್ರಕಾಶಕರು

ಪರಿವಿಡಿ

ಕಲ್ಯಾಣದಲ್ಲಿ

ವಿಪ್ಲವ ಕಾಲದಲ್ಲಿ

ಉಳಿವೆಯಲ್ಲಿ ಮತ್ತು ಎಣ್ಣೆಹೊಳೆಯಲ್ಲಿ

ಮುನ್ನುಡಿ

ಅಕ್ಕನಾಗಮ್ಮನವರ ಪ್ರಸಾದಜೀವನದ ಮಹತಿಯನ್ನು ಸಂಶೋಧನಾತ್ಮಕ ದೃಷ್ಟಿಯಿಂದ ಅಭ್ಯಾಸಮಾಡಿ ಸೋದರ ಶ್ರೀ ಲಕ್ಕಪ್ಪ ಶಿರಪಟ್ಟಿ ಅವರು 'ಕ್ರಾಂತಿಗಂಗೋತ್ರಿ'ಯನ್ನು ಕನ್ನಡಿಗರ ಕೈಗಿತ್ತಿದ್ದಾರೆ. ಅಕ್ಕನಾಗಮ್ಮನವರ ಉಜ್ವಲ ವ್ಯಕ್ತಿತ್ವವನ್ನು ಸಮಗ್ರವಾಗಿ ಚಿತ್ರಿಸುವ ಗ್ರಂಥಗಳು ಈವರೆಗೂ ಇರಲಿಲ್ಲ. ಆ ಕೊರತೆಯನ್ನು ಶ್ರೀ ಲಕ್ಕಪ್ಪನವರು ತುಂಬಿದ್ದಾರೆ. ಈ ಮೊದಲು ಅವರು 'ಬಸವರಾಜ ದೇವರು' ಎಂಬ ಹೊತ್ತಗೆಯನ್ನು ಬರೆದಿದ್ದಾರೆ. ಕಲ್ಯಾಣ ಶರಣರ ಚರಿತ್ರೆಯನ್ನು ಬರೆಯುವಾಗ ಪ್ರಸಾದಯೋಗಿಣಿ ಅಕ್ಕನಾಗಲತಾಯಿಯನ್ನು ಕುರಿತು ವಿವರವಾಗಿ ಬರೆಯದೆ ಹೋದರೆ ಅದು ಪೂರ್ತಿಯಾಗಲಾರದು ಎಂಬ ಮಾತನ್ನು ಈ 'ಕ್ರಾಂತಿಗಂಗೋತ್ರಿ'ಯು ಸಾರಿಹೇಳುತ್ತದೆ.

ಭಕ್ತಿ, ಜ್ಞಾನ, ವೈರಾಗ್ಯದ ಶಿಖರವನ್ನೇರಿದ ಅಕ್ಕಮಹಾದೇವಿಯನ್ನು ಕುರಿತು ಪುರಾಣ, ಪ್ರಬಂಧ, ನಾಟಕಗಳು, ಕಾವ್ಯ, ಕಾದಂಬರಿಗಳು ಬೆಳಕಿಗೆ ಬಂದಿವೆ. ಆದರೆ ಭಕ್ತಿ, ಜ್ಞಾನ, ಕ್ರಿಯಾಚರಣೆಯ ಮಾರ್ಗಕ್ರಮಣದಲ್ಲಿ ತನ್ನ ಪ್ರಸಾದಕಾಯವನ್ನೇ ತೆಯ್ದು, ಪ್ರಸಾದಕಾಯಕವನ್ನು ಕೈಕೊಂಡು ಬಂದ ಕಷ್ಟನಿಷ್ಠುರಗಳನ್ನೆಲ್ಲ ಶಿವನ ಪ್ರಸಾದವೆಂದು ಬಗೆದಳು ಅಕ್ಕನಾಗಮ್ಮ. ಅಂಥ ಅವಳ ಬದುಕು ಹುಟ್ಟಿನಿಂದ ಕೊನೆಯವರೆಗೂ ಶರಣರಿಗೆ ಪ್ರಸಾದಮಯವಾಗಿ ಪರಿಣಮಿಸಿತು. ಅಂತೆಯೇ ಅಕ್ಕನಾಗಮ್ಮ 'ಪ್ರಸಾದಯೋಗಿಣಿ'.

ಮಿಕ್ಕಿ ಮೀರಿದ ನಿನ್ನ । ಚೊಕ್ಕಾದ ಜೀವನ
ಪಕ್ವಾಗಿ ತುಂಬುಚ್ಚಿ ಕಳಚಿದ—ಪ್ರಸಾದ
ಒಕ್ಕಿಕೊಂಡರು ಶರಣರು ॥

ಅಕ್ಕ—ನಾಗಲುತಾಯಿ, ತಮ್ಮ—ಬಸವಣ್ಣ ಇವರೀರ್ವರೂ ಕಾರಣಿಕ ಮಹಿಮರು. ಇವರಲ್ಲಿ ಇಳಿದುಬಂದ ಪ್ರೇರಣೆ, ಚೇತನೆಗಳೇ ಮಹಾಮನೆಗೆ ಆದಿ

ಆಧಾರವೆಂದು ಹೇಳಬಹುದು. ಅಕ್ಕ ಬಸವಣ್ಣನವರಿಗಿಂತಲು ಹನ್ನೆರಡು ವರುಷ ದೊಡ್ಡವಳಾದರೂ ಜೊತೆಯಾಗಿ ಜಾತವೇದಿ ಮುನಿಗಳ ಆಶ್ರಮದಲ್ಲಿ ಅಧ್ಯಯನ, ಯೋಗಾಭ್ಯಾಸಗಳನ್ನು ಸಾಧಿಸಿದವಳು. ಆಬಳಿಕ ಅವರೀರ್ವರು ಮುಂದೆ ಮಂಗಳವಾಡ, ಕಲ್ಯಾಣಕ್ಕೆ ತಮ್ಮ ಕಾರ್ಯಕ್ಷೇತ್ರವನ್ನು ವಿಸ್ತರಿಸಿದರು. ಮುಂದೆ ಬಸವಣ್ಣನವರು ಸಂಗಮನಾಥನಲ್ಲಿ ಐಕ್ಯವಾದ ಮೇಲೂ, ತನ್ನ ಮಗ ಚೆನ್ನಬಸವಣ್ಣ ಹಾಗೂ ಇನ್ನುಳಿದ ಶರಣರೊಡನೆ ಉಳುವಿಯ ಮಹಾಮನೆಯ ವರೆಗೂ ಹೋಗಿ ಕೊನೆಯ ಉಸುರಿನವರೆಗೂ ಮಣಿಹ ಪೂರೈಸಿದ ತಾಯಿ, ಅಕ್ಕ ನಾಗಲತಾಯಿ. ಹೀಗೆ ಬಸವಣ್ಣನದರ ಜನನ, ಬಾಲ್ಯ, ಸಾಧನೆ, ಸಿದ್ಧಿ, ಮನೆ–ಮಹಾಮನೆ, ಸಂಗಮನಾಥ–ಐಕ್ಯ ಇತ್ಯಾದಿಗಳನ್ನು ಕಂಡವಳು. ಅದರಂತೆ ಶರಣರ ಬದುಕಿನಲ್ಲಿ ಶಾಂತಿ-ಸಮೃದ್ಧಿ ದಿನಗಳನ್ನು ಕ್ರಾಂತಿ-ಕಠೋರತೆಯ ಸನ್ನಿವೇಶಗಳನ್ನು, ಮುಪ್ಪಿನ ಮುದುಕಿಯಾದಾಗ ಮಗ ಚೆನ್ನಬಸವಣ್ಣನ ವಿಯೋಗವನ್ನು ಕಣ್ಣಾರೆ ಕಂಡು, "ಕೈಕೋಲನ್ನು ಕಳೆದುಕೊಂಡರೂ ಎಳೆಗರುವಿನ ಎಳೆಗಂದಿಯನು ಎಳೆದೊಯ್ದರೂ" ಧೃತಿಗೆಡದೆ ತಾನು ಬಂದ ಕಾರ್ಯವನ್ನು ಪೂರೈಸಿದ ಧೀರೋದಾತ್ತಳು.

ಹೀಗೆ ಅಕ್ಕ ನಾಗಲತಾಯಿಯ ಜೀವನಗಂಗೆ, ಪವಿತ್ರ ಪಾವನ ಗಂಗಾ ಸಲಿಲದಂತೆ ಉಗಮದಲ್ಲಿ ಶಾಂತಿಗೆ ತವರಾಗಿ ಮುಂದುವರಿದಳು; ಯಾರು ಬಂದರೇನು ಬಾರದಿರ್ದರೇನು, ನಿತ್ಯನೂತನವಾಗಿ ಆದರೂ ಧೀರೆಯಾಗಿ ಏರಿಳಿತಗಳಲ್ಲಿ, ಗಿರಿಕಂದರಗಳಲಿ, ಧುಮುಕುತ್ತ ಮುಂದೆ ಹರಿದಳು. ತನ್ನ ಸತ್ಯದ ದಾರಿಯಲ್ಲಿ ಬಂದ ವಿಘ್ನಗಳನ್ನು ಘೋರ್ಗರೆದು ಕೊಚ್ಚಿಕೊಂಡು ಹೋಗುವಾಗ ಗಂಗೆಯು ಕ್ರಾಂತಿಗಂಗೋತ್ರಿಯಾದಳು.

ಶಾಂತಿಯ ತವರೂರು । ಕ್ರಾಂತಿಯ ಕಣವಾಯ್ತು ।
ರಾತರಿ ಒಂದರಲಿ ಬಯಲಾಯ್ತು— ಕಲ್ಯಾಣ
ಜಾತರಿ ನೋಡ ಶರಣರ ॥

ಶರಣರ ಉದಯ,—ಕ್ರಾಂತಿಕಲ್ಯಾಣದ ಉಗಮಸ್ಥಾನವೇ 'ಅಕ್ಕನಾಗಲತಾಯಿ' ಎಂಬ ಅರ್ಥದಲ್ಲಿ ಈ "ಕ್ರಾಂತಿಗಂಗೋತ್ರಿ" ರೂಪಗೊಂಡಿದೆ. ಪುರಾಣ

ಗಳಲ್ಲಿ ದೊಡ್ಡವರ ಚರಿತ್ರೆಯನ್ನು ಹೇಳುವಾಗ ಪವಾಡಗಳಿಂದಲೇ ಅವರ ಜೀವನದ ಘಟನೆಗಳನ್ನು ತುಂಬಿಬಿಡುತ್ತಾರೆ. ಐತಿಹಾಸಿಕ ಘಟನೆಗಳಿಗೆ ಪ್ರಾಧಾನ್ಯತೆ ಕಡಿಮೆ. ಕೆಲವು ಕಾವ್ಯಗಳಲ್ಲಿಯೂ, ಇತ್ತೀಚಿನ ಕಥೆ-ಕಾದಂಬರಿಗಳಲ್ಲಿಯೂ ಇದೇ ಪದ್ಧತಿಯನ್ನು ಅನುಸರಿಸುತ್ತ ಬಂದದ್ದು ಕಂಡುಬರುತ್ತದೆ.

ಶ್ರೀ ಲಕ್ಕಪ್ಪ ಅವರು ತಮ್ಮ ಗ್ರಂಥದಲ್ಲಿ ಶರಣರ ಸರಿಯಾದ ಐತಿಹಾಸಿಕ ವಿಷಯಗಳನ್ನು ಸಂಶೋಧಿಸಿ ನಾಗಮ್ಮನ ಜೀವನವನ್ನು ಸುಂದರವಾಗಿ ಕಥೆಯ ರೂಪದಲ್ಲಿ ನಿರೂಪಿಸಿದ್ದಾರೆ. ಓದುತ್ತ ಹೋದಂತೆ, ನಾಗಮ್ಮನ ಹಾಗೂ ಇನ್ನು ಕೆಲ ಶರಣರ ಸಂಗತಿಗಳು ಹಾಗೂ ಅವು ನಡೆದ ಕಾಲಮಾನಗಳ ಅರಿವು ನಮಗಾಗುತ್ತದೆ. ಈ ಗ್ರಂಥದಲ್ಲಿ ಇನ್ನೊಂದು ಮಹತ್ವದ ವಿಷಯ ಸಾಧಿಸಿದ್ದಾರೆ ಎಂದು ಹೇಳಬಹುದು : ಶರಣರ ಜೀವನದಲ್ಲಿ ಬರುವ ಕೆಲ ವಾದಗ್ರಸ್ತ ವಿಷಯಗಳಿಗೆ ಸರಿಯಾದ ಪರಿಹಾರವನ್ನು ಕಂಡುಹಿಡಿದು ಈ ಚರಿತ್ರೆಯಲ್ಲಿ ಬಿಂಬಿಸಿದ್ದಾರೆ. ಅದರ ಹಿಂದೆ ಅವರ ಆಳವಾದ ಅಭ್ಯಾಸ, ಪರಿಶ್ರಮ ಇದೆ, ಪ್ರಾಮಾಣಿಕತೆ ಇದೆ. ಅವರಿಗೆ ಕಥೆಹೇಳುವ ಶೈಲಿಯು ಸುಲಭವಾಗಿ ಸಾಧಿಸಿದೆ. ಅತಿಶಯೋಕ್ತಿಗಳು ಈ ಗ್ರಂಥದಲ್ಲಿ ಎಲ್ಲಿಯೂ ಕಂಡಂಬರುವದಿಲ್ಲ. "ಕ್ರಾಂತಿಗಂಗೋತ್ರಿ"ಯು ಅಕ್ಕನಾಗಮ್ಮನವರ ಪಾವನಮಯ ಜೀವನದ ಮೇಲೆ ಒಂದು ಹೊಸ ಬೆಳಕನ್ನು ಚೆಲ್ಲಿದೆ; ಅಕ್ಕನಾಗಮ್ಮ ಹಾಗೂ ಇನ್ನುಳಿದ ಶರಣೆಯರ ಬಗ್ಗೆ ಇನ್ನೂ ವಿಶೇಷ ಸಂಶೋಧನೆ ನಡೆಯಲಿ, ಅವರ ಹಿರಿಮೆ-ಗರಿಮೆಗಳು, ಸಿದ್ಧಿ-ಸಾಧನೆಗಳು, ಶೌರ್ಯ-ಸಾಹಸಗಳು ಇನ್ನೂ ನಿಚ್ಚಳವಾಗಿ ಬೆಳಕಿಗೆ ಬರಲಿ ಎಂದು ಹಾರೈಸುತ್ತೇನೆ.

ಈ ಗ್ರಂಥವು ಪ್ರಕಟವಾಗುತ್ತಿರುವುದು ಓರ್ವ ತಾಯಿಯ ಪುಣ್ಯಸ್ಮರಣೆಗೆ ಎಂದು ತಿಳಿದು ನನಗೆ ಸಂತೋಷವಾಯಿತು. ಹೀಗೆ ನಮ್ಮ ನಾಡಿನಲ್ಲಿ ಉಳ್ಳವರೆಲ್ಲ ಒಳ್ಳೆಯ ವಾಙ್ಮಯವನ್ನು ಬೆಳಕಿಗೆ ತರುವಲ್ಲಿ ಮುಂದಾಗಬೇಕು. ಮದುವೆಯ ಮಂಗಲ ಮುಹೂರ್ತಗಳಲ್ಲಿ, ಹುಟ್ಟುಹಬ್ಬದ ಸವಿಸಂದರ್ಭಗಳಲ್ಲಿ, ಪುಣ್ಯಸ್ಮರಣೆಗಳಲ್ಲಿ ತಮ್ಮ ದುಡಿಮೆಯ ಫಲವನ್ನು ಉತ್ತಮ ಗ್ರಂಥ ಪ್ರಕಟಣೆಯ ಸತ್ಕಾರ್ಯಗಳಿಗೆ ಸಲ್ಲಿಸಲು ಮುಂದಾಗಬೇಕು. ಹೀಗಾದರೆ ಸತ್ವಯುತವಾದ ಸಾಹಿತ್ಯವು ದೆಸೆದೆಸೆಗೂ ಮುಟ್ಟುವಲ್ಲಿ ಸಂದೇಹವಿಲ್ಲ.

ತಮ್ಮ ತಾಯಿಯ ಪುಣ್ಯಸ್ಮರಣೆಗಾಗಿ ಉತ್ತಮ ಸಾಹಿತ್ಯದ ಪ್ರಕಟಣೆಗೆ ಮುಂದೆಬಂದ ಶ್ರೀ ಉಮಾಪತಿ, ಸಿರವಾರ ಮತ್ತು 'ಕ್ರಾಂತಿಗಂಗೋತ್ರಿ'ಯಂಥ ಉತ್ಕೃಷ್ಟಗ್ರಂಥ ರಚಿಸಿದ ಸಾಹಿತ್ಯ-ಶರಣ ಶ್ರೀ ಲಕ್ಕಪ್ಪ ಶಿರಪಟ್ಟಿ ಇವರ ಪರಿಚಯವನ್ನು ಮಾಡಿಕೊಟ್ಟು ಮುನ್ನುಡಿಯನ್ನು ಬರೆಯಲು ಕೇಳಿಕೊಂಡರು—ಶ್ರೀ ಶಾಂತರಸರು. ಉತ್ತಮ ಸಾಹಿತ್ಯವನ್ನು ಸ್ವತಃ ನಿರ್ಮಿಸುವದಲ್ಲದೆ ತಮ್ಮ ಸಾಹಿತ್ಯ ಬಳಗದ ಬಳ್ಳಿಯಲ್ಲಿ ಫಲಿಸಿದ ಫಲಗಳ ಸಾಹಿತ್ಯದ ರಸದೂಟವನ್ನು ಸಕಲರಿಗೆ ಉಣಬಡಿಸುವ ಕಾಯಕವನ್ನು ಕೈಕೊಂಡ ಶ್ರೀ ಶಾಂತರಸ ನನ್ನ ಪಡೆದ ಮಗನೆಂದು ಹೇಳಿಕೊಳ್ಳಲು ಹೆಮ್ಮೆ ಎನಿಸುತ್ತದೆ. ಇವರೆಲ್ಲರ ಸಾಹಿತ್ಯಾರಾಧನೆಯು ಅವ್ಯಾಹತವಾಗಿ ಸಾಗಲಿ ಎಂದು ಶಿವಸಿದ್ಧರಾಮನಲ್ಲಿ ಬೇಡುವೆ. ಶುಭವನ್ನು ಕೋರುವೆ.

ಜಯನಿಕೇತನ
ಸೊನ್ನಲಿಗಿ
೨೭-೧೦-೧೯೬೦

ಜಯದೇವಿತಾಯಿ

ಪೂಜ್ಯ ಶ್ರೀ ಶಾಂತವೀರ ಮಹಾಸ್ವಾಮಿಗಳವರಿಂದ
ಆಶೀರ್ವಚನ

ಸ್ತ್ರೀಯು ಜಗನ್ಮಾತೆಯ ರೂಪ! ಪ್ರಬುದ್ಧ ಹೆಣ್ಣು ಪರಾಶಕ್ತಿಯ ಜೀವಂತ ಸ್ವರೂಪ. ತ್ಯಾಗ, ಮೌನ, ಸಹನೆ, ನಮ್ರತೆ, ನಂಬಿಕೆ, ಜ್ಞಾನ ಇವುಗಳಿಗೆ ಇಂದಿಗೂ ಆಕೆ ಮುಕ್ತಸ್ವರೂಪಳೆನಿಸಿದ್ದಾಳೆ. ಈ ದಿವ್ಯ ಗುಣಗಳಿಂದಾಗಿ ಲೋಕದ ಜನರಿಂದ ಅಪಾರ ಮನ್ನಣೆ ಹೊಂದಿ ಕೀರ್ತಿಶಾಲಿಯರಾದ ತಾಯಂದಿರಿಗೆ ಕರ್ನಾಟಕದ ಇತಿಹಾಸದಲ್ಲಿ ಕೊರತೆಯಿಲ್ಲ. ಆ ಮಹಾಮಾತೆಯರಲ್ಲಿ ಅಕ್ಕನಾಗಮ್ಮನೂ ಒಬ್ಬಳಾಗಿದ್ದಾಳೆ. ಕಾವ್ಯ-ಪುರಾಣ-ಚರಿತ್ರೆ-ಕಥೆ-ಕಾದಂಬರಿಗಳಲ್ಲಿ ಹುದುಗಿಕೊಂಡಿದ್ದ ಅಕ್ಕನಾಗಮ್ಮನ ದಿವ್ಯ ಜೀವನವನ್ನು ಬಯಲಿಗೆ ತಂದು ಶ್ರೀ ಶಿರಹಟ್ಟಿಯವರು ಮಹಾಕಾರ್ಯ ಮಾಡಿದ್ದಾರೆ.

ಸುಜ್ಞಾನರೂಪ ಚೆನ್ನಬಸವಣ್ಣನ ತಾಯಿಯಾದ ನಾಗಲಾಂಬಿಕೆ ಬಸವಣ್ಣನವರ ಬಾಳಿನ ಬೆಳಕಾಗಿ, ಅನುಭವಮಂಟಪದ ವಕ್ತಾರಳಾಗಿ, ಮಹಮನೆಯ ಒಡತಿಯಾಗಿ, ಶರಣರ ರಕ್ಷಣೆಗೆ ಕಂಕಣಬದ್ಧಳಾಗಿ ಉಳವಿಯ ವಸಹಾತು ಸ್ಥಾಪಿಸುವಲ್ಲಿ ಊಟನಿದ್ರೆಗಳಿಲ್ಲದೆ ಶ್ರಮಿಸಿದಳು. ಬಸವಣ್ಣನ ಯಶೋದುಂದುಭಿ ಎಲ್ಲಕಡೆಗೂ ಮೊಳಗುವಂತೆ ಮಾಡಲು ತನ್ನ ಜೀವನವನ್ನೇ ಮುಡುಪಾಗಿಟ್ಟಳು.

ಅಕ್ಕನಾಗಮ್ಮನ ಜೀವನ ಬಹುಮುಖವಾದದ್ದು. ಮುಕ್ತಾಯಿಯ ಸೋದರಪ್ರೇಮ, ಆಯ್ದಕ್ಕಿ ಲಕ್ಕಮ್ಮನ ಕಾಯಕನಿಷ್ಠೆ, ಮೋಳಿಗೆಯ ಮಹಾದೇವಿಯ ಸತೀಧರ್ಮ, ನೀಲಲೋಚನೆಯ ಲಿಂಗನಿಷ್ಠೆ ಅಕ್ಕಮಹಾದೇವಿಯ ವೈರಾಗ್ಯ ಈ ಅಮೌಲ್ಯ ಗುಣಗಳೆಲ್ಲವನ್ನು ಅಕ್ಕನಾಗಮ್ಮನು ಅಳವಡಿಸಿಕೊಂಡಿದ್ದಾಳೆ. ನಚ್ಚಿನ ಸೋದರ ಬಸವಣ್ಣ ಕೂಡಲಸಂಗಮನಾಥನಲ್ಲಿ ಬಯಲಾದನೆಂಬ ವಾರ್ತೆ ಮಿಂಚಿನಂತೆ ಸುಳಿದುಬಂದಾಗ ಅಕ್ಕನಾಗಮ್ಮನಿಗಾದ ದುಃಖ ಅಪಾರವಾದದ್ದು. "ಭಕ್ತಿಯು ತವನಿಧಿಯೇ, ಮುಕ್ತಿಯು ಮೂರುತಿಯೇ, ಲಿಂಗಜಂಗಮದ ಚೈತನ್ಯವೇ ನಿಮ್ಮನಗಲಿ ಎಂತು ಸೈರಿಸುವೆನು?" ಎಂದು ಮರುಗಿದ್ದಾಳೆ. ಬಸವಣ್ಣ ಬಯಲಾದನೆಂದು ಅವಳ ಅಂತರಂಗ ತಳಮಳಗೊಳ್ಳುತ್ತಿದ್ದರೆ, ಬಸವಣ್ಣ ಕೈಕೊಂಡ ಕಾರ್ಯಗಳ ಭವಿಷ್ಯತ್ತಿನ ಚಿಂತೆ ಆಕೆಯ

ತಲೆಸುತ್ತುತ್ತಿದೆ. ಉಳವಿಯಲ್ಲಿ ಮಹಾಜ್ಞಾನಿ ಚೆನ್ನಬಸವಣ್ಣ ಬಯಲಾದಾಗಲೂ ಆಕೆಗೆ ಮಗ ಹೋದನೆಂಬ ದುಗುಡವಿಲ್ಲ; ಬಸವತತ್ತ್ವಪ್ರಚಾರಕ ಹೋದನೆಂದು ಹಳಹಳಿಯಾಗಿದೆ. ಕೊನೆಗೆ ಏಕಾಕಿನಿಯಾಗಿ ತನ್ನ ಇಳಿವಯಸ್ಸನ್ನೂ ಲೆಕ್ಕಿಸದೆ ಬಸವತತ್ತ್ವಪ್ರಚಾರಕ್ಕೆ ಅಕ್ಕನಾಗಮ್ಮ ನಾಡನ್ನು ಸುತ್ತಿದ್ದಾಳೆ. ಅವಳ ಈ ತತ್ತ್ವನಿಷ್ಠೆ ಅಗಾಧವಾದದ್ದು.

ಬಸವಯುಗದ ಬಳ್ಳಿಯನ್ನು ಊರಿ ಮಡಿಮಾಡಿ ನೀರೆರೆದು ಅದು ಫಲ ಕೊಡುವಂತೆ ಮಾಡುವಲ್ಲಿ ಅಕ್ಕನಾಗಮ್ಮನ ಕಾರ್ಯ ಅಗಾಧವಾದದ್ದು. ಬಸವ ಯುಗದ ಸೂತ್ರಧಾರಕಳೇ ಅಕ್ಕನಾಗಮ್ಮ! ಪತಿ ಶಿವದೇವ ಸಾಧುಗಳ ಸಂಗಡ ಕಲ್ಯಾಣದಲ್ಲಿ ಕಾಣಿಸಿಕೊಂಡು ಮಾಯವಾದಾಗ ತನಗಾದ ಅಸದಳ ದುಃಖ ವನ್ನು ಮಹಮನೆಯ ಸೇವೆಯಲ್ಲಿ ಮರೆತುಬಿಡುತ್ತಾಳೆ. ಹೀಗೆ ಜೀವನದುದ್ದಕ್ಕೂ ತ್ಯಾಗ, ಸೇವೆ, ಆತ್ಮನಿಷ್ಠೆಗಳ ಪ್ರತಿಮೂರ್ತಿಯಾದ ಅಕ್ಕನಾಗಮ್ಮನ ಜೀವನ ಸಕಲರಿಗೂ ಸ್ಫೂರ್ತಿದಾಯಕವಾಗಿದೆ.

ಅಕ್ಕ ನಾಗಲಾಂಬಿಕೆಯ ತ್ಯಾಗಮಯ ಜೀವನವನ್ನು ಶ್ರೀ ಶಿರಹಟ್ಟಿಯವರು ಸುಂದರವಾಗಿ ಚಿತ್ರಿಸಿದ್ದಾರೆ. ಶರಣರ ಚರಿತ್ರೆಗಳನ್ನು ಪುರಾಣಪವಾಡಗಳಿಂದ ಬೇರ್ಪಡಿಸಿ, ವೈಜ್ಞಾನಿಕ ದೃಷ್ಟಿಕೋನವನ್ನು ಅಳವಡಿಸಿಕೊಂಡು, ಜನ ಮೆಚ್ಚುವ ರೀತಿಯಲ್ಲಿ ತಿಳಿಯಾದ ಭಾಷೆಯಲ್ಲಿ ಹೇಳಿ ಶರಣರ ದಿವ್ಯ ಜೀವನವನ್ನು ಜನತೆಗೆ ನೀಡಿದ್ದಾರೆ. ಅವರ ಈ ಕಾರ್ಯ ತುಂಬ ಸ್ತುತ್ಯವಾದದ್ದು. ಸ್ವತಃ ಶರಣಜೀವನದಲ್ಲಿ ಬದುಕಲು ಹಂಬಲಿಸುತ್ತಿರುವ ಅವರಿಂದ ಇನ್ನೂ ಇಂತಹ ಕೃತಿಗಳು ಹೊರಬರಲಿ ಎಂದು ಹಾರೈಸುವೆನು.

ಶ್ರೀ ಶಿರಹಟ್ಟಿಯವರು ಈ ಚರಿತ್ರೆಯನ್ನು ನಮ್ಮ ಮುಂದೆ ಓದಿದಾಗ, 'ಇದು ಕೂಡಲೆ ಪ್ರಕಟವಾಗಲಿ' ಎಂದು ಅಪೇಕ್ಷಿಸಿದ ನಮ್ಮ ಅಪೇಕ್ಷೆ ಇಂದು ಪೂರ್ಣವಾಗುತ್ತಿರುವದನ್ನು ನೋಡಿ ತುಂಬ ಆನಂದವಾಗಿದೆ.

ನಮ್ಮ ನಾಡಿನ ತಾಯಂದಿರಿಗೂ ಮಕ್ಕಳಿಗೂ ಸ್ಫೂರ್ತಿಯನ್ನೀಯುವ ಈ ಪುಸ್ತಕವನ್ನು ಎಲ್ಲರೂ ಸ್ವಾಗತಿಸುವರೆಂದು ಆಶಿಸುವೆ.

ಬಬಲೇಶ್ವರ
ದಿ. ೨–೧೦–೭೦ ಶಾಂತವೀರಸ್ವಾಮಿ

ಶ್ರೀ ನಿ. ಪ್ರ. ಸ್ವ. ವೈರಾಗ್ಯನಿಧಿ ಶಿವಾನುಭವ ಚರಚಕ್ರವರ್ತಿ ಚೆನ್ನಬಸವಸ್ವಾಮಿಗಳು ನಾರದಗಡ್ಡೆಮಠ, ರಾಯಚೂರು ಅವರ ಶುಭಾಶೀರ್ವಾದ

ನಾಲ್ಕು ವರ್ಷಗಳ ಹಿಂದೆ ಲಿಂ. ಶಿವಮ್ಮನವರ ಪುಣ್ಯದಿನಾಚರಣೆಯ ಅಂಗವಾಗಿ ನಡೆದ ಶಿವಾನುಭವ ಗೋಷ್ಠಿಯ ಅಧ್ಯಕ್ಷ ಸ್ಥಾನದಿಂದ ನಾವು ಶಿವಮ್ಮನವರ ಪುಣ್ಯಸ್ಮರಣೆಗಾಗಿ ಸಾಹಿತ್ಯಸೇವೆಯೂ ನಡೆಯಲಿ; ಒಂದು ಶ್ರೇಷ್ಠ ಗ್ರಂಥವೂ ಪ್ರಕಟಗೊಳ್ಳಲಿ ಎಂದು ಅಪ್ಪಣೆಕೊಡಿಸಿದ್ದೆವು. ಅದು ಇಂದು ಕೈಗೂಡಿ ಬಂದುದಕ್ಕೆ ನಮಗೆ ಬಹಳ ಸಂತೋಷವೆನಿಸಿದೆ. ಈ ಗ್ರಂಥದಿಂದ ಬರುವ ಹಣವನ್ನು ಸಾಹಿತ್ಯಸೇವೆಯಲ್ಲಿಯೇ ತೊಡಗಿಸಿ, ಈ ಶಿವಶಕ್ತಿ ಪ್ರಕಾಶನದಿಂದ ಉತ್ತಮ ಕೃತಿಗಳನ್ನು ಹೊರತರಲು ಮನಸ್ಸುಮಾಡಿರುವ ಪ್ರಕಾಶಕರಿಗೆ ನಾವು ತುಂಬಿದ ಹೃದಯದಿಂದ ಆಶೀರ್ವದಿಸುತ್ತೇವೆ.

ವಿಶಿಷ್ಟ ರೀತಿಯಲ್ಲಿ ಆಚರಣೆಯಾಗುತ್ತಿರುವ ಶಿವಮ್ಮನವರ ಲಿಂಗೈಕ್ಯ ದಿನಾಚರಣೆಯು ಸರ್ವರಿಗೂ ಆದರ್ಶನೀಯವಾಗಿದೆ. ಶಿವಾನುಭವಗೋಷ್ಠಿ, ಕವಿಸಮ್ಮೇಳನ, ವಿದ್ವಜ್ಜನರ ಭಾಷಣ, ಸಂಗೀತ ಮುಂತಾದ ಕಾರ್ಯಕ್ರಮಗಳು ನಡೆಯುತ್ತವೆ. ಇಷ್ಟಲ್ಲದೆ ಗ್ರಂಥಪ್ರಕಾಶನಗೊಳ್ಳುತ್ತಿರುವುದು ಈ ವರ್ಷದ ಇನ್ನೂ ಹೆಚ್ಚಿನ ವೈಶಿಷ್ಟ್ಯವಾಗಿದೆ. ಇದೆಲ್ಲವನ್ನು ಹಮ್ಮಿಕೊಂಡು ಸಮರ್ಥವಾಗಿ ನಡೆಸುತ್ತಿರುವ ಶ್ರೀ ಉಮಾಪತಿಯವರು ತಾಯಿಗೆ ತಕ್ಕ ಮಕ್ಕಳು. ಸಾಹಿತ್ಯ, ಸಂಗೀತದಲ್ಲಿ ಅಪಾರ ಆಸಕ್ತಿ ಅವರಿಗೆ; ಕಲೆಗಳಲ್ಲಿ ಹೆಚ್ಚಿನ ಅಭಿರುಚಿ ಅವರಿಗೆ. ಚಿಕ್ಕಂದಿನಲ್ಲಿ ನಾಟಕ ಮಾಡಿಸಿ, ಆಡಿಸಿ ರಂಗಭೂಮಿಯ ಸೇವೆ ಮಾಡಿದ್ದಾರೆ. ಚೆನ್ನಾಗಿ ಹಾಡುತ್ತಾರೆ. ಅಲ್ಲದೆ ಕವಿಯಾಗಿ ಉತ್ತಮ ಕವನಗಳನ್ನು ರಚಿಸಿದ್ದಾರೆ. ಸಾಹಿತಿಗಳೆಂದರೆ, ಕವಿಗಳೆಂದರೆ, ಕಲಾವಿದರೆಂದರೆ ಪಂಚಪ್ರಾಣ ಅವರಿಗೆ. ತಮ್ಮ ವ್ಯವಹಾರವಲ್ಲದೆ ಸಮಕಾಲೀನ ರಾಜಕೀಯದಲ್ಲಿಯೂ ಅವರು ಆಸಕ್ತರು. ರಾಯಚೂರು ಜಿಲ್ಲಾ ಕಾಂಗ್ರೆಸ್ ಕಮಿಟಿಯ ಕಾರ್ಯದರ್ಶಿಗಳು. ಎಲ್ಲವನ್ನೂ ಜಾಣ್ಮೆಯಿಂದ, ಸಮತೂಕದಿಂದ ತೂಗಿಸಿಕೊಂಡು ಹೋಗುತ್ತ ಬಹು ಜನಪ್ರಿಯರಾಗಿದ್ದಾರೆ—ಉಮಾಪತಿಯವರು. ಅವರು

‘ಕ್ರಾಂತಿಗಂಗೋತ್ರಿ’ಯನ್ನು ಪ್ರಕಟನೆಗೆ ಅನುಗೊಳಿಸಿ ಕನ್ನಡ ಸಾಹಿತ್ಯಕ್ಕೆ ಹಿರಿಯ ಸೇವೆಯನ್ನು ಸಲ್ಲಿಸಿದ್ದಾರೆ.

‘ಕ್ರಾಂತಿಗಂಗೋತ್ರಿ’ ಒಂದು ಉತ್ತಮ ಕೃತಿ. ಅಕ್ಕನಾಗಮ್ಮನವರ ಜೀವನವು ಸುಂದರವಾಗಿ ಇದರಲ್ಲಿ ಚಿತ್ರಿತವಾಗಿದೆ. ಶ್ರೀ ಲಕ್ಕಪ್ಪ ಶಿರಹಟ್ಟಿಯವರು ಶರಣರು. ಅವರ ಬರವಣಿಗೆ ಹೃದಯವನ್ನೂ ಆತ್ಮವನ್ನೂ ಅರಳಿಸುವಂತಹದು. ಇಂಥ ಉತ್ಕೃಷ್ಟ ಗ್ರಂಥವನ್ನು ಬರೆದ ಶ್ರೀ ಲಕ್ಕಪ್ಪನವರು, ಈ ಗ್ರಂಥವನ್ನು ತಮ್ಮ ತಾಯಿಯವರ ಪುಣ್ಯಸ್ಮರಣೆಗಾಗಿ ಪ್ರಕಟಿಸುತ್ತಿರುವ ಶ್ರೀ ಉಮಾಪತಿಯವರು ಧನ್ಯರು. ಇವರೀರ್ವರೂ ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿದ್ದಾರೆ. ಇವರೀರ್ವರಿಗೆ ಕರ್ತೃ ಶ್ರೀ ಚೆನ್ನಬಸವ ಸ್ವಾಮಿಗಳು ಸಕಲ ವಿಧದ ಸಂಪತ್ತು ಸನ್ಮಂಗಲವನ್ನೀಯಲಿ. ‘ಕ್ರಾಂತಿಗಂಗೋತ್ರಿ’ ಸಾಹಿತ್ಯ ಲೋಕದಲ್ಲಿ ಬೆಳಗಲಿ. ಶ್ರೀ ಲಕ್ಕಪ್ಪನವರು ಇನ್ನೂ ಅನೇಕ ಶರಣರ ಜೀವನ ಚಿತ್ರಿಸಲಿ ಶ್ರೀ ಉಮಾಪತಿಯವರು ಅಂಥ ಕೃತಿಗಳನ್ನು ಹೊರತರಲಿ ಎಂದು ಹೃತ್ಪೂರ್ವಕವಾಗಿ ಹರಸುವೆವು.

ಶ್ರೀ ನಾರದಗಡ್ಡೆ ಮಠ
ರಾಯಚೂರು — ಶ್ರೀ ನಾ. ಚೆ.
೧೫–೧೦–೭೦

ತ್ಯಾಗ-ಸೇವೆಗಳ ಪ್ರತ್ಯಕ್ಷ ಮೂರ್ತಿ ಅಕ್ಕನಾಗಮ್ಮ

ಮಹಾಪುರುಷರ ಪ್ರಭಾವವಲಯದಲ್ಲಿ ಸಿಲುಕಿ ಅನೇಕ ನಾರೀಮಣಿಗಳು ತೆರೆಯ ಮರೆಯಲ್ಲಿ ಮಿಣುಕಿ ಮಾಯವಾಗಿವೆ. ಭಗವಾನ ಬುದ್ಧನ ಪತ್ನಿ ಯಶೋಧರೆ, ಲಕ್ಷ್ಮಣನ ಪತ್ನಿ ಊರ್ಮಿಳೆ ಅಂತಹ ನಾರೀಮಣಿಗಳಾಗಿದ್ದಾರೆ. ಬಸವಣ್ಣನವರ ದಿವ್ಯ ಜೀವನಾಕಾಶದಲ್ಲಿ ಉಜ್ವಲ ತಾರೆಯಾಗಿ ಬೆಳಗಿದ ಅಕ್ಕ

ನಾಗಮ್ಮನೂ ಇದೇ ಪಂಕ್ತಿಗೆ ಸೇರಿದ್ದಾಳೆ. ಹಿಂದೀ ಭಾಷೆಯ ಪ್ರಸಿದ್ಧ ಕವಿ ಮೈಥಿಲೀ ಶರಣಗುಪ್ತರು ಯಶೋಧರೆ ಹಾಗು ಊರ್ಮಿಳೆಯರ ತ್ಯಾಗಮಯ ದಿವ್ಯ ಜೀವನವನ್ನು ಬೆಳಕಿಗೆ ತಂದು ಉಪಕಾರಮಾಡಿದ್ದಾರೆ. ಶ್ರೀ ಶಿರಹಟ್ಟಿ ಯವರು ಬಸವಯುಗದ ದಿವ್ಯ ತಾರೆ ಅಕ್ಕನಾಗಮ್ಮನ ಜೀವನಚರಿತ್ರವನ್ನು ಬಯಲಿಗೆ ತಂದು ಒಳ್ಳೆಯ ಕಾರ್ಯಮಾಡಿದ್ದಾರೆ. ಯಶೋಧರೆ ಹಾಗು ಅಕ್ಕ ನಾಗಮ್ಮ ಇಬ್ಬರೂ ಸಮಾನ ದುಃಖಿಗಳಾಗಿದ್ದಾರೆ. ಸಿದ್ಧಿಯನ್ನು ಪಡೆದು ಬುದ್ಧನಾಗಿ ಸನ್ಯಾಸಿಯ ವೇಷದಲ್ಲಿ ಭಿಕ್ಷೆಗಾಗಿ ತನ್ನ ಮುಂದೆ ನಿಂತ ಪತಿದೇವ ನನ್ನು ನೋಡಿ ಯಶೋಧರೆಗಾದ ಅನುಭವವೇ ಸಾಧುಗಳ ಸಂಗಡ ಕಲ್ಯಾಣ ದಲ್ಲಿ ಕಾಣಿಸಿಕೊಂಡ ಪತಿ ಶಿವದೇವನನ್ನು ಕಂಡಾಗ ಅಕ್ಕನಾಗಮ್ಮನಿಗೆ ಆಗಿದೆ. ಪತಿಮಹೋದಯರಿಬ್ಬರೂ ಸಂಸಾರದ ಬಂಧನವನ್ನು ಹರಿದೊಗೆದು ಪಾರ ಮಾರ್ಥದ ದಾರಿಯನ್ನು ಕಂಡುಕೊಂಡಿದ್ದರೆ, ಯಶೋಧರೆ ಹಾಗು ನಾಗಮ್ಮ ನವರು ಸಂಸಾರದಲ್ಲಿಯೇ ಇದ್ದು ಪರಮಾರ್ಥದ ದಾರಿಯನ್ನು ಕಂಡುಕೊಂಡಿ ದ್ದಾರೆ. ಪತಿದೇವನಿಗೆ ತನ್ನ ಪ್ರೀತಿಯ ಮಗ ರಾಹುಲನನ್ನು ಅರ್ಪಿಸಿ ಯಶೋಧರೆ ಕೃತಕೃತ್ಯಳಾಗಿದ್ದರೆ, ತನ್ನ ತಮ್ಮ ಬಸವಣ್ಣನಿಗೆ ತನ್ನ ಸುಜ್ಞಾನಿ ಮಗ ಚೆನ್ನಬಸವಣ್ಣನನ್ನೇ ಅರ್ಪಿಸಿ ಅಕ್ಕನಾಗಮ್ಮ ಧನ್ಯಳಾಗಿದ್ದಾಳೆ.

ಹಿರಿಯ ಅಕ್ಕನಾಗಿ ಬಸವಣ್ಣನ ವ್ಯಕ್ತಿತ್ವವನ್ನು ರೂಪಿಸುವಲ್ಲಿ ನಾಗ ಲಾಂಬೆಯ ಪಾತ್ರ ತುಂಬ ಹಿರಿದಾಗಿದೆ. ಆಕೆಯ ಅಂತರಂಗದ ಬೆಳಕೇ ಬಸವಣ್ಣನ ಕ್ರಾಂತಿಗೆ ಸ್ಫೂರ್ತಿ ಯನ್ನಿತ್ತಿದೆ. ಬಸವಣ್ಣನವರ ಆಪ್ತಕಾರ್ಯದರ್ಶಿಯಾಗಿ, ಅನುಭವಮಂಟಪದ ಮಹಿಳಾಪ್ರತಿನಿಧಿಯಾಗಿ, ಮಹಮನೆಯ ಒಡತಿಯಾಗಿ, ಕಲ್ಯಾಣಕ್ರಾಂತಿ ಹಾಗು ಉಳಿವೆಯ ವಲಸೆಯಲ್ಲಿ ಶರಣ ತಂಡದ ಸಂಚಾಲಿಕೆ ಯಾಗಿ ಅಕ್ಕನಾಗಮ್ಮ ಮಾಡಿದ ಕಾರ್ಯ ಒಂದಲ್ಲ ಎರಡಲ್ಲ ಅನಂತವಾಗಿವೆ. ಬಸವಯುಗದ ಬೆನ್ನೆಲುಬೇ ಅವಳೆಂದರೆ ತಪ್ಪೇನಿಲ್ಲ. ಇಷ್ಟೆಲ್ಲ ಕಾರ್ಯ ಮಾಡಿ ದರೂ ಆಕೆಗೆ ತನ್ನದಾದುದು ಏನೂ ಇಲ್ಲ. ಎಲ್ಲವೂ ಬಸವನಿಗಾಗಿ ಬಸವತತ್ವ ಪ್ರಚಾರಕ್ಕಾಗಿ! ಮಹಾ ದಂಡನಾಯಕ, ಲೋಕೋದ್ಧಾರಕ, ಶರಣರ ಕಣ್ಮಣಿ ಬಸವಣ್ಣನ ಅಕ್ಕ ನಾದರೂ, ಮಹಾಜ್ಞಾನಿ ಚೆನ್ನಬಸವಣ್ಣನ ತಾಯಿಯಾದರೂ ಆಕೆಗೆ ಆ ಅಭಿಮಾನವಿಲ್ಲ. 'ತನಗಿಂತ ಕಿರಿಯರಿಲ್ಲ ಶಿವಭಕ್ತರಿಗಿಂತ ಹಿರಿಯರಿಲ್ಲ'

ಎಂಬ ತಮ್ಮನ ಮಾತನ್ನು ಅಕ್ಷರಶಃ ಪಾಲಿಸಿದವಳು ನಾಗಮ್ಮನೊಬ್ಬಳೇ ಎಂದು ಹೇಳ ಬಹುದು. ಆಧ್ಯಾತ್ಮಸಾಧನೆಯ ಮಾರ್ಗದಲ್ಲಿ ಎಲ್ಲರೂ ಆಕೆಗೆ ಗುರುಗಳೇ! ಲೇಖಕರ ಮಾತಿನಲ್ಲಿ ಹೇಳುವದಾದರೆ 'ಇವ ತಮ್ಮ, ಇವ ಮಗ' ಎಂಬ ಮಾಯಾಭಾವ ಅವಳಲ್ಲಿ ಉಳಿಯಲೇ ಇಲ್ಲ.

"ಎನ್ನ ತನು ಚೆನ್ನಬಸವಣ್ಣನ ಬಯಲ ಬೆರಸಿತ್ತು.
ಎನ್ನ ಮನ ಸಂಗನಬಸವಣ್ಣನ ನಿಜಪದವ ಬೆರಸಿತ್ತು.
ಎನ್ನ ಪ್ರಾಣ ಅಲ್ಲಮಪ್ರಭುದೇವರ ಅರಿವ ಬೆರಸಿತ್ತು.
ಇಂತೀ ಮೂವರೂ ಒಂದೊಂದ ಹಂಚಿಕೊಂಡ ಕಾರಣ
ಎನಗೇನೂ ಇಲ್ಲದೆ
ಬಸವಣ್ಣಪ್ರಿಯ ಕೂಡಲಚೆನ್ನಸಂಗಯ್ಯನಲ್ಲಿ ನಿಜನಿವಾಸಿಯಾಗಿದ್ದೆನು."

ಹೀಗೆ ತನ್ನ ಜೀವನದ ಕಣಕಣವನ್ನು ಶರಣರಿಗಾಗಿ ಶರಣತತ್ವಕ್ಕಾಗಿ ಅರ್ಪಿಸಿ, ಎನಗೇನೂ ಇಲ್ಲವೆಂದು ಅಕ್ಕನಾಗಮ್ಮ ತನ್ನ ಉಜ್ವಲ ವ್ಯಕ್ತಿತ್ವವನ್ನು ಮರೆ ಮಾಡಲು ಪ್ರಯತ್ನಿಸಿದ್ದಾಳೆ.

'ಮರೆತರೆ ಮಾನವ, ಅರಿತರೆ ಶರಣ' ಎಂದು ಹೇಳಿದಂತೆ ಮಾನವರಾದ ನಾವು ಅಕ್ಕನಾಗಮ್ಮನನ್ನು ಮರೆತಿದ್ದರೆ ಶರಣರಾದ ಶ್ರೀ ಶಿರಹಟ್ಟಿ ಲಕ್ಕಪ್ಪನವರು ಅದನ್ನು ಅರಿತು ಆಕೆಯ ತ್ಯಾಗಮಯ ಜೀವನವನ್ನು ಬೆಳಕಿಗೆ ತರುವ ಪ್ರಶಂಶನೀಯ ಪ್ರಯತ್ನ ಮಾಡಿದ್ದಾರೆ. ಚರಿತ್ರನಿರೂಪಣೆಗೆ ಬೇಕಾದ ಘಟನಾ ವಿನ್ಯಾಸ, ಶೈಲಿ, ಭಾಷೆ ಎಲ್ಲವನ್ನೂ ಇಲ್ಲಿ ಕಾಣಬಹುದಾಗಿದೆ; ಅಕ್ಕನಾಗಮ್ಮನ ಹಿರಿಮೆಯನ್ನು ಮನೋಹರವಾಗಿ ಚಿತ್ರಿಸುವಲ್ಲಿ ಲೇಖಕರು ಸಫಲರಾಗಿದ್ದಾರೆ. ಇದರಂತೆ ಇನ್ನೂ ಬೆಳಕಿಗೆ ಬಾರದೆ ಇದ್ದ ಶಿವಶರಣರ ಶಿವಶರಣೆಯರ ಚರಿತ್ರೆಗಳು ಶ್ರೀ ಶಿರಹಟ್ಟಿಯವರಿಂದ ಹೊರಬರಲಿ ಎಂದು ಹಾರೈಸುವೆ.

ವಿಜಯಪುರ
ದಿ. ೨-೧೦-೭೦ ಎಸ್. ಎಸ್. ಕಬ್ಬಿನ

ಲೇಖಕನ ಮಾತು

ಅಂದಿಂದಿಗೆ ನಮ್ಮ ನಾಡಿನಲ್ಲಿ ಅನೇಕ ನಾರೀರತ್ನಗಳು ಹೊಳೆದು ಹೋಗಿವೆ. ಸೀತಾದೇವಿ ಪಾತಿವ್ರತ್ಯದಲ್ಲಿ, ಮೀರಾಬಾಯಿ ಭಕ್ತಿಯಲ್ಲಿ, ಚಾಲುಕ್ಯ ಮೈಲಳದೇವಿ ಆಡಳಿತದಲ್ಲಿ, ಅಕ್ಕಮಹಾದೇವಿ ವೈರಾಗ್ಯದಲ್ಲಿ, ವಿಜಯನಗರದ ಗಂಗಾದೇವಿ ಪಾಂಡಿತ್ಯದಲ್ಲಿ, ಕಿತ್ತೂರ ಚನ್ನಮ್ಮ ಮತ್ತು ಝಾಂಸಿ ರಾಣಿಯರು ಶೌರ್ಯದಲ್ಲಿ-ಹೀಗೆ ಹಲವರು ವಿಖ್ಯಾತರಾದರು. ಆದರೆ ಜೀವನದ ಸರ್ವ ಮುಖಗಳಲ್ಲಿಯೂ ಉನ್ನತ ಖ್ಯಾತಿಯನ್ನು ಪಡೆದ ಆದರ್ಶ ಮಹಿಳೆ ಅಕ್ಕ ನಾಗಮ್ಮನೇ ಎಂದು ನಿಸ್ಸಂದೇಹವಾಗಿ ಹೇಳಬಹುದು.

ಸ್ತ್ರೀಯರ ಆತ್ಮಪ್ರಗತಿಗೆ ದಾರಿಯೇ ಇಲ್ಲದಾಗ, ತ್ಯಾಗ-ಸೇವೆ-ತಪಸ್ಸು ಗಳಿಂದ ತನ್ನಾತ್ಮವನ್ನು ವಿಕಾಸಗೊಳಿಸಿಕೊಂಡ ಅಕ್ಕನಾಗಮ್ಮನು ಆ ಧಾರ್ಮಿಕ ಪಾರತಂತ್ರ್ಯವನ್ನು ಹರಿದೊಗೆದಳು. ಭೌತಿಕ ಜೀವನವನ್ನು ಭಾಕ್ತಿಕ ಜೀವನ ವಾಗಿಸಿ, ಲೌಕಿಕ - ಪಾರಮಾರ್ಥಿಕಗಳನ್ನು ಸಮನ್ವಯಗೊಳಿಸಿ, ಹೆಣ್ಣುಬಾಳಿನ ಗೊತ್ತುಗುರಿಗಳೇನೆಂಬುದನ್ನು ತೋರಿಸಿಕೊಟ್ಟವಳು ಅಕ್ಕನಾಗಮ್ಮ! ಸ್ತ್ರೀ ಜೀವನದ ಅಂತಿಮ ಮೌಲ್ಯವನ್ನು ಕಾಣಬೇಕೆಂಬವರು ಅಕ್ಕನಾಗಮ್ಮನ ಚರಿತ್ರೆ ಯನ್ನು ಅಗತ್ಯವಾಗಿ ಅರಿತುಕೊಳ್ಳಬೇಕು.

ನಾಗಮ್ಮನ ಹಿರಿಯ ಹಿರಿಮೆ ಒಂದೆರಡರಲ್ಲಿ ಅಲ್ಲ, ನಾಲ್ಕೆಂಟರಲ್ಲಿ ಅಲ್ಲ, ಜೀವನದುದ್ದಕ್ಕೂ ಒದಗಿದ ನೂರಾರು ಸಂದರ್ಭಗಳಲ್ಲಿಯೂ ತೋರಿಬಂದಿದೆ; ತಲೆಯೆತ್ತಿ ನಿಂತಿದೆ. ಅತಿಥಿಸತ್ಕಾರದಲ್ಲಿ, ಆಶ್ರಿತರ ಪೋಷಣೆಯಲ್ಲಿ, ಮೃದು-ಮಧುರ ವಾಣಿಯಿಂದ ದುರಹಂಕಾರಿಗಳ ಮನಸ್ಸನ್ನು ಪರಿವರ್ತನಗೊಳಿಸುವಲ್ಲಿ, ಒಳ್ಳೆಯ ವಿಚಾರ ಮಂಡಿಸುವಲ್ಲಿ, ಸಫಲ ಜೀವನದ ತಳಹದಿಯಿಂದ ಸಮಾ-ಜೋದ್ಧಾರ ಸಾಧಿಸುವಲ್ಲಿ, ಮಹಮನೆಯ ಅಂತರ್ವ್ಯವಸ್ಥೆಯಲ್ಲಿ, ಅದರ ಆಡ ಳಿತದಲ್ಲಿ, ಕ್ರಿಯಾ-ಜ್ಞಾನಗಳ ಸಮನ್ವಯದ ಪರಿಶೀಲನೆಯಲ್ಲಿ, ಆತ್ಮಸಾಧನೆ ಯಲ್ಲಿ, ಅನುಭವಮಂಟಪದ ವರಿಷ್ಠ ಸಮಿತಿಯ ಮಹಿಳಾಸದಸ್ಯೆಯಾಗಿ ಕಾರ್ಯ ನಿರ್ವಹಿಸುವಲ್ಲಿ, ಆಪತ್ತುಗಳನ್ನು ಎದುರಿಸಿ ಮುಂದಾಲೋಚನೆ ಮಾಡುವಲ್ಲಿ,

ಶರಣರ ರಕ್ಷಣೆಗೆ ಶಸ್ತ್ರಧಾರಿಯಾಗುವಲ್ಲಿ, ವಸಹಾತು ಮಾಡುವಲ್ಲಿ, ಆಶ್ರಮ ಸಂಸ್ಥಾಪಿಸುವಲ್ಲಿ ಅಕ್ಕನಾಗಮ್ಮನ ಪಾತ್ರ ಉನ್ನತವಾಗಿದೆ, ಆದರ್ಶವಾಗಿದೆ. ಬಸವಣ್ಣನ ಧಾರ್ಮಿಕ ಕ್ರಾಂತಿಯ ಮೂಲ ಸೆಲೆ ಅಕ್ಕನ ಹೃದಯಗಂಗೋತ್ರಿಯಿಂದಲೇ ದ್ರವಿಸಿ ಬಸವಣ್ಣನ ಭಾವದಲ್ಲಿ ತೋರಿ ಬಸವಣ್ಣನ ಕ್ರಿಯಾಭೂಮಿಯಲ್ಲಿ ಪವಿತ್ರಗಂಗೆಯಾಗಿ ಹರಿಯಿತು. ಆ ಕ್ರಾಂತಿ ಆಕೆಗೆ ಬಹು ದೊಡ್ಡ ಕಾರ್ಯಭಾಗವನ್ನು ಒದಗಿಸಿಕೊಟ್ಟಿತು. ಅದರಲ್ಲಿ ಆಕೆಯ ವ್ಯಕ್ತಿತ್ವದ ಘನತೆ ಅಗಣಿತವಾಗಿ ಬೆಳೆಯಿತು; ಪ್ರಕಾಶಮಾನವಾಗಿ ಬೆಳಗಿತು.

ಕಳೆದ ಎಂಟುನೂರು ವರ್ಷಗಳಲ್ಲಿಯ ವಿಪುಲವಾದ ವೀರಶೈವ ಸಾಹಿತ್ಯದಲ್ಲಿ ಅಕ್ಕ ನಾಗಲಾಂಬೆಯ ಬಗೆಗೆ ಸ್ವತಂತ್ರ ಗ್ರಂಥೋತ್ಪತ್ತಿಯಾಗಿರದಿದ್ದರೂ, ಬಸವಾದಿ ಪ್ರಮಥರ ಚರಿತ್ರೆಗಳಿಗೆ ಸಂಬಂಧಿಸಿದಂತೆ ಆಕೆಯ ನಿರ್ಮಲವಾದ ಘನಚರಿತ್ರೆಯು ಆಯಾ ಗ್ರಂಥಗಳಲ್ಲಿ ಗೋಚರವಾಗುವದು; ಜನಪದ ಸಾಹಿತ್ಯದಲ್ಲಿಯೂ ಕಂಡುಬರುವದು.

'ಬಸವರಾಜ ದೇವರು' ಗ್ರಂಥವನ್ನು ಬರೆಯುವದಕ್ಕಾಗಿ ವಿಷಯ ಸಂಗ್ರಹಮಾಡುವಾಗ ಸಂದರ್ಭಾನುಸಾರವಾಗಿ ತೋರಿದ — ಮೇಲೆ ವಿವರಿಸಿದಂತಹ—ಅಕ್ಕನಾಗಮ್ಮನ ಜೀವನದ ಅವಿರಲ ಘನತೆ ನನ್ನ ಮನದಲ್ಲಿ ಮೂಡಿ ನಿಂತಿತು. ಆ ಪ್ರಭಾವವೇ ಈ ಮಹಾತ್ಮಳ ಚರಿತ್ರವನ್ನು ರೂಪಿಸುವದಕ್ಕೆ ಪ್ರೇರೇಪಿಸಿತು. ಈ 'ಕ್ರಾಂತಿಗಂಗೋತ್ರಿ' ರೂಪಗೊಂಡಿತು.

ಇದೊಂದು ಪ್ರಬಂಧವಲ್ಲ; ಕೇವಲ ಒಣ ಚರಿತ್ರೆಯೂ ಅಲ್ಲ. ಸಾಮಾನ್ಯ ಓದುಗರ ಮನಸ್ಸನ್ನು ಹಿಡಿದು ರಂಜಿಸುತ್ತ ನಾಗಮ್ಮನ ಘನಚರಿತ್ರೆಯನ್ನೂ ತತ್ವ ವಿವೇಚನೆಯನ್ನೂ ನಿರೂಪಿಸುವ ಇದೊಂದು ರೂಪಕ; ಅಥವಾ ರೂಪಕ-ಕಥೆ ಇವೆರಡರ ಸಂಯುಕ್ತ ಸ್ವರೂಪ.

ಬಸವಯುಗದ ಕ್ರಾಂತಿಯಲ್ಲಿ ಬಸವಣ್ಣನವರ ಅಕ್ಕನಾಗಮ್ಮನವರ ಪಾತ್ರಗಳು ಒಂದಕ್ಕೊಂದು ಪೂರಕವಾಗಿ ಪೋಷಕವಾಗಿ ಮುಂದುವರಿದಿವೆ. ಇವರಲ್ಲಿ ಒಬ್ಬರ ಚರಿತ್ರೆ ಬರೆವಾಗ ಇನ್ನೊಬ್ಬರ ಸಂಗತಿಗಳು ಆನುಷಂಗಿಕವಾಗಿ ಬಂದೇ ಬರುತ್ತವೆ. ಆದುದರಿಂದ ನಮ್ಮ 'ಬಸವರಾಜ ದೇವರು' ಪುಸ್ತಕದಲ್ಲಿಯ ಹಲ ಕೆಲವು ಸಂದರ್ಭ-ಸನ್ನಿವೇಶಗಳು ವಿವರವಾಗಿ ಇಲ್ಲವೆ ಸಂಕ್ಷೇಪವಾಗಿ ಈ 'ಕ್ರಾಂತಿ

ಗಂಗೋತ್ರಿ'ಯಲ್ಲಿಯೂ ಬಂದಿರುವದು ಅನಿವಾರ್ಯ! 'ಬಸವರಾಜ ದೇವರು' ಬರವಣಿಗೆಗೆ ಸಹಾಯಕವಾದ ಗ್ರಂಥಗಳೇ ಪರೋಕ್ಷವಾಗಿ ಇದಕ್ಕೂ ಸಹಾಯಕ ಗಳು. ಮುಖ್ಯವಾಗಿ ಚಾರಿತ್ರಕ ಗ್ರಹಿಕೆಗಳಿಗೆ

ಲಿಂ. ಡಾ. ಫ. ಗು. ಹಳಕಟ್ಟಿಯವರ	ಶಿವಶರಣೆಯರ ಚರಿತ್ರೆ
ಡಾ. ಆರ್. ಸಿ. ಹಿರೇಮಠ ಅವರ	ಷಟ್‌ಸ್ಥಲಪ್ರಭೆ
ಡಾ.ಆರ್.ಸಿ.ಹಿರೇಮಠ ಅವರ(ಸಂಪಾದಿತ)	ಶಿವಶರಣೆಯರ ವಚನಗಳು
ಶ್ರೀ ಸಿದ್ಧಯ್ಯ ಪುರಾಣಿಕ ಅವರ	ಶರಣಚರಿತಾಮೃತ
ಶ್ರೀ ಬಿ. ಪುಟ್ಟಸ್ವಾಮಯ್ಯನವರ	ಕ್ರಾಂತಿಕಲ್ಯಾಣ

ಇವು ಆಧಾರವಾದುದರಿಂದ ಈ ಗ್ರಂಥಕಾರರಿಗೆ ನನ್ನ ಅನಂತ ಕೃತಜ್ಞತೆ ಸಲ್ಲು ವದು. 'ಬಸವರಾಜ ದೇವರು' ಗ್ರಂಥದ ಅನುಬಂಧದಲ್ಲಿ ಕೊಟ್ಟಿರುವ 'ಪ್ರಮಾಣ ವಿಚಾರ'ದಲ್ಲಿ ಈ ಚರಿತ್ರೆಯ ಐತಿಹಾಸಿಕ ಅಂಶಗಳಿಗೂ ಪ್ರಮಾಣಗಳಿವೆ.

ಈ ಕೃತಿ ಬೆಳಕಿಗೆ ಬಂದುದು ಗುರುಮಹಿಮೆಯ ಒಂದು ಘಟನೆ! ಇದರ ಕೈಬರಹದ ಪ್ರತಿಯನ್ನು ಶ್ರೀಗುರು ಷ. ಬ್ರ. ಶಾಂತವೀರ ಮಹಾಸ್ವಾಮಿಗಳ ವರು ಎರಡು ಸಲ ಓದಿಸಿ ಕೇಳಿದರು. ಇದು ಪ್ರಕಟವಾಗಬೇಕೆಂಬ ಇಚ್ಛೆ ವ್ಯಕ್ತ ಮಾಡಿದರು. ಈ ಅಕ್ಕನಾಗಮ್ಮನ ಚರಿತ್ರೆ ಬೆಳಕು ಕಾಣುವದಾದರೆ, ಅದ ರೊಡನೆ ಇದಕ್ಕೆ ಸಹಾಯಮಾಡುವ ಯಾರೊಬ್ಬ ತಾಯಿಯ ಔದಾರ್ಯವೂ ಬೆಳಕಿಗೆ ಬರಬೇಕೆಂದು, ಯಾರಿಗೂ ತಿಳಿಸದ ನನ್ನ ಅಂತರಂಗದ ಇಚ್ಛೆಯಾಗಿತ್ತು. ಗುರುಗಳ ಸೂಚನೆಯಂತೆ, ಸಾಹಿತ್ಯಾಭಿಮಾನಿಗಳಾದ ಚತುರ್ಭಾಷಾ ಕವಿತಾ ಚತುರರಾದ ಶ್ರೀ ಸತ್ಯಾನಂದರು (ಡಿಸ್ಟ್ರಿಕ್ಟ ಸಿವ್ಹಿಲ್ ಸರ್ಜನ ಡಾ॥ ಕೆ. ಮುದ್ದಣ್ಣ ಅವರು) ಈ ಹಸ್ತಪ್ರತಿಯನ್ನು ತರಿಸಿ ಪ್ರೇಮದಿಂದ ಓದಿದರು. ತಮ್ಮ ಅಂತಃ ಪ್ರೇರಣೆಯಿಂದಲೇ ಈ ಕೃತಿಯ ಪ್ರಕಟನೆಗೆ ನೆರವು ದೊರೆಯುವ ಒಂದು ಸಂದರ್ಭವನ್ನು ಒದಗಿಸಿದರು. ಶ್ರೀಮಾನ್ ಸಿ. ಎಸ್. ಉಮಾಪತಿ, ಸಿರಿವಾರ ಜಿ. ಕಾಂ. ಕ. ಕಾರ್ಯದರ್ಶಿ ರಾಯಚೂರ ಇವರು ತಮ್ಮ ಮಾತೃಶ್ರೀ ಪುಣ್ಯೋದರಿ ಲಿಂಗೈಕ್ಯ 'ಶಿವಮ್ಮ'ನವರ ದಿವ್ಯ ಸ್ಮರಣೆಯ ನಿಮಿತ್ತವಾಗಿ ಪ್ರತಿ ವರುಷದಂತೆ ಈ ಸಲವೂ ಕೈಕೊಂಡ ಪುಣ್ಯಕಾರ್ಯಗಳ ಅಂಗವಾಗಿ 'ಕ್ರಾಂತಿ ಗಂಗೋತ್ರಿ' ಬೆಳಕಿಗೆ ಬರಲು ಕಾರಣರಾದರು. ನನ್ನ ಒಳಬಗೆಯ ಆಶೆ

ಈಡೇರಿಬಿಟ್ಟಿದೆ. ಲಿಂ. ತಾಯಿ ಶಿವಮ್ಮನವರ ಸ್ಮೃತಿಗೆ ನನ್ನ ಅನಂತ ವಂದನೆಗಳು, ಶ್ರೀ ಉಮಾಪತಿಯಪ್ಪನವರಿಗೆ ಧನ್ಯವಾದಗಳು ಸಲ್ಲಲಿ.

ನಮ್ಮೆಲ್ಲರ ಕೋರಿಕೆಯಂತೆ ಪೂಜ್ಯ ಜಯದೇವಿ ತಾಯಿ ಲಿಗಾಡೆಯವರು ಮುನ್ನುಡಿಯನ್ನು ಬರೆದು ಕರುಣಿಸಿದ್ದಾರೆ. ಶರಣೆ ಅಕ್ಕನಾಗಮ್ಮನ ಕೀರ್ತಿಗೆ ಶರಣಚಾರಿತ್ರವೇ ಉಸಿರಾಗಿ ಉಳ್ಳ ಜಯದೇವಿ ತಾಯಿ ಮುನ್ನುಡಿಯ ಬೆಳಕ ನೀಡಿದುದರ ಔಚಿತ್ಯ ಎಷ್ಟೆಂದು ಹೇಳಬೇಕು? ಈ ತಾಯಿಗೆ ನಾನು ಚಿರಋಣಿ!

ಶ್ರೀಗುರುಗಳು ಆಶೀರ್ವಚನ ದಯಪಾಲಿಸಿದ್ದಾರೆ. ನಾರದಗಡ್ಡೆ ಶ್ರೀ ಗಳು ಶುಭಾಶೀರ್ವಾದ ದಯಪಾಲಿಸಿದ್ದಾರೆ. ಶ್ರೀ ಶಾಂತರಸರು ಗ್ರಂಥಪರಿಶೀಲನ, ಅಚ್ಚಿನ ಕರಡುಗಳ ಶುದ್ಧೀಕರಣ ವಹಿಸಿದುದಲ್ಲದೆ ಪುಸ್ತಕಕ್ಕೆ ಅಕ್ಕನಿಗೆ ಅನ್ವರ್ಥವಾಗುವ ಹೆಸರನ್ನು ಅಳವಡಿಸಿದ್ದಾರೆ. ಶ್ರೀ ಸತ್ಯಾನಂದರು ಕವನಕುಸುಮ ಮುಡಿಸಿದ್ದಾರೆ. ಶ್ರೀ ಎಸ್. ಎಸ್. ಕಬ್ಬಿನ M. A., ಸಾಹಿತ್ಯ ರತ್ನ, ಪ್ರಿನ್ಸಿಪಾಲ ನ್ಯೂ ಆ. ಕಾ. ವಿಜಾಪುರ ಇವರು ಅಕ್ಕನ ಜೀವನ ವೈಶಿಷ್ಟ್ಯ ವಿವರಿಸಿದ ಲೇಖನ ನೀಡಿ ಪ್ರೋತ್ಸಾಹಿಸಿದ್ದಾರೆ. ಶ್ರೀ ಚಂದ್ರಕಾಂತ ಕುಸನೂರರು ಸಂಕೇತಪೂರ್ಣವಾದ ಸುಂದರವಾದ ಚಿತ್ರ ಬರೆದುಕೊಟ್ಟಿದ್ದಾರೆ. ಜನತಾ ಪ್ರಿಂಟರಿಯ ಒಡೆಯರಾದ ಶ್ರೀ ಪಿ. ಬಸಣ್ಣನವರು ಗ್ರಂಥವನ್ನು ಅಂದವಾಗಿ ಅಚ್ಚುಮಾಡಿದ್ದಾರೆ.

ಶ್ರೀ ಗುರುಚರಣಗಳನ್ನು ನೆನಹಾಗಿ ಮನದಲ್ಲಿರಿಸಿ, ಮೇಲೆ ಕಾಣಿಸಿದ ಕಾರ್ಯಭಾರ ವಹಿಸಿದ ಸುಹೃದಯರಾದ ಎಲ್ಲ ಕವಿ-ಸಾಹಿತಿ ಮಹನೀಯರಿಗೆ ಅಭಿವಂದನೆಗಳನ್ನು ಸಲ್ಲಿಸುವೆ.

ವಿಜಯಪುರ
ದಿ. ೧೦–೧೦–೭೦
ವಿಜಯದಶಮಿ

ವಿದ್ವಜ್ಜನ ವಿಧೇಯ
ಲಕ್ಕಪ್ಪ ಆ. ಶಿರಹಟ್ಟಿ

ಪ್ರಕಾಶಕರ ಮಾತು

ನಮ್ಮ ಪೂಜ್ಯ ತಂದೆ ಶ್ರೀ ಉಮಾಪತಿಯವರ ಆದೇಶದ ಮೇರೆಗೆ ಈ ಶಿವಶಕ್ತಿ ಪ್ರಕಾಶನ ಸಂಸ್ಥೆಯನ್ನು ನಾವು ಪ್ರಾರಂಭಿಸಿರುವೆವು. ಇದರಿಂದ ಪ್ರಕಟವಾಗುತ್ತಿರುವ ಮೊದಲನೆಯ ಗ್ರಂಥ — 'ಕ್ರಾಂತಿಗಂಗೋತ್ರಿ' ಯನ್ನು ನಮ್ಮ ಅಜ್ಜಿ ಲಿಂ. ಶಿವಮ್ಮನವರ ಪುಣ್ಯಸ್ಮರಣೆಗಾಗಿ ಪ್ರಕಟಿಸಲು ನಮಗೆ ಹೆಮ್ಮೆಯೂ ಸಂತೋಷವೂ ಎನಿಸುತ್ತದೆ.

ನಮ್ಮ ಅಜ್ಜಿಯವರ ಲಿಂಗೈಕ್ಯ ದಿನಾಚರಣೆಯು ಶಿವಾನುಭವ ಸಮ್ಮೇಳನ, ಕವಿಗೋಷ್ಠಿ, ಸಂಗೀತ ಮುಂತಾದ ಕಾರ್ಯಗಳಿಂದ ಒಂದು ವಿಶಿಷ್ಟ ರೀತಿಯಲ್ಲಿ ಆರು ವರ್ಷಗಳಿಂದ ಆಚರಣೆಗೊಳ್ಳುತ್ತಿದೆ. ಈ ವರ್ಷ ನಮ್ಮ ಅಜ್ಜಿ ಶಿವಮ್ಮನವರ ಸ್ಮಾರಕ ಗ್ರಂಥಮಾಲೆ ಈ ಶಿವಸಮಯದಲ್ಲಿ ಪ್ರಾರಂಭಿಸುತ್ತಿರುವುದು ಈ ದಿನಾಚರಣೆಯ ಇನ್ನೊಂದು ವೈಶಿಷ್ಟ್ಯವೆಂದು ಹೇಳಿಕೊಳ್ಳಲು ಸಂತೋಷವೆನಿಸುತ್ತದೆ.

ನಮ್ಮ ಶಿವಶಕ್ತಿಪ್ರಕಾಶನಕ್ಕೆ ತಮ್ಮ ಬಹುಬೆಲೆಯ ಗ್ರಂಥವಾದ 'ಕ್ರಾಂತಿಗಂಗೋತ್ರಿ'ಯನ್ನು ಇತ್ತು ಉಪಕರಿಸಿದ್ದಾರೆ ಶ್ರೀಲಕ್ಕಪ್ಪ ಅ.ಶಿರಹಟ್ಟಿಯವರು. ಅವರಿಗೆ ನಾವು ಅತ್ಯಂತ ಋಣಿಗಳಾಗಿದ್ದೇವೆ.

ಶ್ರೀ ಷ. ಬ್ರ. ಶಾಂತವೀರಸ್ವಾಮಿಗಳು ಬಬಲೇಶ್ವರ, ಶ್ರೀ ಮ. ನಿ. ಪ್ರ. ಚೆನ್ನಬಸವಸ್ವಾಮಿಗಳು ನಾರದಗಡ್ಡೆ ಮಠ, ರಾಯಚೂರು ಅವರು ಆಶೀರ್ವಚನ ಕರುಣಿಸಿದ್ದಾರೆ. ಅವರಿಗೆ ನಮ್ಮ ಶಿ. ಸಾ. ನಮಸ್ಕಾರಗಳು. ಶ್ರೀ ಕಬ್ಬಿನ ಅವರು ಅಭಿಪ್ರಾಯ ಬರೆದಿದ್ದಾರೆ. ಅವರಿಗೆ ನಮ್ಮ ನೆನಕೆಗಳು.

ಪೂಜ್ಯ ಜಯದೇವಿ ತಾಯಿಯವರು ಮುನ್ನುಡಿ ಬರೆದುಕೊಟ್ಟು ಗ್ರಂಥದ ಒಳಸೌಂದರ್ಯ ಹೆಚ್ಚಿಸಿದ್ದಾರೆ. ಅವರಿಗೆ ನಮ್ಮ ಶರಣುಗಳು. ಶ್ರೀ ಚಂದ್ರಕಾಂತ ಕುಸನೂರರು ಅರ್ಥವತ್ತಾದ ಸಂಕೇತಪೂರ್ಣ ಚಿತ್ರ ಬರೆದುಕೊಟ್ಟಿದ್ದಾರೆ. ಅವರಿಗೆ ನಾವು ಉಪಕೃತರು. ಶ್ರೀ ಶಾಂತರಸರು ಮತ್ತು ಡಾ. ಕೆ. ಮುದ್ದಣ್ಣನವರು ಪ್ರಕಾಶನ ಸಂಸ್ಥೆಗೆ ಅನೇಕ ಉಪಯುಕ್ತ ಸಲಹೆಯಿತ್ತು ಗ್ರಂಥ

ಹೊರಬರಲು ಶ್ರಮಿಸಿದ್ದಾರೆ. ಅವರಿಗೆ ನಮ್ಮ ನೆನಕೆಗಳು. ಜನತಾ ಪ್ರಿಂಟರಿಯ ಒಡೆಯರಾದ ಶ್ರೀ ಪಿ. ಬಸಣ್ಣನವರು ಗ್ರಂಥವನ್ನು ಅಂದವಾಗಿ ಅಚ್ಚುಮಾಡಿ ಕೊಟ್ಟಿದ್ದಾರೆ. ಅವರಿಗೆ ನಮ್ಮ ತುಂಬು ಮನಸ್ಸಿನ ನೆನಕೆಗಳು. ಈ ಪ್ರಕಾಶನ ಸಂಸ್ಥೆ ಪ್ರಾರಂಭವಾಗಲು ಸಲಹೆಸಹಕಾರಗಳನ್ನಿತ್ತ ಸಕಲರಿಗೂ ನಮ್ಮ ವಂದನೆಗಳು.

—ಪ್ರಕಾಶಕರು

ಅಕ್ಕನಾಗಮ್ಮ

ಕತ್ತಲೆಗೂ ಬೆಳಕಿನ ದೀಕ್ಷೆಯಿತ್ತವರು
ಬಸವ-ಚೆನ್ನಬಸವರು
ಈ ದಿವ್ಯ ಜ್ಯೋತಿಗಳ
ಲೋಕಕಿತ್ತವಳು ನೀ ತಾಯಿ
ಅಕ್ಕನಾಗಾಯಿ
ಬಾಗೆವಾಡಿಯ ಗುಡಿ
ಇಂಗಳೇಶ್ವರ ಗವಿ
ಕೂಡಲಸಂಗಮ ಕ್ಷೇತ್ರ
ಕಲ್ಯಾಣ ಮಹಮನೆ
ಕಾದರವಳ್ಳಿಯ ಕದನ
ಉಳಿವೆಯ ದರ್ಶನ—
ಅಕ್ಕ
ಎಲ್ಲವೂ
ನಿನ್ನ ಉಸಿರಿಂದ
ಆತ್ಮ ಪಡೆದು
ಸಕಲ ಜೀವಾತ್ಮರಿಗೆ ಲೇಸಿತ್ತುವು
ಶರಣತೇಜವ ಪಡೆದು

— ಸತ್ಯಾನಂದ

ಬಾಗೇವಾಡಿಯಲ್ಲಿ

೧. ಯಾರು ಈ ಕುಮಾರಿ ?

ವಿಭೂತಿಘಟ್ಟಿ - ಗಂಧಾಕ್ಷತೆಗಳನ್ನೂ ಕರ್ಪೂರ - ಪತ್ರಿ - ಪುಷ್ಪಗಳನ್ನೂ ಹಣ್ಣುಕಾಯಿಗಳನ್ನೂ ಇರಿಸಿದ ತಟ್ಟೆಯನ್ನು ಎಡಗೈ ಮೇಲಿಟ್ಟು ಸೀರೆಯ ಸೆರಗನ್ನು ಗಾಳಿಗೆ ಹಾರದಂತೆ ಬಲದೋಳಿನಲ್ಲಿ ಅವಚಿ ಹಿಡಿದು ಆ ಕೈಯನ್ನು ಭಾರಹೊತ್ತ ಎಡಗೈಗೆ ಆಸರವಾಗಿಸಿದ್ದಳು. ಸಾವಧಾನವಾಗಿ ಸಾಗಿದ್ದಳು. ಮೈಕೈ ತುಂಬಿ ದುಂಡಾಗಿ ಬೆಳೆದ ಕುಮಾರಿ ನಾಗಲೆಯು ಶುಚಿರ್ಭೂತಳಾಗಿ, ಓರಣದ ಉಡುಗೆಯಿಂದ ಅಲಂಕೃತಳಾಗಿ ಹೀಗೆ ದೇವಾಲಯದ ಕಡೆಗೆ ನಡೆದಿದ್ದಳು. ಕೊಡ-ತಂಬಿಗೆಗಳೊಡನೆ ಹೊರಟ ಜಾಕಬ್ಬೆ ಸ್ವಲ್ಪ ದೂರ ಹಿಂದೆ ಬರುತ್ತಿದ್ದಳು. ಬೀದಿಯ ತಿರುವಿನ ಹತ್ತಿರ ಎದುರಿಗಿನ ಮನೆಯ ಮುಂದಿನ ಜಗುಲಿಯ ಮೇಲೆ ಮುತ್ತೈದೆ ಮುದುಕಿಯೊಬ್ಬಳು ಬಂದು ನಿಂತಳು. ಆಕೆಯು ನಾಗಲೆಯನ್ನು ಕುತೂಹಲದ ಕಣ್ಣುಗಳಿಂದ ನೋಡುತ್ತಿದ್ದಳು. ಸಮೀಪಕ್ಕೆ ಬಂದಂತೆ ಕಣ್ಣುಕೆರಳಿಸಿ ನೋಡಿದಳು. ನಾಗಲೆ ಈ ಬೇರಾವುದನ್ನೂ ಗಮನಿಸದೆ ಮೌನಮುದ್ರೆಯಿಂದ ಸಾಗಿದ್ದಳು. ಅವಳು ಬೀದಿಯ ಮುಂದಿನ ತಿರುವಿಗೆ ಮರೆಯಾದ ಬಳಿಕ ಮುದುಕಿ ಮನೆಯೊಳಕ್ಕೆ ಕಾಲಿಡುತ್ತ ಕೇಳಿದಳು :

"ಭಾಗು"

"ಏನಜ್ಜಿ ?"

"ಈಗ ಇಲ್ಲಿ ಪೂಜಾಸಾಮಗ್ರಿ ಹಿಡಿದುಕೊಂಡು ದೇವಾಲಯದ ಕಡೆಗೆ ಹೋದ ದೊಡ್ಡ ಹುಡಿಗೆ ಯಾರು ? ಇವಳೇನು ಬ್ರಾಹ್ಮಣರ ಮಗಳೋ ಬೇರೆ ಜಾತಿಯವಳೋ ? ಕೊರಳಲ್ಲಿ ತಾಳಿ ಕಾಣಲೇ ಇಲ್ಲ."

"ಇವಳು ನಾಡಪ್ರಭು ಮಾದಿರಾಜರ ಮಗಳು ನಾಗಲೆ! ಮತ್ತಾವ ಜಾತಿಯವಳಾಗುತ್ತಾಳೆ ?"

"ಹಾಂ. . . ಮಾದಲಮ್ಮನ ಮಗಳೇ ? ಮದುವೆಯನ್ನೇಕೆ ಮಾಡಿಲ ? ಪ್ರೌಢೆಯಾಗಿದ್ದಾಳೆ. ಈಕೆಗೆ ಹತ್ತು ವರ್ಷ ದಾಟಿಲ್ಲವೇ ಇನ್ನೂ ?"

"ದಾಟದೇನು ? ಹನ್ನೆರಡು ಹದಿನಾಲ್ಕು ಕೂಡ ದಾಟಿವೆ."

"ಇದು ನಿಷಿದ್ಧವಲ್ಲವೇ ? ಮಾದಿರಾಜರು ಧರ್ಮಾಧಿಪತಿಗಳು !"

"ಹೌದು, ಹಾಗೆಯೇ ನಾಡಪ್ರಭುಗಳು. ಅವರನ್ನು ಧಟ್ಟಿಸಿ ಕೇಳುವ ಧೈರ್ಯ ಯಾರಿಗೆ? ಅಗ್ರಹಾರದ ಆಡಳಿತಗಾರರೂ ಅವರೇ ! ಆದರೂ ಗುಜುಗುಜು ನಡೆಯುತ್ತಲೇ ಇದೆ."

"ಬೆಳೆದ ಮಗಳನ್ನು ಹಾಗೆಯೇ ಇಟ್ಟುಕೊಂಡಿರಲು ಕಾರಣವಾದರೂ ಏನು ?"

"ನಾಗಲೆಯೇ ಈಗ ಮದುವೆ ಬೇಡೆನ್ನುತ್ತಾಳೆ. ವಿದ್ಯಾವಂತಳು, ಬುದ್ಧಿ ಚುರುಕಾಗಿದೆ. ದೇವರಲ್ಲಿ ಭಕ್ತಿ, ಪುರಾಣ-ಪ್ರವಚನಗಳಲ್ಲಿ ಆಸಕ್ತಿ ಬಹಳ! ಶಾಸ್ತ್ರಾರ್ಥಗಳಲ್ಲಿ ತನ್ನ ಬೇರೆ ವಿಚಾರಗಳನ್ನೇ ಹೇಳುತ್ತಾಳೆ. ಹೀಗೆ ಬುದ್ಧಿಬಲದ ಒಬ್ಬಳೇ ಮಗಳ ಅಭಿಮತವನ್ನು ಮೀರಿ, ತಂದೆ-ತಾಯಿಗಳು ಅವಳಿಗೆ ಒತ್ತಾಯ ಪಡಿಸಲು ಅಸಮರ್ಥರಾಗಿದ್ದಾರೆ."

"ಮಾದಲಮ್ಮನಿಗೆ ಇವಳೊಬ್ಬಳೇ ಮಗಳೇ ?"

"ಇದುವರೆಗೂ ಒಬ್ಬಳೇ ! ಮತ್ತೆ ಹಡೆದಿರಲಿಲ್ಲ. ಏಳೆಂಟು ವರ್ಷಗಳಿಂದ ದೈವಭಕ್ತಿಯನ್ನು ವಹಿಸಿ, ಮಾದಲಮ್ಮನವರು ವ್ರತ-ಪೂಜೆ-ಉಪವಾಸಾದಿ ಗಳನ್ನೂ ದಾನಧರ್ಮಗಳನ್ನೂ ಮಾಡಿದರು. ಶಿವನ ಆಜ್ಞೆಯಾಯಿತೇನೋ ಆಚೆಯ ವಾರದಲ್ಲಿ ಅವರಿಗೆ ಒಬ್ಬ ಮಗನಾಗಿದ್ದಾನೆ. ಮಗು ಅಪ್ರತಿಮವಾಗಿದೆ; ಸುಂದರವಾಗಿದೆ; ಅಂಗಾಂಗಗಳಲ್ಲಿ ಕಳೆತುಂಬಿದೆ. ಮಗು ಜನಿಸಿದಾಗ ಸಂಗಮ ನಾಥ ಜಾತವೇದ ಮುನಿಗಳು ಇಲ್ಲಿಗೆ ಬಂದಿದ್ದರು; ಪ್ರಭುಗಳ ಮನೆಯಲ್ಲಿಯೇ ಇದ್ದರು. ಅವರು ಮಗುವಿನ ತೇಜಸ್ಸಿಗೆ ಮುಗ್ಧರಾಗಿ ಆಗಲೇ ಲಿಂಗಧಾರಣ ಮಾಡಿದರು."

"ಈಗಲೇ ಲಿಂಗವೆ? ನಮ್ಮಲ್ಲಿ ಉಪನಯನ ಯಜ್ಞೋಪವೀತ ಧಾರಣ ಆದಮೇಲೆ, ಪ್ರೌಢರಾದವರು ತಮ್ಮಿಷ್ಟದಂತೆ ಬೇಕಾದರೆ ಲಿಂಗವನ್ನು ಧರಿಸಿ ಪೂಜಿಸಬಹುದು."

"ಅದು ಸರಿ. ಆದರೆ ಜಾತವೇದ ಮುನಿಗಳು ಮಗುವಿನಲ್ಲಿ ಭವಿಷತ್ಕಾಲದ ಏನೋ ವಿಶೇಷವನ್ನು ಊಹಿಸಿ ಹಾಗೆ ಮಾಡಿದರಂತೆ."

"ಅವಿವಾಹಿತ ಪ್ರೌಢ ಕನ್ನಿಕೆಯನ್ನು ಅವರು ನಿಷೇಧಿಸಲಿಲ್ಲವೇ ?"

"ಇಲ್ಲ. ಹತ್ತು ವರ್ಷಕ್ಕೆ ಕನ್ನೆಗೆ ಮದುವೆ ಆಗಲೇ ಬೇಕೆಂಬ ಸಂಪ್ರದಾಯಕ್ಕೆ ಅವರು ಮಹತ್ವ ಕೊಡುವದಿಲ್ಲವಂತೆ. ಅವರು ತಮ್ಮ ಸಂಗಮದ ಗುರುಕುಲದಲ್ಲಿ ಧರ್ಮಾಚಾರಗಳನ್ನು ಪರಿಶೀಲಿಸಿ ಸತ್ಯ-ಶುದ್ಧವಾದವುಗಳನ್ನಷ್ಟೇ ಹಿಡಿದುಕೊಂಡು ಹೊಸ ಪಂಥವನ್ನು ರೂಪಿಸತೊಡಗಿದ್ದಾರಂತೆ! ಇದು ನಮ್ಮಲ್ಲಿಯ ಪಂಡಿತರಿಗೂ ಗೊತ್ತಿದೆ."

"ಏನೋ ತಾಯೀ ಧರ್ಮದ ವಿಚಾರ !"

"ನೋಡಿರಿ, ಹಿಂದೆ ದಾಸಿ ಜಾಕವ್ವೆಯೂ ದೇವಸ್ಥಾನಕ್ಕೆ ಹೊರಟಿದ್ದಾಳೆ. ಪ್ರಭುಗಳು ಇಂದು ವೃಷಭೇಶನಿಗೆ ಅಭಿಷೇಕ-ಪೂಜಾಸಮಾರಂಭವನ್ನು ಏರ್ಪಡಿಸಿದ್ದಾರೆ. ಇವರೆಲ್ಲ ಅದಕ್ಕಾಗಿ ಹೊರಟಿದ್ದಾರೆ. ಮಂಗಲಾರತಿಗೆ ನಾವೂ ಹೋಗಬೇಕು; ನಮ್ಮನ್ನೂ ಕರೆದಿದ್ದಾರೆ."

"ಮಾದಲಮ್ಮನನ್ನು ನಾನು ನೋಡಿ ಹತ್ತಿಪ್ಪತ್ತು ವರ್ಷಗಳಾಗಿರಬೇಕು. ಆಗ ಅವಳು ಅತ್ತೆಯ ಮನೆಗೆ ಬಂದು ಆರೇಳು ವರ್ಷವಾಗಿತ್ತು. ಇದೆಲ್ಲ ನಡೆದದ್ದು ನನಗೇನು ಗೊತ್ತಾಗಬೇಕು ?"

"ಹೌದಜ್ಜೀ, ನೀವು ತವರಿಗೆ ಬಂದೇ ಇಲ್ಲ. ಇವರು ಎಷ್ಟೋ ಸಲ ನಿಮ್ಮನ್ನು ಕರೆಯಬಂದಿದ್ದರು. ಸೋದರಳಿಯನ ಕರೆಗೆ ಈಗ ಓಗೊಟ್ಟಿದ್ದೀರಿ. ದೇವಸ್ಥಾನಕ್ಕೆ ನಡೆಯಿರಿ. ಅಲ್ಲಿ ಮಾದಲಮ್ಮನವರನ್ನು ಕಾಣುವಿರಿ."

"ಆಗಲಮ್ಮಾ."

೨. ಅಕ್ಕರೆಯ ಅಕ್ಕ, ಮುದ್ದು ತಮ್ಮ

ನಡುಮನೆಯ ಮಂಚದ ಮೇಲೆ ಮುದುಡಿಯಾಗಿ ಕುಳಿತ ಮಾದಲಾಂಬಿಕೆ ಕ್ಷೀಣ ಸ್ವರದಿಂದ ಕೇಳಿದಳು :

"ಜಾಕವ್ವ, ನಾಗು ಬಸವನಿಗೆ ಹಾಲು ಕುಡಿಸಿದಳೇ ?"

"ಇಲ್ಲರವ್ವ; ಕಾಸಿ ಇಟ್ಟು, ಇನ್ನೂ ಬರಲಿಲ್ಲವೆಂದು ದೇವರ ಕೋಣೆಗೆ ಹೋಗಿ ನೋಡಿದೆ. ನಾಗಕ್ಕ ಇನ್ನೂ ಧ್ಯಾನದಲ್ಲಿಯೇ ಇದ್ದಾರೆ."

"ಬಸವ ?"

"ಅವನೂ ಅಕ್ಕನ ಮುಂದೆ ಮೌನವಾಗಿ ಕುಳಿತಿದ್ದಾನೆ."

"ಸರಿಯಾಯ್ತು; ಅಕ್ಕನಂತೆ ತಮ್ಮ! ನೀನು ನೀರು ತೋಡು. ಸ್ನಾನ ಮಾಡಿ ದೇವರ ಗುಡಿಗೆ ಹೋಗಿಬರೋಣ."

ದಾಸಿ ಅತ್ತ ನೀರಮನೆಗೆ ನಡೆದಳು. ದೇವರ ಕೋಣೆಯಲ್ಲಿ ನಾಗಲಾಂಬೆಯು ಕಣ್ದೆರೆದು 'ಶಿವಶಿವ' ಎನ್ನುತ್ತ ಮೇಲೇಳಲು, ಬಸವನೂ ಎದ್ದು, ಪುಟ್ಟ ಹೆಜ್ಜೆಗಳಿಂದ ಮುಂದೆ ಮುಂದೆ ಓಡುತ್ತ ನಡುಮನೆಗೆ ಬಂದು ತಾಯಿಯ ತೊಡೆಗಳನ್ನು ತಟ್ಟಿ ಅಲುಗಿಸಿ ತೊದಲ್ನುಡಿಗಳಿಂದ ಹೇಳುತ್ತಿದ್ದನು :

"ಅವ್ವಾ, ಅಕ್ಕ ಶಿವಶಿವ! ಅವ್ವಾ, ಅಕ್ಕ ಶಿವಶಿವ!"

ಅಲ್ಲಿ ಹಾಯ್ದು ಅಡುಗೆಯ ಮನೆಗೆ ನಡೆದಿದ್ದ ನಾಗಲೆಯು ನೋಡಿ ನಸು ನಗೆಯನ್ನು ಬೀರಿದಳು. ಮಾದಲಾಂಬೆ ಮಗನನ್ನು ಎತ್ತಿ ಅಪ್ಪಿಕೊಳ್ಳಲಿಲ್ಲ. ಗದ್ದವನ್ನು ಮಾತ್ರ ಹಿಡಿದು, "ಹೌದಪ್ಪ, ಶಿವಶಿವ! ಅಕ್ಕ ಶಿವಶಿವ! ಅಕ್ಕ ಹಾಲು ಕುಡಿಸುವಳು; ಒಳಗೆ ಹೋಗು" ಎಂದಳು. ಬಸವ ಅಕ್ಕನತ್ತ ಅಡುಗೆ ಮನೆಗೆ ಹೋದನು. ದಾಸಿ ಮಾದಲವ್ವನನ್ನು ನೀರಮನೆಗೆ ಕರೆದೊಯ್ದಳು. ಮಾದಲಾಂಬಿಕೆಯು ಸ್ನಾನಮಾಡಿ ಮಡಿಯಿಂದ ದಾಸಿಯನ್ನು ಜತೆಯಲ್ಲಿ ಕರೆದು ಕೊಂಡು ದೇವಸ್ಥಾನಕ್ಕೆ ಹೋದಳು.

ನಾಗಲೆಯು ಬೆನ್ನಮೇಲೆ ಬಹಳ ವರ್ಷಗಳ ಬಳಿಕ ಮಾದಲಾಂಬಿಕೆಯು ನೂರಾರು ವ್ರತನೇಮಗಳನ್ನು ಆಚರಿಸಿ, ಮುಂದೆ ಮಹಾತ್ಮನಾಗಲಿರುವ ಮಹಾ ವಿಭೂತಿ ಬಸವಣ್ಣನನ್ನು ಹೆತ್ತಿದ್ದಳು. ಅಷ್ಟರಲ್ಲಿ ವಯಸ್ಸಾದ್ದರಿಂದಲೂ ವ್ರತಾಚಾರದಿಂದಲೂ ಹೆರಿಗೆಯ ಪ್ರಸಂಗದಿಂದಲೂ ಆ ತಾಯಿ ಕೃಶಳಾಗಿ ಹೋಗಿದ್ದಳು; ಆ ಭಕ್ತಿಯ ಭರದಲ್ಲಿ—ಅದೇ ಕರ್ಮನಿಷ್ಠೆಯ ಸೆಳವಿನಲ್ಲಿ—ಸಿಲುಕಿ ಶರೀರವನ್ನು ಸವಿಸುತ್ತಿದ್ದುದರಿಂದ ಇನ್ನೂ ಹೆಚ್ಚಾಗಿ ಅಶಕ್ತಳಾಗಿದ್ದಳು. ಆದರೆ ಆ ಛಲ ತೊಲಗಿರಲಿಲ್ಲ; ಕರ್ಮಾಚಾರಗಳಲ್ಲಿ ತನ್ಮಯಳಾಗಿರುತ್ತಿದ್ದಳು. ಅದರಿಂದ ಮಗನ ಲಾಲನೆ-ಪಾಲನೆಗಳಲ್ಲಿ ವಿಶೇಷ ಗಮನವಿರಲಿಲ್ಲ. ಅದು ಪ್ರೌಢೆಯಾದ ನಾಗಲೆಯ ಪಾಲಿಗಿತ್ತು. ತಮ್ಮನ ಬಗೆಗೆ ನಾಗಲೆಗಿರುವ ಅಕ್ಕರೆಗೆ ಅಳತೆಯಿರಲಿಲ್ಲ. ನಿತ್ಯದ ಎಲ್ಲ ಕಾರ್ಯಗಳಲ್ಲಿ ಆಕೆಗೆ ಮಗು ಬಸವಣ್ಣನು ಜತೆಯಾಗಿದ್ದನು. ಅದಕ್ಕೆ ಸಾಮಾನ್ಯರಂತೆ ಅವರಿಬ್ಬರು ಅಕ್ಕತಮ್ಮಂದಿರಾಗಿದ್ದರೆಂಬುದು ಮಹತ್ವದ ಕಾರಣವಲ್ಲ. ಅದಕ್ಕಿಂತ ಹೆಚ್ಚಾಗಿ ಆ ಶಿಸುವಿನಲ್ಲಿ ಸುಪ್ತವಾಗಿದ್ದ ಪುರಾಕೃತ ಸಾಧನೆಯ ಪ್ರಭಾವಿತ ಚೈತನ್ಯವನ್ನು ನಾಗಲೆಯು ಗುರುತಿಸಿದ್ದಳೋ ಅಥವಾ ನಾಗಲೆಯು ಚಿಕ್ಕಂದಿನಲ್ಲಿಯೇ ಅನುಸರಿಸಿದ್ದ ಯೋಗಾನುಷ್ಠಾನದ ಪ್ರಭಾವವು ಆ ಶಿಸುವಿನ ಮೇಲೆ ಮೂಡುತ್ತಿತ್ತೋ ತಿಳಿಯದು. ಅವರಿಬ್ಬರಲ್ಲಿ ಅಂತಹ ಗಾಢ ಆತ್ಮೀಯತೆಯು ಅಂಕುರಿಸಿ ಬೆಳೆಯುತ್ತಲಿದ್ದಿತು.

ಹಾಲುಕುಡಿದ ಬಸವಣ್ಣ ಅಂಗಳಕ್ಕಿಳಿದನು. ಕರುಗಳ ಹತ್ತಿರ ಹೋದನು; ಮೈಮೇಲೆ ಕೈಯಾಡಿಸಿದನು. ಕರುಗಳು ತಮ್ಮ ಕೊರಳನ್ನು ಅವನ ಮೈಗೆ ತಾಗಿಸಿ ಸಂಭಾವಿಸಿದವು. ಬಸವಣ್ಣ ಅವುಗಳಿಗೆ ಸೊಪ್ಪು ತಂದು ಹಾಕಿದನು. ಗುಬ್ಬಿಗಳ ತಟ್ಟೆಗೆ ಗಿಂಡಿಯಿಂದ ನೀರೆರೆದನು. ಬೆಕ್ಕಿನ ಮರಿ ಬರಲು ಅದನ್ನೆತ್ತಿಕೊಂಡು ಮತ್ತೆ ಅಡುಗೆ ಮನೆಗೆ ಹೋದನು. ನಾಗಕ್ಕ ಅದರ ಮುಂದೆ ಬಟ್ಟಲಲ್ಲಿ ಹಾಲಿಟ್ಟಳು. ಬಸವಣ್ಣ ಮತ್ತೆ ಹೊರಗೆ ಓಡಿ ಹಜಾರದಲ್ಲಿ ಕುಳಿತ ತಂದೆಯ ಹತ್ತಿರ ಬಂದನು. ಮಾದರಸನು ದಿಂಬಿಗೆ ಒರಗಿ ವೀಳ್ಯವನ್ನು ಮೆಲ್ಲುತ್ತಿದ್ದನು. ಬಸವಣ್ಣ ಅವನ ಮುಂದಿರುವ ಓಲೆಕಂಠವನ್ನು ಕೈಗೆತ್ತಿಕೊಂಡು, ಒಂದು ಓಲೆಗರಿಯನ್ನು ಈಚೆಗೆ ತಕ್ಕೊಂಡನು.

"ಏನು ಬರೆಯುವಿಯಪ್ಪಾ ಬಸವ ?"

"ಶಿವಶಿವ, ಅಕ್ಕ ಶಿವಶಿವ !"

ಮಾದಿರಾಜನು ಮುಗುಳು ನಗೆಯಿಂದ ಮಗನನ್ನು ಸೆಳೆದಪ್ಪಿಕೊಂಡು ಮುದ್ದಿಟ್ಟನು. ಬಸವಣ್ಣ ಅಪನ ಕೈಯಿಂದ ಜಾರಿಕೊಂಡು ಹೋಗಿ ಗೋಡೆಯ ಹತ್ತಿರ ಇದ್ದ ತನ್ನ ಚಿಕ್ಕ ಬಂಡಿಗೆ ದಾರಕಟ್ಟಿ ಎಳೆದುಕೊಂಡು ಹೋದನು. ಅಂಗಳದಲ್ಲಿ ಅದರ ಮೇಲೆ ಚಿಕ್ಕ ಹೇರು ಹೇರಿ ಬಸವಣ್ಣಗಳನ್ನು ಹೂಡಿ ಆಡ ಹತ್ತಿದನು.

ನಾಗಲೆಯು ನಾಲ್ಕು ಸಲ ಬಂದು ಪಡಸಾಲೆಯ ಅಂಚಿನಲ್ಲಿ ನಿಂತು ಅಂಗಳದಲ್ಲಿ ಆಡುವ ತಮ್ಮನನ್ನು ನೋಡಿದಳು. ತಂದೆಯು ಭೋಜನಶಾಲೆಗೆ ಬಂದದ್ದರಿಂದ ನಾಲ್ಕನೆಯ ಸಾರೆ ಅವನನ್ನು ಎತ್ತಿಕೊಂಡು ಒಳಗೆ ಹೋದಳು. ಧೂಳಾದ ಮೈಕೈಗಳನ್ನು ತೊಳೆದು ಒರಸಿ ಭಸ್ಮಧಾರಣ ಮಾಡಿಸಿ, ತಂದೆಯ ಮಗ್ಗುಲಲ್ಲಿ ಕೂಡ್ರಿಸಿದಳು. ಮೃದುಮಧುರ ಭೋಜನ, ನಾಗಲೆ ನಯವಾಗಿ ಬಡಿಸುವಳು, ತಂದೆಮಕ್ಕಳ ಊಟ. ಅದೊಂದು ಸಂತಸದ ಸಡಗರ !

ಅಂದು ಎಂದಿನಂತೆ ಸಂಜೆಯಲ್ಲಿ ಪ್ರವಚನ. ಸಭೆಯಿಂದ ಮಾವರೂ ಮರಳಿ ಬಂದ ಬಳಿಕ ಮಾದರಸ ಮಾದಲಾಂಬಿಕೆಯ ಮಂಚದ ಹತ್ತಿರವಿದ್ದ ಆಸ ನದ ಮೇಲೆ ಕುಳಿತನು. ತಮ್ಮನನ್ನು ಎತ್ತಿಕೊಂಡಿದ್ದ ನಾಗಲೆಯು ಹಾಗೆಯೇ ಅಡುಗೆಯ ಮನೆಗೆ ಹೋದಳು. ಪತಿಯ ಕೈಯಿಂದ ಪ್ರಸಾದ ತಕ್ಕೊಂಡು ವಂದಿಸಿ ಕುಳಿತ ಬಳಿಕ ಮಾದಲಾಂಬೆ ಕೇಳಿದಳು :

"ಮಗಳ ಮದುವೆಯ ಮಾತಿನಲ್ಲಿ ಉಪೇಕ್ಷೆ ಇನ್ನೆಷ್ಟು ದಿನ ? ಸನಾತನಿ ಗಳು ಆಕ್ಷೇಪಿಸುವಂತಾಗಿದೆ."

"ಅದಕ್ಕೇನು ಮಾಡುವದು ? ನಾಗಲೆಗೆ ಇನ್ನೂ ಮನಸ್ಸಿಲ್ಲ. ಸನಾತನ ಸಂಪ್ರದಾಯವೆಂಬುದು ಮಹತ್ವದ ಅಂಶವಲ್ಲವೆಂಬುದನ್ನು ಶ್ರೀಗುರು ಸಂಗಮ ನಾಥ ಜಾತವೇದಿ ಮುನಿಗಳು ಬಂದಾಗ ಹೇಳಿದ್ದಾರೆ; ನೆನಪಿದೆಯೇ ?"

"ಇದೆ. ಆಗಿನಿಂದ ಯಾರಾದರೂ ಮದುವೆಯ ಮಾತು ತೆಗೆದರೆ ನಾಗಲೆ ಅಲ್ಲಿಂದ ಎದ್ದು ಹೋಗುತ್ತಾಳೆ."

"ಹೌದು, ಅವಳ ಆಸಕ್ತಿಯೇ ಬೇರೆ ಇದೆ. ಈ ಎಳವೆಯಲ್ಲಿಯೇ ಅವಳ ಜ್ಞಾನಲಾಲಸೆ-ವಿಚಾರಧಾರೆಗಳನ್ನು ಕಂಡು ಅಗ್ರಹಾರದ ಪಂಡಿತರು ಅವಳನ್ನು ಪ್ರಶಂಸಿಸುತ್ತಿದ್ದಾರೆ. ಪ್ರವಚನದ ಕೊನೆಯ ಚರ್ಚೆಯಲ್ಲಿಯೂ ಅವಳು ಭಾಗ ವಹಿಸುತ್ತಿದ್ದಾಳೆ. ಇಂಥವಳನ್ನು ಆಗ್ರಹಪಡಿಸುವದು ಹೇಗೆಂಬುದೇ ತಿಳಿಯ ದಾಗಿದೆ."

"ಆಕೆಯ ದೈವಾಸಕ್ತಿ ತತ್ವವಿಚಾರಸಾಧನೆಗಳಿಗೆ ಅನುಕೂಲವಾಗಿರುವ ಮನೆತನವೂ ವರನೂ ಆದರೆ ಒಪ್ಪಬಹುದೆಂದು ನನಗೆ ತೋರುತ್ತದೆ."

"ಹಾಗಿದ್ದರೆ ಸ್ಪಷ್ಟವಾಗಿ ತಿಳಿದುಕೊಂಡು ಹೇಳು. ಅಂತಹ ವರನನ್ನೇ ನೋಡೋಣ."

"ನೀವೂ ನಾಗಲೆಯನ್ನು ಕೇಳಿ ನೋಡಿರಲ್ಲ."

"ಮೊದಲು ನೀನು; ಆಮೇಲೆ ನಾನು ಕೇಳುವೆ."

ಮಾದಿರಾಜನು ಎದ್ದು ಹೋದನು. ನಾಗಲೆಯು ಒಳಗಿನ ಮನೆಯಲ್ಲಿ ತಮ್ಮನ ಉಪಚಾರದಲ್ಲಿ ತೊಡಗಿದ್ದಳು.

೩. ಕರುಣಾಮೂರ್ತಿ

ಮುಸುರೆಯ ನೀರು, ಬಚ್ಚಲ ನೀರು, ಬಳಕೆಯ ನೀರು ಒಟ್ಟಾದ ಕೊಳಕು ನೀರಿನ ಹರಿಯೊಂದು ಮಾದರಸರ ಮಂದಿರದಿಂದ ಹಿಂದಿನ ಬಯಲು ಹಿತ್ತಲದಲ್ಲಿ ಹಾಯ್ದು ಆಚೆಗೆ ಹೋಗುತ್ತಿತ್ತು. ಅಲ್ಲಿ ಕೊಳಚೆ ಹೆಚ್ಚಾಗಿ ಉಂಟಾದ ಹೂಳು ತೆಗೆಯುವದಕ್ಕಾಗಿ ಹೊಲೆಯರ ಒಂದು ಕುಟುಂಬದವರನ್ನು ಬಿಟ್ಟೀ ಹಿಡಿದು ಹಚ್ಚಲಾಗಿತ್ತು. ಹೊತ್ತೇರುವವರೆಗೆ ಕೆಲಸ ಮಾಡಿದ ಬಳಿಕ ಅವರಿಗೆ ತಿನ್ನಲು ಕೊಡುವದಕ್ಕಾಗಿ ರೊಟ್ಟಿಗಳನ್ನು ತಕ್ಕೊಂಡು ಜಾಕವ್ವ ಅಲ್ಲಿಗೆ ಬಂದಳು. ನಾಗಲೆಯೂ ಸಂಗಡ ಬಂದಿದ್ದಳು. ಕೆಲಸಮಾಡುವ ಜನರ ಕೈಕಾಲುಗಳಿಗೆ ಕೊಳಚೆ ಕೆಸರು ಮೆತ್ತಿದ್ದಿತು. ಮೈಮೇಲಿನ ಚಿಂದಿ ಬಟ್ಟೆಗಳಿಗೂ ಮೋರೆಗೂ ರಾಡಿ ಸಿಡಿದಿದ್ದಿತು. ತೊಳೆದುಕೊಳ್ಳಲಿಕ್ಕೆ ಅಲ್ಲಿ ಅವರಿಗೆ ನೀರಿಲ್ಲ. ಅಲ್ಲಿಯ ಬಾವಿ-ಹೊಂಡಗಳ ಸನಿಹಕ್ಕೆ ಅವರು ಹಾಯಕೂಡದು. ಹಳ್ಳದಲ್ಲಿ ಅವರು ನೀರುತುಂಬುವ ಸ್ಥಳ ಕೆಳಗಡೆಗೆ ಬಲುದೂರ! ಅವರ ಗಡಿಗೆಯಲ್ಲಿ ಕುಡಿಯುವ ಮಟ್ಟಿಗೆ ಎರಡು ತಂಬಿಗೆ ನೀರು ಹಾಕಿ, ರೊಟ್ಟಿಗಳನ್ನು ಅಲ್ಲಿಯ ಒಂದು ಕಲ್ಲ ಮೇಲಿಟ್ಟು ಜಾಕವ್ವ ಹೋಗಿಬಿಟ್ಟಳು. ಆ ಜನರು ತಮ್ಮ ಕೈಗಳನ್ನು ಒಣ ಮಣ್ಣಿನಲ್ಲಿ ತಿಕ್ಕಿ, ಕೆಸರು ಕಳೆದುಕೊಂಡು, ಬಳಿಕ ರೊಟ್ಟಿಗಳನ್ನು ಎತ್ತಿಕೊಳ್ಳುವವರಲ್ಲಿದ್ದರು. ನಾಗಮ್ಮನಿಗೆ ಅವರ ಈ ಕಷ್ಟಜೀವನ ನೋಡಿ ಕರುಳು ಕಿವುಚುವಂತಾಯಿತು. ಒಡೆಯರಾದವರು ಈ ಜನರನ್ನು ಹೀಗೆ ತಿರಸ್ಕಾರದಿಂದ ಕಾಣುತ್ತಿರುವದಕ್ಕೆ ಜಿಗುಪ್ಸೆಗೊಂಡಳು; ನೋಡಲಾಗಲಿಲ್ಲ. ಆಕೆ ಅವರಿಗೆ—

“ತಡೆಯಿರಿ, ಹಾಗೆ ಹಾಯ್ದು ಆ ಬಾವಿಯ ಕಡೆಗೆ ಬನ್ನಿರಿ. ನಾನು ಬಿಂದಿಗೆ ತರುತ್ತೇನೆ” ಎಂದು ಹೇಳಿ ಒಳಗೆ ಹೋಗಿ ಬಿಂದಿಗೆ ತಂದಳು. ನಾಲ್ಕು ಬಿಂದಿಗೆ ನೀರು ಜಗ್ಗಿ ಕಟ್ಟೆಯ ಮೇಲೆ ನಿಂತು ಎರೆದು ಅವರ ಕೈಕಾಲು ಮೋರೆಗಳನ್ನು ತೊಳೆಯಿಸಿದಳು. ಬಳಿಕ ಅವರ ಪಾತ್ರೆ ತುಂಬಿಸಿ, ಗಿಡದ ಬಳಿ ಕುಳಿತು ಆರಾಮವಾಗಿ ಉಣ್ಣಿರೆಂದಳು. ಆ ಹೊಲೆಯ ದಂಪತಿಗಳೂ ಮಗನೂ ನಾಗಲೆ

ಯನ್ನು 'ಮಹಾದೇವಿ ಸಮ್ಮ ಸಣ್ಣಮ್ಮನವರು' ಎಂದು ಹಾಡಿ ಹರಸುತ್ತ ಉಂಡರು.

ಹೀಗೆ ಬಡವರ ಕಷ್ಟಪರಿಹಾರಕ್ಕೆ ನೆರವಾಗುವ ಪ್ರವೃತ್ತಿಯು ನಾಗಲೆಯಲ್ಲಿ ಉಂಟಾಗಿ ಬೆಳೆಯುತಲಿದ್ದಿತು. ಒಮ್ಮೆ ತಾಯಿಯನ್ನು ಕೈಹಿಡಿದು ಕರೆದುಕೊಂಡು ದೇವಸ್ಥಾನದಿಂದ ಬರುತ್ತಿದ್ದಳು. ದಾರಿಯಲ್ಲಿ ಒಂದು ಚಿಕ್ಕ ಮಗು ಓಡಿಬರುತ್ತ ಎಡವಿ ಬಿದ್ದು ಅಳಹತ್ತಿತು. ನಾಗಲೆಗೆ ಸುಮ್ಮನಿರಲಾಗಲಿಲ್ಲ. ಓಡಿ ಹೋಗಿ ಅದನ್ನು ಎಬ್ಬಿಸಿದಳು. ಶಿಸುವಿನ ಮೂಗಿಗೆ ಹರಳು ಬಡಿದು ಅದು ಒಡೆದು ರಕ್ತ ಬೀಳತೊಡಗಿತ್ತು.

"ಯಾರದೇ ಅದು? ಮುಟ್ಟಿಬಿಟ್ಟೆಯಲ್ಲ! ಮಡಿಯುಲಿದ್ದುದು ತಿಳಿಯದೆ?" ಮಾದಲಾಂಬೆ ಜರಿದು ನುಡಿದಳು.

"ಮಡಿಯೇನು, ಮೈಲಿಗೆಯೇನು? ನೋಡಿಲ್ಲಿ" ಎನ್ನುತ್ತ ನಾಗಲೆಯು ತನ್ನ ತಂಬಿಗೆಯಲ್ಲಿಯ ನೀರಿನಿಂದ ಮಗುವಿನ ಮೂಗು ತೊಳೆದು ಧೂಳು ಒರಿಸಿದಳು. ಅಷ್ಟರಲ್ಲಿ ಹುಡುಕುತ್ತ ಬಂದಳು ಮಗುವಿನ ತಾಯಿ! ಆಕೆ ಬ್ರಾಹ್ಮಣಳಲ್ಲ. ಆ ತಾಯಿಗೆ ಮಗುವನ್ನೊಪ್ಪಿಸಿ ನಾಗಲೆ ಎದ್ದಳು. ಮಾದಲಾಂಬಿಕೆಗೆ ಸಂಕೋಚ. "ಕೈ ಹಿಡಿಯಬೇಡ, ನಾನೇ ಮೆಲ್ಲಗೆ ಬರುವೆ, ನಡೆ." ಎಂದಳು.

"ನೀ ಬೇರೆ ಬಿದ್ದೀಯಮ್ಮಾ! ದೇವರು ಇದಕ್ಕಾಗಿ ನಮ್ಮನ್ನೇನೂ ಶಿಕ್ಷಿಸುವದಿಲ್ಲ ಬಾ" ಎಂದು ನಗುತ್ತ ತಾಯಿಯ ಕೈಹಿಡಿದು ನಡೆದಳು. ಒಡನೆ ತಾಯಿಯ ಮನ ಮಡಿಯಾಗಿ ಹೋಯಿತು.

"ಅಲ್ಲೇ ನಾಗು, ನೀನು ಸನಾತನಧರ್ಮವನ್ನು ಮೀರಿ ನಡೆಯುತ್ತೀ ಎಂದು ಅಗ್ರಹಾರದವರು ನಮಗೆ ಆಗ್ರಹ ತಂದರೆ ಹೇಗೆ?"

"ಸನಾತನಧರ್ಮವೇನು ಸತ್ಯ-ನ್ಯಾಯ-ಪರೋಪಕಾರಗಳನ್ನು ತಿರಸ್ಕರಿಸುವದೇ ಅವ್ವ?"

"ಇಲ್ಲ."

"ಹಾಗಾದರೆ ಅವು ಎಲ್ಲರಿಗೂ ಸಮನಾಗಿ ಸಿಗಬೇಕಲ್ಲ! ಜಾತಿಭೇದದಿಂದ ಅವುಗಳ ಪಾತ್ರತೆ ಭಿನ್ನವಾಗಬೇಕೇ?"

"ನಿನ್ನ ಮಾತು ಸರಿಯಾದೀತು. ಆದರೆ ಹೀಗೆಯೇ ಬೋಧಿಸಿ ವಾದಿಸಿದ ಪಂಡಿತ ಚಂದ್ರರಾಜನ ಸ್ಥಿತಿ ಕಷ್ಟಕರವಾದುದನ್ನು ನೋಡುತ್ತೀಯಲ್ಲ!"

"ಅವರಿಗೆ ಬಹಿಷ್ಕಾರ ಹಾಕಿ ಕಷ್ಟವನ್ನುಂಟುಮಾಡಿದವರು ದೇವರನ್ನೂ ಧರ್ಮವನ್ನೂ ಬಲ್ಲವರೇ ಅಲ್ಲ. ಕರ್ಮಠರಾದ ಅಹಂಕಾರಿಗಳು, ಮೂರ್ಖರು, ದುರಾಗ್ರಹಿಗಳು ಜಾತಿಯ ಪ್ರಮುಖರಾಗಿ ಚಂದ್ರರಾಜರಂತಹ ಸತ್ಯವಾದಿಗಳು ಕಷ್ಟಕ್ಕೀಡಾಗಬೇಕಾಯಿತು. ಆದರೆ ಚಂದ್ರರಾಜರ ವಿಚಾರಗಳೂ ಪಾಂಡಿತ್ಯವೂ ಪರಪ್ರಾಂತಗಳಲ್ಲಿ ಪ್ರಚುರವಾಗಿ ಮಾನ್ಯವಾಗಿವೆ. ದೇವರು ಅವರಿಗೆ ಕಲ್ಯಾಣವನ್ನೇ ಮಾಡುತ್ತಾನೆ."

ಹೀಗೆ ಮಾತಾಡುತ್ತ ಮನೆಯನ್ನು ಮುಟ್ಟಿದರು.

ನಾಗಲೆಯ ಸತ್ಯವಿಚಾರ, ಪರೋಪಕಾರ ಬುದ್ಧಿ ದಿನದಿನಕ್ಕೆ ಬೆಳೆಯುತ್ತ ನಡೆದಿದ್ದವು. ಸಲುಗೆಯುವರಲ್ಲಿ ತನ್ನ ವಿಚಾರಗಳನ್ನು ತಿಳಿಸಿ ಹೇಳುತ್ತಿದ್ದಳು. ಮಂತ್ರದ ಬೂದಿ-ಚೀಟಿಗಳನ್ನು ಅವಲಂಬಿಸಿ ರೋಗಗಳನ್ನು ಹೆಚ್ಚಿಸಿಕೊಂಡವರಿಗೆ ಸರಿಯಾದ ಔಷಧೋಪಚಾರಗಳನ್ನು ಹೇಳಿ, ತನ್ನ ಕೈಲಾದಷ್ಟು ಸ್ವತಃ ಆರೈಕೆಮಾಡುತ್ತಿದ್ದಳು. ಅನಾಥರ ಪರಾಮರಿಕೆಗೆ ಎತ್ತಿದ ಕೈಯಾಗಿದ್ದಳು. ಅದರಲ್ಲಿ ಆಕೆ ಒಮ್ಮೊಮ್ಮೆ ದೇವತಾರ್ಚನೆಯನ್ನೂ ತೊರೆಯುತ್ತಿದ್ದಳು. ಮಗಳ ಬುದ್ಧಿಗುಣಗಳಿಗೆ ಸಂತುಷ್ಟನಾದ ತಂದೆ ಅವಳ ಔದಾರ್ಯದ ಕೈಯನ್ನು ತಡೆಯುತ್ತಿರಲಿಲ್ಲ. ಆಕೆಯ ಬುದ್ಧಿಯೂ ಆಚಾರವಿಚಾರಗಳೂ ಅಗ್ರಹಾರದ ಉದಾರಚರಿತರಿಗೆ ಪ್ರಶಂಸನೀಯವಾಗಿದ್ದರೆ ಸಾಂಪ್ರದಾಯಕರ ಅಸೂಯೆಗೂ ತಿರಸ್ಕಾರಕ್ಕೂ ಪಾತ್ರವಾಗಿದ್ದವು. ಯೌವನದ ಸೀಮೆಗೆ ಅಡಿಯಿಡುತ್ತಿದ್ದ ನಾಗಲೆಯ ನೂತನ ಲಾವಣ್ಯವೂ ಕೆಲವರ ಕಣ್ಣುಕೋರೈಸುತ್ತಿದ್ದಿತು.

೪. ಮದುವೆ

ಪಡಸಾಲೆಯಲ್ಲಿ ನಾಗಲೆಯು ಮಾಲೆ ಕಟ್ಟುತ್ತ ಕುಳಿತಿದ್ದಳು. ಒಲವು ನಲಿವುಗಳಿಗೆ ಆಗರವಾಗಿದ್ದ ತಮ್ಮನು ಮುಂದೆ ಕುಳಿತಿದ್ದನು. ತುಂಬು ಕಂಠದಿಂದ ಒಮ್ಮೆ ಹಾಡಿದಳು :

ವಂದೇ ಶಂಭುಮುಮಾಪತಿಂ ಸುರಗುರುಂ ವಂದೇ ಜಗತ್ಕಾರಣಂ
ವಂದೇ ಪನ್ನಗಭೂಷಣಂ ಮೃಗಧರಂ ವಂದೇ ಪಶೂನಾಂ ಪತಿಂ
ವಂದೇ ಸೂರ್ಯಶಶಾಂಕವಹ್ನಿನಯನಂ ವಂದೇ ಮುಕುಂದಪ್ರಿಯಂ
ವಂದೇ ಭಕ್ತಜನಾಶ್ರಯಂಚವರದಂ. ವಂದೇ ಶಿವಂ ಶಂಕರಂ.

ಬಳಿಕ ಒಂದೊಂದೇ ಪದದಂತೆ ಹೇಳಿ ಅವನಿಂದ ಅನ್ನಿಸಿದಳು. ಬಸವಣ್ಣ ಓರಣವಾಗಿ ಕುಳಿತನು; ಅಕ್ಕ ಕೈಮುಗಿದಂತೆ ಮುಗಿದನು. ಆಕೆ ಹೇಳಿದಂತೆ ಪಠಿಸಿದನು. "ಈಗಲೇ ಇವನಿಗೆ ಎಷ್ಟೊಂದು ಆಸಕ್ತಿ ಭಕ್ತಿಯಲ್ಲಿ!" ಎನ್ನಿಸಿತು ನಾಗಲೆಗೆ! ನೆಟ್ಟದೃಷ್ಟಿಯಿಂದ ಅವನನ್ನು ನೋಡಿದಳು. ಮನವುಕ್ಕಿಬರಲು ಸೆಳೆದಪ್ಪಿದಳು. ಅಷ್ಟರಲ್ಲಿ ಹೊರಗೆ ಹೊರಟ ಮಾದಿರಾಜನು 'ಬಸವಾ' ಎಂದು ಕೂಗಲು, ಬಸವನು ಓಡಿಹೋಗಿ ತಂದೆಯ ಕೈಬೆರಳು ಹಿಡಿದುಕೊಂಡನು. ನಾಗಲೆಯು ಪುಷ್ಪಮಾಲೆಯ ಪೊಟ್ಟಣವನ್ನು ತಂದೆಯ ಕೈಗೆ ಕೊಟ್ಟಳು. ಮಾದಿರಾಜನು ಮಗನೊಂದಿಗೆ ಪ್ರವಚನ ಸಭೆಗಾಗಿ ಗಹಲೀಶ ಮಠಕ್ಕೆ ನಡೆದನು. ನಾಗಲೆ ನಿಂತು ಕಣ್ದಣಿಯೆ ನೋಡಿದಳು. ತಮ್ಮನ ಮೇಲಿನ ಮಮತೆಗೆ ಹೊಸ ಮುಗುಳೊಡೆದಂತಿತ್ತು ಆ ನೋಟ! ಬಸವನಿಗೆ ಆಗ ಎರಡು ವರ್ಷ. ಉಡುಗೊರೆ ಓರಣಗೊಳಿಸಿಕೊಂಡು ತಾನೂ ಮಠಕ್ಕೆ ನಡೆದಳು.

ಪ್ರವಚನಸಭೆ ಮುಗಿದು ದೇವಾಲಯದ ವಾದ್ಯಗಳು ಮೊಳಗಿದ ಸ್ವಲ್ಪ ಹೊತ್ತಿನಮೇಲೆ ಮೂವರೂ ಮರಳಿ ಬಂದರು. ಬಸವಣ್ಣನು ಮುದ್ದುಮಾತಿನಲ್ಲಿ ಹಲವು ಪ್ರಶ್ನೆ ಕೇಳುತ್ತಿದ್ದನು. ಅವುಗಳಿಗೆಲ್ಲ ನಾಗಲಾಂಬೆ ಸಕ್ಕು ನಲಿದು ಉತ್ತರಕೊಡುತ್ತಿದ್ದಳು. ಮನೆಗೆ ಬಂದಬಳಿಕ ಅವರಿಬ್ಬರಲ್ಲಿ ಮತ್ತೆ ಕೆಲವು ಆಟ

ಗಳಾಗಲು ತಾಯಿ ಬಸವನನ್ನು ಕರೆದು ಪಾಲೋಗರವನ್ನು ಉಣ್ಣಿಸಿದಳು. ಬಳಿಕ ಬಸವ ಬಂದು ತಮ್ಮಿಬ್ಬರಿಗಾಗಿ ಅಕ್ಕ ಹಾಸಿದ ಹಾಸಿಗೆಯ ಮೇಲೆ ಮಲಗಿದನು.

ತನ್ನ ಪೂಜೆ ಪ್ರಸಾದ ಸೇವನೆಗಳನ್ನು ಮುಗಿಸಿ ನಾಗಲೆಯು ತಮ್ಮನ ಬಳಿಗೆ ಬಂದು ಸೊಡರಕುಡಿಯನ್ನೇರಿಸಿ ಚೆನ್ನಾದ ಬೆಳಕಿನಲ್ಲಿ ಹೊದಿಕೆ ಸರಿಸಿ ನೋಡಿದಳು: ದಿವ್ಯ ರೂಪ! ವಿಶಾಲವಾದ ಹಣೆ, ನೀಳವಾದ ಮೂಗು, ದೊಡ್ಡ ಕಣ್ಣುಗಳು ನಸುದೆರೆದು ನಿದ್ರೆಯಲ್ಲಿ ನಿಶ್ಚಲಿತವಾಗಿದ್ದವು. ಯಾವ ನೋವೂ ಸೋಂಕದ ಆನಂದಭಾವವು ಮುಖದಲ್ಲಿ ಚಿಮುಕಿಸುತ್ತಿತ್ತು. ನಾಗಲೆಯು ನೋಡಿಯೇ ನೋಡಿದಳು. ತೃಪ್ತಿಯೇ ಇಲ್ಲ. ಕಂದನ ಕೈಕಾಲುಬೆರಳುಗಳನ್ನು ಹಿಡಿದು ನೋಡಿದಳು. 'ಏನು ಲಕ್ಷಣ! ತಮ್ಮ ಮೂಲಗುರು ಗಹಲೀಶರ ಕರುಣೆ, ಶಿವನ ವರ ಈ ತಮ್ಮ!' ಎಂದು ಅಲ್ಲಿಯೇ ಮುಗ್ಗುಲಾಗಿ ಮಗುವನ್ನು ಮುಂದೆಳೆದು ಅಪಚಿಕೊಂಡು ತುಂಬ ಹೊದಿಸಿ ಮೈಮೇಲೆ ಕೈಯೆಳೆದಳು. ಅವಳಲ್ಲಿ ಗುಪ್ತವಾಗಿದ್ದ ಮಾತೆಯ ಮಮತೆ ಆಗಲೇ ಮೈಮನಗಳನ್ನು ವ್ಯಾಪಿಸಿತ್ತು. ಆದರ್ಶಪುರುಷನಾಗುವಂತೆ ಅವನ ಭವ್ಯ ಭವಿಷ್ಯವನ್ನು ಬಗೆಬಗೆಯಾಗಿ ಕಲ್ಪಿಸುವದರಲ್ಲಿ ಅವಳಿಗೆ ಆನಂದವೇ ಆನಂದ!

ತಂದೆತಾಯಿಗಳ ಸಲುಗೆಯಲ್ಲಿ ಬೆಳೆದಿದ್ದರೂ ನಾಗಲಾಂಬೆ ಹಟಮಾರಿಯಲ್ಲ; ಗರ್ವಿಷ್ಠಳಲ್ಲ. ಆದರೆ ಸ್ವತಂತ್ರ ವಿಚಾರದವಳೂ ಸತ್ಯವನ್ನು ಮಂಡಿಸುವಲ್ಲಿ ಧೀರೆಯೂ ಆಗಿದ್ದಳು. ಗ್ರಂಥಾವಲೋಕನಕ್ಕೂ ಅವುಗಳನ್ನು ಅರ್ಥಯಿಸುವದಕ್ಕೂ ಶಕ್ತಳಾಗಿದ್ದಳು. ಪ್ರೌಢೆಯಾದಂತೆ ನ್ಯಾಯ-ನೀತಿ-ಧರ್ಮಗಳ ವಿಷಯದಲ್ಲಿ ಆಸಕ್ತಿಯನ್ನು ಹೆಚ್ಚಿಸಿಕೊಂಡು ಸಾತ್ವಿಕತೆಯ ಬೆಳಕು ಬೀರತೊಡಗಿದಳು. ಈಗ ಬಸವಣ್ಣನ ರೀತಿ ಅವಳ ಭಾವನೆಯಲ್ಲಿ ತನ್ನ ಪ್ರಭಾವವನ್ನು ಬೀರಿದ್ದಿತು. ಪವಿತ್ರವಾದ ಮಾತೃಭಾವನೆಯು ಅವಳಲ್ಲಿ ಅಂಕುರಿಸಿದ್ದಿತು. ಆಕೆಯ ಸ್ವತಂತ್ರವಿಚಾರಗಳ ಮಧ್ಯದಲ್ಲಿ ಶ್ರದ್ಧೆಯೂ ಸಾವಧಾನವೂ ತಲೆದೋರಿದ್ದವು. ದಿಟ್ಟತನದ ಸ್ಥಳದಲ್ಲಿ ನಯವೂ ನೆಲೆಗೊಂಡಿದ್ದಿತು. ತಂದೆಯ ಮಾತುಗಳಲ್ಲಿ ಆಕೆಗೆ ಗೌರವಾದರಗಳು ಇಮ್ಮಡಿ ಮುಮ್ಮಡಿಯಾಗಿದ್ದವು. ಮದುವೆಯೆಂದರೆ ಅದೊಂದು ಪಾರತಂತ್ರ್ಯವೆಂಬ ಭಾವನೆಯ ಉದಾಸೀನತೆಯು ಈಗ ಓರೆಯಾಗಿದ್ದಿತು. ಪೂಜೆ-ಧ್ಯಾನಗಳಲ್ಲಿ ಮೈಮರೆಯುತ್ತಿದ್ದ ಆಕೆ, ತನ್ನ

ಪಾರಮಾರ್ಥಿಕ ಸಾಧನೆಗೆ ಅನುಕೂಲವಾಗುವ ಪತಿಯಿರಬೇಕೆಂಬ ತನ್ನ ಇಚ್ಛೆಯನ್ನು ತಾಯಿಯ ಮುಂದೆ ಪರ್ಯಾಯವಾಗಿ ವ್ಯಕ್ತಪಡಿಸಿ ಕೆಲವೇ ದಿವಸವಾಗಿತ್ತು.

ಮಾದಿರಾಜನು ಅಗ್ರಹಾರದ ಹನ್ನೆರಡು ಗ್ರಾಮಗಳ ಅಧಿಪತಿ. ಅವುಗಳಲ್ಲಿ ಇಂಗಳೇಶ್ವರವೂ ಮಣೇಗವಳ್ಳಿಯೂ ಬಾಗೇವಾಡಿಯಂತೆ ಪ್ರಮುಖ ಗ್ರಾಮಗಳು. ಇಂಗಳೇಶ್ವರದಲ್ಲಿ ಮಾದಿರಾಜನ ತಾಯಿಯ ಕಡೆಯ ಬಹು ದೊಡ್ಡ ಬಳಗವಿತ್ತು. ಅವರೆಲ್ಲರ ನಂಟುಸಂಬಂಧವು ಬಾಗೇವಾಡಿಯ ಅನೇಕ ಕುಟುಂಬಗಳಲ್ಲಿ ಹೆಣೆದುಕೊಂಡಿತ್ತು. ಇಂಗಳೇಶ್ವರದ ಆ ಬಳಗದಲ್ಲಿಯ ಒಂದು ವಿದ್ಯಾವಂತ ಮನೆತನದಲ್ಲಿ ಶಿವದೇವ ಎಂಬ ತರುಣನಿದ್ದನು. ಅವನೂ ತತ್ವ ವಿಚಾರ-ಸತ್ಸಹವಾಸಗಳಲ್ಲಿ ಆಸಕ್ತಿಯುಳ್ಳವನು; ಸಾತ್ವಿಕನು! ಪ್ರಬುದ್ಧನಾಗುವ ಮೊದಲೇ ತಂದೆತಾಯಿಗಳನ್ನು ಕಳೆದುಕೊಂಡ ಆತನು ಆಗಾಗ ಬಾಗೇವಾಡಿಯ ಬಂಧುವರ್ಗದವರಲ್ಲಿಯೂ ಬಂದು ಇರುತ್ತಿದ್ದನು. ಅಲ್ಲಿ ಅಗ್ರಹಾರದ ಪಂಡಿತರ ಸಹವಾಸದಲ್ಲಿ ಪ್ರವಚನಸಭೆಯಲ್ಲಿ ಕಾಲಕಳೆಯುತ್ತ ಸಹಜವಾಗಿ ಜ್ಞಾನಸಾಧನೆ ಮಾಡುತ್ತಿದ್ದನು. ಉಳಿದ ಬಳಗದಲ್ಲಿರುವಂತೆ ಮಾದಿರಾಜನ ಮನೆಯಲ್ಲಿಯೂ ಬೀಡಾರ ಮಾಡುತ್ತಿದ್ದನು.

ನಾಗಲೆಯ ಮನೀಷೆಯನ್ನು ಅರಿತುಕೊಂಡಬಳಿಕ ಶಿವದೇವನು ಆಕೆಗೆ ತಕ್ಕ ವರನಾಗಬಹುದೆಂದು ಮಾದಿರಾಜನು ಭಾವಿಸಿಕೊಂಡನು. ಅವನ ಬಗೆಗೆ ಮನೆಯಲ್ಲಿ ಪ್ರಸ್ತಾಪಮಾಡಿದಾಗ ಮನೆಯವರು ಸರಿಯೆಂದರು. ಅದರಲ್ಲಿಯೇ ನಾಗಲೆಯ ಅನುಮತಿಯೂ ಸೇರಿತ್ತು. ಅಗ್ರಹಾರದ ಪ್ರಮುಖರ ಅಭಿಮತದಂತೆ ಶಿವದೇವನೂ ಸಮ್ಮತಿಸಿದನು. ನಾಡಪ್ರಭುವಿನ ಸ್ಥಾನಕ್ಕೆ ತಕ್ಕಂತೆ ಶಿವದೇವನೊಡನೆ ನಾಗಲಾಂಬೆಯ ಮದುವೆಯಾಯಿತು.

೫. ಶಿವದೇವ–ನಾಗಲಾಂಬೆಯರು

ಶಿವದೇವನ ಮನೆಮಾರು ಇಂಗಳೇಶ್ವರದಲ್ಲಿ. ಅಲ್ಲಿ ಅಜ್ಜಿಯೊಬ್ಬಳಿದ್ದಳು. ಆ ಅರ್ಯಳ ಹತ್ತಿರ ನೂತನ ದಂಪತಿಗಳ ಬಾಳು ಬೆಳಗಿತು. ನಾಗಲೆಯ ನಡೆ ನುಡಿಗಳು ಅಲ್ಲಿಯವರನ್ನು ಮುಗ್ಧಗೊಳಿಸಿದವು. ಶಿವದೇವನಿಗೆ ಬಾಗೇವಾಡಿ ಯಲ್ಲಿಯ ಸಹವಾಸಿಗಳನ್ನು ಬಿಟ್ಟಿರಲಿಕ್ಕೆ ಆಗುತ್ತಿರಲಿಲ್ಲ. ನಾಗಲೆಗೂ ತಾಯಿಯ ಶುಶ್ರೂಷೆ, ತಮ್ಮನ ಪಾಲನೆಗಳಿಗಾಗಿ ಮನಸ್ಸು ಹರಿಯುತ್ತಿತ್ತು. ಹೀಗಾಗಿ ಅವರಿಬ್ಬರು ಕೆಲವು ದಿವಸ ಅಲ್ಲಿ, ಕೆಲವು ದಿವಸ ಇಲ್ಲಿ ವಾಸಿಸುತ್ತಿದ್ದರು.

ಆ ಸಮಯದಲ್ಲಿ ಯೋಗಸಿದ್ಧರಾದ ರೇವಣಸಿದ್ಧೇಶ್ವರರು ಇಂಗಳೇಶ್ವರದ ಗುಡ್ಡದ ಗುಹೆಯಲ್ಲಿ ಅನುಷ್ಠಾನಗೈದು ಅಲ್ಲಿ ಕೆಲವು ದಿವಸ ವಾಸಿಸಿದರು. ಅಲ್ಲಿಯೂ ಅವರ ಬೋಧೆಪಡೆದ ಭಕ್ತವೃಂದವುಂಟಾಯಿತು. ನಾಗಲಾಂಬೆಯೂ ಅವರ ದರ್ಶನ ಪಡೆದಳು. ತನಗಿರುವ ಸಂದೇಹಗಳ ನಿವಾರಣೆಗಾಗಿ ಶಿವಾಗಮ-ಶೈವಸಿದ್ಧಾಂತಗಳ ಬಗೆಗೆ ಅವರೊಡನೆ ಚರ್ಚಿಸಿದಳು. ಪ್ರಶ್ನೆಗಳನ್ನಿಟ್ಟು ಪರಿಹಾರ ಪಡೆದಳು. ಆಕೆಯ ತತ್ವಜಿಜ್ಞಾಸೆಗೆ ಮೆಚ್ಚಿದ ರೇವಣಸಿದ್ಧೇಶ್ವರ ಶಿವಯೋಗಿಗಳು ಆಕೆಗೆ ಯೋಗಸಾಧನೆಯ ಕ್ರಮವನ್ನು ಉಪದೇಶಿಸಿದರು. ನಾಗಲಾಂಬೆಯು ಅಲ್ಲಿಯೇ ಹತ್ತಿರದ ಇನ್ನೊಂದು ಗುಹೆಯಲ್ಲಿ ನಾಲ್ಕು ತಿಂಗಳು ಕ್ರಮವಾಗಿ ಸಾಧನೆ ನಡೆಸಿದಳು. ಆ ಬಳಿಕ ನಾಗಲೆಗೆ ವಿಶಾಲದೃಷ್ಟಿಯುಂಟಾಗಿ ಲೋಕಕಲ್ಯಾಣದ ಪ್ರಜ್ಞೆ ಇನ್ನೂ ಹೆಚ್ಚಾಯಿತು. ಇದಕ್ಕೆಲ್ಲ ಶಿವದೇವನು ಅನುಕೂಲವಾಗಿ ವರ್ತಿಸಿದನು. ನಾಗಲೆಯ ಹೆಸರು ಸುತ್ತಲೂ ಕೇಳಹತ್ತಿತು.*

ಬಸವಣ್ಣನಿಗೆ ಐದು ವರ್ಷಗಳು. ಪಾಠಶಾಲೆಗೆ ಹೋಗುತ್ತಿದ್ದನು. ಅವನ ತೀಕ್ಷ್ಣಬುದ್ಧಿಗೆ ಅಧ್ಯಾಪಕರು ಬೆರಗಾಗುತ್ತಿದ್ದರು. ತಮ್ಮ ತಪ್ಪು ಉತ್ತರಗಳನ್ನು

---

*ಆಕೆ ತಪಸ್ಸುಮಾಡಿದ ಗುಹೆಯಲ್ಲಿ ಮುಂದೆ ಭಕ್ತರು ಆಕೆಯ ಮೂರ್ತಿಯನ್ನು ಮಾಡಿ ಇಟ್ಟುದು ಈಗಲೂ ಉಂಟು. ಇದು ಆಕೆಯ ಪ್ರಸಿದ್ಧಿಯನ್ನು ವ್ಯಕ್ತಪಡಿಸುವದು.

ತಿದ್ದಿದ ಅವನಿಂದ ಅವರ ಮುಖಭಂಗವಾದುದೂ ಉಂಟು. ಆಗ ಅವರಲ್ಲಿ ಅಸೂಯೆಯೂ ತಲೆಹಾಕುತ್ತಿತ್ತು. ಬಸವಣ್ಣನೀಗ ಮನೆಯ ಹೊರಗೆ ಸಮಾಜದಲ್ಲಿಯೂ ಗೆಳೆಯರೊಡನಾಟದಲ್ಲಿಯೂ ಕಾಲಕಳೆಯುತ್ತಿದ್ದನು. ಜನರ ಆಚಾರ-ವಿಚಾರಗಳ ರೀತಿ ಅವನ ಅಂತರಂಗಕ್ಕೆ ಮುಟ್ಟಿ ಪರಿಣಮಿಸುತ್ತಿದ್ದವು. ಇದು ಸರಿ, ಇದು ತಪ್ಪು, ಇದು ಹೀಗೇಕೆ ? ಎಂದು ಅಂತರಾಳದಲ್ಲಿ ಏಳುವ ಬುದ್ಬುದಗಳಿಗೆ ಕಳವಳಪಡುತ್ತಿದ್ದನು. ಇಂತಹ ಪ್ರಶ್ನೆಗಳಿಗೆ ಸಮಾಧಾನ ಹೇಳಲು ಅವನಿಗೆ ಅಕ್ಕನೇ ಬೇಕು. ಅವಳಿಲ್ಲದಾಗ ಅವನಿಗೆ ಬಲು ತೊಂದರೆ! ಆಗ ಇಂಗಳೇಶ್ವರದ ದಾರಿಯಲ್ಲಿಯೇ ನಿಂತಿರುತ್ತಿದ್ದನು. ಒಮ್ಮೊಮ್ಮೆ ಅಕ್ಕನೊಡನೆ ಅಲ್ಲಿಗೂ ಹೋಗಿಬರುತ್ತಿದ್ದನು. ಶಿವದೇವನ ಅಜ್ಜಿಯೂ ಅಷ್ಟರಲ್ಲಿ ಮುಡಿಪಿದ್ದುದರಿಂದ ನಾಗಲೆಯ ಅನುಷ್ಠಾನದ ನಂತರ ಶಿವದೇವ-ನಾಗಲೆಯರು ಬಾಗೇವಾಡಿಯಲ್ಲಿಯೇ ಉಳಿದುಬಿಟ್ಟರು. ಅಲ್ಲಿಗೆ ಬಸವಣ್ಣನ ಪೇಚಾಟ ತಪ್ಪಿದಂತಾಯಿತು. ಒಂದು ವರ್ಷ ಕಳೆಯಿತು.

ಬಸವಣ್ಣನೊಮ್ಮೆ ಮನೆಗೆ ಬಂದಾಗ ಅವನ ಮುಖ ಬಾಡಿತ್ತು. ಧಾನ್ಯ ಹಸನಾಗಿಸುವಲ್ಲಿ ಕುಳಿತಿದ್ದ ನಾಗಲಾಂಬೆ ಅದನ್ನು ನೋಡಿ ಎದ್ದು ಅವನೊಡನೆ ಒಳಗೆ ಬಂದಳು.

ಬಸವಣ್ಣ ಕೇಳಿದನು, "ಅಕ್ಕ, ಮಾನವರೆಲ್ಲ ದೇವರ ಮಕ್ಕಳು. ಆ ದೇವನು ಒಬ್ಬನೇ ! ಎಲ್ಲ ಕುಲದವರು ಪಾಠಶಾಲೆಗೆ ಬರಬಾರದೇ ? ಕೆಲವರನ್ನು ಅಲ್ಲಿ ಕರೆದುಕೊಳ್ಳುವದೇ ಇಲ್ಲವಂತೆ; ಇದು ಸರಿಯೇನಕ್ಕ ?"

"ಸರಿಯಲ್ಲವೇ ಅಲ್ಲ. ಒಂದು ಗುಂಪಿನವರ ಸ್ವಾರ್ಥದಾಟವಿದು. ಈ ಆಟ ಬಹುಕಾಲ ನಡೆದು ರೂಢವಾಗಿಬಿಟ್ಟಿದೆ. ಏನಾಯಿತು ಇಂದು ?"

"ಮಠದ ದಾರಿಯ ಆಚೆಗೆ ಒಬ್ಬ ಬಾಲಕ ಕೂಡಿದ್ದನು. ಅವನು ಎಷ್ಟು ಒಳ್ಳೆಯವನಮ್ಮ ! 'ಎಲ್ಲರೂ ಶಿವನ ಮಕ್ಕಳು' ಎಂದು ಕಲ್ಲಮೇಲೆ ಬರೆಯುತ್ತಿದ್ದನು. ತಾನು ಕಡಿಮೆ ಕುಲದವನೆಂದು ತನ್ನನ್ನು ಮುಟ್ಟಗೊಡಲಿಲ್ಲ. ಈ ಕುಲದವರನ್ನು ಪಾಠಶಾಲೆಗೆ ಸೇರಿಸುವದಿಲ್ಲವಂತೆ ! ಇವರಿಗೆ ಪಾಠಹೇಳುತ್ತಿದ್ದ ಚಂದ್ರರಾಜ ನಿನ್ನೆ ತೀರಿದರಂತೆ. . . . . "

ದುಃಖಾವೇಶದಲ್ಲಿ ಉಬ್ಬಸಬಡುತ್ತ ಹೇಳಿದನು. ಕಣ್ಣಲ್ಲಿ ನೀರು ತುಳುಕುತ್ತಿದ್ದಿತು. ನಾಗಲೆಗೂ ವ್ಯಥೆಯಾಯಿತು. ಸೆರಗಿನಿಂದ ತಮ್ಮನ ಕಣ್ಣೊರಿಸಿ ತಾನೂ ಒರಿಸಿಕೊಂಡು ನುಡಿದಳು: "ದೇವರ ಸೃಷ್ಟಿಯಲ್ಲಿ ಎಲ್ಲರೂ ಸಮಾನರು! ಒಬ್ಬರಿಗೊಂದು, ಒಬ್ಬರಿಗೊಂದು ಮಾಡಬಾರದು, ಎಂದು ಹೇಳಹತ್ತಿ ಚಂದ್ರರಾಜರು ಸನಾತನ ವೈದಿಕರ ಸಿಟ್ಟಿಗೆ ಸಿಕ್ಕು ಕಷ್ಟಪಟ್ಟರು. ಈಗ ತಾಯಿ ಚಂದ್ರಾಂಬೆ ಅವರ ಮಗ ಅನಾಥರಾದರು."

"ಚಂದ್ರರಾಜ ಬಹಳ ದೊಡ್ಡವರು; ಅವರ ಮಾತು ಸತ್ಯ. ಎಲ್ಲರೂ ಅದನ್ನು ನಂಬಲೇಬೇಕು."

"ಒಮ್ಮೆಲ್ಲೊಮ್ಮೆಯಾದರೂ ಎಲ್ಲರೂ ನಂಬುವಂತಾದೀತು!"

"ಎಲ್ಲರನ್ನೂ ಪಾಠಶಾಲೆಯಲ್ಲಿ ಕರೆದುಕೊಳ್ಳುವಂತೆ ಏಕೆ ಮಾಡಿಲ್ಲವೆಂದು ಅಪ್ಪನನ್ನು ಕೇಳಲೇನಕ್ಕ?"

"ಕೇಳು; ಆದರೆ ಅವರಿಗೆ ಏನನ್ನೂ ಮಾಡಲಿಕ್ಕೆ ಆಗದು. ತಮ್ಮ ಸ್ಥಾನಮಾನಗಳಿಗಾಗಿ ಸಂಪ್ರದಾಯಗಳನ್ನು ಮೀರಲಾರರು."

ಬಸವಣ್ಣ ಮೌನವಾಗಲು ನಾಗಲಾಂಬೆ ಅವನ ತಲೆಯನ್ನು ನೇವರಿಸಿ, 'ದೊಡ್ಡವನಾಗಪ್ಪ, ಆಗ ನೀನೇ ಇದಕ್ಕೆ ಏನಾದರೂ ಮಾಡುವೆಯಂತೆ. ಹೋಗು, ಈಗ ಆಡಹೋಗು' ಎಂದು ಸಂತೈಸಿದಳು. ಬಸವಣ್ಣ ಮೆಲ್ಲಗೆ ಹೊರಗೆ ಹೋದನು.

ಬಸವಣ್ಣನ ಸದ್ವಿಚಾರವನ್ನೂ ಬುದ್ಧಿವೈಭವವನ್ನೂ ನಾಗಮ್ಮ ನೋಡಿ ಬೆರಗಾಗುತ್ತಿದ್ದಳು. ಅವು ಬೆಳೆದು ವಿಕಾಸಗೊಳ್ಳುವಂತೆ ತುಂಬಾ ಯತ್ನಿಸುತ್ತಿದ್ದಳು. ಒಳ್ಳೆಯದನ್ನು ಒಳ್ಳೆಯದೇ ಆಕರ್ಷಿಸುವದು—ಪೋಷಿಸುವದು.

ಶಿವದೇವನಿಗೆ ನಾಗಲೆಯಲ್ಲಿ ಅನುರಾಗ ಹೆಚ್ಚಾಗಿ ಅವಳ ಇಚ್ಛೆಯಂತೆ ಬಾಗೇವಾಡಿಯಲ್ಲಿಯೇ ನೆಲೆಯೂರಿದನು. ಅಲ್ಲಿಂದಲೇ ತನ್ನ ಮನೆ-ಮಾರುಗಳ ಹಿತ ನೋಡಿಕೊಳ್ಳುತ್ತಿದ್ದನು. ಮತ್ತೊಂದು ವರ್ಷ ಕಳೆಯಿತು.

೬ ಬಸವಣ್ಣನಿಗೆ ಬೆಂಬಲವಾಗಿ

ನಾಗವ್ವೆ ಹೊಲಿಗೆಹಾಕುತ್ತ ತಾಯಿಯ ಮಂಚದ ಹತ್ತಿರ ಕುಳಿತಿದ್ದಳು. ಮಾದಿರಾಜ ರಭಸದಿಂದ ಒಳಗೆ ಬಂದನು.

"ಬಸವ ಎಲ್ಲಿದ್ದಾನೆ ನಾಗಮ್ಮ ?"

"ಆಡಲಿಕ್ಕೆ ಹೋಗಿದ್ದಾನು."

"ಅವನು ಉಪಟಳಕ್ಕೆ ಆರಂಭಿಸಿದ್ದಾನೆ."

"ಏನಪ್ಪಾ ? ಏನು ಮಾಡಿದ ?"

"ಅವನು ಕೀಳುಕುಲದವರನ್ನು ಗೆಳೆಯರನ್ನಾಗಿ ಮಾಡಿಕೊಂಡಿದ್ದಾನೆ. ಆ ಹತ್ತೆಂಟು ಮಕ್ಕಳನ್ನು ಕರೆದುಕೊಂಡು ಇಂದು ಪಾಠಶಾಲೆಗೆ ಹೋಗಿ 'ಇವರನ್ನು ಕರೆದುಕೊಳ್ಳಿ' ಎಂದು ಅಧ್ಯಾಪಕರಿಗೆ ಆಗ್ರಹಮಾಡಿದನಂತೆ. ಕೊನೆಗೆ ಪಾಠಶಾಲೆಯವರು ಇವನನ್ನೂ ಆ ಹುಡುಗರನ್ನೂ ತಳ್ಳಿಹಾಕಿದರಂತೆ!"

"ಆಯಿತಲ್ಲ, ಇದಕ್ಕೂ ಹೆಚ್ಚಿಗೆ ಮತ್ತೇನು ಮಾಡಬಲ್ಲ ಬಸವಣ್ಣ ಈಗ?" ನಗೆ ಮೂಡಿತ್ತು ನಾಗಲೆಯ ಮುಖದಲ್ಲಿ.

"ಇದು ಯಾರಿಗೆ ಚಂದ ? ನೀನೂ ಇದನ್ನು ಅನುಮೋದಿಸುವಂತಿದೆ!"

"ಹೌದು, ಬಸವನು ಮಾಡಿದ್ದು ತಪ್ಪೆಂದು ಹೇಳಲಿಯಾ ಅಪ್ಪಾ ? ಅವನ ವಿಚಾರ ಸರಿಯಾಗಿಲ್ಲವೆಂದು ನೀವಾದರೂ ಗಟ್ಟಿಯಾಗಿ ಹೇಳುತ್ತೀರಾ ? ನಾನಂತೂ ಹಾಗೆ ಹೇಳಲಾರೆ."

ಮಾದರಸನ ಬಾಯಿ ಕಟ್ಟಿತು. ನಾಗಲಾಂಬೆಯ ಸತ್ಯ-ಶುದ್ಧ-ಧೀರ ದೃಷ್ಟಿ ಅವನ ಪ್ರಭುತ್ವದ ಕವಚವನ್ನು ಕತ್ತರಿಸಿತ್ತು. ಸ್ವಲ್ಪ ಹೊತ್ತು ಸುಮ್ಮನೆ ನಿಂತನು. ಆದರೂ ಸಂಪ್ರದಾಯಗಳನ್ನು ಮೀರಲಿಕ್ಕೂ, ತನ್ನ ಗೌರವದ ಸ್ಥಾನಮಾನಗಳನ್ನು ತ್ಯಜಿಸಲಿಕ್ಕೂ ಅಸಮರ್ಥನಾಗಿದ್ದನು. ಅವು ಒಂದಕ್ಕೊಂದು ಹೊಂದಿಕೊಂಡಿದ್ದವು. ಶಾಂತವಾಗಿ ನುಡಿದನು :

"ಅವನ ವಿಚಾರ ತಪ್ಪೆಂದು ನಾನೂ ಹೇಳಲಾರೆ ನಾಗು; ನಿನ್ನಂತೆ ಅವನು. ತಪ್ಪಾಗಿದ್ದರೆ ಮೊದಲು ನಿನ್ನ ವಿಚಾರಗಳನ್ನೇ ನಾವು ಖಂಡಿಸುತ್ತಿದ್ದೆವು. ಈಗ ಅವನು ಮಾಡಿದ್ದು ತಪ್ಪೆನ್ನುವೆ......"

"ನಾನು ಹೆಣ್ಣು, ಹೆಂಗಸು, ವಿಚಾರಮಾಡುತ್ತ ಸುಮ್ಮನೆ ಕುಳಿತೆ. ಅವನು ಗಂಡು ಪ್ರತಿಭಟಿಸಿದ್ದಾನೆ... " ನಾಗಲೆ ನಗಹತ್ತಿದಳು.

"ಅವನು ದೊಡ್ಡವನಾಗಿ ತನ್ನ ಬುದ್ಧಿಸಾಮರ್ಥ್ಯದಂತೆ ಏನನ್ನಾದರೂ ಮಾಡಲಿ! ಈಗ ಹೀಗೆ ದುಡುಕಿದರೆ ನಮಗೆಲ್ಲ ತೊಂದರೆ."

ತಂದೆಯ ಮನದ ಹೊಯ್ದಾಟಕ್ಕೆ ಮರುಕವಾಯಿತು ನಾಗಲಾಂಬೆಗೆ. ನಯವಾಗಿ ನುಡಿದಳು :

"ಅವನಿಗೆ ತಿಳಿಸಿಹೇಳೋಣವಂತೆ. ಇದನ್ನೇನು ದೊಡ್ಡದಾಗಿ ತಿಳಿಯ ಬೇಡಿರಪ್ಪಾ." ಇದನ್ನು ಕೇಳುತ್ತ ಮೆಲ್ಲನೆ ತೆರಳಿದ ಮಾದಿರಾಜ ಅಲ್ಲಿಂದ.

* * *

ಒಂದು ದಿನ ಮಧ್ಯಾಹ್ನದ ಊಟದ ಹೊತ್ತಿನಲ್ಲಿ ಬಸವಣ್ಣ ಎಲ್ಲಿಯೂ ಕಾಣಲಿಲ್ಲ. ನಾಗಮ್ಮ ಕಕ್ಕಾವಿಕ್ಕಿಯಾಗಿ ಅರಸುತ್ತಿದ್ದಳು. ಅವನು ಮಲಗುವ ಕೋಣೆಯಲ್ಲಿ ಮಲಗಿದ್ದಾನೆಂದು ಜಾಕಬ್ಬೆ ನೋಡಿಬಂದು ಹೇಳಿದಳು. ನಾಗ ಲಾಂಬೆ ಗಾಬರಿಯಾಗಿ ಹೋಗಿ ಹಚ್ಚಡ ತೆಗೆದು ಮೈಮೇಲೆ ಕೈಯಾಡಿಸಿ ನೋಡಿದಳು.

"ಯಾಕಪ್ಪ ಹೀಗೆ? ಸ್ವಸ್ಥವಿಲ್ಲವೇ?" ಎಂದು ಕೇಳಿದಳು.

"ನನಗೇನಾಗಿಲ್ಲಕ್ಕ. ಮೇಲಿನ ಕುಲದವರ ಮೆರವಣಿಗೆಯಲ್ಲಿ ಕೆಳಗಿನ ಕುಲದವರು ಸಾಯಬೇಕು! ಅದನ್ನು ನೋಡಿ ಮನಸ್ಸಿಗೆ ದುಃಖವಾಯಿತು."

"ಏನಾಯಿತಪ್ಪ? ರುದ್ರಭಟ್ಟರ ಮಕ್ಕಳ ಉಪನಯನವಿಂದು. ಆ ವಟು ಗಳ ಮೆರವಣಿಗೆಯ ಮಾತೇನು?"

"ಹೌದು; ಮೆರವಣಿಗೆ ಹೋಗುವ ಮಾರ್ಗದಲ್ಲಿ ನಿಮ್ಮ ಕುಲದ ಕೆಲವು ಹುಡುಗರು ಬಂದರು. ನಾನೂ ಅಲ್ಲಿದ್ದೆನು. ಕರ್ಮಚಾರಿಗಳು ಅವರನ್ನು ನೋಡಿ, ಕೈಯೊಳಗಿನ ಬೆತ್ತದಿಂದ ದನಗಳನ್ನು ಬಡಿಯುವಂತೆ ಆ ಮಕ್ಕಳನ್ನು ಹೊಡೆದು ಅಟ್ಟಿದರು. ಪರಸನಿಗೆ ಬಹಳ ಪೆಟ್ಟು ಬಿದ್ದವು; ನೆಲಕ್ಕೆ ಬಿದ್ದು ಹೊರಳಾಡಿ ಅತ್ತನು. ಅವನನ್ನು ಕೈಹಿಡಿದು ಮನೆಗೆ ಮುಟ್ಟಿಸಿದೆನು. ಮೈಮೇಲಿನ ಬಾಸುಳಿ ನೋಡಿ ಅವನ ತಾಯಿಯೂ ಅತ್ತಳು. ನನಗೆ ಸಂಕಟ ವಾಯಿತು; ಇಲ್ಲಿ ಬಂದು ಮಲಗಿದೆನು.

ನಾಗಲಮ್ಮನು ಮಮ್ಮಲ ಮರುಗಿದಳು.

"ನಿನ್ನ ದೇಹದಲ್ಲಿ ದೇವರು ಜಾಗ್ರತನಾಗಿದ್ದಾನಪ್ಪ! ಅವನದು ಸಮತೆಯ ಸಾಮ್ರಾಜ್ಯ. ಅಲ್ಲಿ ಕುಲಭೇದವಿಲ್ಲ. ಅತನೇ ಈ ದೀನರ ಕಷ್ಟಗಳನ್ನು ಕಣ್ದೆರೆದು ನೋಡುತ್ತಿದ್ದಾನೆ. ಅವನೇ ಅವರನ್ನು ಉದ್ಧರಿಸುತ್ತಾನೆ. ಅದನ್ನು ನಿನ್ನಿಂದಲೇ ಮಾಡಿಸುತ್ತಾನೆ. ಚಿಂತಿಸಬೇಡಪ್ಪಾ! ದೊಡ್ಡವನಾಗು."

ಎಂದು ಅವನ ತಲೆಯುಪ್ಪಿದಳು. ಅಂದು ಅವರಿಬ್ಬರು ಚೆನ್ನಾಗಿ ಊಟ ಮಾಡಲಿಲ್ಲ.

* * *

ನಾಗಲೆಯ ಜೀವನಕ್ರಮ ಬಹುಮುಖವಾಗುತ್ತ ನಡೆಯಿತು. ಮುಖ್ಯ ಕರ್ತವ್ಯವಾಗಿರುವ ಪತಿಯ ಸೇವೆ ಆಕೆಗೆ ಸಹಜ ಸುಲಭವಾಗಿತ್ತು. ಹೆಂಡತಿಯ ಅನುನಯದ ಗುಣಶೀಲಗಳಿಗೆ ಮುಗ್ಧನಾದ ಶಿವದೇವನು ಆಕೆಯ ಬಳಿವಿಡಿದೇ ನಡೆಯುತ್ತಿದ್ದನು. ಶಾಸ್ತ್ರಪ್ರವಚನಗಳಲ್ಲಿಯ ತತ್ತ್ವನೀತಿಗಳೆಲ್ಲ ಹೆಂಡತಿಯ ನಡೆನುಡಿಗಳಲ್ಲಿಯೇ ದೊರೆತು ತೃಪ್ತನಾಗಿರುತ್ತಿದ್ದನು. ಹೊರಗಿನವರಿಗೆ 'ಸಂಸಾರ ಭ್ರಾಂತನಂತೆ' ಕಾಣುತ್ತಿದ್ದನು. ನಾಗಲೆಗೆ ಇನ್ನುಳಿದ ನಿರ್ವಹಣೆಗಳು ಹಲವಾಗಿದ್ದವು. ಅಶಕ್ತಳಾದ ವೃದ್ಧ ಮಾತೆಯ ಯೋಗಕ್ಷೇಮ ನೋಡಬೇಕು.

ಆಕೆಯು ಬದಲಾಗಿ ಮನೆವಾಳ್ತೆಯನ್ನು ನೋಡಿಕೊಂಡು ತಂದೆಗೆ ನೆರವಾಗಬೇಕು. ಬಸವಣ್ಣನ ಜೋಪಾನಮಾಡಬೇಕು. ಸನಾತನ ಸಮಾಜದ ಅಧಿಪತಿಯಾದ ತಂದೆಯಿಂದ, ತನ್ನ ಮತ್ತು ತಮ್ಮನ ನೂತನ ವಿಚಾರಪ್ರಣಾಲಿಕೆಗಳಿಗೆ ತೊಂದರೆ ಯಾಗದಂತೆ ಜಾಗ್ರತೆಯಿಂದ ವರ್ತಿಸಬೇಕು. ಆಳುಮಕ್ಕಳ-ಆಶ್ರಿತರ ಪರಾ ಮರಿಕೆ ಮಾಡಬೇಕು. ದೀನದಲಿತರ ಕಷ್ಟಗಳಿಗೆ ಮನ ಮರುಗುವದರಿಂದ ಅವರಿಗೆ ನೆರವಾಗಬೇಕು. ತತ್ವಾನ್ವೇಷಣಕ್ಕೆ ಹಂಬಲಿಸಿ ಬಗೆಗೊಡಬೇಕು. ಇವು ಗಳಿಗೆ ಮಿಕ್ಕಿ ಇನ್ನೊಂದು ಮಹತ್ವದ ಹೊಣೆ ಎದುರಾಯಿತಾಕೆಗೆ! ಶುಷ್ಕ ಸಂಪ್ರದಾಯದ ಧರ್ಮಾಚಾರಗಳು ಚಿಕ್ಕಂದಿನಲ್ಲಿಯೇ ಬೇಡವಾಗಿ, ಭಕ್ತಿ-ಜ್ಞಾನ ಗಳಿಗೆ ಒಲಿದಿದ್ದ ನಾಗಲಾಂಬೆಯು, ಈಗ ಎಳೆತನದಲ್ಲಿಯೇ ಅವೇ ಭಾವನೆ ಗಳನ್ನು ಉತ್ಕಟವಾಗಿ ಅಭಿವ್ಯಕ್ತಗೊಳಿಸುತ್ತಿದ್ದ ತಮ್ಮನಿಂದ ತುಂಬಾ ಪ್ರಭಾ ವಿತಳಾಗಿದ್ದಳು. ಆದರಿಂದ ಉಚ್ಚತಮ ಜೀವನದ ಮಾರ್ಗವನ್ನು ನಿಚ್ಚಳವಾಗಿ ಕಂಡಳು. ಎಳೆಯದಾಗಿ ಚಿಗುರಿ ಚಿಗುರಿ ವಿಕಾಸಗೊಳ್ಳುತ್ತಿದ್ದ ಬಸವಣ್ಣನ ಭಾವದ ಬಳ್ಳಿಯ ಕುಡಿಯು ಮೂಢ ಶಕ್ತಿಗಳ ಆಘಾತದಿಂದ ಮುರುಟದಂತೆ— ಅವನ ಸುತ್ತಲಿನ ಪರಿಸರದಲ್ಲಿ ಉದ್ರೇಕವುಂಟಾಗದಂತೆ— ಜಾಗ್ರತೆ ವಹಿಸುವದು ತನ್ನ ಮುಖ್ಯ ಕರ್ತವ್ಯವೆಂದು ತಿಳಿದಳು ಮತ್ತು ಅದನ್ನು ನೆರವೇರಿಸಿ ಯಶಸ್ವಿಯಾದಳು. ಬಸವಣ್ಣನಿಂದ ಲೋಕೋದ್ಧಾರ ಕಾರ್ಯ ನಡೆಯುವ ದೆಂದು ಕನಸುಕಾಣುತ್ತಿದ್ದ ಆಕೆ ಅದರ ತಳಪಾಯ ಹಾಕಿ ಕೀರ್ತಿಪಡೆದಳು.

೭ ಪ್ರಥಮ ಸಂಕಟಕ್ಕೆ ಪರಿಹಾರ

ಮಾದಿರಾಜನ ತಲೆಯಲ್ಲಿ ಗೊಂದಲ ಸುತ್ತುತ್ತಿತ್ತು. ಮಗಳ ಮದುವೆಗೆ ತಡವಾದುದಕ್ಕೆ ಸನಾತನಿಗಳ ವಿರೋಧ ಅಷ್ಟಾಗಿರಲಿಲ್ಲ. ಸಂಗಮನಾಥರ ವಾಣಿ ಅವನಿಗೆ ನೆರವಾಗಿತ್ತು. ಆದರೆ ಈಗ ಬಸವಣ್ಣನ ಬುದ್ಧಿಯ ಬೆಳಕು ಒಂದು ಕಡೆ ಸಂತಸಗೊಡುತ್ತಿದ್ದರೂ, ಸನಾತನಿಗಳನ್ನು ಉದ್ರೇಕಗೊಳಿಸುವ ಅವನ ನಡೆವಳಿಕೆ ಇನ್ನೊಂದು ಕಡೆ ಗಾಢವಾದ ಆಲೋಚನೆಗೆ ಈಡುಮಾಡಿದ್ದಿತು. ಸಾಂಪ್ರದಾಯಕರು ತನಗೆ ಹಿಂದೆ ಆಡುವ ಕಿರುಕಳ ಮಾತುಗಳು ಕಿವಿದೆರೆಗೆ ಬಂದವು. ಬೇಗನೆ ಬಸವನಿಗೆ ಉಪನಯನ ಸಂಸ್ಕಾರವನ್ನಿತ್ತು, ಸನಾತನ ವೈದಿಕಾಚರಣೆಯಲ್ಲಿ ತೊಡಗಿಸಬೇಕೆಂದು ಎಣಿಕೆಹಾಕಿದನು ಮತ್ತು ಅದನ್ನು ಮನೆಯಲ್ಲಿ ಪ್ರಕಟಿಸಿದನು.

ನಾಗಲಿ ಕಾತರಗೊಂಡಳು; ಏನೋ ಕಠಿಣಪ್ರಸಂಗ ಕಾದಿರುವಂತೆ ಭಾವಿಸಿದಳು.

ಬಸವಣ್ಣ ತಂದೆಯ ಹತ್ತಿರ ಬಂದು ವಿನಯದಿಂದ ಹೇಳಿದನು :

"ಒಣ ಕರ್ಮಾಚಾರದ ಬಂಧನದಲ್ಲಿ ಸಿಲುಕಿಸುವ ಉಪನಯನ ಸಂಸ್ಕಾರ ನನಗೆ ಬೇಡ! ಮತ್ತಿದೇತಕೆ? ನಾನೊಲ್ಲೆನು. ಸಂಗಮದ ವಿದ್ಯಾಲಯದ ಖ್ಯಾತಿಯನ್ನು ಕೇಳಿದ್ದೇನೆ. ಅಲ್ಲಿ ಕಲಿಯುವ ಆಸೆ ನನಗೆ ಬಲವಾಗಿದೆ. ಜಾತವೇದಿ ಮುನಿಗಳ ಹತ್ತಿರಕ್ಕೆ ನನ್ನನ್ನು ಕಳಿಸಿಕೊಡಿ. ನಾನಿಲ್ಲಿ ನಿಲ್ಲಲಾರೆ."

ಮಾದರಸನು ಸ್ವಲ್ಪ ಬಿರುಸಾಗಿ ನೋಡಿ—"ಎಲ್ಲವನ್ನೂ ನೀನು ಹೇಳಿದಂತೆಯೇ ಮಾಡಬೇಕೇನು?......" ಎನ್ನುತ್ತ ಹೊರಟುಹೋದನು. ಬಸವಣ್ಣನು ಎರಡು ದಿವಸ ಊಟಉಪಚಾರವಿಲ್ಲದೆ ಮೌನವಾಗಿ ಕುಳಿತುಬಿಟ್ಟನು.

ನಾಗಮ್ಮನಿಗೆ ಬಹಳ ಸಂಕಟವಾಯಿತು. ಜೀವನದಲ್ಲಿ ಆಕೆ ಮೊದಲಸಲ ಈ ಬಹಳ ಗಡುಚಾದ ಸಮಸ್ಯೆಯನ್ನು ಎದುರಿಸಬೇಕಾಯಿತು. ಇದರಲ್ಲಿ ಆಕೆ

ಬಹಳ ಜಾಣತನದಿಂದ, ಧೈರ್ಯದಿಂದ ವರ್ತಿಸಿದಳು. ವಿರಸ-ವಿಕೋಪಗಳಿಗೆ ಆಸ್ಪದವಿಲ್ಲದಂತೆ ಬಿಕ್ಕಟ್ಟನ್ನು ಪರಿಹರಿಸಿದಳು. ಅಂದಿನ ಅವಳ ಸಾಂತ್ವನದ ನುಡಿಗಳು ಕನ್ನಡ ನಾಡಿನ ಮುಂದಿನ ಭಾಗ್ಯಕ್ಕೆ ಕಾರಣವಾಗಿ ನಿಂತವು.

ಎರಡು ದಿನ ತಾನೂ ಸರಿಯಾಗಿ ಊಟಮಾಡದೆ ತಮ್ಮನ ಹತ್ತಿರ ಕುಳಿತು, ಮಮತೆಯಿಂದ ಮೈದಡವುತ್ತ ಅವನ ಒಳಬಗೆಯ ನೋವನ್ನೂ, ನವೋದಿತ ಉತ್ಕಟಭಾವನೆಗಳನ್ನೂ ಅರಿತುಕೊಂಡಳು. ಅವುಗಳಿಂದ ಅವನನ್ನು ಹಿಂದಕ್ಕೆ ಜಗ್ಗುವದು ಸರಿಯಲ್ಲ—ಸಾಧುವಲ್ಲ—ಎಂದು ಮೊದಲು ನಿರ್ಣಯಿಸಿಕೊಂಡಳು.

ಅತ್ತ ತಂದೆಯ ವಿಚಾರ. ಬಾಗೇವಾಡಿ ಹನ್ನೆರಡು ಗ್ರಾಮಗಳ ಒಡೆಯ. ಅಗ್ರಹಾರದ ಅಧಿಪತಿ. ಗಹಲೀಶ ಜಗದ್ಗುರುಗಳಿಂದ ನೇಮಕವಾದ ಪಾಶುಪತ ಶೈವ ಮಠಾಧ್ಯಕ್ಷರ ಪರಂಪರೆಯಲ್ಲಿ ಬಂದವ. ಸಮಾಜದಲ್ಲಿ ವರ್ಣಾಶ್ರಮ ಧರ್ಮಾನುಸರಣೆಗೆ ಮಾರ್ಗದರ್ಶಕನಾಗಬೇಕಾಗಿತ್ತಲ್ಲದೆ, ರಾಜಕೀಯವಾಗಿ ಆ ಧರ್ಮರಕ್ಷಕನೂ ಆಗಿರಬೇಕಾದ ಪ್ರಸಕ್ತಿ ಇತ್ತು. ಇದೆಲ್ಲವನ್ನು ಕಿತ್ತೊಗೆಯುವದು ಹೇಗೆ? ಅದು ಯಾರಿಗೂ ಇಷ್ಟವಾಗಿರಲಿಲ್ಲ. ಉಪನಯನವಿಲ್ಲದ ಮಗನನ್ನು ಮನೆಯಲ್ಲಿಟ್ಟುಕೊಂಡು ಇದನ್ನೆಲ್ಲ ನಿರ್ವಹಿಸಲಿಕ್ಕಾದೀತೇ? ಅದೂ ಶಕ್ಯವಿಲ್ಲ. ಹಾಗಾದರೆ ತಂದೆ-ಮಕ್ಕಳ ಸಂಬಂಧವನ್ನು ಹರಿದೊಗೆಯಬೇಕೇ? ಅನೆಂತಹ ಮಾತು! ಬಹಳ ಪೇಚಾಟಕ್ಕಿಟ್ಟಿತು ಸಮಯ.

ಬಸವಣ್ಣನಲ್ಲಿ ಅಸಾಮಾನ್ಯ ಬುದ್ಧಿ, ಜ್ಞಾನದೃಷ್ಟಿ, ತತ್ವಜಿಜ್ಞಾಸೆ, ದಯಾಧರ್ಮದಲ್ಲಿ ಆಸಕ್ತಿ, ನಿಶ್ಚಲವಾದ ಧ್ಯಾನವೃತ್ತಿ ಈ ಉಚ್ಚತಮ ಗುಣಗಳು ಎಡೆಬಿಡದೆ ಪ್ರಕಟವಾಗಿ ಬೆಳೆಯುತ್ತಿರುವದನ್ನು ಕಂಡು ತನ್ನಂತೆ ತಂದೆಯೂ ಅದ್ಭುತ ಆನಂದವನ್ನು ಅನುಭವಿಸುತ್ತಿರುವದೊಂದು ನಾಗಲೆಗೆ ಸಮಾಧಾನದ ಸಂಗತಿ. ಅದರ ಆ ಬೆಳಕಿನಲ್ಲಿಯೇ ಈ ಸಮಸ್ಯೆಗೆ ಪರಿಹಾರ ಕಾಣುವ ಆಸೆ ತಾಳಿದ್ದಳು. ಅತ್ತ ಮಾದರಸನೂ ಮಧ್ಯಮಾರ್ಗವೊಂದನ್ನು ಕಂಡುಹಿಡಿಯುವ ಆಲೋಚನೆಯಲ್ಲಿದ್ದನು.

ಮೂರನೆಯ ದಿನ ಸಂಜೆಗೆ ಮಾದರಸ-ಶಿವದೇವರು ಊಟಮಾಡಿ ಪಡಸಾಲೆಯಲ್ಲಿ ಕುಳಿತಿದ್ದರು. ಬಸವಣ್ಣ ಆಗಲೂ ಅವರ ಕೂಡ ಊಟಕ್ಕೆ ಬಂದಿರಲಿಲ್ಲ. ಮಾದರಸು ನಾಗಲಾಂಬೆಯನ್ನು ಕರೆದು ಕೇಳಿದನು :

"ಬಸವಣ್ಣ ಹಾಲನ್ನಾದರೂ ತಕ್ಕೊಂಡನೇ ?"

"ಈಗ ಒತ್ತಾಯದಿಂದ ಸ್ವಲ್ಪ ಕುಡಿಸಿ ಬಂದೆನು."

"ಏನು ಮಾಡಬೇಕೀಗ ? ತನ್ನ ವಂಶ-ಕುಲಗಳ ವಿಚಾರ ಅವನಿಗೇಕೆ ಬರಲೊಲ್ಲದು ?"

"ಕುಲಾಭಿಮಾನ ನಿಮಗೆ ದೊಡ್ಡದು, ಅಪ್ಪಾ! ಸತ್ಯಶೋಧನೆಯ ಅವನ ಭಾವನೆಯಲ್ಲಿ ಅದು ಕ್ಷುಲ್ಲಕ! ಕುಲದ ಕರ್ಮಾಚಾರಗಳಿಂದ ಮೋಕ್ಷವಾದೀತೇ ಅಥವಾ ಸದ್ಭಕ್ತಿ-ಸದಾಚಾರ, ದಯೆ, ಜ್ಞಾನಸಾಧನೆ ಇವುಗಳಿಂದ ಸದ್ಗತಿಯಾದೀತೇ ? ನೀವೇ ಹೇಳಿರಿ."

"ಅದು ನಿಜ ನಾಗಮ್ಮ, ಆದರೆ ಅವನ ಮಾತು ಕೇಳಿದರೆ ನಮ್ಮ ಗತಿ ಏನಾದೀತು; ಸಾಮಾಜಿಕ ಸಂಘದಲ್ಲಿ ನಮ್ಮ ಸ್ಥಾನವನ್ನು ಉಳಿಸಿಕೊಳ್ಳಲಾದೀತೇ ?"

"ಸಂಸ್ಕಾರವಿಲ್ಲದ ಮಗನನ್ನು ಮನೆಯಲ್ಲಿರಿಸಿಕೊಳ್ಳುವದಕ್ಕೆ ನಿಮಗೆ ಭಯ! ಅದು ನಿಜವೂ ಆಗಿದೆ. ಬೇಡ ಅದು. ವಿದ್ಯಾರ್ಜನೆಯ ನೆವದಿಂದ ಅವನನ್ನು ಸಂಗಮಕ್ಕೆ ಕಳಿಸಿಬಿಡಿ. ಸಂಗಮನಾಥ-ಜಾತವೇದಿ ಮುನಿಗಳ ಸನ್ನಿಧಿಯಲ್ಲಿ ಪ್ರವರ್ಧಮಾನನಾಗಲಿ. ಶೈವಮತಗಳನ್ನೇ ಸಂಸ್ಕರಿಸಿ ಪರಿಸುದ್ಧಗೊಳಿಸುವ ಇಚ್ಛೆಯುಳ್ಳ ಜಾತವೇದಿ ಗುರುಗಳು ಅವನಿಗೆ ನೀಡಬಹುದಾದ ಸಂಸ್ಕಾರ ಎಲ್ಲಕ್ಕೂ ದೊಡ್ಡದು. ಅವರ ಕಾರುಣ್ಯವೇ ಒಂದು ದಿವ್ಯ ಸಂಸ್ಕಾರ! ಹೇಗೂ ಅವರೇ ಬಸವನಿಗೆ ಲಿಂಗಧಾರಣ ಮಾಡಿದವರಾಗಿದ್ದಾರೆ. ಅಲ್ಲಿಗೆ ಕಳಿಸಿದ ಬಳಿಕ ಅಗ್ರಹಾರದವರ ಆಕ್ಷೇಪಣೆಗೆ ಆಸ್ಪದವೇ ಇಲ್ಲ. ನೀವು ನಿಮ್ಮಷ್ಟಕ್ಕೆ ಮೊದಲಿನಂತೆ ಇದ್ದುಬಿಡಿ."

"ನಾನೂ ಅದನ್ನೇ ಆಲೋಚಿಸುತ್ತಿರುವೆ. ಇವನು ಮಹಾಮಹಿಮನಾಗುವಲ್ಲಿ ಸಂದೇಹವಿಲ್ಲ. ಗಹಲೀಶ ಮಠದ ಅಧ್ಯಕ್ಷನಾಗದಿದ್ದರೆ ಬಿಡಲಿ, ಭಕ್ತಿ-ಜ್ಞಾನಗಳಿಂದ ಜಗಜ್ಜ್ಯೋತಿಯೆನಿಸಲಿ."

ನಾಗಲೆಯು ಹಿಗ್ಗಿನಿಂದ ಹೇಳಿದಳು : "ನಿಜ ಅಪ್ಪಾ, ನಿಮ್ಮ ಊಹೆ ನಿಜವಾಗಿದೆ; ನಿಜವಾದುದನ್ನೇ ನೀವು ಹೇಳಿದಿರಿ."

"ಜಾತವೇದಿ ಮುನಿಗಳಿಗೆ ವಿಜ್ಞಾಪನೆಯನ್ನು ಬರೆದು, ಯಾತ್ರಿಕರ ಸಂಗಡ ಬಸವನನ್ನು ಅಲ್ಲಿಗೆ ಕಳುಹಿಸೋಣವೇ ?"

"ನಾನೇ ಸಂಗಡ ಹೋಗಿ ಗುರುಗಳ ದರ್ಶನ ಪಡೆದು ನಾಲ್ಕು ದಿನ ಇದ್ದು, ವ್ಯವಸ್ಥೆಗೊಳಿಸಿ ಬಂದರೆ ಒಳಿತಲ್ಲವೇ ಅಪ್ಪಾ ?"

"ಹೌದು ಹಾಗೆಯೇ ಮಾಡು. ಮಗನನ್ನು ಕಳಿಸಲು ಅವಳು ಒಪ್ಪ ಬೇಕಲ್ಲ !"

"ನಾನು ಹೇಳುತ್ತೇನೆ ಅವ್ವನಿಗೆ. ಆಕೆ ಒಪ್ಪುತ್ತಾಳೆ."

"ಆಗಲಿ, ಬಸವನಿಗೆ ಹೇಳು" ಎನ್ನುತ್ತ ಮಾದಿರಾಜ ಎದ್ದು ಹೊರಗೆ ನಡೆದನು. ಯಾವದನ್ನೂ ಆಳವಾಗಿ ವಿಚಾರಮಾಡದ ಶಿವದೇವ ಸುಮ್ಮನೆ ಕುಳಿತಿದ್ದನು. ನಾಗಲಾಂಬೆ ಸಂಗಮಕ್ಕೆ ಹೋದರೆ, ನಾಲ್ಕೊಪ್ಪತ್ತು ತಾನೂ ತನ್ನ ಹೊಲಮನೆಗಳನ್ನು ನೋಡಿಕೊಂಡು ಬರಬಹುದೆಂದು ಎಣಿಕೆಹಾಕುತ್ತಿದ್ದನು. ಮಾವ ಎದ್ದು ಹೋದ ಬಳಿಕ ಮುಗುಳು ನಗೆಯಿಂದ ಮಡದಿಯ ಮುಖ ನೋಡಿ ನುಡಿದನು :

"ಅಂತು ನಿನ್ನ ತಮ್ಮನ ಮಾತಿಗೆ ಗೆಲುವು ತಂದೆ !"

"ನನ್ನ ತಮ್ಮನ ಮಾತಿಗಿಂತ ನಿಮ್ಮ ಮಾವನ ಮಾತಿಗೆ ಗೆಲುವಾಯಿತೆಂದು ಹೇಳಿರಿ. ಮುಂದೆ ಬಸವಣ್ಣನ ಕೀರ್ತಿಯೊಡನೆ ಅವರ ಹೆಸರೂ ಚಿರವಾಗಿ ಉಳಿಯುವದು..." ನಗುತ್ತ ನಾಗಲೆ ತಮ್ಮನ ಕೋಣೆಗೆ ನಡೆದಳು.

ಶಿವದೇವನು ಗೋಶಾಲೆಯ ಕೆಲಸ ನೋಡಲು ಅತ್ತ ನಡೆದನು. ಮಾವನ ಹೆಸರಿಗಿಂತ ಮಡದಿಯ ಹೆಸರು ವಜ್ರಲಿಪಿಯಾಗಿ ಉಳಿಯುವದೆಂಬ ಮಾತು ಅವನ ತಲೆಗೆ ನಿಲುಕಲಿಲ್ಲ.

ತನ್ನ ಇಚ್ಛೆ ಪೂರೈಸುವದನ್ನು ಅಕ್ಕನ ಮುಖದಿಂದ ಕೇಳಿ ಬಸವಣ್ಣನ ಮನಸ್ಸು ಕುಣಿದಾಡಿತು. ಅಕ್ಕನ ಮಡಿಲಲ್ಲಿ ತಲೆಯಿಟ್ಟು ಕೃತಜ್ಞತೆಯ ಕಂಬನಿ ಕರೆದನು. ಅಂದು ರಾತ್ರಿಯೇ ನಾಗಲೆಯು ತಾಯಿಗೆ ತಿಳಿಸಿ ಹೇಳಿ, ತಮ್ಮನನ್ನು ಕಳಿಸಲಿಕ್ಕೂ ತನ್ನ ಪ್ರಯಾಣಕ್ಕೂ ಒಪ್ಪಿಗೆ ಪಡೆದಳು.

ಮುಂದೆ ಕೆಲವೇ ದಿನಗಳಲ್ಲಿ ಮಾದರಸನು ಜಾತವೇದ ಮುನಿಗಳಿಗೆ ವಿಜ್ಞಾಪನಾ ಪತ್ರವನ್ನು ಬರೆದು, ಮಠದ ಸೇವಕನೊಬ್ಬನನ್ನು ಜತೆಮಾಡಿ, ಬಸವಣ್ಣ ನಾಗಲಾಂಬೆಯರನ್ನು ಸಂಗಮದ ಗುರುಕುಲಕ್ಕೆ ಕಳಿಸುವ ವ್ಯವಸ್ಥೆ ಮಾಡಿದನು. ಒಳ್ಳೆಯ ಸಮಯಕ್ಕೆ ಮಕ್ಕಳಿಬ್ಬರು ತಂದೆತಾಯಿಗಳ ಆಶೀರ್ವಾದ ಪಡೆದು ಬೀಳ್ಕೊಂಡರು.

ಸಂಗಮದಲ್ಲಿ

೧ ಪ್ರೇಮಾದರ ಪ್ರಾಪ್ತಿ

ಸಂಗಮ ಗುರುಕುಲದ ಕುಲಪತಿ ಜಾತವೇದಿ ಮುನಿಗಳು ನಾಗಲಾಂಬೆ-ಬಸವಣ್ಣರನ್ನು ಪ್ರೀತಿಯಿಂದ ಬರಮಾಡಿಕೊಂಡರು. ಅವರ ಉಪಚಾರ ವಸತಿಗಳ ವ್ಯವಸ್ಥೆ ಮಾಡಿದರು.

ಭವ್ಯ-ಮನೋಹರವಾದ ಸಂಗಮದ ಸೃಷ್ಟಿಸೌಂದರ್ಯವೂ ಆಶ್ರಮದ ಪವಿತ್ರ-ಪ್ರಶಾಂತ ವಾತಾವರಣವೂ ಜ್ಞಾನಾನಂದಮಯ ನಾದವೂ ನಾಗಲಾಂಬೆಯನ್ನು ತುಂಬಾ ಆಕರ್ಷಿಸಿದವು. ಆಕೆಗೆ ಬಾಗೇವಾಡಿಗೆ ಮರಳಲು ಮನಸ್ಸಾಗಲಿಲ್ಲ. 'ಉಳಿದ ವಿದ್ಯಾರ್ಥಿಗಳ ಜೊತೆಗೆ ಸ್ವತಂತ್ರವಾಗಿರುವದು ಬಸವಣ್ಣನಿಗೆ ಈಗಲೇ ಸಾಧ್ಯವಾದೀತೇ ?' ಎಂದು ಗುರುಗಳು ಅನುಮಾನಿಸಿದ್ದರು. ಆ ಮಾತು ಆಕೆಗೆ ಅನುಕೂಲವಾದ ಕಾರಣವನ್ನೇ ಒದಗಿಸಿದ್ದಿತು. ಕೂಡಲೆ ತಂದೆಗೆ ಪತ್ರ ಬರೆದಳು :

'ಬಸವಣ್ಣನ ಪೋಷಣೆಗಾಗಿ ನಾನು ಇಲ್ಲಿ ಕೆಲವು ಕಾಲ ಇರುವುದು ಅವಶ್ಯವೆಂದು ತೋರುತ್ತದೆ. ಗುರುಗಳ ಅಭಿಪ್ರಾಯವೂ ಹಾಗಿದೆ. ಆಶ್ರಮದ ನೆರೆಯಲ್ಲಿ ಚಿಕ್ಕ ಕುಟೀರವೊಂದನ್ನು ಏರ್ಪಡಿಸುತ್ತಾರೆ. ನಿಮ್ಮ ಅನುಜ್ಞೆಯನ್ನು ಅಪೇಕ್ಷಿಸುವೆ.'

ಈ ಪತ್ರದೊಡನೆ ಸೇವಕನನ್ನು ಮರಳಿ ಕಳಿಸಿಬಿಟ್ಟಳು. ಮಾದಿರಾಜನೂ ಸಮ್ಮತಿಸಿ, ಎರಡು ಬಂಡಿಗಳಲ್ಲಿ ಸಾಮಾನು ಸರಂಜಾಮು ಹಾಕಿ ಶಿವದೇವನನ್ನೂ ದಾಸಿಯೊಬ್ಬಳನ್ನೂ ಸಂಗಮಕ್ಕೆ ಕಳುಹಿದನು. ಶಿವದೇವನಿಗೆ ಬಹಳ ಸಂತೋಷ ! ಹೆಂಡತಿಯೊಡನೆ ಗುರುಕುಲದಲ್ಲಿ ವಾಸ ! ಅದನ್ನು ಕೇಳಬೇಕೇ ?

ನಾಗಲಾಂಬೆಗೆ ಸಂಗಮವು ಸೋದರಮಾವಂದಿರೂರು. ಸಿದ್ದಣ್ಣ-ಬಲದೇವ ಎಂಬವರು ಮಾದಲಾಂಬಿಕೆಯ ಸೋದರರು. ಆದರೆ ಆ ಮನೆತನದವರಾರೂ ಆಗ ಅಲ್ಲಿರಲಿಲ್ಲ.

ತರ್ದೆವಾಡಿ ಭಾಗಕ್ಕೆ ಮಾಂಡಲಿಕನಾಗಿ ಮಂಗಳವಾಡದಲ್ಲಿ ಕ್ರಿ. ಶ. ೧೧೧೮ ರಿಂದ ರಾಜ್ಯವಾಳುತ್ತಿದ್ದ ಪೆರ್ಮಾಡಿ ರಾಜನಲ್ಲಿ ಸಿದ್ದಣ್ಣನು ರಾಜಭಕ್ತನಾದ

ಮಂತ್ರಿಯಾಗಿದ್ದನು. ಬಲದೇವನೂ ಅಲ್ಲಿಯೇ ಅಣ್ಣನ ಆಶ್ರಯದಲ್ಲಿ ಉನ್ನತಾಧಿಕಾರದಲ್ಲಿದ್ದನು. ಹೀಗೆ ಅವರಿಬ್ಬರು* ಹಲವು ವರ್ಷಗಳಿಂದ ಸಂಗಮದಿಂದ ದೂರವಾಗಿದ್ದರೂ ಗುರುಕುಲದ ಬಗೆಗೆ ಜಾತವೇದಿ ಮುನಿಗಳ ಬಗೆಗೆ ಗೌರವಾದರಗಳನ್ನು ಇರಿಸಿಕೊಂಡಿದ್ದರು. ನಾಗಲಾಂಬೆಯೂ ಬಸವಣ್ಣನೂ ಅಲ್ಲಿಗೆ ಬಂದುದನ್ನು ಕೇಳಿ ಅವರ ಯೋಗಕ್ಷೇಮವನ್ನು ವಿಚಾರಿಸಿಕೊಳ್ಳುತ್ತಿದ್ದರು.

ಆಶ್ರಮವಾಸಿಗಳಲ್ಲಿ ಈ ಅಕ್ಕ-ತಮ್ಮಂದಿರು ತಮ್ಮ ತಂದೆಮಾವಂದಿರ ಹೆಸರಿನ ಆಶ್ರಯದಿಂದ ಒಡೆದು ಕಾಣಬೇಕಾಗಿರಲಿಲ್ಲ. ಇವರ ನಿಜವಾದ ದೊಡ್ಡತನ ಬೇಗನೆ ಬೆಳಕಿಗೆ ಬಂದಿತು. ಬಸವಣ್ಣನ ವಿನಯ-ವಿವೇಕಗಳ ನಡತೆ, ತೀಕ್ಷ್ಣ ಬುದ್ಧಿ, ಸತ್ಯ ಚಿಂತನೆ ಇವು ಕುಲಪತಿ ಮೊದಲಾಗಿ ಎಲ್ಲ ಅಧ್ಯಾಪಕರನ್ನು ಆಕರ್ಷಿಸಿದವು. ನಾಗಲಾಂಬೆ-ಶಿವದೇವರ ಸಾತ್ವಿಕ-ಸಾದಾ ಜೀವನ ಆಧ್ಯಾತ್ಮಿಕ ಆಸಕ್ತಿ, ಸಹಕಾರ ಸೇವೆಗಳು ಗುರುಕುಲದಲ್ಲೆಲ್ಲ ಪ್ರೀತಿ ಗೌರವಗಳನ್ನು ಪಡೆದವು. ಒಟ್ಟಿನಲ್ಲಿ ಇದೊಂದು ಪವಿತ್ರಜೀವನದ ಕುಟುಂಬವಾಯಿತು.

ನಾಗಕ್ಕನು ಮನೆಯ ಮೇಲುಕೆಲಸಗಳನ್ನು ದಾಸಿಯಿಂದ ಮಾಡಿಸಿ, ಅಡಿಗೆಯನ್ನೂ ಬಸವಣ್ಣನ ಪಾಲನೆಯನ್ನೂ ಸ್ವತಃ ನೋಡಿಕೊಂಡು, ತನ್ನ ಶಿವಾರ್ಚನೆಯನ್ನು ಚ್ಯುತಿಯಿಲ್ಲದೆ ನಡೆಯಿಸಿ, ಆಶ್ರಮದ ಕೆಲಸಗಳಿಗೂ ನೆರವಾಗುತ್ತಿದ್ದಳು. ಸಂಧ್ಯಾಕಾಲದ ಬ್ರಹ್ಮಜ್ಞಾನದ ಸಭೆಗಳಿಗೆ ತಪ್ಪದೆ ಹೋಗುತ್ತಿದ್ದಳು. ಪಂಡಿತರ ಮನೆಗಳ ಹಲವು ಮಹಿಳೆಯರು ಆಕೆಗೆ ಅನುಯಾಯಿಗಳಾಗಿದ್ದರು. ಆ ಸೋದರಿಯರ ಸಂಸಾರದ ಹಲವು ಸಮಸ್ಯೆಗಳನ್ನು ಪರಿಹರಿಸುವಲ್ಲಿ, ಅವರ ಮಕ್ಕಳ ಹಾಗೂ ರೋಗಿಗಳ ಆರೈಕೆ ಮಾಡುವಲ್ಲಿ ತನ್ನ ಅನುಭವಪೂರ್ಣ ಜ್ಞಾನದಿಂದ ಕ್ರಿಯಾತ್ಮಕವಾಗಿ ಸಹಾಯ ಮಾಡುತ್ತಿದ್ದಳು. ಅದರಿಂದ ನಾಗಲಾಂಬೆ ಆ ತಾಯಿಗಳಿಗೆಲ್ಲ ತುಂಬ ಆದರಣೀಯಳಾಗಿಬಿಟ್ಟಳು.

ಪ್ರವಚನ ಸಭೆಯಲ್ಲಿಯೂ ನಾಗಲಾಂಬೆಯ ಜಿಜ್ಞಾಸುತ್ವವೂ ಪ್ರಶ್ನೆಗಳ ಔಚಿತ್ಯವೂ ಸುಸಂಗತ ವಿಚಾರಧಾರೆಯೂ ಪಂಡಿತರ ಪ್ರಾಧ್ಯಾಪಕರ ಮೆಚ್ಚುಗೆ ಪಡೆದಿದ್ದವು. ಆಶ್ರಮದ ವಿದ್ಯಾವಂತ ಮಹಿಳೆಯರು ಪ್ರವಚನದ ತತ್ತ್ವವಿವೇ

---

* ಸಿದ್ಧಣ್ಣ-ಬಲದೇವರು ಸೋದರರಲ್ಲವೆಂದು, ಸಿದ್ಧಣ್ಣ ಜೈನನೆಂದು ಕೆಲವರು ತಿಳಿಯುತ್ತಾರೆ. 'ಬಸವರಾಜದೇವರು' ಬರೆವಾಗ ನಾವು ಇದೇ ಅಭಿಪ್ರಾಯ ತಳೆದಿದ್ದೆವು. ಆದರೆ ವೀರಶೈವ ಸಾಹಿತ್ಯದಲ್ಲಿ ಅವರು ಸೋದರರೆಂಬುದಕ್ಕೆ ಪ್ರಬಲ ಬಹುಮತವಿದೆ.

ಚನೆಯಲ್ಲಿಯ ತಮಗೆ ಅರ್ಥವಾಗದ ಸಂಗತಿಗಳ ಬಗೆಗೆ ಸಭೆಯ ನಂತರ ನಾಗಕ್ಕ ನಿಂದ ವಿವರಣೆ ಪಡೆಯುತ್ತಿದ್ದರು. ಆಗ ನಾಗಲಾಂಬೆ, ಬಸವಣ್ಣನಿಗೆ ಅಕ್ಕ ನಾದರೆ ಆಶ್ರಮದವರಿಗೆಲ್ಲ 'ಅಕ್ಕನಾಗಮ್ಮನವರು' ಆದಳು. ಕುಲಪತಿಗಳು ಅಕ್ಕನ ಶುದ್ಧ ಮತ್ತು ದಕ್ಷ ನಡತೆಯನ್ನು ಗಮನಿಸಿ ಆಶ್ರಮದ ಕಾರ್ಯಕಲಾಪ ಗಳ ಮೇಲ್ವಿಚಾರಣೆಯನ್ನು ಆಕೆಗೆ ಒಪ್ಪಿಸಹತ್ತಿದರು. ನಾಗಕ್ಕನು ಅವುಗಳನ್ನು ಆನಂದದಿಂದ ವಹಿಸಿಕೊಂಡು ಗುರುದೇವನಿಗೆ ತೃಪ್ತಿಯಾಗುವಂತೆ ಈಡೇರಿಸು ತ್ತಿದ್ದಳು. ಅದರಿಂದಾಕೆಯು ಕುಲಪತಿಗಳ ನಚ್ಚಿನ ಹಿರಿಯ ಮಗಳೇ ಆದಳು. ಅತ್ತ ಬಸವಣ್ಣನು ಅಧ್ಯಯನಶಾಲೆಯ ಅಲಂಕಾರವೆನಿಸಿಕೊಂಡಿದ್ದನು.

೨ ಕಾಯಕದಲ್ಲಿ ಕಲೆ

ಸಂಗಮದಲ್ಲಿ ಪೂರ್ವಾಭಿಮುಖವಾಗಿರುವ ಕೃಷ್ಣೆಗೆ ಮಲಾಪಹಾರಿಯು ದಕ್ಷಿಣದಿಂದ ಬಂದು ಕೂಡುತ್ತದೆ. ಎರಡೂ ನದಿಗಳ ತೀರದಲ್ಲಿ ಸುಂದರವಾದ ವನರಾಜಿಯು ಕಂಗೊಳಿಸುವದು. ಒಳಗಡೆಯಲ್ಲಿ ಮಾವು, ಪೇರಲ, ನೇರಿಲ, ಬೋರೆ, ಹುಣಿಸೆ ಮೊದಲಾದ ಫಲವೃಕ್ಷಗಳೂ ಬೇಕಾದಷ್ಟು ಬೆಳೆದಿದ್ದವು. ಬೇವು, ತಾಡ, ಶಿರೀಷ, ಬೂರಲ, ಆಲ ಮುಂತಾದ ಮರಗಳೂ ಹೆಮ್ಮರಗಳೂ ವಿಪುಲವಾಗಿದ್ದವು. ನಡುನಡುವೆ ಕಾಡು ಮುಳ್ಳುಕಂಟಿಗಳೂ ಹುಲ್ಲೂ ಬೆಳೆದಿದ್ದವು. ಬಿಲ್ವಬನಗಳೂ ಹೂಗಿಡಬಳ್ಳಿಗಳೂ ಹುಲುಸಾಗಿದ್ದವು. ಆಗ ಜನಸಂಖ್ಯೆ ವಿರಲವಾಗಿದ್ದುದರಿಂದ ಸಾಗುವಳಿಗೆ ಸಾಕಾಗಿ ಉಳಿದ ಭೂಮಿ ವನಪ್ರದೇಶವೇ ಆಗಿರುತ್ತಿತ್ತು. ಆಶ್ರಮದಲ್ಲಿ ಅಷ್ಟಷ್ಟು ಸ್ಥಳವನ್ನು ಬಯಲು ಮಾಡಿಕೊಂಡು ಅಲ್ಲಲ್ಲಿ ಅನೇಕ ಕುಟೀರಗಳನ್ನೂ ಚಿಕ್ಕದೊಡ್ಡ ಮನೆಗಳನ್ನೂ ಕಟ್ಟಿಕೊಂಡಿದ್ದರು. ಗುಡಿಸಲುಗಳನ್ನು ಮಾಡಿಕೊಂಡಿದ್ದರು. ಅವುಗಳಲ್ಲೆಲ್ಲ ಸಾಧಕರು, ವಿದ್ಯಾರ್ಥಿಗಳು, ಪ್ರಾಧ್ಯಾಪಕರು ಇರುತ್ತಿದ್ದರು. ಮಲಾಪಹಾರಿಯ ಪಶ್ಚಿಮದ ಬದಿಯಲ್ಲಿ ಸಾಲುಬನಗಳ ಹಿಂದೆ ಯೋಗಮಂದಿರಗಳೂ ಕಲ್ಲು ಮಂಟಪಗಳೂ ಇದ್ದವು. ಉಭಯ ನದಿಗಳ ನೀರು ಒಂದುಗೂಡುವಲ್ಲಿ ಸಂಗಮೇಶ್ವರನು ನೆಲೆಸಿರುವನು. ಅವನ ಬಲಮಗ್ಗಲಿಗೆ ವಿಶಾಲವಾದ ಅಧ್ಯಯನ ಶಾಲೆ, ಪ್ರವಚನ ಮಂಟಪಗಳು ತಲೆಯೆತ್ತಿ ನಿಂತಿದ್ದವು.

ತಮ್ಮ ಕುಟೀರದ ಮುಂದಿನ ಅಂಗಳವನ್ನು ಕಡಿದು ಹೂದೋಟ ಮಾಡುವ ವಿಚಾರ ನಾಗಲಾಂಬೆಯ ಮನದಲ್ಲಿ ಮೂಡಿತು. ಅದನ್ನು ತಿಳಿದು ಶಿವದೇವನು 'ಸರಿ' ಎಂದು ಸಿದ್ಧನಾದನು. ಇಬ್ಬರೂ ಸೇರಿ ಹುಲ್ಲುಗದ್ದೆ-ಕಂಟಿಗಳನ್ನು ಕಡಿದುಹಾಕಿ ನೆಲಮಾಡಿದರು. ಬರುವ ಮಳೆಗಾಲದಲ್ಲಿ ಅಲ್ಲಿ ಹೂಗಿಡಬಳ್ಳಿಗಳು ಬೆಳೆದವು; ರಂಜಿಸಿದವು. ಮಗ್ಗಲಿಗೆ ಶಿವದೇವನು ತರಕಾರಿಯನ್ನು ಬೆಳೆಯುವ ಕೈದೋಟವನ್ನು ನಿರ್ಮಿಸಿದನು. ನಿತ್ಯದಲ್ಲಿ ಅವರು ಸ್ವಲ್ಪ ಸಮಯ ಕಳೆಕಿತ್ತುವ, ನೀರು ಎರೆವ ಕೆಲಸದಲ್ಲಿ ತೊಡಗಿರುತ್ತಿದ್ದರು. ಅದರಿಂದ ಸ್ಫೂರ್ತಿ

ಗೊಂಡ ಉಳಿದವರೂ ತಮ್ಮ ತಮ್ಮ ಮನೆಯಂಗಳದಲ್ಲಿ ಉಪಯುಕ್ತ ಗಿಡ ಬಳ್ಳಿಗಳನ್ನು ಬೆಳಿಸಿಕೊಂಡರು.

ಶಿವಸ್ವಾಮಿಯ ಕಾರ್ಯ ಅಷ್ಟಕ್ಕೆ ನಿಲ್ಲಲಿಲ್ಲ. ಗಿಡಗಂಟಿಗಳಲ್ಲಿ ಡೊಂಕು ಡೊಂಕಾಗಿ ಹಾದುಹೋಗುವ ಮನೆಮನೆಗಳ ನಡುವಿನ ದಾರಿಗಳನ್ನೆಲ್ಲ ಅಗಲ ವಾಗಿ ನಿಡಿದಾಗಿ ಸಮನಾಗಿ ಸ್ವಚ್ಛವಾಗಿ ಮಾರ್ಪಡಿಸಿದನು. ಹೀಗೆ ಆಶ್ರಮದ ಶೋಭೆ ಹೆಚ್ಚುತ್ತಿರುವುದನ್ನು ಕಂಡುಕಂಡು ಕುಲಪತಿಗಳಿಗೆ ಅದೆಷ್ಟು ಆನಂದ ವಾಗಬೇಡ! ನಾಗಕ್ಕನೊಮ್ಮೆ ತಮ್ಮ ಅಂಗಳದ ಸುತ್ತಲೆಲ್ಲ ಕಟ್ಟಿಗೆಯ ತುಂಡು ಗಳನ್ನು ನಿಲ್ಲಿಸಿ ಬೇಲಿಯನ್ನು ಕಟ್ಟುವದರಲ್ಲಿ ತೊಡಗಿದ್ದಳು. ಗುರುಗಳು ಅದನ್ನು ತಿಳಿದು ಕೆಲವು ಪ್ರೌಢ ವಿದ್ಯಾರ್ಥಿಗಳನ್ನು ಸಹಾಯಕ್ಕೆ ಕಳುಹಿದರು. ನಾಗಮ್ಮ ಆ ವಿದ್ಯಾರ್ಥಿಗಳನ್ನು ತಡೆದು ಹೇಳಿದಳು :

"ತಮ್ಮಗಳಿರಾ ನೀವು ಕಟ್ಟಬೇಕಾದ ಬೇಲಿ ಬೇರೆ ಇದೆ; ಇಲ್ಲಿ ಬೇಡ."

"ನಿಮಗೆ ಸಹಾಯ ಮಾಡಬೇಕೆಂದು ಆಜ್ಞೆಯಾಗಿದೆ ಅಮ್ಮನವರೇ!"

"ನನಗೇ ಸಹಾಯ ಮಾಡುವಿರಂತೆ ಅಲ್ಲಿ. ನಿಮ್ಮ ಅಧ್ಯಯನ ಶಾಲೆಯ ಮುಂದಿನ ಅಂಗಳಕ್ಕೆ ಬೇಲಿಯನ್ನು ಕಟ್ಟೋಣ. ಕಾಡುಮೃಗಗಳಿಂದ ಗಿಡ ಬಳ್ಳಿಗಳ ರಕ್ಷಣೆಯಾಗಬೇಕು."

ವಿದ್ಯಾರ್ಥಿಗಳಿಗೆ ತಮ್ಮ ಕರ್ತವ್ಯದ ಅರಿವಾಯಿತು. ಮರುದಿನ ಅಲ್ಲಿ ಅವರು ಆ ಕೆಲಸವನ್ನು ಆರಂಭಿಸಿಬಿಟ್ಟಿದ್ದರು. ನಾಗಮ್ಮ ನೋಡಿ, ತಾನೂ ನಿಂತು ಸರಿಯಾಗಿ ಮಾಡಿಸಿದಳು. ಹೊಸಹೊಸ ಹೂಗಿಡಗಳ ಸಸಿಗಳನ್ನು ನೆಟ್ಟು ಅಂದ ವಾಗಿಸಿದಳು. ಶಿವಸ್ವಾಮಿ ವಟುಗಳನ್ನು ಕೂಡಿಕೊಂಡು, ಒಮ್ಮೆ ನೀರು ಮೇಲೇರಿ ಹರಿವಾಗ ನದೀತೀರದ ಕೆಸರಿನಲ್ಲಿ ಬಂಡೆಗಳನ್ನು ಹೊಂದಿಸಿಡುತ್ತಾ ಸಾಲಾಗಿ ಸ್ನಾನಕ್ಕೆ ಅನುವು ಮಾಡುತ್ತಿದ್ದನು. ಆ ಸಮಯದಲ್ಲಿ ಕ್ಷೇತ್ರಕ್ಕೆ ಬಂದಿದ್ದ ಕಿಸುವೊಳಲ ಕಂಪಣದ ದುರ್ಗಾಧಿಪತಿಯು ಅದನ್ನು ಕಂಡು ಸ್ಫೂರ್ತಿ ಗೊಂಡು ಮುಂದೆ ಬೇಗನೆ ಅಕ್ಕಪಕ್ಕದ ಚಿಕ್ಕಪುಟ್ಟ ದೊರೆದೊರೆಗಳಿಂದ ಧನ ಜನಗಳ ನೆರವು ಪಡೆದು, ದೇವಸ್ಥಾನದ ಎಡಮಗ್ಗುಲಿಗೆ ಕೆಳಗಿನಿಂದ ಮೇಲಿನ ವರೆಗೆ ವಿಶಾಲವಾದ ಘಟ್ಟಗಳನ್ನು ನಿರ್ಮಿಸಿದನು. ಹೀಗೆ ನಾಗಮ್ಮನ ಯೋಗ ದಿಂದ ಆಶ್ರಮದಲ್ಲಿ ಸಾಧಕರಿಗೂ ಕ್ಷೇತ್ರದಲ್ಲಿ ಯಾತ್ರಿಕರಿಗೂ ಸೊಗಸು-ಸೌಕರ್ಯ ಗಳು ಹೆಚ್ಚಿದವು.

ಪ್ರಸಾದನಿಲಯದಲ್ಲಿ ಕಾರ್ಯಕ್ಷಮತೆಯ ಅಭಾವದಿಂದಾಗಿ ಸಮಯಾನು ಸಾರವಾಗಿ ಪ್ರಸಾದದ ಏರ್ಪಾಡು ಆಗುತ್ತಿಲ್ಲವೆಂದೂ ಅವ್ಯವಸ್ಥೆಯಾಗು ತ್ತಿದೆಯೆಂದೂ ವಟುಗಳ ದೂರುಗಳು ಕುಲಪತಿಗಳ ಸನ್ನಿಧಿಯ ವರೆಗೆ ಬಂದಿದ್ದವು. ಅವುಗಳ ನಿವಾರಣೆಯ ಕಾರ್ಯಭಾರವನ್ನು ಆ ಗುರುಗಳು ನಾಗಕ್ಕನಿಗೆ ವಹಿಸಿಕೊಟ್ಟರು. ನಾಗಕ್ಕನು ಅಲ್ಲಿಯ ಲೋಪದೋಷಗಳನ್ನು ಕಂಡುಹಿಡಿದು, ಅದರ ನಡೆವಳಿಕೆಯಲ್ಲಿ ಕೆಲವು ಕ್ರಮಗಳನ್ನು ಹಾಕಿಕೊಟ್ಟು ವ್ಯವಸ್ಥೆಗೊಳಿಸಿದಳು. ಇದರಿಂದ ವಟುಗಳ ಜೀವನವು ಸುಗಮವಾಯಿತು.

ಈ ಒಳಗಾಗಿ ಕುಲಪತಿ ಜಾತವೇದಿ ಮುನಿಗಳು ಬಸವಣ್ಣನ ಭಕ್ತಿಯ ಉಜ್ವಲತೆಯನ್ನೂ ನಾಗಲಾಂಬೆ ಶಿವದೇವರ ತತ್ವನಿಷ್ಠವಾದ ಸಾತ್ವಿಕ ಸದಾಚಾರವನ್ನೂ ಪರೋಪಕಾರ ನಿರತ ಜೀವನವನ್ನೂ ಅನುಲಕ್ಷಿಸಿ ಮೆಚ್ಚಿ ಕರುಣೆಯಿಂದ ಅವರೆಲ್ಲರಿಗೆ ದೀಕ್ಷೆಯನ್ನಿತ್ತು ಷಟ್‌ಸ್ಥಲ ಜ್ಞಾನೋಪದೇಶವನ್ನು ಮಾಡಿದ್ದರು. ಅಂದಿನಿಂದ ಶಿವದೇವ ಶಿವಸ್ವಾಮಿಯೇ ಆಗಿದ್ದನು. ಆಗಾಗ ಮಂಗಳವಾಡದಿಂದ ಬಂದು ಇವರ ಯೋಗಕ್ಷೇಮವನ್ನು ವಿಚಾರಿಸುತ್ತಿದ್ದ ಬಲದೇವನು ನಾಗಮ್ಮನ ಧುರೀಣತ್ವವನ್ನೂ ಬಸವಣ್ಣನ ಬುದ್ಧಿವೈಭವವನ್ನೂ ಈ ಕುಟುಂಬದ ಭಾಕ್ತಿಕ ಜೀವನವನ್ನೂ ಮೆಚ್ಚಿ ನಾಗಮ್ಮನನ್ನು ಮನವಾರೆ ಕೊಂಡಾಡಿದನು. ಬಸವಣ್ಣನು ನಿನಗೆ ತಕ್ಕ ತಮ್ಮನವ್ವಾ ಎಂದು ಎದೆದುಂಬಿ ಉದ್ಗರಿಸಿದನು.

೩ ಶಿವಪ್ರಸಾದ

"ಏ ಪಶು ನಿಲ್ಲು; ಬಾ ಇಲ್ಲಿ; ನೋಡು ಇಲ್ಲದಿದ್ದರೆ!"
ಅಂಗಳದಲ್ಲಿ ಆಡುತ್ತಿದ್ದ ಮಗು ತನ್ನನ್ನು ನೋಡಿ ಒಳಗೆ ಓಡುತ್ತಿರುವದನ್ನು ಕಂಡು ಕಾಳವ್ವೆ ಕೂಗುತ್ತ ಧಾವಿಸಿ ಬಂದಳು. ಒಳಗೆ ಹೋದ ಪಶುಪತಿ ಅಲ್ಲಿ ನಿಂತಿದ್ದ ನಾಗಮ್ಮನ ಕಾಲುಗಳನ್ನಪ್ಪಿ ಸೀರೆಯನ್ನು ಅವಚಿ ಹಿಡಿದುಕೊಂಡನು.

"ಏ ಬಾರೋ ಇಲ್ಲಿ, ದಿನಾಲು ಇದೇ ಆಯಿತು."

ಎನ್ನುತ್ತ ಕಾಳವ್ವೆ ಅವನ ತೋಳು ಹಿಡಿದಳು.

"ನಾ ಬರಲ್ಲ."

ಪಶುಪತಿ ಮತ್ತಿಷ್ಟು ಗಟ್ಟಿಯಾಗಿ ನಾಗಮ್ಮನನ್ನು ಹಿಡಿದನು. ನಾಗಮ್ಮ ನಿಗೆ ನಗು ಬಂತು. ಅದಕ್ಕೆ ಪ್ರತಿಯಾಗಿ ಕಾಳವ್ವೆ ಇಂದು ನಗಲಿಲ್ಲ. ಹುಬ್ಬು ಗಂಟಿಕ್ಕಿದಳು. ಮಗುವಿನ ಆ ತೋಳು ಹಿಡಿದು ಬಲವಂತವಾಗಿ ಜಗ್ಗಿದಳು. ಮಗು ಚೀರಿ ಅಳಹತ್ತಿತು. ನಾಗಮ್ಮ ಎಂದಳು:

"ಇಂದು ಇಲ್ಲೇ ಇರಲಿ ಬಿಡವ್ವಾ."

"ಹಾಗಲ್ಲರಿ ಅಮ್ಮನೋರೆ, ಸಂಜೆಯ ಸಮಯ, ನಿಮಗೆಲ್ಲ ಬಿಡುವೆಲ್ಲಿ? ರಾತ್ರಿಯೂ ಎದ್ದು ನಿಮಗೆ ತೊಂದರೆ ಕೊಡದೆ ಇರುತ್ತಾನೆಯೇ?"

ಕಾಳವ್ವೆಯ ಈ ಮಾತಿನಲ್ಲಿ ಶಿಷ್ಟಾಚಾರವಿದ್ದರೂ ಮನದಲ್ಲಿ ಮಗುವಿನ ಮೇಲಿನ ಸಿಟ್ಟು ಹೆಚ್ಚೇ ಆಗಿತ್ತು. ದನಿ ಬಿರುಸಾಗಿತ್ತು, ಜೋರಾಗಿ ಆಚೆಗೆ ಎಳೆದಳು. ಮಗು ನಾಗಮ್ಮನನ್ನು ಬಿಡದೆ ಜೀಟುಗಾಲಿನಿಂದ ಈಚೆಗೆ ಜಗ್ಗುತ್ತಿತ್ತು. ನಾಗಮ್ಮ ತನ್ನ ಸೀರೆ ಹಿಡಿದ ಮಗುವಿನ ಇನ್ನೊಂದು ಕೈಯನ್ನು ಬಿಡಿಸಿದಳು. ಆಗ ಮಗು ಪಶುಪತಿ ಮುಖ ಮೇಲೆತ್ತಿ ನೀರು ತುಂಬಿದ ಕಣ್ಣುಗಳಿಂದ ಅಸಹಾಯಕನಂತೆ ನಾಗಮ್ಮನ ಮುಖ ನೋಡಿದನು. ಅದನ್ನು ಕಂಡು ನಾಗಮ್ಮನ ಕರುಳು ಕೊರೆದಂತಾಯಿತು. ಕಾಳವ್ವೆಯ ಮರ್ಮಕ್ಕೆ ಚುರುಕಾಯಿತು. ಆಕೆ ಎತ್ತಿಕೊಂಡು ಬಾಗಿಲ ದಾಟಿದಳು. ಆದರೆ ಪಶುಪತಿ ತಾಯಿಯ ಕಂಕುಳದಲ್ಲಿ ಕೂಡ್ರದೆ ಕೆಳಕ್ಕೆ ಜರಿಯುತ್ತಿದ್ದನು. ಅಂಗಳಕ್ಕೆ ಬಂದು ಕಾಳವ್ವೆ

ಅವನನ್ನು ನೆಲಕ್ಕೆ ಕುಕ್ಕರಿಸಿ ಕೆನ್ನೆಗೆ ಎರಡು ಏಟು ಬಿಗಿದು ಎತ್ತಿಕೊಂಡು ಹೋದಳು. ಬಾಗಿಲಲ್ಲಿ ನಿಂತು ನೋಡಿ ನಾಗಮ್ಮ ವಿಷಾದಗೊಂಡು ಮೆಲ್ಲಗೆ ಮರಳಿ ಒಳಗೆ ಹೆಜ್ಜೆ ಇಟ್ಟಳು. ಮುಂದೆ ಎಷ್ಟೋ ಹೊತ್ತಿನ ವರೆಗೆ ಪಶುಪತಿ ಅಳುವ ದನಿ ಅವರ ಮನೆಯಿಂದ ಕೇಳಿಸುತ್ತಿತ್ತು.

ಸಂಗಮಕ್ಕೆ ಬಂದು ಒಂಬತ್ತು ವರ್ಷಗಳು ಕಳೆದಿದ್ದವು. ಈಗ ಬಸವಣ್ಣ ಪ್ರೌಢವಯಸ್ಕನು. ಆತನು ತನ್ನ ಬಾಲ್ಯದಲ್ಲಿ ಬಾಲಲೀಲೆಯ ಬೆಳಕಿನಿಂದ ನಾಗಲಾಂಬೆಯಲ್ಲಿ ಸ್ತ್ರೀಸಹಜವಾದ ಮಾತೃಭಾವನೆಯನ್ನು ಸ್ಫುಟಗೊಳಿಸಿದ್ದನು. ಅದರಿಂದಲೇ ಆಕೆಗೆ ಮದುವೆಯಾಗಿ ಜೀವಿಸುವ ಪ್ರೇರಣೆಯಾಗಿತ್ತು. ಈಗಲೂ ಬಸವಣ್ಣ ನಾಗಲೆಗೆ ವಾತ್ಸಲ್ಯದ ಮಗುವೇ ಆಗಿದ್ದರೂ, ಆತನನ್ನು ಮಡಿಲಲ್ಲಿರಿಸಿ ಲಲ್ಲೆಗರೆಯಲು ಹೇಗೆ ಆದೀತು ? ಆದ್ದರಿಂದ ಆಕೆ ಇತ್ತೀಚೆಗೆ ಗುರುಕುಲದಲ್ಲಿಯ ಪ್ರಾಧ್ಯಾಪಕರ ಹಲವು ಮಕ್ಕಳನ್ನು ತಾನೇ ಓರಣದಿಂದಿಟ್ಟು, ವಿರಾಮಕಾಲದಲ್ಲಿ ಅವರೊಡನೆ ಆಡಿ ತನ್ನ ತಾಯಿಗರುಳನ್ನು ತಣಿಸಿಕೊಳ್ಳುತ್ತಿದ್ದಳು. ಈ ಕೆಲದಿವಸ ಆ ಮಕ್ಕಳಲ್ಲಿ ಎರಡು ವರ್ಷದ ಪಶುಪತಿ ಹಗಲೆಲ್ಲ ನಾಗಕ್ಕನ ಬಳಿಯಲ್ಲಿಯೇ ಇರುತ್ತಿದ್ದನು. ಸಾಯಂಕಾಲ ತಾಯಿ ಕಾಳವ್ವೆ ಬಂದು, ಅಂಗಳದಲ್ಲಿ ಆಡುತ್ತಿರುವ ಇಲ್ಲವೆ ಒಳಗಿರುವ ತನ್ನ ಮಗನನ್ನು ನಾಗಮ್ಮನಿಗೆ ಹೇಳಿ ಕರೆದೊಯ್ಯುತ್ತಿದ್ದಳು. ಆದರೆ ಈಗ ಹತ್ತೆಂಟು ದಿವಸ ತಾಯಿ ಕರೆಯಬಂದೊಡನೆ ಪಶುಪತಿ ಅಂಗಳದಲ್ಲಿದ್ದರೂ ಒಳಗೆ ಓಡಿಹೋಗಿ ನಾಗಮ್ಮನ ಹತ್ತಿರ ನಿಲ್ಲುತ್ತಿದ್ದನು. ಕಾಳವ್ವೆ ಹಿಡಿಯಬಂದಾಗ ನಾಗಮ್ಮನ ಸುತ್ತಲೂ ಓಡಾಡುತ್ತಿದ್ದನು. ಅವನ ಈ ಲೀಲೆ ತಾಯಿಗೂ ನಾಗಮ್ಮನಿಗೂ ವಿನೋದವಾಗಿರುತ್ತಿತ್ತು. ಇಬ್ಬರೂ ನಗುತ್ತಿದ್ದರು. ಬರಬರುತ್ತ ನಿನ್ನೆ ಮೊನ್ನೆ ಅವನು ತಾಯಿಯ ಕೂಡ ಹೋಗಲಾರದೆ ಕಾಲು ಹೊಸೆದಾಡಿ ಅತ್ತಿದ್ದನು. ಮನೆಗೆ ಹೋಗಿ ಅತ್ತು ಅತ್ತು ಸುಮ್ಮನಾಗಿದ್ದನು. ತಾಯಿಗೆ ಬೇಸರವಾಗುತ್ತ ಬಂದಿತ್ತು. ಇಂದು ಆ ಬೇಸರದ ಭಾವ ಪ್ರಕಟವಾಗಿತ್ತು.

ಸಂಜೆಯ ಕಾರ್ಯಕ್ರಮದಲ್ಲಿ ಇಂದು ನಾಗಮ್ಮನ ಹಸ್ತಗಳು ಮಂದವಾಗಿ ಮುಂದುವರಿದವು. ಹೇಗೋ ಅಡುಗೆಯ ಕೆಲಸ ನೆರವೇರಿಸಿದಳು. ಬಸವಣ್ಣನು ಪೂಜಾಪ್ರಸಾದಗಳನ್ನು ಪೂರೈಸಿಕೊಂಡು, ಸಹಪಾಠಿಗಳೊಡನೆ ಓದಿಕೊಂಡು ಮಲಗುವ ಅಧ್ಯಯನಶಾಲೆಯ ಮಂಟಪಕ್ಕೆ ಹೋಗಿಬಿಟ್ಟನು. ಅವನೊಡನೆ

ಊಟಮಾಡಿದ ಶಿವಸ್ವಾಮಿಯೂ ಹೊರಗೆ ಹೋದನು. ಅಕ್ಕನಾಗಮ್ಮ ಸ್ವಲ್ಪ ಹೊತ್ತು ಸುಮ್ಮನೆ ಕುಳಿತಳು. ಹಲವು ದಿನಗಳಿಂದ ಅವಳಿಗೆ ಅರಿಯದೆ ಅವಳ ಅಂತರಂಗವು ಪರಶಿವನಲ್ಲಿ ಮೊರೆಯಿಡುತ್ತಿದ್ದ ಒಂದು ಆಸೆ, ಇಂದು ಛಕ್ಕನೆ ಪಳಂಚಿ ಮನದಲ್ಲಿ ಮೂಡಿನಿಂತಿತ್ತು. ಆಸೆ ತರವಲ್ಲವೆಂದು ಅದುಮಲೂ ಯತ್ನಿಸಿದಳು. ಆದರೆ ಅದು ಸದಾಸೆ! ಹಿಂದೆಗೆಯಲ್ಲಿಲ್ಲ. ಆಮೇಲೆ ತಾನು ಮತ್ತೆ ಸಾವಕಾಶವಾಗಿ ಸ್ನಾನಮಾಡಿ ಶಿವಪೂಜೆಗೈದು ಬಹಳ ಹೊತ್ತು ಧ್ಯಾನ ದಲ್ಲಿ ಕಳೆದಳು. ಅರ್ಚನೆಯ ಮಟ್ಟಿಗೆ ಪ್ರಸಾದ ಸೇವಿಸಿ ಮಲಗುವ ಸ್ಥಳಕ್ಕೆ ಬಂದಳು. ಮನದಾಸೆ ಮೈದುಂಬಿದಂತಾಗಿ ಮೈಯಲ್ಲಿ ಕಿರುಬೆವರು ತೋರಿತ್ತು, ಮುಖ ಮೌನವಾಗಿತ್ತು. ಶಿವಸ್ತುತಿ ಹಾಡುತ್ತ ಬೆರಳಚುಟಿಕೆ ಬಾರಿಸುತ್ತ ಶಿವ ಸ್ವಾಮಿ ಒಳಗೆ ಬಂದು ನೋಡುತ್ತಾನೆ—ಇಂದಿನ ಪರಿಯೇ ಬೇರೆಯಾಗಿ ಕಾಣಿಸಿ ತವನಿಗೆ! ಆತನು ದಿನಾಲು ರಾತ್ರಿ ಭೋಜನೋತ್ತರ ಗೋಷ್ಠಿಗಳಲ್ಲಿ ಭಾಗ ವಹಿಸಿ ಹೀಗೆ ಮನೆಗೆ ಬಂದಾಗ, ನಾಗಮ್ಮ ಪೂಜಾಪ್ರಸಾದಗಳನ್ನು ಪೂರೈಸಿ ಪಾತ್ರೆಪಡಿಗಳನ್ನು ಸರಿಪಡಿಸಿಟ್ಟು ಪಾಕಶಾಲೆಯನ್ನು ಓರಣವಾಗಿಸಿ ಎಷ್ಟೋ ಹೊತ್ತಾಗಿರುತ್ತಿತ್ತು. ಹಣತೆಯ ಬೆಳಕಿನಲ್ಲಿ ಸ್ವಲ್ಪ ಹೊತ್ತು ಗ್ರಂಥ ನೋಡುತ್ತ ಇಲ್ಲವೆ ತಂಬೂರಿಯೊಡನೆ ಸ್ತೋತ್ರಗೀತಗಳನ್ನು ಹಾಡುತ್ತ ಕುಳ್ಳಿರುತ್ತಿದ್ದಳು. ಆದರೆ ಇಂದು ಇದೇ ಪೂಜಾಗೃಹದಿಂದ ಬಂದಂತಿತ್ತು. ಅಡುಗೆಯ ಮನೆಯ ಸಾಮಾನು ಅಲ್ಲಲ್ಲಿಯೇ ಸರಿದು ಅಷ್ಟರಮಟ್ಟಿಗೆ ಸರಿಪಟ್ಟಿದ್ದವು. ಹಾಸಿದ ಹಾಸಿ ಗೆಯಮೇಲೆ ನಿಂತು ಹೊದಿಕೆಗಳನ್ನು ಜೋಡಿಸುತ್ತಿದ್ದ ನಾಗಲಾಂಬೆಯ ಮುಖದ ಮೇಲೆ ಎದುರಿನ ಗೂಡಿನಲ್ಲಿರುವ ಹಣತೆಯ ಬೆಳಕು ಚೆನ್ನಾಗಿ ಬಿದ್ದಿತ್ತು. ಮುಖ ಭಾವ ಅಂತರಂಗದಲ್ಲಿ ಮಗ್ನವಾದಂತಿತ್ತು. ಸ್ನಾನಮಾಡಿದ ತಲೆ ಆರಿರಲಿಲ್ಲ. ಹಣೆಯ ಮೇಲೆ ಭಸ್ಮತ್ರಿಪುಂಡ್ರ ನಸುನೆನೆದಂತಿದ್ದು ಸೌಮ್ಯವಾದ ಶೋಭೆ ಯನ್ನು ಸೂಸಿತ್ತು. ಅರೆದೆರೆದ ಬೊಗಸೆಗಣ್ಣು ಮೋಹಕವಾಗಿದ್ದವು. ನಸು ಬೆಮರ್ತ ಮೈ ಮಾರ್ದವಗೊಂಡು ಪತಿಯ ಪ್ರೇಮಲಾಲಸೆಯನ್ನು ಉತ್ತೇಜನ ಗೊಳಿಸುವಂತಿತ್ತು. ಸತಿಯ ಈ ನಿಲವನ್ನು ಶಿವಸ್ವಾಮಿ ಕ್ಷಣಹೊತ್ತು ನಿಂತು ನಿರೀಕ್ಷಿಸಿ ಮುದದಿಂದುಬ್ಬಿ ಕೇಳಿದನು :

"ನಾಗು ಇಂದು ನೀನು ಬೇರೆಯಾಗಿ ಕಾಣುತ್ತಿರುವೆ!"

"ಅಂದರೆ ಹೇಗೆ?" ನಾಗಮ್ಮನ ತುಟಿಯಲ್ಲಿ ತುಸು ನಗೆ ತೇಲಿತ್ತು.

"ಮುಖ ನೋಡಿದರೆ ನಿನ್ನ ಮನಸ್ಸು ದುಗುಡಗೊಂಡಂತೆಯೋ ಅಥವಾ ಯಾವದೋ ಆಲೋಚನೆಯಲ್ಲಿ ಮಗ್ನವಾದಂತೆಯೋ ತೋರುತ್ತದೆ."

"ಅಂತಹದಕ್ಕೆ ಏನು ಕಾರಣವಿದೆ ಹೇಳಿ. ನಿಮಗೆ ಗೊತ್ತಿಲ್ಲದೆ?"

"ಇಲ್ಲ. ನಿನ್ನ ಹೃದಯದಿರವನ್ನು ನೀನು ಬಚ್ಚಿಡುತ್ತೀ."

ಶಿವಸ್ವಾಮಿ ಕುಳಿತು ನುಡಿದನು,

"ಹಾಗೆ ನಾನು ಎಂದಾದರೂ ಬಚ್ಚಿಟ್ಟು ನುಡಿದಿರುವೆನೇ?"

ನಾಗಲೆಯೂ ಕುಳಿತಳು; ಮುಖ ಅರಳಿತ್ತು.

"ಎಂದೂ ಇಲ್ಲ; ಆದರೆ ಇಂದು......"

"ಇಂದೂ ಇಲ್ಲ."

"ಹಾಗಾದರೆ ಏನು ವಿಶೇಷ?" ನಗುತ್ತ ಕೇಳಿದ ಶಿವಸ್ವಾಮಿ.

"ವಿಶೇಷವೇನೂ ಇಲ್ಲ; ಅಥವಾ ವಿಶೇಷವೇ ಅನ್ನಿ! ದಿನಾಲು ನನ್ನ ಹತ್ತಿರ ಬಂದು ಆಡುತ್ತಿರುವ ಮಗು ಪಶುಪತಿ ನಾಲ್ಕು ದಿನಗಳಿಂದ ಸಂಜೆಗೆ ತಾಯಿಯ ಕೂಡೆ ಹೋಗಲಾರೆನೆಂದು ಹಟಮಾಡುತ್ತಿದ್ದನು. ಇಂದು ಕಾಳವ್ವೆ ಹೊಡೆಬಡಿದು ಒತ್ತಾಯದಿಂದ ಕರೆದೊಯ್ದಳು. ನನ್ನ ಮನಸ್ಸು ಮರುಗಿತು. ತಾಯಿಗಳು, ತಮ್ಮ ಮಮತೆಗೇ ತಮ್ಮ ಮಕ್ಕಳು ಮಾರುಹೋಗಿರಬೇಕೆಂದು ಬಯಸುವದು ಸಹಜವದೆ. ಬಸವಣ್ಣ ಮಗುವಾಗಿದ್ದ. ಈಗ ಬೆಳೆದು ದೊಡ್ಡವನಾದ. ಮತ್ತೆ ಅಂತಹ ಬೆಳಕಿನ ಬುದ್ಧಿಯ ಬಾಲಲೀಲೆಯ ಮಗು ವೊಂದನ್ನು ನಮ್ಮ ಹೊಟ್ಟೆಯಲ್ಲಿ ಕರುಣಿಸಬಾರದೇ ಎಂದು ಮನಸ್ಸು ಶಿವನಲ್ಲಿ ಮೊರೆಯಿಡುತ್ತಿತ್ತು ಇಷ್ಟೇ."

"ಅಲ್ಲ ಎಲ್ಲಾ ಬಲ್ಲವಳೆಂದು ನಿನ್ನ ಹೆಸರು. ಇದಕ್ಕೆಂದು ನೀನು ಚಿಂತೆ ಮಾಡುವದೇ?"

"ಚಿಂತೆಯೇನಿಲ್ಲ. ನಾವು ಶಿವನನ್ನು ನಂಬಿದ್ದರೆ ನಚ್ಚಿದ್ದರೆ ನಮ್ಮ ಚಿಂತೆ ಯೆಲ್ಲ ಆತನಿಗೇ ಸರಿ. ನಮ್ಮ ನಂಬಿಗೆಯಲ್ಲಿಯೇ ಕೊರತೆಯಿದೆಯೋ ಎಂಬ ಚಿಂತೆ."

"ಇದೀಗ ನಿನಗೆ ಸರಿಯಾದ ಮಾತು ನಾಗೂ."

ಎಂದು ಬೆರಳಚುಟಿಕೆ ಬಾರಿಸಿದ ಶಿವಸ್ವಾಮಿ ಬಾಯಲ್ಲಿ ನಿಲ್ಲಿಸಿದ ಶಿವಸ್ತುತಿಯನ್ನು

ಮತ್ತೆ ಹಾಡಹತ್ತಿದನು. ಆಗ ಅವರಿಬ್ಬರ ಮನವೊಂದೇ, ನಂಬಿಗೆಯೊಂದೇ! ಪರಿಶುದ್ಧ ಬಗೆ, ಪರಿಶುದ್ಧ ಭಾವ!!

* * *

ರಾತ್ರಿಯ ಮೂರು ಪ್ರಹರಗಳು ಸರಿದು ನಾಲ್ಕನೆಯದರಲ್ಲಿತ್ತು ಸಮಯ! ನಿದ್ರಾವಶದಲ್ಲಿ ನಾಗಮ್ಮ ಗಟ್ಟಿಯಾಗಿ ನುಡಿದಳು:

"ಸ್ವಾಮೀ, ಶಿವನೇ, ದೇವಾ."

ಶಿವಸ್ವಾಮಿಗೆ ಎಚ್ಚರವಾಯಿತು. ಕೇಳಿದನು:

"ಏನು ನಾಗು, ಸ್ವಪ್ನವೇ? ನಡುಗುವಿಯೇಕೆ?"

ಪೂರ್ಣಪ್ರಜ್ಞೆಗೆ ಬಂದ ನಾಗಮ್ಮ "ಹೌದು ಸ್ವಪ್ನ, ದಿವ್ಯ ಸ್ವಪ್ನ!" ಎಂದು ಎದ್ದುಕುಳಿತು ಕೈಮುಗಿದಳು.

"ಏನದು?"

"ನಾನು ಶಿವಪೂಜೆಯಲ್ಲಿದ್ದೆ. ಒಮ್ಮೆಲೇ ತೇಜಸ್ವಿಯಾದ ಜಂಗಮ ಮೂರ್ತಿ ನನ್ನ ಮುಂದೆ ಪ್ರಕಟವಾದನು. ಗಡಿಬಿಡಿಯಿಂದ ನಾನು ಲಿಂಗವನ್ನು ಸಜ್ಜೆಯಲ್ಲಿ ಮಡಗಿ ಜಂಗಮದೇವನ ಪಾದಕ್ಕೆರಗಿದೆ. ಆತ ತಲೆಯ ಮೇಲೆ ಕೈಯಿಟ್ಟು—"ನಾಗಮ್ಮ ಇದೋ ಮಹಾಪ್ರಸಾದ! ಇದನ್ನು ಸೇವಿಸು. ಇದು ಶಿವನ ಸುಜ್ಞಾನಮುಖದ ವರಪ್ರಸಾದ! ಇನ್ನು ನಿನ್ನ ಉದರದಲ್ಲಿ ಜ್ಞಾನನಿಧಿ ಚಿನ್ಮಯಾನಂದ ಕಂದನು ಉದಿಸುವನು" ಎಂದು ಹರಸಿ ಪ್ರಸಾದವನ್ನು ಕರುಣಿಸಿದನು. ನಾನದನ್ನು ಪಡೆದು ಕಣ್ಗೊತ್ತಿ ಸೇವಿಸಿ ಮತ್ತೆ ಆ ಮಹಾಪಾದಕ್ಕೆರಗಿದೆ. ಆ ಆಕಾರ ನಿರಾಕಾರವಾಗಿತ್ತು. ಅಚ್ಚರಿವಟ್ಟು 'ದೇವಾ, ಸ್ವಾಮೀ' ಎಂದು ಅತ್ತಿತ್ತ ಹುಲಿವರಿದು ನೋಡುತ್ತಿದ್ದೆನು......"

"ಸಂಸ್ಕಾರದಂತೆ ಸ್ವಪ್ನ! ನಿನ್ನ ಬಯಕೆ ಅರಿಕೆಯಾದಂತಿದೆ."

"ಶಿವನೊಲುಮೆ, ಶಿವನಾಟ! ಶಿವನ ಕೈಗೊಂಬೆ ನಾವು."

"ಎನ್ನುತ್ತ ನಾಗಮ್ಮ ಗುರುಪಾದ ಸ್ಮರಿಸಿ, ಇಷ್ಟಲಿಂಗವನ್ನು ವಂದಿಸಿ, ಪತಿಗೆ ನಮಿಸಿ ಎದ್ದಳು. ಅತ್ತ ಕೋಳಿ ಕೂಗುತ್ತಿದ್ದವು; ಅರುಣೋದಯ ಸಮೀಪಿಸಿತ್ತು.

೪ ಜ್ಞಾನಭಾನುವಿನುದಯ

ಮೂರು ತಿಂಗಳು ಕಳೆದವು. ನಾಗಮ್ಮನವರು ಬಸುರಿ ಎಂದು ಮುನಿಗಳು ಮೊದಲುಗೊಂಡು ಗುರುಕುಲದವರೆಲ್ಲರು ಅರಿತುಕೊಂಡರು. ಅವರೆಲ್ಲರಿಗೆ ಪರಮಾನಂದ! ಅವರಲ್ಲಿ ಭಾವಕರಾದವರು ಈ ಮಹಾತಾಯಿಗೆ ಪುತ್ರರತ್ನವೊಂದಾಗಬಾರದೇ ಎಂದು ಇದುವರೆಗೂ ಚಿಂತಿಸಿದವರೂ ಇದ್ದರು. ಗುರುಗಳು ಬಾಗೇವಾಡಿಗೂ ಈ ಸಮಾಚಾರ ತಿಳಿಸಿದರು. ಅಲ್ಲಿ ಆ ಮೊದಲೇ ನಾಗಮ್ಮನ ತಾಯಿ ಮಾದಲಾಂಬೆ ಶಿವಾಧೀನವಾಗಿದ್ದಳು. ಮಾದರಸು ಬಂದನು. ಬಲದೇವ ಮಂತ್ರಿ ಬಂದನು. ಏನೆಲ್ಲ ಉತ್ಸವಾದರಗಳು ನಡೆದವು. ಆ ಎಲ್ಲ ವೈಭವಾಡಂಬರಗಳು ನಾಗಲಾಂಬೆಗೆ ಬೇಕಿರಲಿಲ್ಲ. ಎಂದಿನಂತೆ ಗುರುಲಿಂಗಜಂಗಮ ಭಕ್ತಿಯಲ್ಲಿ, ಜ್ಞಾನಾರ್ಜನೆಯಲ್ಲಿ, ಬಸವಣ್ಣನ ವಿದ್ಯಾವೈಭವದಲ್ಲಿ, ಗುರುಕುಲದ ಸೇವೆಯಲ್ಲಿ ಬಯಕೆಯಿರಿಸಿ ಶ್ರಮಿಸುತ್ತಿದ್ದಳು. ಗರ್ಭಿಣಿಯು ದೇಹಾಲಸ್ಯಕ್ಕೆ ಸಾಧ್ಯವಾದಷ್ಟು ವಿಶ್ರಾಂತಿಗೆ ಆಸ್ಪದ ಕೊಟ್ಟಿರಲೇ ಇಲ್ಲ. ನವಮಾಸ ತುಂಬಿದಂತೆ ಅಕ್ಕನಾಗಮ್ಮನ ಮೈಕಾಂತಿಯಲ್ಲಿ ಮುಖಭಾವದಲ್ಲಿ ಒಂದು ಅಪೂರ್ವವಾದ ತೇಜಸ್ಸು ತೋರುತ್ತಿತ್ತು. ಭಕ್ತಿಜ್ಞಾನಯುಕ್ತಳಾದ ನಾಗಮ್ಮ ತಾಯಿಯ ಉದರದಿಂದ ಬಸವಣ್ಣನಂತಹ ಇನ್ನೊಂದು ದೇವಮಾನವ ರತ್ನವೇ ಉದಿಸುವದೆಂದು ಜಾತವೇದ ಮುನಿಗಳು ಊಹಿಸಿದ್ದರು.

ಶಕೆ ೧೦೬೩ (ಕ್ರಿ. ಪ. ೧೧೪೧) ಕಾರ್ತಿಕ ಮಾಸದಲ್ಲಿ ನಾಗಲಾಂಬೆಯು ಶಿವಪ್ರಸಾದದ ಮೂರ್ತಸ್ವರೂಪವೆನಿಸುವ, ವೀರಶೈವಾಂಬುಧಿಗೆ ಚಂದ್ರನಂತಿರುವ ಮಗನನ್ನು ಹೆತ್ತಳು. ಬಸವಣ್ಣನ ನಡೆಯಿಂದ ಬಸವನಾಮವು ಸಂತೋಷಕರವಾದುದರ ಪರಿಣಾಮವಾಗಿ ಗುರುಗಳು ಮಗುವಿಗೆ 'ಚೆನ್ನಬಸವಣ್ಣ' ಎಂದು ಹೆಸರಿಟ್ಟರು.

ಚೆನ್ನಬಸವಣ್ಣ ಕೈಕಾಲು ಬಿಚ್ಚಿ ಆಡುತ್ತಿರುವಾಗ ಆಶ್ರಮದಲ್ಲಿಯ ನಾಗಮ್ಮನ ಸಲುಗೆಯ ಮಕ್ಕಳು ಬಂದು ಅವನನ್ನು ಮುತ್ತಿಬಿಡುತ್ತಿದ್ದರು; ಎತ್ತಿಕೊಳ್ಳುವದಕ್ಕಾಗಿ ನಾನು-ತಾನು ಎಂದು ಕಚ್ಚಾಡುತ್ತಿದ್ದರು. ವಿಶ್ವದ ಸಾರ

ವನ್ನೇ ಹೀರುವಂತೆ ತೇಜಃಪುಂಜವಾಗಿದ್ದ ತನ್ನ ನೇತ್ರಗಳನ್ನು ಸುತ್ತಲೂ ಹೊರಳಿಸಿ ಚೆನ್ನಬಸವಣ್ಣ ಆ ಮಕ್ಕಳನ್ನು ಮೋದಗೊಳಿಸುತ್ತಿದ್ದನು. ಆ ಬಾಲಕರ ಮುತ್ತಿಗೆ ಅವರ ಕಚ್ಚಾಟ ಇವುಗಳನ್ನು ತಡೆಯುವದು ಅಕ್ಕನಿಗೆ ಜಡವಾಗುತ್ತಿತ್ತು.

ಮಗು ಆರು ತಿಂಗಳದವನಾದಾಗ ನಾಗಲಾಂಬೆಯು ಇಚ್ಛೆಯಂತೆ ಮಾದಿರಾಜನು ಮೊಮ್ಮಗನನ್ನು ನೋಡಬಂದನು. ಆಗ ಜಾತವೇದಿ ಗುರುಗಳು ಬಸವಣ್ಣನ ಪಾಂಡಿತ್ಯವನ್ನೂ ಭಕ್ತಿಯುಕ್ತವಾದ ಅವನ ಸದ್ವರ್ತನೆಯನ್ನೂ ನಿರರ್ಗಳವಾಗಿ ವರ್ಣಿಸಿದರು. ಅವನ ಕಾರ್ಯಕ್ಷೇತ್ರ ಬಹು ವಿಶಾಲವಾದುದಾಗುವದೆಂದು ಉದ್ಗಾರ ತೆಗೆದರು. ಮಾದರಸನು ತನ್ನ ಪೀಠದ ಉತ್ತರಾಧಿಕಾರಿಯಾದನೆಂಬ ಸಂಕುಚಿತ ಭಾವನೆಯನ್ನು ಪೂರ್ಣವಾಗಿ ಕಿತ್ತೊಗೆದನು. ಆನಂದಚಿತ್ತನಾದ ಆತನು ಮಕ್ಕಳಿಗೂ ಮೊಮ್ಮಗನಿಗೂ ಅವಶ್ಯವಿದ್ದ ಸೌಕರ್ಯಗಳ ಏರ್ಪಾಡು ಮಾಡಿದನು. ಬಾಗೇವಾಡಿಗೂ ಕರೆಯಿಸಿಕೊಂಡು ಪ್ರೇಮದಿಂದ ಉಪಚರಿಸಿ ಕಳಿಸಿಕೊಟ್ಟನು.

ಬಲದೇವ ಮಂತ್ರಿ ಆಗೊಮ್ಮೆ ಸಂಗಮಕ್ಕೆ ಬಂದಿದ್ದನು. ಚೆನ್ನಬಸವಣ್ಣನ ದಿವ್ಯಕಳೆಯನ್ನೂ ಅಮೃತಕಲಶದಂತಹ ತಲೆ-ಹಣೆಗಳನ್ನೂ ಹೊಳೆಯುವ ಕಣ್ಣುಗಳನ್ನೂ ನೋಡಿ ಬೆರಗಾದನು. ಬಸವಣ್ಣನ ಅಕ್ಕನ ಕೀರ್ತಿಯೂ ಪ್ರಭಾವವೂ ಮತ್ತೆಮತ್ತೆ ಹೆಚ್ಚುತ್ತಿರುವದನ್ನೇ ಅರಿತುಕೊಂಡು ಆನಂದಪರವಶನಾದನು. ಇವರಿಗೆ ಸೋದರಮಾವನೆನಿಸಿಕೊಳ್ಳಲು ಅದೆಷ್ಟು ಅಭಿಮಾನ ಅವನಿಗೆ! ಅವನು ಕೂಡ ಲಿಂಗಭಕ್ತಿಯ ಸ್ಫೂರ್ತಿಗೊಂಡು ತನ್ನ ಮಗಳು ಸಹಿತ ತನ್ನ ಬಳಗದೊಡನೆ ಜಾತವೇದಿ ಗುರುಗಳ ಕರುಣೆಗೆ ಪಾತ್ರನಾಗಿ ಲಿಂಗಧಾರಣಮಾಡಿಕೊಂಡು ಲಿಂಗವಂತನಾಗಿ ಮಂಗಳವೇಡೆಗೆ ಮರಳಿದನು.

೫ ಹನ್ನೆರಡು ವರ್ಷಗಳ ಬಳಿಕ

ತನ್ನ ಇಪ್ಪತ್ತನೆಯ ವಯಸ್ಸಿಗೆ ಬಸವಣ್ಣ ಗುರುಕುಲದ ಅಧ್ಯಯನವನ್ನು ಅತ್ಯುತ್ತಮವಾದ ಕ್ರಮದಲ್ಲಿ ಪೂರೈಸಿದನು. ಆದರೂ ಕುಲಪತಿಗಳ ಆಸೆಯಂತೆ ಅವರ ಆಪ್ತಶಿಷ್ಯನೂ ವಿಶೇಷಸಾಧಕನೂ ಆಗಿ ಆಶ್ರಮದಲ್ಲಯೇ ಉಳಿದನು. ಮುಂದಿನ ನಾಲ್ಕಾರು ವರ್ಷಗಳಲ್ಲಿ ಅಲ್ಲಲ್ಲಿ ಸಂಚರಿಸಿ, ಕೆಲವು ಸಲ ಏಕಾಂತ ವಾಸವನ್ನು ಕೈಕೊಂಡು ಶಾಸ್ತ್ರಾರ್ಥಗಳನ್ನು ಅನುಭವದ ಒರೆಗೆ ಹಚ್ಚಿ ನೋಡಿದನು. ಹೊಂದಿದವುಗಳನ್ನು ಅಳವಡಿಸಿಕೊಂಡನು.

ಬಸವಣ್ಣನ ಮನೆಯಲ್ಲಿಯೂ ಕೆಲವು ಬದಲಾವಣೆಗಳಾಗಿದ್ದವು. ಚೆನ್ನಬಸವಣ್ಣನು ಶೈಶವವನ್ನು ಕಳೆದು ಬಾಲ್ಯದ ಬೆಳವಣಿಗೆಯಲ್ಲಿದ್ದನು. ಬಸವಣ್ಣನಿಲ್ಲದಾಗ ಅಕ್ಕನು ತನ್ನ ಸಾಧನೆಯೊಡನೆ ಚೆನ್ನಬಸವಣ್ಣನ ಲಾಲನೆ-ಪಾಲನೆಯಲ್ಲಿಯೂ ಮುಂದಿನ ಅವನ ಧಾರ್ಮಿಕ ಜ್ಞಾನಮಂದಿರದ ತಳಹದಿಯನ್ನು ನಿರ್ಮಿಸುವದರಲ್ಲಿಯೂ ಕಾಲವನ್ನು ಕಳೆಯುತ್ತಿದ್ದಳು. ಶಿವಸ್ವಾಮಿಯ ಧಾರ್ಮಿಕ ಹಂಬಲ ಬೇರೆ ಹಾದಿಯನ್ನು ಹಿಡಿದಿದ್ದಿತು. ರಾತ್ರಿಯ ಭೋಜನೋತ್ತರ ಗೋಷ್ಠಿಗಳಲ್ಲಿ ಅವನೊಡನೆ ಸೇರುವ ಸಾಮಾನ್ಯ ಭಕ್ತರೆಲ್ಲರು 'ಎಲ್ಲಿ ಸಿದ್ಧರು ? ಎಲ್ಲಿ ಶಿವಯೋಗಿಗಳು ? ಅವರ ಮಹಿಮೆ ಎಂತೆಂತು ? ಯಾವ ಕ್ಷೇತ್ರದಲ್ಲಿ ಎಂತಹ ಮಹತ್ವವಿದೆ ?' ಎಂಬುದನ್ನೇ ಚರ್ಚಿಸುತ್ತಿದ್ದರು. ಅವರೆಲ್ಲ ಕೆಲವು ದಿವಸ ಅಲ್ಲಲ್ಲಿ ಹೋಗಿಯೂ ಬರುತ್ತಿದ್ದರು. ಶಿವಸ್ವಾಮಿಯ ತಲೆಗೆ ಈ ಗೀಳು ಹೆಚ್ಚಾಗಿ ಹತ್ತಿತು. ಆತನು ಒಮ್ಮೆ ಅಂಥ ಸಾಧಕರ ಸಿದ್ಧರ ಯೋಗಿಗಳ ದರ್ಶನದ ಹಂಬಲದಿಂದ ಕಾಶಿ ಕೇದಾರಗಳ ಕಡೆಗೆ ಹೋದವನು ತಿರುಗಿ ಬರಲೇ ಇಲ್ಲ. ಇದರಿಂದ ಅಕ್ಕನು ಬಹಳವಾಗಿ ಅಸಮಾಧಾನಗೊಂಡಳು. ಆದರೂ ಅದನ್ನು ಶಿವಭಕ್ತಿಯಿಂದ ಸಾಧಿಸಿದ ಸಂಯಮದ ನೆರವಿನಲ್ಲಿ ಮನಸ್ಸಿನಿಂದ ಮಾಣಿಸಿದಳು. ನಾಗಲಾಂಬೆಯ ಸಂಸಾರವೆಂಬುದೇ ಬೇರೆ ಇರಲಿಲ್ಲ. ಆಕೆಯ ಹಿತಾಸಕ್ತಿಯೆಲ್ಲ ಬಸವಣ್ಣನಲ್ಲಿಯೇ ಕೇಂದ್ರೀಕೃತವಾಗಿದ್ದಿತು. ಅವನ ಪ್ರತಿಯೊಂದು ಚಟುವಟಿಕೆಯ ಸಾಧನೆಗೂ ಆಕೆಯು ಪೂರಕಳೂ ಪೋಷಕಳೂ

ಮಾರ್ಗದರ್ಶಕಳೂ ಆಗಿದ್ದಳು. ಲೋಕಮಾನ್ಯನಾಗಲಿರುವ ಬಸವಣ್ಣನ ಸೋದರಳಿಯ ಚೆನ್ನಬಸವಣ್ಣ! ಚೆನ್ನಬಸವಣ್ಣನ ಭವಿಷ್ಯತ್ತಿನ ಚಿಂತೆಯೋ ಆಕೆಗಿರಲಿಲ್ಲ. ಅಕ್ಕನ-ಬಸವನ ಅನ್ಯೋನ್ಯ ಗೌರವಾದರಗಳು ದೈವಿಕವಾಗಿದ್ದವು. ಅವರಿಬ್ಬರು ತಮ್ಮ ಜೀವನದುದ್ದಕ್ಕೂ ಅಕ್ಕ-ತಮ್ಮ ಆಗಿ, ತಾಯಿ-ಮಗ ಆಗಿ, ಪರಸ್ಪರ ಗುರುಶಿಷ್ಯರಾಗಿ ನಡೆದುದು ಸಾಧಾರಣವಾದ ಸಂಗತಿಯಲ್ಲ!

ಬಸವಣ್ಣ ಪ್ರತಿಯೊಂದು ಸಂಚಾರದಿಂದ ಮರಳಿ ಬಂದಬಳಿಕ ಅಕ್ಕನೊಡನೆ ಗುರುಸನ್ನಿಧಿಯ ಸೇರಿ, ಪ್ರವಾಸದ ವಿಸ್ತೃತ ವರದಿಯನ್ನು ಒಪ್ಪಿಸುವದು ರೂಢಿಯಾಗಿತ್ತು. ಆ ವಿವರಣೆಯಿಂದ ಅವನ ಮನೋಭಾವನೆಗಳು ಆಗ ವ್ಯಕ್ತವಾಗುತ್ತಿದ್ದವು. ಒಮ್ಮೆ ಕುಲಪತಿಗಳು :

"ಬಸವಣ್ಣ ಲೋಕೋದ್ಧಾರವೇ ನಿನ್ನ ಮಣಿಹವಯ್ಯ! ಅದರ ಹೊಣೆಗೆ ನಿನ್ನ ಬುದ್ಧಿ ಮನಸ್ಸುಗಳು ಸಿದ್ಧವಾಗುತ್ತಲಿವೆ." ಎಂದು ಎದೆದುಂಬಿ ನುಡಿದರು.

"ಗುರುದೇವಾ ಅಂತಹ ಧುರೀಣನಾದೇನೆಯೋ? ಕೂಡಲಸಂಗನು ಮಾಡಿಸಿದಂತೆ ಮಾಡುವೆನು; ಆಡಿಸಿದಂತೆ ಆಡುವೆನು. ನಾನೇನ ಅರಿವೆನು? ಈ ಚರಣಗಳೇ ಸರ್ವಜ್ಞಾನ ಸರ್ವಬಲ!" ಎಂದು ಬಸವಣ್ಣ ನಮಸ್ಕರಿಸಿದನು.

ನಾಗಮ್ಮನ ಕಣ್ಣಲ್ಲಿ ಆನಂದದಿಂದ ನೀರು ತುಂಬಿದ್ದವು. ಆಗ ಬಸವಣ್ಣನ ಹಿಂದೆ ತಾನೂ ನಮಸ್ಕರಿಸಿದಾಗ ಆ ನೀರಿನಿಂದ ಗುರುಪಾದಕ್ಕೆ ಅಭಿಷೇಕವಾಗಿತ್ತು.

ಇನ್ನು ನೆರೆಹೊರೆಯ ಪ್ರದೇಶದ ಸಂಚಾರದಲ್ಲಿ ತನ್ನನ್ನು ಗೌರವಿಸಲು ಕೂಡಿದ ಜನರಿಗೆ ಬಸವಣ್ಣನು ತನ್ನ ದಿವ್ಯವಾಣಿಯಿಂದ ನಡೆನುಡಿಗಳ ರೀತಿಯನ್ನೂ ಭಕ್ತಿಯನ್ನೂ ಉಪದೇಶಿಸುತ್ತಿದ್ದನು. ಹೀಗೆ ಅವನು ಅಲ್ಲಲ್ಲಿ ತನ್ನ ಪ್ರಭಾವವನ್ನು ಬೀರಿ ಬಂದ ವಾರ್ತೆಯು ಅವನಿಗಿಂತ ಮೊದಲೇ ಆಶ್ರಮವನ್ನು ತಲುಪುತ್ತಿದ್ದಿತು. ಕುಲಪತಿಗಳು "ನಾಗಮ್ಮಾ, ನಿನ್ನ ತಮ್ಮ ಸಣ್ಣ ವ್ಯಕ್ತಿಯಲ್ಲವಮ್ಮಾ, ಶಿವನ ಮಹಿಮೆ ಮೂರ್ತಿವೆತ್ತಂತಿದ್ದಾನೆ." ಎನ್ನುವರು. ಸಾತ್ವಿಕವಾದ ಹಿಗ್ಗು ಹೆಮ್ಮೆಗಳು ಉಂಟಾಗುತ್ತಿದ್ದರೂ ನಾಗಲಾಂಬೆ 'ಗುರುವಿನ ಕೃಪೆ' ಎಂದು ವಿನಯವನ್ನೇ ಪ್ರಕಟಿಸುತ್ತಿದ್ದಳು. ಐದಾರು ವರ್ಷ ಉರುಳಿದವು.

೬ ತಮ್ಮನ ವಧು

ಪೆರ್ಮಾಡಿ ರಾಜನ ಮರಣದ (ಕ್ರಿ. ಶ. ೧೧೩೮ ರ) ನಂತರ ರಾಜಪುತ್ರ ಬಿಜ್ಜಳನು ಪ್ರೌಢನಾಗುವ ವರೆಗೆ ಸಿದ್ದಣ್ಣ ಮಂತ್ರಿಯು ರಾಜ್ಯವ್ಯವಸ್ಥೆಯನ್ನು ನೋಡಿಕೊಂಡನು. ಕ್ರಿ. ಶ. ೧೧೪೬ ರಲ್ಲಿ ಪತ್ನಿ ಪದ್ಮಗಂಧಿಯಮ್ಮನನ್ನೂ ಚಿಕ್ಕ ಮಗಳು ನೀಲಲೋಚನೆಯನ್ನೂ ಬಿಟ್ಟು ಆತನೂ ಗತಿಸಿಹೋದನು. ಬಿಜ್ಜಳನು ಆ ತಾಯಿಯನ್ನೂ ಮಗಳನ್ನೂ ತನ್ನ ತಾಯಿ-ತಂಗಿಯರಂತೆ ಅರಮನೆಯಲ್ಲಿ ಜೋಪಾನ ಮಾಡಿದನು. ಪದ್ಮಗಂಧಿಯಮ್ಮನೂ ಬೇಗನೆ ಕಣ್ಣುಮುಚ್ಚಿದ್ದರಿಂದ ನೀಲಲೋಚನೆ ಬಿಜ್ಜಳನ ಸಾಕುತಂಗಿಯೇ ಆಗಿ ರಾಜಕುಮಾರಿಯಂತೆ ಬೆಳೆದಳು.

ಬಿಜ್ಜಳನು ಮಂಗಳವಾಡದಿಂದ ಕಲ್ಯಾಣಕ್ಕೆ ಬಂದು ತೈಲಪದೇವನಿಂದ ಸಾಮ್ರಾಜ್ಯದ ಆಡಳಿತವನ್ನು ವಹಿಸಿಕೊಂಡ ಬಳಿಕ ಅವನಿಗೆ ಬಲದೇವನು ಮುಖ್ಯಮಂತ್ರಿಯಾಗಿದ್ದನು. ಬಲದೇವನು ಬುದ್ಧಿಗುಣಗಳಿಂದ ಮಾನ್ಯನು. ಅಧಿಕಾರ ಶ್ರೀಮಂತಿಕೆಗಳಿಂದ ಗೌರವಯುತನು. ಅವನಿಗೆ ಗಂಡುಮಕ್ಕಳಿರಲಿಲ್ಲ. ಗಂಗಾಂಬಿಕೆಯೊಬ್ಬಳೇ ಮಗಳು. ಗಂಗಾಂಬಿಕೆ ಸರಳ ಸ್ವಭಾವದ ಮುಗ್ಧೆ. ಚೆಲುವೆ. ಗುರುದೇವರಲ್ಲಿ ಭಕ್ತಿಸಂಪನ್ನಳು; ಪ್ರಸನ್ನಚಿತ್ತಳು. ಆಕೆಯು ತನ್ನ ದೊಡ್ಡಪ್ಪನ ಮಗಳೂ ಬಿಜ್ಜಳನ ಸಾಕುತಂಗಿಯೂ ಆದ ನೀಲಲೋಚನೆಯ ನಚ್ಚಿನ ಗೆಳತಿಯಾಗಿದ್ದಳು. ತುಸು ಹೆಚ್ಚುಕಡಿಮೆ ಇಬ್ಬರೂ ಸಮವಯಸ್ಕರು. ರೂಪಗುಣಗಳಲ್ಲಿ ನೀಲಲೋಚನೆಯೂ ಕಡಿಮೆಯಿರಲಿಲ್ಲ. ಅರಮನೆಗೆ ತಕ್ಕಂತೆ ಸಂಗೀತಾದಿ ಕಲಾವಂತೆಯೂ ವ್ಯವಹಾರನಿಪುಣೆಯೂ ಆಗಿದ್ದಳು. ಗಂಗಾಂಬಿಕೆಯ ಲಿಂಗವಂತಿಕೆಯ ಆಚರಣೆಯನ್ನು ಕುತೂಹಲದಿಂದ ನಿರೀಕ್ಷಿಸುತ್ತಿದ್ದಳು. ಆಕೆಯನ್ನು ಮದುವೆಯಾಗಲು ಶೌರ್ಯಗುಣಸಂಪನ್ನನಾದ ಸಾಮಂತ ಪುತ್ರನಾದರೂ ಬೇಕೆಂದು ಬಿಜ್ಜಳನು ಆಲೋಚಿಸುತ್ತಿದ್ದನು.

ಪ್ರೌಢಳಾದ ಗಂಗಾಂಬಿಕೆಯ ಮದುವೆಯ ವಿಚಾರ ಸುಳಿದಾಗ ಬಲದೇವನ ಒಳಗಣ್ಣಿ ಮುಂದೆ ಬಸವೇಶ ಬಂದು ನಿಲ್ಲುತ್ತಿದ್ದನು. ಈಗ ತಾವೂ ಲಿಂಗಾಂಗಿಗಳೇ ಆದುದು ಅನುಕೂಲವಾಗಿತ್ತು. ಈ ಬಗೆಗೆ ಅವನು ಮಾದಿರಾಜನಿಗೆ

ಪತ್ರ ಬರೆಯಲು, ಮಾದಿರಾಜನು 'ಈ ವಿಚಾರದಲ್ಲಿ ಅವನ ಅಕ್ಕನನ್ನೂ ಕುಲ ಪತಿಗಳನ್ನೂ ಕಂಡು ಕೇಳಬೇಕು' ಎಂದು ಉತ್ತರಿಸಿ ತಾನು ಬದಿಗಾದನು. ಬಲ ದೇವನು ವಾಡಿಕೆಯಂತೆ ಸಂಗಮಕ್ಕೆ ಬರುವ ನೆವದಿಂದ ಗಂಗಾಂಬೆಯೊಡನೆ ಅಲ್ಲಿಗೆ ಬಂದನು. ಬಿಜ್ಜಳನ ಅನುಮತಿಯಿಂದ ಗಂಗಾಂಬೆ ತನ್ನ ಗೆಳತಿ ನೀಲ ಲೋಚನೆಯನ್ನೂ ಸಂಗಡ ಕರೆದುಕೊಂಡು ಬಂದಿದ್ದಳು.

ಬಲದೇವರಸು ತನ್ನ ಪರಿವಾರದೊಡನೆ ಗುರುಕುಲದ ಆವಾರದಲ್ಲಿ ಬೀಡಾರ ಮಾಡಿ ಮೂರು ದಿವಸವಾಗಿತ್ತು ಕುಮಾರಿಯರೊಡನೆ ಅವನ ಪೂಜಾ ಪ್ರಸಾದಗಳು ನಾಗಮ್ಮನ ಕುಟೀರದಲ್ಲಿ ನೆರವೇರುತ್ತಿದ್ದವು. ಗಂಗಾಂಬೆ-ನೀಲಾಂ ಬೆಯರು ಬಂದುದು ನಾಗಲಾಂಬೆಗೆ ಬಲು ಹಿಗ್ಗು. ಅವರು ಮನೆಯವರೇ ಆಗಿದ್ದರು. ಶ್ರೀಮಂತಪುತ್ರಿಯರಾದರೂ ಆ ಧನಮದ ಅವರಿಗಿರಲಿಲ್ಲ. ಚಿಕ್ಕಮ್ಮ ನಾಗಮ್ಮನ ಸರಳ ಸಾದಾ ಉಪಚಾರದಿಂದ ಸಂತಸಗೊಂಡಿದ್ದರು. ಸರಸವಾಣಿಯ ಬಾಲಕ ಚೆನ್ನಬಸವಣ್ಣನು ಅಷ್ಟರಲ್ಲಿಯೇ ಅಕ್ಕಂದಿರೊಡನೆ ಸಲುಗೆ ಬೆಳಸಿಕೊಂಡಿದ್ದನು.

ಬಲದೇವರಸು ಗುರುಗಳ ಹತ್ತಿರ ನಾಗಮ್ಮನನ್ನು ಬರಮಾಡಿಕೊಂಡು ತನ್ನ ಇಚ್ಛೆಯನ್ನು ಪ್ರಕಟಿಸಿದನು. ಅದನ್ನು ನೆರವೇರಿಸಿಕೊಡಬೇಕೆಂದು ಇಬ್ಬ ರಿಗೂ ಬಿನ್ನವಿಸಿದನು. ಮಾದರಸನಿಂದ ಬಂದ ಉತ್ತರದ ಪತ್ರವನ್ನು ತೋರಿ ಸಿದನು. ಗುರುಗಳೂ ಹಾಗೆಯೇ ಅಕ್ಕನೂ ಸ್ವಲ್ಪ ಹೊತ್ತು ಆಲೋಚಿಸಿ ತಮ್ಮ ಅನುಮೋದನೆಯನ್ನು ಸೂಚಿಸಿದರು. ಇನ್ನು ಬಸವಣ್ಣನ ಮತವೇನು ? ಅಕ್ಕನು ಮನೆಗೆ ಬಂದು ಅವನಿಗೆ ಈ ವಿಷಯವನ್ನು ತಿಳಿಸಿದಳು. ಆಗಲೇ ಅವನಿಂದ ಉತ್ತರವನ್ನು ಬಯಸಲಿಲ್ಲ. ಗುರುಸನ್ನಿಧಿಯಲ್ಲಿ ಅದನ್ನು ಪಡೆಯಬೇಕೆಂದು ಇಚ್ಛೆ ಅಕ್ಕನಿಗೆ. ಬಲದೇವ ಮಂತ್ರಿಯ ಆಗಮನದ ಉದ್ದೇಶ ಅಷ್ಟರಲ್ಲಿಯೇ ಆಶ್ರಮದಲ್ಲೆಲ್ಲ ತಿಳಿದುಬಿಟ್ಟಿತು.

ಬಸವಣ್ಣ ಮನೆಯಲ್ಲಿ ಮಾವನ ಮುಂದೆ ಕುಳಿತು ಮಾತಾಡುವದು ನಿಂತು ಹೋಯಿತು. ಆತನು ವಿಚಾರಮಗ್ನನಾದನು. ಜಗದ ಜೀವಿಗಳನ್ನು ಬಂಧಿಸಿ ಕಾಡುವ ಮಾಯೆಯ ಆಟ ಸಂಸಾರ! ಅದು ತನಗೆ ಸಲ್ಲದೋ ಸಲ್ಲು ವದೋ ಎಂದು ಮನಸ್ಸು ಇನ್ನೂ ಚಿಂತಿಸುತ್ತಿರುವಾಗ ಅದು ಕೊರಳಿಗೇ ಬೀಳ ಬರುತ್ತಿರುವದನ್ನು ಕಂಡು ಬೇಗುದಿಗೊಂಡಿದ್ದನು. 'ಸಂಸಾರಸಾಗರವು ಉರ

ದುದ್ದವೋ ಕೊರಳುದ್ದವೋ ? ಶಿರದುದ್ದವಾದಬಳಿಕ ಏನ ಹೇಳುವೆನಯ್ಯಾ ?' ಎಂದು ಚಿಂತಿಸುತ್ತಿದ್ದನು. ತನ್ನ ಉದಾತ್ತ ಧ್ಯೇಯಗಳಿಗೆ ಗೃಹಸ್ಥಜೀವನವು ಸಾಧಕವೋ ಬಾಧಕವೋ ಎಂದು ಆಲೋಚಿಸುತ್ತ ನದೀತೀರದಲ್ಲಿ ಅಲೆಯುತ್ತಿದ್ದನು. ಹೀಗಿರುವಾಗ ಗುರುಗಳು ಅವನನ್ನು ಕರೆಯಿಸಿಕೊಂಡರು. ಗುರುಗಳ ಹತ್ತಿರ ಅಕ್ಕನಾಗಮ್ಮ ಬಲದೇವರಸು ಇದ್ದರು. ಬಸವಣ್ಣ ತಮ್ಮ ಪಾದಕ್ಕೆರಗಿ ಮೇಲೇಳುವಾಗ ಗುರುಮುಖದಲ್ಲಿ ನಗೆ ನುಸುಳಿತ್ತು. ಅಕ್ಕನ ಕಣ್ಣುಗಳಲ್ಲಿ ಆನಂದದ ಬೆಳಕು ! ಮಾವನ ಮುಖದಲ್ಲಿ ಆತುರದ ಭಾವ ! ಈ ಜಾಲದಲ್ಲಿ ಸಿಲುಕಿ ಬಸವಣ್ಣ ತಲೆತಗ್ಗಿಸಿ ನಿಂತನು. ಗುರುಗಳು ಮಾತನಾಡಿದರು :

"ಕುಳಿತುಕೊಳ್ಳು ಬಸವಣ್ಣ, ನೀನಿನ್ನು ಮದುವೆಯಾಗಿ ನಿನ್ನ ಧ್ಯೇಯವಾದ ಲೋಕಕಲ್ಯಾಣದ ಕಾರ್ಯಭಾರವನ್ನು ನಿರ್ವಹಿಸಬೇಕು."

"ಮದುವೆಗೂ ಲೋಕಸೇವೆಗೂ ಸಂಬಂಧವಿದೆಯೇ ಗುರುದೇವಾ ? ಧ್ಯೇಯಸಾಧನೆಗೆ ಅದು ಬಾಧಕವೇ ಆದೀತು !"

"ಆಗದು. ಯಾಕಾಗಬೇಕು ? ನೀ ಹೇಳು ನಾಗಮ್ಮ ! ನಿನ್ನ ಅಭಿಪ್ರಾಯವೇನು ?"

"ತಮ್ಮ ಅಭಿಮತವೇ ನನ್ನ ಅಭಿಪ್ರಾಯ," ನಾಗಮ್ಮ ಹೇಳಿದಳು.

ಕ್ಷಣಹೊತ್ತಿನ ನಂತರ ಬಸವಣ್ಣ ಮೆಲ್ಲನೆ ತಲೆಯೆತ್ತಿ ನುಡಿದನು :

"ಗುರುವಚನಕ್ಕೆ ನಾನು ಬದ್ಧನು. ಅದು ಸಂಸಾರಬದ್ಧನನ್ನಾಗಿ ಮಾಡುತ್ತಿದ್ದರೆ ನಾನು ನಿರುಪಾಯನಾಗುವೆನು."

"ಸಂಸಾರ ಮಾಡುವವರು ಸಂಸಾರದಿಂದ ಬದ್ಧರಾಗಬೇಕಾಗಿಲ್ಲ. ಸಂಸಾರವು, ಬದ್ಧರಾಗದ ಸಂಸಾರಿಗಳ ಸರ್ವೋನ್ನತಿಗೆ ಸಾಧನವಾಗುವದು. ಅಲ್ಲವೇನು ತಾಯೀ ?"

ಮತ್ತೆ ನಾಗಮ್ಮನತ್ತ ಆದರದಿಂದ ನೋಡಿ ಕೇಳಿದರು ಗುರುಗಳು. ತಮ್ಮ ಪ್ರಯತ್ನಕ್ಕೆ ನಾಗಮ್ಮನ ಸಹಾಯ ಅವಶ್ಯವಿತ್ತು ಗುರುಗಳಿಗೆ. ನಾಗಕ್ಕ ಹೇಳಿದಳು :

"ಹೌದು ಗುರುದೇವಾ, ಪ್ರಪಂಚವೆಲ್ಲ ಪರಶಿವನ ಪ್ರಸಾದ. ಸಂಸಾರವನ್ನು ಶಿವನ ಪ್ರಸಾದವೆಂದು ಭಾವಿಸುವದಲ್ಲದೆ ತ್ಯಜಿಸಲಿಕ್ಕಾಗದು."

"ಒಳ್ಳೆಯ ಮಾತು, ಇದನ್ನು ಬಸವಣ್ಣನೂ ಬಲ್ಲನು. ಬಸವಣ್ಣಾ, ಕೇಳು, ನೀನು ಮಾನವ ಕುಲೋದ್ಧಾರವನ್ನು ಬಯಸುತ್ತಿರುವೆ. ಮಾನವರೆಲ್ಲ ಸಂಸಾರಿಗಳೇ. ಸಂಸಾರದಲ್ಲಿದ್ದು ಸದ್ಗತಿಯನ್ನು ಸಾಧಿಸಬೇಕೆಂಬುದನ್ನು ಸನ್ಯಾಸಿಗಳು ಹೇಳಿದರೆ ಪರಿಣಮಿಸೀತೇ ಅದು ? ನುಡಿಗಳಿಂದ ಮಾತ್ರ ಕೆಲಸವಾಗದು. ನುಡಿಯಂತೆ ನಡೆಯಬೇಕಷ್ಟೇ. ಸಂಸಾರಿಯಾಗಿ ನೀನು, ಆದರ್ಶವಾಗಿ ಜೀವಿಸಿ ಸಂಸಾರಿಗಳನ್ನು ಮೇಲಕ್ಕೆತ್ತಬಲ್ಲೆ. ನಿನ್ನ ಪುಣ್ಯದ ಅಕ್ಕನೂ ತಾಯಿಯೂ ಆಗಿ ನಾಗಮ್ಮನಿದ್ದಾಳೆ. ಹಾಗಯೇ ಪುಣ್ಯವಂತೆಯಾದ ಮಡದಿಯೂ ಇರಲಿ. ನಿನ್ನ ಕಾರ್ಯಗಳಿಗೆ ಕಲೆಯೂ ಬಲವೂ ಉಂಟಾಗುವವು."

"ಗುರುವಚನ ಹೇಗೋ ಹಾಗೆ ಆಗಲಿ." ಬಸವಣ್ಣ ಮೆಲ್ಲನೆ ನುಡಿದನು.

"ಇದೀಗ ಬಹಳ ಸಂತೋಷ. ಅಕ್ಕ ನಿನ್ನ ತಮ್ಮನಿಗೆ ವಧು ಯಾರಮ್ಮ?"

—ನಗುತ್ತ ಕೇಳಿದರು ಗುರುಗಳು. ಅಕ್ಕನ ಘನತೆ ಕ್ಷಣಕ್ಷಣಕ್ಕೂ ಗುರುಗಳ ಅಂತರಂಗದಲ್ಲಿ ತಲೆಯೆತ್ತುತ್ತಿತ್ತು.

"ಅದನ್ನೆಲ್ಲ ನಾನೇಕೆ ಹೇಳಬೇಕು ಗುರುದೇವಾ ? ಈ ಪಾದಕ್ಕೆ ಎಲ್ಲವೂ ಅರಿಕೆಯಾದುದೇ ಇದೆ." ಎಂದು ಅಕ್ಕ ನುಡಿದಳು.

"ಸರಿ. ಬಸವಣ್ಣಾ, ಘನವಂತರಾದ ನಿಮ್ಮ ಮಾವಂದಿರು ನಿನಗೊಲಿದು ಬಂದಿದ್ದಾರೆ. ತಮ್ಮ ಮಗಳನ್ನು ನಿನಗೆ ಧಾರೆಯೆರೆಯಲು ಬಯಸಿದ್ದಾರೆ. ಗಂಗಾಂಬೆಯನ್ನೂ ನೀನು ಬಲ್ಲೆ. ಈ ಸಂಬಂಧಕ್ಕೆ ಸಂತೋಷಿಸುವ ಆತುರ ನಮಗೆ......"

ಎನ್ನುತ್ತ ನಸುನಗೆಯಲ್ಲಿ ಪ್ರಶ್ನಾರ್ಥಕವಾಗಿ ನೋಡಿದರು ಬಸವಣ್ಣನನ್ನು.

"ತಮ್ಮ ಇಷ್ಟದಂತೆ". ಬಸವಣ್ಣ ಮೆಲ್ಲಗೆ ನುಡಿದನು.

"ಸಂತೋಷ, ಬಹಳ ಸಂತೋಷ! ನಿಮ್ಮ ಬಯಕೆ ಕೈಗೂಡಿತಷ್ಟೇ ಮಹಾಮಂತ್ರಿಗಳೇ ?"

"ತಮ್ಮ ಕೃಪೆ ಗುರುವೇ ಅದು" ಎಂದು ಎದ್ದು ಪಾದಕ್ಕೆರಗಿದನು.

ಅಕ್ಕ ತಮ್ಮದಿರೂ ವಂದಿಸಿದರು. ಗುರುಗಳು ನಿತ್ಯಾಚರಣೆಗೆ ಎದ್ದರು.

ಬಲದೇವನ, ಅವನ ಪುತ್ರಿಯರ ಉಪಚಾರ ಯಥಾರೀತಿ ನಡೆದಿತ್ತು. ಅಕ್ಕನ ಸಯುಕ್ತಿಕ ಉತ್ಸಾಹದಿಂದ ಬಸವಣ್ಣನ ಭಾವನೆ ಸರಿಪಟ್ಟು ಹೋಗಿತ್ತು

೭ ಮಂಗಲಾಶೀರ್ವಾದ

ವೃದ್ಧರಾದ ಜಾತವೇದಿ ಮುನಿಗಳು ಮುಂದೆ ಬಸವಣ್ಣನ ಮದುವೆಗಾಗಿ ಕಲ್ಯಾಣಕ್ಕೆ ಹೋಗಲಾರದವರಾಗಿದ್ದರು. ಈಗ ಬಲದೇವನ ಇಚ್ಛೆಯಂತೆ ಬಸವಣ್ಣನ ಕುಟೀರಕ್ಕೆ ಬಂದು ವಧೂವರರನ್ನು ಸಂಯುಕ್ತವಾಗಿ ಆಶೀರ್ವದಿಸಲು ಒಪ್ಪಿಕೊಂಡಿದ್ದರು. ಇದುವೇ ಮದುವೆಯ ಮಂಗಲ ನಾಂದಿ.

ಕುಟೀರದ ಮೊಗಸಾಲೆಯ ತುಂಬ ಜಾಜೂಮು ಹಾಸಿ, ಎಡಬಲದ ಗೋಡೆಗಳಿಗೆ ನಾಲ್ಕಾಲ್ಕು ದಿಂಬು ಇಟ್ಟಿದ್ದರು. ಎದುರಿನ ಗೋಡೆಯ ಹತ್ತಿರ ಇದ್ದ ಪೀಠದ ಮೇಲೆ ದಿಂಬವನ್ನಿಟ್ಟು ಚಿತ್ರಾಸನ ಹಾಕಿದ್ದರು. ಪೀಠದ ಮುಂದೆ ಕುಳಿತು ಅಕ್ಕನಾಗಮ್ಮ ಫಲಪುಷ್ಪಗಳನ್ನು ಹೊಂದಿಸಿಟ್ಟು ಧೂಪದಾನಿಗಳಲ್ಲಿ ಊದುಬತ್ತಿಗಳನ್ನು ಸೇರಿಸುತ್ತಿದ್ದಳು.

"ಅವ್ವಾ, ಕಲ್ಯಾಣ ತಾತಯ್ಯ ಗುರುಗಳ ಹತ್ತಿರ ಮಾತಾಡುತ್ತ ಕುಳಿತು ಬಹಳ ಹೊತ್ತಾಯಿತು. ನಮ್ಮ ಮಾವನೂ ಅಲ್ಲಿಯೇ ಇದ್ದಾನೆ." ಚೆನ್ನಬಸವಣ್ಣ ಓಡಿಬಂದು ತಾಯಿಯ ಮುಂದೆ ಮಂಡೆಯೂರಿ ಕುಳಿತು ನುಡಿದನು. ನಾಗಲಾಂಬೆಯ ಮೊಗದಲ್ಲಿ ಮಂದಹಾಸ ಮೂಡಿತು.

"ಹೌದಪ್ಪ, ಗುರುಗಳು ಈಗ ಇಲ್ಲಿಗೆ ಬರುತ್ತಾರೆ. ಸೋಮಣ್ಣ ಹೇಳಿ ಹಾಸಿ ಮಾಡಿ ಇಟ್ಟುಹೋಗಿದ್ದಾರೆ. ಅಕ್ಕಂದಿರೆಲ್ಲಿದ್ದಾರೆ ನೀನು ನೋಡು ಕರೆದುಕೊಂಡು ಬಾ." ಚೆನ್ನಬಸವಣ್ಣ ಓಡಿದನು ಹೊರಗೆ.

ಹೂದೋಟದ ಲತಾಕುಂಜದಲ್ಲಿ ಗೆಳತಿಯರಿಬ್ಬರು ಹಾಸುಗಲ್ಲಿನ ಮೇಲೆ ಕುಳಿತಿದ್ದರು. ಬಲದೇವನ ಈ ಪ್ರಯಾಣದ ಉದ್ದೇಶವು ಹೊರಬಿದ್ದಾಗಿನಿಂದ ಅವರ ಬಗೆಗಳಲ್ಲಿ ಬದಲಾವಣೆಯಾಗಿತ್ತು. ಗಂಗಾಂಬಿಕೆಯನ್ನು ಲಜ್ಜೆಗೌರವಗಳು ಆವರಿಸಿದ್ದವು. ನೀಲಲೋಚನೆ ಹಾಸ್ಯದ ಅಣಕುಮಾತುಗಳನ್ನಾಡುತ್ತಿದ್ದಳು. ಅವಳು ಮೇಲೆ ಮೇಲೆ ಹೀಗೆ ವಿನೋದದಲ್ಲಿ ತೊಡಗಿದ್ದರೂ ಅವಳ ಒಳಬಗೆಯಲ್ಲಿ ಒಂದು ಅನಿರ್ವಚನೀಯ ಆಕಾಂಕ್ಷೆ ಮೊರೆಯಿಡುತ್ತಿತ್ತು. ಬಸವೇಶನ ದಿವ್ಯ ಮೂರ್ತಿ ಇಬ್ಬರ ಹೃದಯಗಳಲ್ಲಿಯೂ ವಿರಾಜಿಸುತ್ತಿತ್ತು.

ಒಬ್ಬಳು ಗಾರೆಗಲ್ಲುಗಳ ಸ್ಥಿರವಾದ ಕಲ್ಪನಾಮಂದಿರವನ್ನು ಕಟ್ಟುವದರಲ್ಲಿ ನಲಿಯುತ್ತಿದ್ದರೆ, ಇನ್ನೊಬ್ಬಳು ನೆಲೆಯಿಲ್ಲದ ಗಾಳಿಗೋಪುರ ರಚಿಸುವದರಲ್ಲಿ ತಳಮಳಗೊಳ್ಳುತ್ತಿದ್ದಳು.

ಹುಡುಕುತ್ತ ಬಂದ ಚೆನ್ನಬಸವಣ್ಣ ಅವರ ಮುಂದೆ ನಿಂತು 'ಅಮ್ಮ ನಿಮ್ಮನ್ನು ಕರೆಯುತ್ತಾಳೆ' ಎಂದು ಕೂಗಿ ಮರಳಿ ಓಡಿದನು. ಗೆಳತಿಯರಿಬ್ಬರೂ ಮೆಲ್ಲನೆ ಮನೆಯತ್ತ ನಡೆದರು.

ಅಷ್ಟರಲ್ಲಿ ಕುಲಪತಿಗಳು ಇತ್ತ ದಯಮಾಡಿಸುತ್ತಿದ್ದರು. ಅವರ ಎಡಬಲದಲ್ಲಿ ಬಲದೇವರಸು ಮತ್ತು ಬೇರೊಬ್ಬ ಪಂಡಿತರು ಬರುತ್ತಿದ್ದರು. ಅವರ ಮುಂದೆಮುಂದೆ ಬಸವಣ್ಣನಿದ್ದನು. ಬಾಗಿಲಲ್ಲಿ ನಾಗಲಾಂಬೆ ನಮಸ್ಕರಿಸಿ ಸ್ವಾಗತಿಸಿದಳು.

ಒಳಗೆ ಬಂದು ಗುರುಗಳು ಆಸನವನ್ನು ಅಲಂಕರಿಸಿದರು. ಎಲ್ಲರೂ ನಮಸ್ಕರಿಸಿ ಕುಳಿತರು. ಅಷ್ಟರಲ್ಲಿ ಮುಖದೊಳೆದು ಭಸ್ಮ ಭೂಷಿತೆಯರಾದ ಗಂಗಾಂಬೆ-ನೀಲಾಂಬೆಯರು ಬಂದು ಗುರುಗಳ ಪಾದಕ್ಕೆ ಎರಗಿದರು. ಆಗ ಗುರುಗಳು ಆನಂದಾಶ್ರು ತುಂಬಿದ ಕಣ್ಣುಗಳಿಂದ ನೋಡಿ ನುಡಿದರು :

"ಪುಣ್ಯವಂತೆ ನೀನು ನಾಗಮ್ಮ. ನಿನ್ನ ಮಮತೆಯ ತಮ್ಮನಿಗೆ ಸರಿಯಾದ ಸಂಬಂಧವಾಯಿತು."

"ಎಲ್ಲವೂ ತಮ್ಮ ಆಶಿರ್ವಾದ ಗುರುವೇ." ನಾಗಮ್ಮನೆಂದಳು.

"ಹೌದು ನಾಗಮ್ಮ ಹೌದು." ಹೀಗೆ ಬಲದೇವ ನುಡಿವಾಗ ಅವನ ಕಂಠ ಬಿಗಿದಿತ್ತು.

ಬಸವೇಶ ಮೌನವಾಗಿ ತಲೆಬಾಗಿಸಿ ಕುಳಿತಿದ್ದನು. ಗಂಗಾಂಬೆ, ಮನದ ಹಿಗ್ಗು ಮೊಗದಲ್ಲಿ ನುಗ್ಗುವದನ್ನು ತಡೆದು, ತೆರೆಗಳಿಲ್ಲದ ತುಂಬುಗೊಳದಂತೆ ಗಂಭೀರವಾಗಿದ್ದಳು. ನೀಲಲೋಚನೆ ಅಂತರ್ಮುಖಿಯಾಗಿದ್ದಳು. ಸ್ವಲ್ಪ ಹೊತ್ತಿನ ಬಳಿಕ ಮಹಾಮಂತ್ರಿ ಮತ್ತೆ ಮಾತಿಗಾರಂಭಿಸಿದನು :

"ಇದೇ ಮಾಘಮಾಸದಲ್ಲಿ ಮಂಗಲಕಾರ್ಯಕ್ಕೆ ಏರ್ಪಾಡುಮಾಡುವೆ."

"ಮಾಘಮಾಸವೆಂದರೆ ಇನ್ನು ಎರಡೇ ತಿಂಗಳ ನಂತರ ?"

"ಅವಸರವೆಂದು ನೀವೇನೂ ಚಿಂತಿಸುವ ಕಾರಣವಿಲ್ಲ ನಾಗಕ್ಕ. ಮಹಾ

ಮಂತ್ರಿಗಳು ಎಲ್ಲ ಕಾರ್ಯಭಾರವನ್ನೂ ತಾವೇ ನೋಡಿಕೊಳ್ಳುತ್ತಾರೆ." ಗುರುಗಳು ಉತ್ಸಾಹದಿಂದ ನುಡಿದರು.

"ತಂದೆಯವರ ವಿಚಾರ... " ಎಂದು ನಾಗಕ್ಕ ಅರ್ಧವಾತಿನಲ್ಲಿರುವಾಗ "ತಿಥಿಯ ಬಗೆಗೆ ನಾನು ಅವರ ಅನುಮತಿ ಪಡೆಯುತ್ತೇನೆ" ಎಂದು ಬಲದೇವರಸು ಉತ್ತರಿಸಿ ಹೆಣ್ಣುಮಕ್ಕಳ ಕಡೆ ನೋಡುತ್ತ ಎದ್ದು ಮುಂದೆಬಂದನು. ಸಮಯೋಚಿತ ದಕ್ಷಳು ನಾಗಕ್ಕ. ಆಕೆ ಗಂಗಾಂಬಿಕೆಯ ಕೈಹಿಡಿದು ಮುಂದೆ ಕರೆತಂದಳು. ಗುರುಗಳ ನಲುಮೆಯ ನೋಟವು ಬಸವಣ್ಣ ಎದ್ದು ಮುಂದೆ ಬರಬೇಕೆಂದು ಸೂಚಿಸುವಂತಿತ್ತು.

"ನನ್ನನ್ನು ಸಂಸಾರದಲ್ಲಿ ಸಿಲುಕಿಸಲು ನಿಮಗೆಲ್ಲ ಇಷ್ಟೇಕೆ ಆತುರ ಗುರುದೇವಾ ?" ಎನ್ನುತ್ತ ಆತ ಮೆಲ್ಲನೆದ್ದು ಮುಂದೆ ಬಂದನು.

ಬಲದೇವನು ಗಂಗಾಂಬೆಯ ಹಸ್ತವನ್ನು ಬಸವೇಶನ ಹಸ್ತದಲ್ಲಿಟ್ಟನು. ಅವರಿಬ್ಬರು ಗುರುಗಳ ಪಾದಕ್ಕೆರಗಿದರು. ಗುರುಗಳು ಫಲಪುಷ್ಪಗಳನ್ನು ಅವರ ಉಡಿಯಲ್ಲಿ ಹಾಕಿ ಆಶೀರ್ವಾದ ಮಾಡಿದರು.

ನೀಲಲೋಚನೆ ಅಂತರ್ಮುಖಿಯಾಗಿ ನಿಂತಿದ್ದಳು; ಒಳಗಿನ ಭಾವ ಬೇಡವೆಂದರೂ ಮುಖದಲ್ಲಿ ಮೂಡಿತು; ನಾಗಕ್ಕ ಆ ಭಾವವನ್ನೋದಿದಳು. ಆಕೆಯ ಕರುಳು ಮಿಡಿದರೂ ಆಗ ಮೌನವಾಗಿಯೇ ಇರಬೇಕಾಯ್ತು.

ಜಾತವೇದಿ ಶಿವಯೋಗಿಗಳು ಎಲ್ಲರಿಗೂ ಕುಳ್ಳಿರಲು ಹೇಳಿ 'ಸಂಗಮನಾಥನ ದಯೆಯಿಂದ ಸಕಲರಿಗೂ ಶುಭವಾಗಲಿ.' ನಾಗಮ್ಮ ನಿಮ್ಮ ಮಾವಂದಿರು ನಾಳೆ ಬೆಳಗಿನಲ್ಲಿಯೇ ಮರುಪ್ರಯಾಣ ಹೊರಡಲು ಅಪ್ಪಣೆ ಪಡೆದಿದ್ದಾರೆ. ಈಗೊಂದು ವಚನಗೀತ ಹೇಳಿ ಮಂಗಲ ಮಾಡಮ್ಮ."

ತಂಬೂರಿಯನ್ನು ತೆಗೆದುಕೊಂಡು ಸ್ವಲ್ಪದರಲ್ಲಿ ಸ್ವರಗೂಡಿಸಿ ಅಕ್ಕ ನಾಗಮ್ಮ ಮಧುರ ಕಂಠದಿಂದ ಈ ಗೀತ ಹಾಡಿದಳು :

ಹರನೀವ ಕಾಲಕ್ಕೆ ಸಿರಿಯು ಬೆನ್ನಲಿ ಬರ್ಕು
ಹರಿದು ಹೆದ್ದೊರೆಯ ಕೆರೆತುಂಬಿದಂತಯ್ಯಾ !
ನೆರೆಯದ ವಸ್ತು ನೆರೆವುದು ನೋಡಯ್ಯಾ :
ಅರಸು ಪರಿವಾರ ಕೈವಾರ ನೋಡಯ್ಯಾ !

ಪರಮ ನಿರಂಜನನೆ ಮರೆದ ಕಾಲಕ್ಕೆ ತುಂಬಿದ ಹರವಿಯು
ಕಲ್ಲುಕೊಂಡಂತೆ ಕೂಡಲಸಂಗಮದೇವಾ !

"ಮಾನವನ ಏರು ಇಳಿತಗಳ ಕಾರಣ ಶೋಧಿಸುವಲ್ಲಿ ಇದನ್ನು ಹಿಂದೆ ಬಸವೇಶ ಹಾಡಿದ್ದನು." ಎಂದು ಉಲ್ಲಸಿತರಾಗಿ ನುಡಿದು ಗುರುಗಳು ಸರ್ವರಿಗೂ ಆಶೀರ್ವಾದವಿತ್ತು ತೆರಳಿದರು.

ಮರುದಿನ ಮುಂಜಾನೆ ಮಂಗಲ ದ್ರವ್ಯಗಳನ್ನಿತ್ತು, ಗಂಗಾಂಬೆ-ನೀಲಾಂಬೆಯರನ್ನು ನಾಗಮ್ಮ ಬೀಳ್ಕೊಡುತ್ತಿದ್ದಳು. ನೀಲಾಂಬೆ ನಮಸ್ಕರಿಸಿದಾಗ 'ನೀನೂ ನಿನ್ನ ಭಾಗ್ಯದ ದೇವರನ್ನು ಬೇಗನೆ ಪಡೆಯುವಮ್ಮಾ' ಎಂದು ಹರಸಿದಳು.

* * *

ಎರಡು ತಿಂಗಳಲ್ಲಿ ಬಲದೇವರಸು ಮದುವೆಯ ತಿಥಿ ನೇಮಿಸಿ ಗುರುಗಳಿಗೆ ಪತ್ರವನ್ನು ಬರೆದನು. ಅಕ್ಕನಾಗಮ್ಮ - ಬಸವಣ್ಣ ಮೊದಲಾದವರನ್ನು ಕಲ್ಯಾಣಕ್ಕೆ ಕರೆದುಕೊಂಡು ಬರಲು ಸರಂಜಾಮು ಕಳಿಸಿದನು. ಕುಲಪತಿಗಳು ನೋಡಿ ಸಂತಸಗೊಂಡು ಬಸವೇಶ-ನಾಗಲಾಂಬೆಯರನ್ನು ಕರೆದು ಪತ್ರದ ವಿಷಯ ವಿವರಿಸಿ, ನಾಡದು ಪ್ರಾತಃಕಾಲ ಹೊರಡಬೇಕೆಂದು ಅಪ್ಪಣೆಮಾಡಿದರು. ನಾಗಮ್ಮ ಅನುಮತಿಸಿ, ವಂದಿಸಿ ಪ್ರಯಾಣದ ಸಿದ್ಧತೆಗೆಂದು ಕುಟೀರಕ್ಕೆ ಮರಳಿದಳು.

ಬಸವಣ್ಣ ಗುರುಸನ್ನಿಧಿಯನ್ನು ಬಿಟ್ಟು ಕಲ್ಯಾಣಕ್ಕೆ ಹೋಗಲಾರದೆ ಬಹಳ ವ್ಯಥೆಪಟ್ಟನು. ಗುರುಗಳು ಕಲ್ಯಾಣವೇ ನಿನ್ನ ಕಾರ್ಯಕ್ಷೇತ್ರವೆಂದೂ ತಮ್ಮ ಅಂತಃಕರಣದ ಬೆಂಬಲವು ಸದಾ ಸನ್ನಿಹಿತವಾಗಿರುವದೆಂದೂ ಧೈರ್ಯ ಹೇಳಿದರು. ಬಳಿಕ ಅವನ ಮುಂದಿನ ಮಹಾಕಾರ್ಯದ ಬಗೆಗೆ ಮಹತ್ವದ ವಿಚಾರ ವಿನಿಮಯಮಾಡಿದರು.* ತಮ್ಮ ಆಶೋತ್ತರಗಳನ್ನು ತಿಳಿಸಿ ಪ್ರೈದಡ

* ಈ ಸಂದರ್ಭದ ಹೆಚ್ಚಿನ ವಿವರಗಳನ್ನು ನಮ್ಮ 'ಬಸವರಾಜ ದೇವರು' ಪುಸ್ತಕದಲ್ಲಿ (ಪುಟ ೪೯ ರಿಂದ ೫೨) ನೋಡುವದು.

ವಿದರು. ಬಸವಣ್ಣ ಉತ್ತೇಜಿತನಾದನು. ಮನದ ಸಂದೇಹಗಳನ್ನು ಹರಿದೊಗೆದನು. ಮೈಯಲ್ಲಿ ಮಹಾಚೇತನವು ಅಭಿವ್ಯಕ್ತವಾದಂತಾಗಿ ಸಾಷ್ಟಾಂಗವಾಗಿ ಎರಗಿ ಆಶೀರ್ವಾದ ಪಡೆದನು.

ಪ್ರಯಾಣದ ಸೌರಣೆಯಲ್ಲಿದ್ದ ನಾಗಮ್ಮನ ಮನದಲ್ಲಿ ಕೆಲವು ಸಂದೇಹಾತ್ಮಕ ವಿಚಾರಗಳು ತಲೆಹಾಕಿದ್ದವು. 'ಇನ್ನು ಚೆನ್ನಬಸವಣ್ಣನ ಅಧ್ಯಯನದ ಹಾದಿಯೇನು ? ಬಾಲ್ಯದಲ್ಲಿಯೇ ಬಸವಣ್ಣ ಪಂಡಿತರು ಬೆರಗಾಗುವಷ್ಟು ಪ್ರತಿಭಾವಂತನಾಗಿದ್ದನು. ಈಗ ಬಸವಣ್ಣನೇ ಅಳಿಯನ ಪ್ರತಿಭೆಗೆ ಬೆರಗಾಗುತ್ತಿದ್ದಾನೆ. ಮಾವನ ಅರಿಕೆಯಲ್ಲಿ ಚೆನ್ನಬಸವಣ್ಣ ಈಗಲೇ ತತ್ವಾರ್ಥಗಳನ್ನು ಸಹ ಸ್ವೀಕರಿಸುತ್ತಿದ್ದಾನೆ. ಇನ್ನು ಬಸವಣ್ಣನ ಅರಿಕೆ ಅವನಿಗೆ ಸಾಧ್ಯವಾಗುವದೇ ? ಇದುವರೆಗೆ ಬಸವಣ್ಣ, ತಮ್ಮ, ತನ್ನವನು ! ಇನ್ನು ಮಡದಿಯವನು ಆಗುವನೇ ?...... ಆಗಲಿಕ್ಕಿಲ್ಲ; ಬಸವೇಶನ ಮನಸ್ಸು ನಮ್ಮಿಂದ ಎಂದೂ ದೂರಾಗದು. ನನಗೂ ಬಸವಣ್ಣನನ್ನು ಬಿಟ್ಟಿರಲು ಹೇಗೆ ಸಾಧ್ಯವಾದೀತು ? ಅವನ ಭವ್ಯ ಭವಿಷ್ಯತ್ತಿನ ದಿವ್ಯ ಜೀವನಚಿತ್ರದಿಂದ ನನ್ನಾತ್ಮವನ್ನು ಬೇರ್ಪಡಿಸಲಾದೀತೇ ?......'

ಗುರುಸನ್ನಿಧಿಯಿಂದ ಬಸವೇಶ ಕುಟೀರಕ್ಕೆ ಬಂದು ಅಕ್ಕನಿಗೆ ಎಲ್ಲವನ್ನು ತಿಳಿಸಿದನು. ಚೆನ್ನಬಸವೇಶನ ವಿದ್ಯಾಭ್ಯಾಸವು ಕಲ್ಯಾಣದಲ್ಲಿಯೇ ಸಾಗಬಹುದೆಂದು ಗುರುಗಳು ಸೂಚಿಸಿದ್ದರು. ಅದನ್ನು ತಿಳಿದು ನಾಗಲಾಂಬೆ "ಶ್ರೀಮಂತ ಮಾವನ ಮನೆಯಳಿಯನಾಗಿ ನೀನಿರುವಾಗ ನಿನ್ನೊಡನೆ ನಾವಿರುವದು ಸರಿಯೇ? ಮದುವೆಯ ಮರುದಿನ ನಾನು ಚೆನ್ನಬಸವಣ್ಣನೊಡನೆ ಮರಳಿ ಬರಲೇಬೇಕು" ಎಂದಳು.

"ಸುಲಭವಾಗಿ ಸಿಕ್ಕುವ ಶ್ರೀಮಂತಿಕೆಯನ್ನು ಅನುಭವಿಸುತ್ತ ಕುಳ್ಳಿರುವದು ನನ್ನ ಧರ್ಮವಾದೀತೇ ಅಕ್ಕ ? ಕಾಯಕದಿಂದಲೇ ನನ್ನ ಜೀವನ ನಡೆಯಬೇಕು. ನಾನು ಸ್ವತಂತ್ರವಾಗಿಯೇ ವಾಸಮಾಡಿಕೊಂಡು ಇರುವೆನು. ಆಗ ನನ್ನ ಬಳಿಯಲ್ಲಿ ನೀನಿರಲು ಅಭ್ಯಂತರವೇನು ?" ಬಸವಣ್ಣನ ಕಣ್ಣು ತೇವಾಗಿದ್ದವು.

ಈಗಲೇ ಇದನ್ನು ನಿರ್ಣಯಿಸುವದು ಸಾಧ್ಯವಿಲ್ಲೆಂದು ಬಗೆದು ನಾಗಮ್ಮ 'ಆಗಲಪ್ಪ ನೋಡೋಣ' ಎಂದಿಷ್ಟೇ ನುಡಿದು ಸುಮ್ಮನಾದಳು.

ಎರಡನೆಯ ದಿನ ಬೆಳಗಿನಲ್ಲಿ ಗುರುಚರಣ ತೀರ್ಥ-ಪ್ರಸಾದಗಳನ್ನು ಪಡೆದು ಕರೆಯಬಂದ ಪರಿವಾರದೊಡನೆ ಅವರು ಕಲ್ಯಾಣಕ್ಕೆ ತೆರಳಿದರು. ಮಾದಿರಾಜನು ಮಗನ ಮದುವೆಗಾಗಿ ತನ್ನ ಪರಿವಾರದೊಡನೆ ಬಾಗೇವಾಡಿ ಯಿಂದ ನೇರವಾಗಿ ಕಲ್ಯಾಣಕ್ಕೆ ಹೋದನು.

ಕಲ್ಯಾಣದಲ್ಲಿ

೧ ಒರೆಗೆ ಹತ್ತಿದ ಸತ್ವ

ಬಲದೇವನಿಂದ ಉಪಕೃತನಾಗಿದ್ದ ಬಿಜ್ಜಳರಾಜನು ತಾನೇ ನೇತೃತ್ವ ವಹಿಸಿ, ಆ ಮಹಾಮಂತ್ರಿಯ ಯೋಗ್ಯತೆಗೆ ತಕ್ಕಂತೆ ಅವನ ಒಬ್ಬಳೇ ಮಗಳು ಗಂಗಾಂಬಿಕೆಯ ಮದುವೆಯನ್ನು ಬಸವೇಶ್ವರನೊಡನೆ ವೈಭವದಿಂದ ನೆರವೇರಿಸಿದನು.

ವಿಶಾಲವಾದ ವಿವಾಹ ಮಂಟಪದ ಮುಂದುಗಡೆಯಲ್ಲಿ ಯಾತ್ರಾರ್ಥಿಗಳಾದ ಸನ್ಯಾಸಿಗಳ ತಂಡವೊಂದು ನೆರೆದಿದ್ದಿತು. ಅಕ್ಷತಾರೋಪಣದ ಬಳಿಕ ಮಂಟಪದಿಂದ ಮಹಾ ಜನಸಂದಣಿಯು ಸರಿದುಹೋಯಿತು. ರಾಜನೂ ಸಾಮಂತ ಮನ್ನೆಯರೂ ನಿರ್ಗಮಿಸಿದರು. ಜನರು ವಿರಲವಾಗಿ ಉಳಿದಿದ್ದರು. ಆಗ ಕಾವಿಯ ಕಪನಿಯ ಮಧ್ಯವಯಸ್ಸಿನ ಯಾತ್ರಿಕ ಸನ್ಯಾಸಿಯೊಬ್ಬ ತಮ್ಮ ಗುಂಪಿನಿಂದ ಬೇರೆಯಾಗಿ, ನೇರವಾಗಿ ಹಸೆಯ ಕಡೆಗೆ ನಡೆದು ಯಾವ ಸಂಕೋಚವಿಲ್ಲದೆ ಗಂಭೀರವಾಗಿ ಬಂದನು. ಎಡಬಲದವರು ಅವನನ್ನು ವಿಸ್ಮಯದಿಂದ ನೋಡುತ್ತಿದ್ದರು. ಅವನು ಮದುಮಕ್ಕಳ ಮುಂದೆ ನಿಂತು ಮಂಗಲವನ್ನು ಪಠಿಸಿ ಅಕ್ಷತೆಗಳನ್ನು ಹಾಕಿ ಮರಳುತ್ತಿದ್ದಾಗ ಮಾದಿರಾಜನು ಮುಂದೆ ಬಂದು ಅವನ ಕೈಹಿಡಿದನು. ಮುಖವೆತ್ತಿ ನೋಡಿದ ಬಸವಣ್ಣ ಹಸೆಯಿಂದ ಎದ್ದು ಬಂದನು; ಹಿಂದೆ ಗಂಗಾಂಬೆ. ಅವರಿಬ್ಬರು ಯತಿ ಶಿವಸ್ವಾಮಿಗೆ ನಮಿಸಿದರು. ಆಶೀರ್ವದಿಸಿದ ಶಿವಸ್ವಾಮಿಯ ಮೊಗದಲ್ಲಿ ನಸುನಗೆ ಸಹಜವಾಗಿ ಸೂಸಿತ್ತು. ಹೆಣ್ಣುಮಕ್ಕಳ ಗುಂಪಿನಲ್ಲಿದ್ದ ನಾಗಲಾಂಬೆಯೂ ಆತುರದಿಂದ ಎದ್ದುಬಂದು ವಂದಿಸಿದಳು. ತನ್ನ ಬದಿಗೆ ನಿಂತ ಚೆನ್ನಬಸವನನ್ನು ಮುಂದೆ ಎಳೆದು ಮಾದಿರಾಜನು 'ನಿನ್ನ ತಂದೆ ನೋಡಯ್ಯಾ' ಎಂದನು. ಚೆನ್ನಬಸವನು ನಮಿಸುತ್ತಿರಲು ಶಿವಸ್ವಾಮಿಯು ಅವನನ್ನು ತಡೆದು ಅವನ ಮೈದಡವಿದನು. ನಾಗಲಾಂಬೆಯ ಕಣ್ಣು ತೇವಾಗಿದ್ದವು. ಪ್ರಸನ್ನಚಿತ್ತದಿಂದ ಶಿವಸ್ವಾಮಿ ನುಡಿದನು :

"ನನಗೆ ಬೆಳಕು ತೋರಿದವರಲ್ಲಿ ನೀನೊಬ್ಬಳು ನಾಗಲಾಂಬೆ! ಆ ಬೆಳಕಿನ ಆಶ್ರಯದಲ್ಲಿ ಮಹಾ ಬೆಳಕನ್ನು ಸಾಧಿಸುವ ಆಸೆಯಿದೆ. ಅದಕ್ಕಾಗಿ ಅನಿ

ರ್ಬಂಧವಾಗಿ ಅಲೆದಾಡಬೇಕೆಂಬುದು ಅಂತರಂಗದ ಬಯಕೆ. ನೀವಾರೂ ನನ್ನನ್ನು ತಡೆಯಬಾರದು. ಇನ್ನು ನನ್ನನ್ನು ನೆನೆಸಬಾರದು. ನಿಮಗೆಲ್ಲ ಶುಭವಾಗಲಿ."

ಎನ್ನುತ್ತ ಮತ್ತೊಮ್ಮೆ ಚೆನ್ನಬಸವನ ಮೈಮೇಲೆ ಕೈಯೆಳೆದು ನಡೆದು ಬಿಟ್ಟನು. ಅವನೊಡನೆ ಆ ಸನ್ಯಾಸಿಗಳ ತಂಡ ತ್ರಿಪುರಾಂತಕೇಶ್ವರ ದೇವಾಲಯಕ್ಕೆ ತೆರಳಿತು. ಈ ಸಂದರ್ಭ ಸಾಮಾನ್ಯವಾದುದಲ್ಲ. ಆದರೂ ಮಹಾಸಾಗರದಂತೆ ಗಂಭೀರಳಾದ ನಾಗಮ್ಮ ಒಡಲ ದುಃಖಾಗ್ನಿಯನ್ನು ಜ್ಞಾನಜಲದಿಂದ ಶಾಂತಗೊಳಿಸಿ ಸುಮ್ಮನಾದಳು. ಬಂಧುಗಳು ನೋಡನೋಡುತ್ತ ಮೌನವಾದರು. ಇದನ್ನೆಲ್ಲ ಕೇಳಿದ ಬಲದೇವನು ಆ ಯಾತ್ರಿಕರ ತಂಡಕ್ಕೆ ದೇವಾಲಯದಲ್ಲಿಯೇ ಭೋಜನಸತ್ಕಾರದ ವ್ಯವಸ್ಥೆ ಮಾಡಿಸಿದನು.

ಅಂದು ವಿವಾಹದ ಮುಂದಿನ ಅಲಂಕಾರಿಕ ವಿಧಾನಗಳಲ್ಲೆಲ್ಲ ಅಕ್ಕ ನಾಗಮ್ಮನು ಬಂಧುಬಳಗದ ಹಿಂಬದಿಯಲ್ಲಿದ್ದು ಅಷ್ಟಷ್ಟು ಮೌನವನ್ನೇ ಅನುಭವಿಸುತ್ತಿದ್ದಳು. ನಿಬ್ಬಣದವರಿಳಿದ ಸೊಡ್ಡಳ ಬಾಚರಸರ ಮನೆಯಲ್ಲಿ ಅವರ ರಾತ್ರಿಯ ಊಟದ ಏರ್ಪಾಡು ನಡೆಯುತ್ತಿದ್ದಿತು. ಮದುವೆಯ ಮನೆಯಿಂದ ಪಕ್ವಾನ್ನದ ಬುಟ್ಟಿಗಳು ಬಂದಿದ್ದವು. ಕಾರ್ಯವಾಹಕರು ಹೇಳಕೇಳುವವಕ್ಕೆ ಅಕ್ಕನಾಗಮ್ಮನವರನ್ನು ಕಾಣದೆ ಗಲಬಲ ನಡೆಸಿದ್ದರು. ಬಸವಣ್ಣನು ಅಲ್ಲಿಗೆ ಬಂದು ಅಕ್ಕ ಎಲ್ಲಿ ಎಂದು ಕೇಳಲು ಒಬ್ಬ ಅಜ್ಜಿ ಹೇಳಿದಳು :

"ಪೂಜಾಗೃಹದಲ್ಲಿದ್ದಾಳೆ ಬಹಳ ಹೊತ್ತಾಯಿತು."

"ಸರಿ, ಇಂದು ತಳಮಳಗೊಂಡಿರಬಹುದಾದ ಮನಕ್ಕೆ ಶಾಂತಿಸಾಧನೆ ಅವಶ್ಯ. ನಾನು ನೋಡುವೆನು."

ಬಸವಣ್ಣ ಪೂಜಾಗೃಹದ ಬಾಗಿಲಿಗೆ ಬಂದನು. ನಾಗಮ್ಮ ಧ್ಯಾನಯೋಗದಿಂದಿಳಿದು ಪ್ರಜ್ಞೆಗೆ ಬಂದಿದ್ದಳು. ಹೃದಯದಾಳದಿಂದ ಹೊರಟ ವಚನಗೀತವನ್ನು ಭಾವಪರವಶತೆಯಿಂದ ಹಾಡುತ್ತಿದ್ದಳು .

ಶ್ರೀಗುರುವೆ ತಾಯಿ ತಂದೆಯಾಗಿ, ಲಿಂಗವೆ ಪತಿಯಾಗಿ,
ಜಂಗಮವೆ ಅತ್ತೆಮಾವಂದಿರಾಗಿ, ಶಿವಭಕ್ತರೆ ಬಾಂಧವರಾಗಿ,
ಸತ್ಯ-ಸದಾಚಾರವೆಂಬ ಮನೆಗೆ ಕಳುಹಿದರಾಗಿ,
ಶರಣ ಸತಿ ಎಂಬ ನಾಮ ನಿಜವಾಯಿತು.

ಆದಂತೆ ಇರುವೆ; ಹಿಂದುಮುಂದರಿಯದೆ ನಡೆವೆ;
ಮನಕ್ಕೆ ಮನ ಸಾಕ್ಷಿಯಾಗಿ ಮಾಡುವೆ.
ಬಸವಣ್ಣ ಪ್ರಿಯ ಚೆನ್ನಸಂಗಯ್ಯನಲ್ಲಿ ನಿಮ್ಮಡಿಗಳಿಗೆ.

ಕೇಳಕೇಳುತ್ತ ಬಸವಣ್ಣ, ಅಕ್ಕನ ಆತ್ಮಶಕ್ತಿ ವಿಕಾಸಗೊಳ್ಳುತ್ತಿದೆಯೆಂಬುದನ್ನು ತಿಳಿದು, ಆ ಭಾವದಲ್ಲಿ ತನ್ಮಯನಾಗಿ ಒಳಗೆ ಬಾರದೆ ಬಾಗಿಲ ಹೊಂದಿಗೆ ಕುಳಿತುಬಿಟ್ಟನು. ಅವನನ್ನು ಅನುಸರಿಸಿ ಬಂದ ಬಳಗವು ಅವನ ಹಿಂದೆ ಕುಳಿತುಬಿಟ್ಟಿತು. ಸಾವಧಾನವಾಗಿ ಗೀತ ಮುಗಿದು ಅಕ್ಕ ಬಲಗಡೆ ಬಾಗಿಲೆಡೆಗೆ ನೋಡಿದಾಗ ಅಲ್ಲಿದ್ದವರು 'ಉಘೇ ಉಘೇ' ಎಂದರು. ಬಸವಣ್ಣ ಕುಳಿತಲ್ಲೇ ತಲೆವಾಗಿ ವಂದಿಸಿದನು.

"ಎಲ್ಲರೂ ಇಲ್ಲಿ ಬಂದಿರಾ ? ಊಟ ನಡೆಯಬೇಕಾಗಿತ್ತೀಗ; ಬಸವೇಶಾ, ಮದುವೆಯ ಮನೆಯಿಂದ ಯಾವಾಗ ಬಂದೆ ?" ಎನ್ನುತ್ತ ಅಕ್ಕ ಎದ್ದು ಬಂದಳು.

ನಾಗಲಾಂಬೆಯ ಪ್ರಪಂಚವಿಂದು ಪೂರ್ಣವಾಗಿ ಪಾರಮಾರ್ಥಿಕವಾಯಿತು. ಆವಳು ತಾಳಿದ ನಿಲವು ಅದೆಷ್ಟು ಉನ್ನತ! ಶರಣಸತಿಯ ದಿವ್ಯ ಸಂಸಾರದ ಅದೆಂತಹ ದರ್ಶನವಿದು! ಗುರುವೆಂಬ ತಾಯಿತಂದೆಗಳಿಂದ ವಿದ್ಯಾಜ್ಞಾನಗಳನ್ನು ಅರಿಯಬೇಕು; ಲಿಂಗಪತಿಯ ಸತ್ಯಸದಾಚಾರವೆಂಬ ಮನೆಗೆ ಬರಬೇಕು; ಜಂಗಮವೆಂಬ ಅತ್ತೆಮಾವಂದಿರ ಆದರ್ಶದಲ್ಲಿ—ನಿರೀಕ್ಷಣೆಯಲ್ಲಿ ಪಳಗಬೇಕು. ಈ ಉಭಯ ಬಲದಿಂದ ಲಿಂಗಪತಿಯೊಡನೆ ಸಾಮರಸ್ಯವನ್ನು ಪಡೆಯಬೇಕು. ಶಿವಭಕ್ತರೆಂಬ ಬಾಂಧವರು ಹಾರೈಸಬೇಕು; ಹರಸಬೇಕು; ಹರ್ಷಿಸಬೇಕು. ಶರಣೆಸತಿಯು ಇಂತಹ ಸಂಸಾರವನ್ನು ತಪ್ಪದೆ ಮಾಡುವ ಪ್ರತಿಜ್ಞೆಯನ್ನು ಮನಸ್ಸಾಕ್ಷಿಯಾಗಿ ಶಿವನಡಿಯ ಸಾಕ್ಷಿಯಾಗಿ ದೃಢಪಡಿಸುತ್ತಾಳೆ. ಪತಿ ಶಿವಸ್ವಾಮಿ ಕರದಿಷ್ಟಲಿಂಗದಲ್ಲಿ ಐಕ್ಯನಾಗಿ ಲಿಂಗರೂಪದಲ್ಲಿರುವನೆಂದು ಭಾವಿಸಿ, ಅವನ ನೆನಹನ್ನು ಲಿಂಗದ ನೆನಹಿನಲ್ಲಿ ಲೀನಗೊಳಿಸಿ ಮುಂದುವರಿಯುವದನ್ನು ನಿರ್ಧರಿಸುತ್ತಾಳೆ.

* * *

ಬಿಜ್ಜಳನು ಬಸವೇಶ್ವರನ ಬುದ್ಧಿಪ್ರಭಾವವನ್ನು ಮೊದಲೇ ಕೇಳಿತಿಳಿದಿದ್ದನು. ಮದುವೆಯ ಸಮಯದಲ್ಲಿಯೂ ಅವನ ಒಳ್ಳೆಯ ಗುಣ-ಸ್ವಭಾವಗಳನ್ನು ಸೂಕ್ಷ್ಮವಾಗಿ ನಿರೀಕ್ಷಿಸಿ ಅರಿತುಕೊಂಡನು. ಸಮಾರಂಭದ ಮರುದಿನವೇ ಬಸವೇಸನನ್ನು ತನ್ನ ಮಂತ್ರಾಗಾರಕ್ಕೆ ಕರೆಯಿಸಿಕೊಂಡು ಬಹಳ ಹೊತ್ತು ಅವನೊಡನೆ ಮಾತನಾಡಿದನು. ಪರೀಕ್ಷೆಗಾಗಿ ಅನೇಕ ರಾಜಕೀಯ ಸಮಸ್ಯೆಗಳನ್ನು ಅವನ ಮುಂದಿಟ್ಟು ಉತ್ತರ ಪಡೆದನು. ಇದರಲ್ಲೆಲ್ಲ ಬಸವೇಶನ ಅಗಾಧ ಜಾಣತನವನ್ನು ಕಂಡು ಬಿಜ್ಜಳರಾಜನು ಬೆರಗಾದನು. ರಾಜಾಧ್ಯಕ್ಷ ಚಾವಡಿಯ ತನ್ನ ಸಮ್ಮುಖದ ಕರಣಿಕನ ಕೆಲಸಕ್ಕೆ ಅವನನ್ನು ಒಡಂಬಡಿಸಿದನು. ಇದೊಂದು ಕಾಯಕವೆಂದು ಬಸವಣ್ಣನು ಸಮ್ಮತಿಸಿದನು. ಇದೇ ಸಮಯದಲ್ಲಿ ತನ್ನ ಅಪಾರ ಸಂಪತ್ತನ್ನು ಬಸವೇಶನಿಗೆ ಧಾರೆಯೆರೆಯಬೇಕೆಂದಿರುವ ಬಲದೇವ ಮಹಾಮಂತ್ರಿಯ ಇಚ್ಛೆಯನ್ನು ಬಿಜ್ಜಳರಾಜನು ಬಸವೇಶನಿಗೆ ತಿಳಿಸಿ ಅದನ್ನು ಸ್ವೀಕರಿಸಬೇಕೆಂದು ಸೂಚಿಸಿದನು. ಆದರೆ ಬಸವೇಶನು, ಅದು ತನ್ನ ಅಪೇಕ್ಷೆಯ ಆದರ್ಶ ಜೀವನಕ್ಕೆ ಆತಂಕವಾಗುವದೆಂದು ತರ್ಕಬದ್ಧವಾಗಿ, ವಿನಯಪೂರ್ವಕವಾದ ಉಚಿತ ವಾಣಿಯಿಂದ ಅದನ್ನು ನಿರಾಕರಿಸಿದನು. 'ಎಂತಹ ನಿರ್ಲೋಭಿ! ನಿಜವಾಗಿ ಇವನು ಮಹಾಪುರುಷ' ಎಂದು ಬಿಜ್ಜಳನ ಅಂತರ್ವಾಣಿ ನುಡಿಯಿತು.

೨ ಸಸಿಯ ಪೋಷಣೆ

ಬಲದೇವರಸು ಮಾದಿರಾಜನೊಡನೆ ಮೊಗಸಾಲೆಯಲ್ಲಿ ಆರಾಮವಾಗಿ ಮಾತನಾಡುತ್ತ ಕುಳಿತಿದ್ದನು. ಚೆನ್ನಬಸವಣ್ಣನ ಅಧ್ಯಯನವು ಮಾತಿನ ವಿಷಯ.

"ಮಹಾಮಂಡಲೇಶ್ವರರ ಸಂದರ್ಶನದಿಂದ ಬಸವಣ್ಣ ಇನ್ನೂ ಮರಳಿ ಬರಲೇ ಇಲ್ಲವಲ್ಲ" ಎನ್ನುತ್ತ ನಾಗಮ್ಮ ತಂದೆ ಮಾವಂದಿರ ಕಡೆಗೆ ಬಂದಳು. ಅವಳನ್ನು ನೋಡಿ ಮಾದಿರಾಜನು—"ಕುಳಿತುಕೊಳ್ಳಮ್ಮಾ, ಚೆನ್ನಬಸವನ ಅಧ್ಯಯನಕ್ಕೆ ಅಕ್ಕತಮ್ಮದಿರು ಯೋಚಿಸಿದ ಏರ್ಪಾಡು ಏನು?" ಎಂದು ಕೇಳಿದನು.

ಇಲ್ಲಿಯೇ ಮಾವನ ಹತ್ತಿರ ಅಳಿಯನ ಅಧ್ಯಯನ ನಡೆಯುಬಹುದೆಂದು ಗುರುಗಳು ಸೂಚಿಸಿದ್ದಾರೆ. ಈಗಾಗಲೇ ಬಸವಣ್ಣ ಅವನಿಗೆ ಅದೆಷ್ಟೋ ವಿದ್ಯೆಯನ್ನು ಬೋಧಿಸಿದ್ದಾನೆ. ಆದರೆ ನಾನು 'ಬಸವಣ್ಣನಂತೆ ಚೆನ್ನಬಸವನ ವಿದ್ಯಾಭ್ಯಾಸವೂ ಸಂಗಮದಲ್ಲಿಯೇ ಯಾಕಾಗಬಾರದು' ಎನ್ನುತ್ತೇನೆ. ಬಸವಣ್ಣ ಇನ್ನು ಒಂದು ನಿಯಮಿತ ಕಾಯಕ ಕೈಕೊಳ್ಳಬೇಕು."

"ಅಂದರೆ ತಾಯಿ ಮಗ ಮತ್ತೆ ಸಂಗಮಕ್ಕೆ?"

"ಹೌದು ಸಹಜವದೆ."

"ನಿಮ್ಮ ಮಾವಂದಿರು ಚೆನ್ನಬಸವನಿಗಾಗಿ ಬೇರೊಂದು ಉಪಾಯವನ್ನು ಯೋಚಿಸುತ್ತಿರುವರು. ಅದು ನನಗೆ ಸರಿಕಾಣುತ್ತಿದೆ."

ಮಾದಿರಾಜ ಬಲದೇವರಸನತ್ತ ನೋಡಿದನು. ಬಲದೇವರಸು ನಾಗಮ್ಮನಿಗೆ ಆತುರದಿಂದ ಹೇಳಿದನು:

"ನಾಗಕ್ಕ, ಚೆನ್ನಬಸವನ ವಿದ್ಯಾ-ಜ್ಞಾನ-ಸಾಧನೆಗಳ ವಿಚಾರ ನನಗೆ ಬಿಡಿರಿ. ಅವನನ್ನು ಬಳ್ಳೇಗಾಂವಿಗೆ ಕಳಿಸೋಣ. ಅದು ಬಹು ದೊಡ್ಡ ವಿದ್ಯಾಪೀಠ! ಈ ಮೊದಲು ಅಲ್ಲಿದ್ದ ವಾಮಶಕ್ತಿ ಪಂಡಿತರು ಶುದ್ಧವಾದ—ಬಹು ಭದ್ರವಾದ — ಸಂಪ್ರದಾಯವನ್ನು ಹಾಕಿದ್ದಾರೆ. ಪ್ರತಿಭಾವಂತರಿಗೆ ಅದು ತುಂಬಾ ಯೋಗ್ಯ. ಗಂಗಾಂಬೆ-ಬಸವೇಶರ ಹೊಸ ಸಂಸಾರದಲ್ಲಿ ಮಾರ್ಗ

ದರ್ಶಕ ತಾಯಿಯಾಗಿರುವವಳು ನೀನಲ್ಲದೆ ಇನ್ನಾರು? ನೀನು ಇಲ್ಲಿಯೇ ಇರಬೇಕು. ನಿಮ್ಮ ತಂದೆಯು ಅಪೇಕ್ಷೆಯಂತೆ ತಾಯಿಮಗ ಕೆಲದಿನ ಬಾಗೇವಾಡಿಗೆ ಹೋಗಬಹುದು. ಚೆನ್ನಬಸವಣ್ಣನನ್ನು ಬಳ್ಳೀಗಾಂವಿಗೆ ಕಳಿಸಿದ ಬಳಿಕ ನೀನು ಮರಳಿ ಬರಬೇಕು. ಬಳ್ಳೀಗಾಂವಿ......"

ಅಷ್ಟರಲ್ಲಿ ರಾಜಸಂದರ್ಶನದಿಂದ ಮರಳಿ ಬಂದ ಬಸವಣ್ಣನನ್ನು ಕಂಡು ಮೂವರ ಗಮನ ಅವನತ್ತ ಹರಿಯಲು ಬಲದೇವನ ಮಾತು ಅರ್ಧಕ್ಕೆ ನಿಂತಿತು. ಬಸವಣ್ಣ ಬಂದು ಹತ್ತಿರದಲ್ಲಿ ಕುಳಿತು ಮಹಾಮಂಡಲೇಶ್ವರರ ಸಂದರ್ಶನದಲ್ಲಿ ನಡೆದುದನ್ನು ವಿವರಿಸಿದನು. ತಂದೆಯ ಹೃದಯ ಆನಂದದಿಂದ ತುಂಬಿತು!

"ನಿನ್ನ ಭಾಗ್ಯದ ಬಾಗಿಲು ತೆರೆಯಿತು ಬಸವಣ್ಣ! ಚಕ್ರವರ್ತಿಯ ಅಧಿಕಾರವೆಲ್ಲ ಬಿಜ್ಜಳರಾಯರಿಗಿದೆ. ಅವರ ಕೃಪೆಯೆಂದರೆ ಅಷ್ಟಿಷ್ಟು ಮಹತ್ವದ್ದಲ್ಲ. ಮುಂದೆ ಮಂತ್ರಿಪದವಿಯೂ ನಿನಗೆ ಅಸಂಭವವಲ್ಲ."

ಮಾದಿರಾಜನ ಮಾತಿಗೆ ನಾಗಲಾಂಬೆ ನಕ್ಕಳು. "ಇದೀಗ ಕರಣಿಕನಾಗ ಹೊರಟಿರುವಾಗ ಮಂತ್ರಿಯ ಮಾತನಾಡುತ್ತಿರುವಿರಪ್ಪಾ!"

ಬಲದೇವಮಂತ್ರಿ ನಡುವೆ ಬಂದು ಮಾತನಾಡಿದನು :

"ನಗಬೇಡ ನಾಗಮ್ಮ, ಸುಳ್ಳಲ್ಲ; ಹೆಸರಿಗೆ ಕರಣಿಕನಾದರೂ ಸಮ್ಮುಖದ ಕರಣಿಕತನಕ್ಕೂ ಮಂತ್ರಿತ್ವಕ್ಕೂ ಬಹಳ ಅಂತರವಿಲ್ಲ. ಅರಸನ ಅಧಿಕಾರ ಸೂತ್ರವು ಸಮ್ಮುಖದ ಕರಣಿಕನ ಮುಖಾಂತರವೇ ಚಲಿಸುತ್ತದೆ. ಅವನಲ್ಲಿ ಅರಸನ ನಂಬಿಗೆ ಇರುವಷ್ಟು ಇನ್ನಾರಲ್ಲಿಯೂ ಇರುವದಿಲ್ಲ. ಬಸವಣ್ಣನ ಯೋಗ್ಯತೆಯನ್ನು ತಿಳಿದು ಬಿಜ್ಜಳರಾಜರೇ ತಮ್ಮ ಸಮ್ಮುಖದ ಕರಣಿಕನ ಕೆಲಸಕ್ಕೆ ನೇಮಿಸಿಕೊಂಡಿದ್ದಾರೆ. ಉತ್ತರ ವಯಸ್ಸಿನಲ್ಲಿ ನಾವು ಪಡೆದ ಸ್ಥಾನವನ್ನು ಬಸವೇಶ ಬೇಗನೇ ಪಡೆಯುವನೆಂಬುದಕ್ಕೆ ಇದೇ ನಿದರ್ಶನವಾಗಿದೆ......"

ಬಲದೇವನ ಮಾತಿನ ಉತ್ಸಾಹ ಬೆಳೆಯುತ್ತಲೇ ಇತ್ತು. ಅಧಿಕಾರ ಲಾಲಸೆಯನ್ನು ಸೇರದ ಬಸವಣ್ಣ ಮೈಮೇಲಿನ ಬಟ್ಟೆಗಳನ್ನು ತೆಗೆಯುವ ನೆವದಿಂದ ಮೆಲ್ಲನೆ ಎದ್ದನು. ನಾಗಲಾಂಬೆ ತಂದೆಗೆ ನೆನಪುಕೊಟ್ಟು ನುಡಿದಳು :

"ಚೆನ್ನಬಸವಣ್ಣನ ಬಗೆಗೆ ಮಾತನಾಡಿದುದನ್ನು ಬಸವೇಶನಿಗೆ ತಿಳಿಸಿರಪ್ಪಾ."

"ಹೌದು, ಬಸವೇಶಾ ಸ್ವಲ್ಪ ಕುಳ್ಳಿರು. ಚೆನ್ನಬಸವನನ್ನು ಅಧ್ಯಯನ ಕ್ಕಾಗಿ ಬಳ್ಳಿಗಾಂವಿಯ ಕೋಡೀ ಮಠದ ವಿದ್ಯಾಪೀಠಕ್ಕೆ ಕಳಿಸಬೇಕೆಂದು ನಿಮ್ಮ ಮಾವನವರ ಅಭಿಪ್ರಾಯವಿದೆ."

"ಅಷ್ಟು ದೂರದಲ್ಲಿ ಚೆನ್ನಬಸವೇಶ ಒಬ್ಬನೇ ಹೇಗೆ ಇರುವನು ?"

ಎನ್ನುತ್ತ ಬಸವೇಶ ಮತ್ತೆ ಕುಳಿತನು. ಮಹಾಮಂತ್ರಿ ಬಲದೇವ ಮುಂದುವರಿದು ಮಾತನಾಡಿದನು.

"ಏನೂ ತೊಂದರೆಯಾಗದು. ಬಳ್ಳಿಗಾಂವಿಯ ವಿದ್ಯಾಪೀಠದ ಘನತೆ ಯನ್ನು ನೀನೂ ಬಲ್ಲವನಾಗಿರುವೆ. ಅಲ್ಲಿಯ ಕೋಡೀಮಠಕ್ಕೂ ಪಂಚಲಿಂಗೇ ಶ್ವರ ದೇವಸ್ಥಾನಕ್ಕೂ ವಿಪುಲವಾಗಿ ರಾಜಧನ ಸಲ್ಲುತ್ತಿದೆ. ಆ ನಿಮಿತ್ತದಿಂದ ಅಲ್ಲಿಯ ಕುಲಪತಿ ವಿದ್ಯಾಭರಣ ಪಂಡಿತರು ನನಗೆ ಬಹಳ ಬೇಕಾದವರು. ಅವ ರಿಗೆ ಓಲೆ ಬರೆಯುತ್ತೇನೆ. ಹೇಗೂ ಹತ್ತುವರ್ಷದವನಾದ ನಿನ್ನ ಅಳಿಯನು ತನ್ನ ಸ್ನಾನ ಪೂಜೆಗಳನ್ನು ತಾನೇ ಮಾಡಿಕೊಳ್ಳುತ್ತಾನೆ. ಉಳಿದುದಕ್ಕೆ ಯಾವ ಆತಂಕವೂ ಆಗದು."

ತನ್ನ ಸಂಚಾರದಲ್ಲಿ ಬಸವಣನು ಬಳ್ಳಿಗಾಂವಿಯನ್ನು ಸಂದರ್ಶಿಸಿದ್ದನು. ಅಲ್ಲಿಯ ಪಾಠಪ್ರವಚನಗಳ ವೈಖರಿಯನ್ನೂ ವಾಮಶಕ್ತಿಗಳು ಬಿಟ್ಟುಹೋದ ಗ್ರಂಥರಾಶಿಯನ್ನೂ ಪ್ರತ್ಯಕ್ಷ ಕಂಡಿದ್ದನು. 'ಸಂಗಮ-ಬಳ್ಳೀಗಾಂವಿಗಳ ಸಂಗಮ ವಾಗಿ ಚೆನ್ನಬಸವಣ್ಣ ರೂಪುಗೊಳ್ಳುವದು ಮಹಾಸಾಧನೆ' ಎಂದು ಮನದಲ್ಲಿ ನೆನೆದು ಬಸವಣ್ಣ ಮಾವನ ಮಾತಿಗೆ ಸಮ್ಮತಿಯನ್ನು ಸೂಚಿಸಿದನು. ಬಳಿಕ ಯೋಜನೆಯ ಪೂರ್ಣತ್ವಕ್ಕಾಗಿ ಮಾದರಸು ಹೇಳಿದನು :

"ಭಟರ ರಕ್ಷಣೆಯಲ್ಲಿ ಚೆನ್ನಬಸವನನ್ನು ಬಾಗೇವಾಡಿಯಿಂದ ಬಳ್ಳಿ ಗಾಂವಿಗೆ ನಾನು ಕಳಿಸುತ್ತೇನೆ. ನಾಳೆ ನಾವು ಇಲ್ಲಿಂದ ಹೊರಡುತ್ತೇವೆ."

"ಇಷ್ಟು ಬೇಗ ಏಕೆ ? ನಾಲ್ಕು ದಿವಸ ಹೋಗಲಿ." ಬಲದೇವ ಮಂತ್ರಿ ಎಂದನು.

"ಬೇಗ ಹೋಗುವ ಕಾರಣವಿದೆ. ನಾವಿಲ್ಲದಾಗ ಮಠದ ಕಾರ್ಯನಿರ್ವ ಹಣೆಯಲ್ಲಿ ಅವ್ಯವಸ್ಥೆಯಾದರೆ ಜನರು ಬೇಗನೆ ಹುಯ್ಯಲೆಬ್ಬಿಸುತ್ತಾರೆ."

"ಅದೂ ನಿಜ." ಬಸವಣ್ಣ ಮಾವನನ್ನು ನೋಡುತ್ತ ಹೇಳಿದನು. ಹೋಗಲಿ ಎನ್ನುವಂತಿತ್ತು ಅವನ ಭಾವ.

"ನಾಗಲಾಂಬೆಯೂ ಈಗ ನಮ್ಮ ಕೂಡ ಬರುವಳು."

"ಅಕ್ಕ? ಹೌದೇನಮ್ಮ?"

"ಹೌದು, ಚೆನ್ನಬಸವನನ್ನು ಅತ್ತ ಕಳಿಸಿದ ಬಳಿಕ ಮರಳಿ ಇಲ್ಲಿಗೆ ಬರುವೆನು."

"ನನಗೂ ಈಗ ನಿಮ್ಮೊಡನೆ ಬರುವ ಮನಸ್ಸು."

"ಆದರೆ ಹೇಗೆ ಸಾಧ್ಯ? ಈಗ ಕರಣಿಕನಾಗಿ ಕೆಲಸ ಮುಂದುವರಿಸು. ಇಂಗಳೇಶ್ವರದಲ್ಲಿ ಕಟ್ಟಿಸುತ್ತಿರುವ ದೇವಸ್ಥಾನದ ಕೆಲಸ ಮುಗಿದೊಡನೆ ಅದರ ಪ್ರತಿಷ್ಠಾಮಹೋತ್ಸವಕ್ಕೆ ಮಹಾಮಂಡಲೇಶ್ವರರನ್ನು ಕರೆಸುವ ವಿಚಾರವಿದೆ. ಆಗ ನೀನು ಸ್ವಲ್ಪ ಮೊದಲೇ ಬರಬೇಕಾಗುವದು."

ಬಸವೇಶನಿಗೆ ಸ್ನಾನದ ಕರೆ ಬರಲು ಎಲ್ಲರೂ ಎದ್ದರು.

ಮೊದಲೇ ನಿಶ್ಚಿಂತಭಾವನೆಯಲ್ಲಿದ್ದವಳು ಅಕ್ಕನಾಗಮ್ಮ! ಒಂದಲ್ಲ ಎರಡು ಬೆಳಕುಗಳಲ್ಲಿ ಪರಮಾತ್ಮನ ಒಂದು ಬೆಳಕನ್ನು ಅನುಭವಿಸುತ್ತ ಆನಂದದಲ್ಲಿದ್ದಳು. ಈಗ ಅವಳಿಗೆ ಮಹಾವ್ಯಕ್ತಿ ಮಮತೆಯ ತಮ್ಮ–ಬಸವಣ್ಣನ ಹತ್ತಿರ ಇದ್ದು ತನ್ನ ಮುಂದಿನ ಜೀವನ ನಡೆಸುವ ಸಂಧಿ, ಗೌರವಯುತವಾಗಿಯೇ ಸಂದುದು ಹೆಚ್ಚಿನ ಸಮಾಧಾನದ ಸಂಗತಿಯಾಗಿತ್ತು. ಅದರೊಡನೆ ಚೆನ್ನಬಸವನ ಅಧ್ಯಯನದ ಏರ್ಪಾಡು ಎರಡನೆಯ ಸಮಾಧಾನ!

೩ ಭಾವಬಲ

ಚೆನ್ನಬಸವನನ್ನು ಬಳ್ಳಿಗಾಂವಿಗೆ ಕಳಿಸಿದ ಬಳಿಕ ಒಂದು ತಿಂಗಳಲ್ಲಿ ನಾಗಮ್ಮ ಬಾಗೇವಾಡಿಯಿಂದ ಕಲ್ಯಾಣಕ್ಕೆ ಮರಳಿದಳು. ಅಷ್ಟರಲ್ಲಿ ಮಹಾ ಮಂತ್ರಿ ಬಲದೇವರಸನ ಆರೋಗ್ಯ ಕೆಟ್ಟುಹೋಗಿತ್ತು. ವಾರ್ಧಕ್ಯದಿಂದ, ಅಪರಿ ಮಿತ ಪರಿಶ್ರಮದಿಂದ, ತನ್ನ ಸಂಪತ್ತನ್ನು ಸ್ವೀಕರಿಸಲು ಬಸವೇಶ ನಿರಾಕರಿಸು ತ್ತಿರುವ ಚಿಂತೆಯಿಂದ ಆತನು ಹತಬಲನಾಗಿ ಹಾಸಿಗೆ ಹಿಡಿದಿದ್ದನು. ಬಸವೇಶನ ಸಲಹೆಯಂತೆ ಆರೈಕೆ ನಡೆದಿದ್ದಿತು. ಹಸುಮಗಳು ಗಂಗಾಂಬೆ ಗಾಬರಿಯಿಂದ ತತ್ತರಿಸುತ್ತಿದ್ದಳು. ನಾಗಮ್ಮ ಬಂದು ಪೂಜ್ಯ – ಹಿರಿಯ – ಸೋದರಮಾವ ಅಸ್ವಸ್ಥನಾಗಿರುವದನ್ನು ಕಂಡು ಬಹಳ ವ್ಯಥೆಪಟ್ಟಳು. ರೋಗಿಗಳ ಶುಶ್ರೂಷೆ ಯಲ್ಲಿ ಅನುಭವಿಕಳಾದ ತಾನೇ ಗಂಗಾಂಬೆಯನ್ನು ಬಿಡಿಸಿ ಅವನ ಆರೈಕೆಯನ್ನು ಕೈಕೊಂಡಳು. ಹಾಗೆಯೇ ಮಾನಸಿಕ ವ್ಯಥೆಯ ನಿವಾರಣೆಗಾಗಿ ನಿತ್ಯವೂ ಅವ ನೊಡನೆ ತತ್ವವಿಚಾರ ನಡೆಯಿಸಿ ವಚನಗೀತಗಳ ಪಠಣ ಮಾಡುತ್ತಿದ್ದಳು. ಅದ ರಿಂದ ಬಲದೇವರಸನ ಮನಸ್ಸಿಗೆ ಅಷ್ಟಿಷ್ಟು ಶಾಂತಿಯುಂಟಾಗುತ್ತಿತ್ತು. ಆತನು ನಾಗಲಾಂಬೆಯ ನಿಸ್ಪೃಹ ಸೇವೆಗೆ ಕೃತಜ್ಞನಾಗುತ್ತಿದ್ದನು. ಆದರೂ ಬಲ ದೇವನ ಮನಸ್ಸನ್ನು ಮುಸುಕಿದ ಮಾಯೆಯ ಮುಸುಕು ಬೇಗ ಹರಿಯ ಲೊಲ್ಲದು. ಅಂತರಂಗದ ವ್ಯಥೆ ಕೆದಕುತ್ತಲೇ ಇತ್ತು.

"ನಾಗಮ್ಮಾ ಬಸವೇಶನ ವ್ಯಕ್ತಿತ್ವ, ನನ್ನಸಂಪತ್ತು ಇವೆರಡು ಸೇರಿ ಗಂಗಾಂಬೆಯ ಸಂಸಾರ ನಡೆಯಬಹುದಾಗಿರುವ ಸುಂದರ ಚಿತ್ರ ಈಗ ನನ್ನ ಮನದಲ್ಲಿ ಮಸಣಿಸಹತ್ತಿದೆ. ನನ್ನ ಆಸ್ತಿಯನ್ನು ಬಸವೇಶ ನಿರಾಕರಿಸುತ್ತಿರು ವದು ಸರಿಯೇ ?"

"ಸರಿ. ಅದು ಸಹಜವದೆ. ಲಿಂಗಾಂಗಿಗಳಿಗೆ ಲಿಂಗಾವಸರಕ್ಕೆ ಬಂದುದಷ್ಟೇ ಸಾಕು. ಅದೂ ಕಾಯಕದಿಂದ ಪ್ರಾಪ್ತವಾಗಿರಬೇಕು. ಅದನ್ನು ಗುರು-ಲಿಂಗ-ಜಂಗಮಾರ್ಚನೆಯಲ್ಲಿ ಅರ್ಪಿಸಿ ಪ್ರಸಾದವಾಗಿ ಭೋಗಿಸುವರು."

"ಕಾಯಕಮೂಲ್ಯದಿಂದಲೇ ತನ್ನ ಆರಾಧನೆ ನಡೆಯಲಿ……"

"ಆಮೇಲೆ ಹೆಚ್ಚಿನದನ್ನೇನು ಮಾಡುವನವನು ?"

"ತನ್ನದಾಗಿ ಇರುವದು."

"ಶಿವನ ಒಡವೆಗಳನ್ನು ತನ್ನದೆನ್ನುವದು ಲಿಂಗಭಕ್ತರ ಶೀಲವಲ್ಲ ಮಾವಯ್ಯಾ."

ಬಲದೇವರಸು ಸ್ತಂಭಿತನಾದನು. ಒಳಗಣ್ಣಿಗೆ ಕಿರಣವೊಂದು ಕಾಣಿಸಿತು.

"ನಾಗಮ್ಮಾ ಹೌದು; ನಿನ್ನ ಮಾತಿನಲ್ಲಿ ಬಹು ದೊಡ್ಡ ಅರ್ಥವಿದೆ. ನನಗೆ ತಿಳಿವು ಮೂಡುತ್ತಿದೆ. 'ಈ ವಸ್ತುಒಡವೆಗಳೆಲ್ಲ ನನ್ನವು, ನಾನು ಕೊಡುವೆನು' ಎಂಬುದು ಅಜ್ಞಾನ."

"ಹೌದು ಮಾವಯ್ಯಾ, ಪಡಿಪದಾರ್ಥಗಳನ್ನೆಲ್ಲ ನನ್ನವೆನ್ನುವದು ಲೋಭ! ಆಗ ಅವೆಲ್ಲ ಇಂದ್ರಿಯಗಳ ವಿಷಯವಾಗುವವು. ವಿಷಯದಲ್ಲಿ ಮೋಹವೆಂಬ ನಂಜಿದೆ. ಅದು ದುಃಖಮೂಲ. ಈ ನಂಜು ತಾಗದಂತೆ ವಿಷಯ ಗಳನ್ನು ದೂರಿಡೆಂದು ಬಸವಣ್ಣನ ಹೃದಯ ಪರಶಿವನಲ್ಲಿ ಮೊರೆಯಿಡುತ್ತಿದೆ. ಅವನ ಆ ವಚನಗೀತ ಹೇಳಲಿಯಾ ಮಾವಾ ?" ಸರಳವಾಗಿ ಕೇಳಿದಳು ನಾಗಮ್ಮ.

"ಅವಶ್ಯವಾಗಿ ಹೇಳು ತಾಯಿ."

"ವಿಷಯವೆಂಬ ಹಸುರನೆನ್ನ ಮುಂದೆ ತಂದು ಪಸರಿಸಿದೆಯಯ್ಯಾ;
ಪಶುವೇನ ಬಲ್ಲುದು ? ಹಸುರೆಂದೆಳಸುವುದು.
ವಿಷಯ ರಹಿತನ ಮಾಡಿ ಭಕ್ತಿರಸವ ದಣಿಯೆ ಮೇಯಿಸಿ,
ಸುಬುದ್ಧಿಯೆಂಬುದಕವನೆರೆದು,
ನೋಡಿ ಸಲಹಯ್ಯಾ, ಕೂಡಲಸಂಗಮದೇವಾ !"

"ಆಹಾ ಎಂತಹ ಅರಿವಿನ ಅಂತರಂಗದ ಮೊರೆಯಿದು ? ಮಮಕಾರದ ಮೂಲವನ್ನೇ ಕತ್ತರಿಸುವ ಪ್ರಾರ್ಥನೆಯಿದು. ಇದೆಲ್ಲ ಧನಸಂಪತ್ತು ನನ್ನದೆನ್ನು ವದೇ ಮೂಢತನ! ಹಾಗೆಂದು ಮಮಕರಿಸಿ ದುಃಖಿಕೊಳ್ಳಗಾಗುತ್ತಿದ್ದೇನೆ. ನಿಜ...... ನಾಗಮ್ಮ, ಬಸವಣ್ಣ ಧರ್ಮದರ್ಶಿಯಾಗಿ ಈ ಸಂಪತ್ತನ್ನು ಶಿವನ ದಾಸೋಹಕ್ಕಾಗಿ ವಿನಿಯೋಗಿಸಲು ಅಭ್ಯಂತರವೇನು......?"

ನಾಗಮ್ಮನಿಗೆ ಸ್ವಲ್ಪ ನಗುಬಂತು. ಬಹುಜನ್ಮದ ಗಿಂಜುಜಿಗಿ ಸುಲಭವಾಗಿ ನಾಶವಾಗುವದಲ್ಲವೆಂದು ಭಾವಿಸಿ ವಿನಯದಿಂದ ನುಡಿದಳು :

"ಆಗಲಿ ಮಾವಯ್ಯ ಹಾಗೆ ಹೇಳುತ್ತೇನೆ. ನೀವು ತನಗೆ ಕೊಟ್ಟಿರೆಂದು ತಾನು ಸ್ವೀಕರಿಸಿ ತನ್ನದೆಂದು ಅಭಿಮಾನಿಸುವದು ಅವನಿಗೆ ಬೇಡ. ಶಿವನ ಸೊತ್ತಿಗೆ ಧರ್ಮಶ್ರೀಯಾಗಿ ಶಿವನವರಿಗ ವಿನಿಯೋಗಿಸುತ್ತ ವರ್ತಿಸುವ ಯಾರಾದರೂ ಬಂಧನಕ್ಕೊಳಗಾಗರು."

ಈ ಬಗೆಯ ತಾತ್ವಿಕ ವಿವೇಚನೆ ನಾಗಮ್ಮನಿಂದ ನಡೆಯುತ್ತಲೇ ಇತ್ತು. ಬಲದೇವಮಂತ್ರಿ ಮೇಧಾವಿ, ರಾಜಕಾರಣಿ, ಆದರೆ ನಾಗಮ್ಮನಂತಹ ಇಹಪರ ಸಮನ್ವಯಗೊಳಿಸುವ ಪರಿಪಕ್ವ ಹೃದಯ ಅವನಿಗೆಲ್ಲಿಂದ ಬರಬೇಕು ? ಆದರೂ ನಾಗಮ್ಮನು ಬೇಸರಿಯದೆ ಅವನ ಮನಶ್ಶಾಂತಿಗೆ ಯತ್ನಿಸುತ್ತಿದ್ದಳು. ಅದರಲ್ಲಿ ಬಹುಮಟ್ಟಿಗೆ ಯಶಸ್ವಿಯಾದಳು. ಅವನ ಆರೋಗ್ಯ ಮಾತ್ರ ಏರಿಳಿಯುತಲಿತ್ತು.

ಅತ್ತ ಬಸವೇಶನ ಬುದ್ಧಿಯ ಬೆಳಕು ಪಸರಿಸುತ್ತಿತ್ತು. ಬಿಜ್ಜಳರಾಜನ ಅಪ್ಪಣೆಯಂತೆ ಅರ್ಥಶಾಖೆಯ ಆಡಳಿತವನ್ನು ಬಸವಣ್ಣನು ಪರಿಶೀಲಿಸುತ್ತಿರುವಾಗ ಅರ್ಥಮಂತ್ರಿ ಮಂಚಣ್ಣನ ಹಲವು ಅಕ್ರಮ ವರ್ತನೆಗಳು ಬೆಳಕಿಗೆ ಬಂದವು. ಇದರಿಂದ ರಾಜಾಧ್ಯಕ್ಷ ಚಾವಡಿಯಲ್ಲಿ ಬಸವಣ್ಣನ ಖ್ಯಾತಿ ಉಂಟಾಯಿತು. ಆದರೆ ಮಂತ್ರಿ ಮಂಚಣ್ಣನು ಅವನ ಬಗೆಗೆ ಮತ್ಸರಿಸತೊಡಗಿದನು. ಈ ಅವಾಂತರಗಳ ಸುದ್ದಿ ಬಲದೇವ ಮಹಾಮಂತ್ರಿಯ ಹಾಸಿಗೆಯ ವರೆಗೆ ಬಂದು ಮುಟ್ಟಿತು. ಬಲದೇವಮಂತ್ರಿ ಗಾಬರಿಯಾದನು; ಜ್ವರವೇರಿದವು. ಸಂಜೆಯ ಸಮಯ ಬಸವೇಶನನ್ನು ಕರೆಯ ಕಳುಹಿದನು. ಪರದೆಯ ಹಿಂಬದಿಯಲ್ಲಿ ಗಂಗಾಂಬೆಯೊಡನೆ ಕುಳಿತಿದ್ದ ನಾಗಲಾಂಬೆ ಪ್ರಸಂಗವನ್ನು ತಿಳಿದಳು. ಸಮಯೋಚಿತ ಅವಧಾನದಿಂದ ವೀಣೆಯನ್ನು ಹಿಡಿದು ವಚನಗೀತವನ್ನು ಸುಶ್ರಾವ್ಯವಾಗಿ ಹಾಡಹತ್ತಿದಳು :

"ನಂಬರು, ನೆಚ್ಚರು, ಬರಿದೆ ಕರೆವರು;
ನಂಬಲರಿಯರೀ ಲೋಕದ ಮನುಜರು !
ನಂಬಿ ಕರೆದೊಡೆ 'ಓ' ಎನ್ನನೆ ಶಿವನು ?

ನಂಬದೆ ನೆಚ್ಚದೆ ಬರಿದೆ ಕರೆವರ
ಕೊಂಬ ಮೆಟ್ಟಿ ಕೂಗೆಂದ ನಮ್ಮ ಕೂಡಲಸಂಗಮದೇವಾ.

ಗೀತವಾರಂಭವಾಗಿ ಸ್ವಲ್ಪದರಲ್ಲಿಯೇ ಬಸವಣ್ಣ ಬಂದು ಮಾವನ ಹಾಸಿಗೆಯ ಹತ್ತಿರ ಕುಳಿತಿದ್ದನು. 'ನಂಬಿ ಕರೆದಡೆ ಓ ಎನ್ನನೆ ಶಿವನು?' ತಾರದಲ್ಲಿ ಈ ಚರಣ ಹೇಳುತ್ತಿರುವಾಗ 'ಎಂತಹ ಚೈತನ್ಯವಿದೆ ಈ ವಿಶ್ವಾಸದ ನುಡಿಯಲ್ಲಿ?' ಎಂದು ಬಲದೇವರಸು ಎದ್ದು ಕುಳಿತನು. ಬಸವೇಶ ಧ್ಯಾನಮಗ್ನನಾಗಿದ್ದನು. ಗೀತವು ಬಯಲಲ್ಲಿ ಬೆರೆತಂತೆ ಮುಕ್ತಾಯಗೊಳ್ಳುತ್ತಿರುವಾಗ ಮನೆಯಲ್ಲೆಲ್ಲ ಮನದಲ್ಲೆಲ್ಲ ಗೀತೆಯ ಭಾವ ತುಂಬಿತ್ತು. ಬಲದೇವರಸನ ಅಂತಃಕರಣವನ್ನು ಮುತ್ತಿದ ಮಾಯೆಯ ಬಲಿ ಕತ್ತರಿಸಿ ಹೋಗಿತ್ತು. ದೇ...ವಾ... ಕೊನೆಯ ಸ್ವರವು ಭಾವದಲ್ಲಿ ಲಯವಾದಾಗ ಭಾವಪರವಶನಾದ ಬಲದೇವನು ಕೈಜೋಡಿಸಿ ಸಂಗಮದೇವನನ್ನು ವಂದಿಸಿದನು. ಬಸವೇಶನು ಅಂತರಂಗದಲ್ಲಿ ಸಂಗಮನಾಥನನ್ನು ಕಂಡು ಪುಳುಕಿತನಾಗಿ ಕಣ್ದೆರೆದು ಪ್ರಕೃತಕ್ಕೆ ಬಂದನು. ಕ್ಷಣಹೊತ್ತು ಎಲ್ಲರೂ ಮೌನ! ಬಳಿಕ ಬಸವೇಶ ಮುಂದೆ ಬಾಗಿ—

"ನನ್ನನ್ನು ಕರಿಸಿದಿರಂತೆ." ಎಂದನು.

"ಹೌದು ಬಸವೇಶಾ, ಶಿವನ ನಂಬಲರಿಯದ ಮರುಳನೇ ನಾನು! ಎಲ್ಲರ ಬಾಯಲ್ಲಿ ನಿನ್ನ ಮತ್ತು ಮಂಚಣ್ಣನ ಮಾತುಗಳೇ ಇವೆಯೆಂಬುದನ್ನು ಕೇಳಿ ಅಂತಹ ಮಹಾ ವ್ಯಕ್ತಿಯನ್ನು ಎದುರುಹಾಕಿಕೊಳ್ಳುವದು ಯೋಗ್ಯವೋ ಎಂದು ಸಂದೇಹದಿಂದ ಭೀತಿಗೊಂಡಿದ್ದೆನು. ನಿನ್ನನ್ನು ಎಚ್ಚರಿಸಬೇಕೆಂದು ಕರೆದೆನು. ಅದು ಬಯಲ ಭ್ರಾಂತಿ! ಚಾಲುಕ್ಯ ಸಾಮ್ರಾಜ್ಯದ ಆಡಳಿತವನ್ನು ತೂಗಿಸಿದವನೆಂಬ ಅಹಂಕಾರದಿಂದ ಎರಡು ಜೀವಗಳ ಕ್ಷೇಮಕ್ಕೆ ವ್ಯರ್ಥವಾಗಿ ಚಿಂತಿಸುತ್ತಿದ್ದೆನು. ನಾವು ಒಳಗೆ ಮಾಯಾಬದ್ಧರಾಗಿ ತೋರಿಕೆಗೆ ಪರಮಾತ್ಮನ ಮೇಲೆ ಭಾರಹಾಕುತ್ತೇವೆ. ಶಿವನನ್ನು ದೃಢವಾಗಿ ನಂಬಿದ್ದರೆ ಚಿಂತಿಸುವದೇಕೆ? ಈ ಭ್ರಾಂತಿಯನ್ನು ಬಿಡಿಸುವದಕ್ಕೆ ನಾಗಮ್ಮ ಎರಡು ತಿಂಗಳಿಂದ ಶ್ರಮಿಸುತ್ತಿದ್ದಾಳೆ. ಇಂದು ಯಶಸ್ವಿಯಾದಳು. ನಿನ್ನ ಅಮರಗೀತ ನಾಗಮ್ಮನ ಭಾವದಲ್ಲಿ ಬೆರೆದು ಬಂದು ನನ್ನ ಕತ್ತಲೆಯನ್ನು ಕಳೆಯಿತು. ಸಂಗಮನಾಥನೇ ನಿನ್ನ ಯೋಗ ಕ್ಷೇಮಕ್ಕೆ ಸಿದ್ಧನಿದ್ದಾನೆ. ನಾನೇನೂ ಹೇಳಬೇಕಾದುದಿಲ್ಲ."

"ಹೇಳಬೇಕು; ನಿಮ್ಮ ನುಡಿಗಳು ಸಂಗಮನಾಥನ ನುಡಿಗಳೆಂದೇ ಭಾವಿಸುತ್ತೇನೆ. ಮಂಚಣ್ಣ ಮಂತ್ರಿಗಳ ಸ್ಥಾನಪ್ರತಿಷ್ಠೆಗಳಿಗೆ ಹೆದರಿ ಕರ್ತವ್ಯಚ್ಯುತನಾಗುವದು ಸರಿಯಾದೀತೇ ?"

"ಸರಿಯಾಗದು; ಆದರಿಷ್ಟೆ, ಕರ್ತವ್ಯನಿಷ್ಠೆ ಕಠಿಣವಾದ ಕ್ರಮ ! ಸ್ವಪರ ಹಿತಾಸಕ್ತಿಗಳೂ ಲೋಭಮೋಹಗಳೂ ಕರ್ತವ್ಯದ ಮಾರ್ಗದಲ್ಲಿ ದೊಡ್ಡ ಆತಂಕಗಳು. ನೀನು ಇವೆಲ್ಲವನ್ನು ಮೆಟ್ಟಿ, ಕರ್ತವ್ಯನಿಷ್ಠನಾದ ರಾಜಕರ್ಮಚಾರಿಯಾಗಬೇಕೆಂದೇ ನನಗಿರುವ ಆಸೆ. ನನ್ನ ದೇಹ ದುರ್ಬಲವಾಗುತ್ತಿದೆ; ಶಿವನ ಕರೆ ಸಮೀಪಿಸುತ್ತಿದೆ. ನಾನಿನ್ನು ಹರಸುವದಿದನ್ನು ! ನಿತ್ಯ ಸಾಧನೆಯಿಂದ ನಿನ್ನ ಆತ್ಮಶಕ್ತಿಯನ್ನು ಬೆಳೆಯಿಸಿಕೊಂಡು ಲೋಕಹಿತಕ್ಕೆ ಅದನ್ನು ಉಪಯೋಗಿಸುವದು ನಿನ್ನ ಜೀವನದ ಆದರ್ಶವಾಗಲಿ !"

ಬಲದೇವನ ಅಮೃತವಾಣಿ ಬಸವಣ್ಣನ ಗೃಹಸ್ಥ ಜೀವನದ ದಾರಿದೀಪವಾಗಿದ್ದಿತು. ಅದೇ ಹೊತ್ತಿಗೆ ಸಂಜೆಯ ದೀಪವನ್ನು ಹೊತ್ತಿಸಿ ಸೇವಕ ತಂದಿಟ್ಟನು. ಸಂಗಮನಾಥನಂತೆಯೇ ಕಂಡ ಮಾವನಿಗೆ ಬಸವೇಶ ತಲೆವಾಗಿ ವಂದಿಸಿದನು.

ಸುಖದುಃಖ ಮಿಶ್ರ ಭಾವನೆಯಿಂದ ಹೃದಯ ತುಂಬಿದ ನಾಗಲಾಂಬೆ ಅಶ್ರುಪೂರಿತ ನೇತ್ರಳಾಗಿ ಎದುರಿನಲ್ಲಿದ್ದುದನ್ನು ಬಲದೇವನು ಕಂಡು ಅಂತಃಕರಣ ಉಕ್ಕಿ ನುಡಿದನು :

"ನಾಗಮ್ಮಾ, ಮಾಯಾಮೂಲವಾದ ಆಸೆ-ನಿರಾಸೆಗಳಿಂದ ಹುಚ್ಚನಾದ ನನ್ನನ್ನು ಉದ್ಧರಿಸಿ ಕಾಪಾಡಿದೆ ತಾಯೀ. ಪ್ರಬುದ್ಧ ಹೆಣ್ಣು ಪರಾಶಕ್ತಿಯೆಂಬುದು ಸುಳ್ಳಲ್ಲ. ವಯಸ್ಸಿನಲ್ಲಿ ಚಿಕ್ಕವಳಾದರೂ ನನಗಿಂದು ನೀನು ಗುರು. ಅಳಿಯನಾದರೂ ನಿನ್ನ ತಮ್ಮ ಬಸವೇಶ ಗುರು. ಗಂಗಾಂಬಿಕೆಯನ್ನು ನಿನ್ನ ಉಡಿಯಲ್ಲಿ ಹಾಕಿ ನಾನು ನಿಶ್ಚಿಂತನಾಗುವೆನು. ಅವಳ ವೃದ್ಧಿ-ಹಾನಿಗಳೆಲ್ಲ ನಿನ್ನನ್ನೇ ಕೂಡಿವೆ. ನೀನದನ್ನು ನಡಿಸಿಕೊಡಬೇಕು."

"ಆಗಲಿ ತಂದೆ, ಹೆಣ್ಣೊಂದು ಹಡೆಯದಿದ್ದ ನನಗೆ ಗಂಗಾಂಬೆಯೇ ಆ ಹೆಣ್ಣು."

ಎನ್ನುವಾಗ ನಾಗಲಾಂಬೆಯ ಕಂಠ ಬಿಗಿದುಬಂದಿತು. ಸಂತೋಷದಿಂದ

ಪಾದವನ್ನು ಮುಟ್ಟಿ ನಮಿಸಿದಳು. ಗಂಗಾಂಬಿಕೆಯೂ ಮುಂದೆ ಬಂದು ಮೂವರಿಗೂ ನಮಸ್ಕಾರ ಮಾಡಿದಳು.

ಮುಂದೆ ಬಿಜ್ಜಳರಾಜನ ಸೂಚನೆಯಂತೆ ಬಲದೇವರಸು ತನ್ನ ಸ್ಥಿರಚರ ಸಂಪತ್ತನ್ನು ಗಂಗಾಂಬೆಯ ಹೆಸರಿಗೆ ಬರೆಯಿಸಿದನು. ಬಲುಭವ್ಯವಾಗಿ ಕಟ್ಟಿದ ಮಹಮನೆಯೆಂಬ ಅರಮನೆಯನ್ನು ಬಸವಣ್ಣ ತನ್ನ ವಾಸಕ್ಕಾಗಿ ಉಪಯೋಗಿಸ ದಿದ್ದರೆ, ಅದು ಧಾರ್ಮಿಕ ಚಟುವಟಿಕೆ ಕೇಂದ್ರ ನಿಲಯವಾಗಬೇಕೆಂದು ಅದರಲ್ಲಿ ಉಲ್ಲೇಖಿಸಿ ಶಾಸನ ಮಾಡಿಸಿದನು.

ಈ ಶಾಸನದ ನಂತರ ಬಲದೇವನಿಗೆ ಇಹಲೋಕದ ತಂತುಗಳೆಲ್ಲ ಹರಿದವು. ಅವನ ತನು-ಮನ-ಭಾವಗಳು ಪರಮಾತ್ಮನನ್ನು ಅರಸಿ ಕಂಡು ಕೂಡುವುದ ರಲ್ಲಿಯೇ ತೊಡಗಿದವು. ಕುಳಿತು ತನು ದಣಿಯುವ ವರೆಗೆ ಶಿವಾರ್ಚನೆಯನ್ನೇ ಮಾಡುವನು. ಸ್ತೋತ್ರ-ವಚನಗೀತೆ ಕೇಳುತ್ತಲೇ ವೇಳೆಗಳೆಯುವನು. ಅವ ನಿಗೆ ಸಂತೋಷವಾಗುವದಕ್ಕಾಗಿ ನಾಗಲಾಂಬೆ ಬೇಸರಿಯದೇ ಅವುಗಳ ಶ್ರವಣ ಮಾಡಿಸುತ್ತಿದ್ದಳು. ಬರಬರುತ್ತ ಅವಯವಗಳ ಚಲನೆ ಕುಂದಿತು. ಪ್ರಸಾದ ಸೇವನೆ ಸಂಕ್ಷಿಪ್ತವಾಗಿ ಶೂನ್ಯಕ್ಕೆ ಬಂದಿತು.

ಬಸವೇಶ, ನಾಗಲಾಂಬೆ, ಗಂಗಾಂಬೆ, ನೀಲಾಂಬೆ ಇವರೆಲ್ಲರ ಆಸರದಲ್ಲಿ ಒಮ್ಮೆ ಶಿವಾರ್ಚನೆ ಮಾಡುತ್ತಿದ್ದಾಗ ಬಲದೇವಮಂತ್ರಿಯ ಪ್ರಾಣವಾಯುವು ಪರಶಿವನಲ್ಲಿ ಲೀನವಾಯಿತು.

ನಗರದಲ್ಲಿ ಉಂಟಾದ ದುಃಖದ ವಾತಾವರಣ ಅಡಗಿ ನಾಗರಿಕ ಜೀವನವು ಸಾಮಾನ್ಯ ನಡವಳಿಗೆ ಬರಲು ಎರಡು ವಾರ ಹಿಡಿಯಿತು.

೪ ಗಹನ ಸಮಸ್ಯೆ ಎದುರಾಯಿತು

ಬಿಜ್ಜಳನ ಅಪೇಕ್ಷೆಯಂತೆ ಬಸವೇಶ ಸಿದ್ಧಪಡಿಸಿದ ಹೊಸ ಆರ್ಥಿಕ ಯೋಜನೆಯು ಅನುಷ್ಠಾನದಲ್ಲಿ ಬಂದಿತ್ತು. ಅದು ಮೇಲು ಕೀಳು ಎನ್ನದೆ ಸಕಲ ಪ್ರಜೆಗಳ ಕಲ್ಯಾಣವನ್ನು ಸಾಧಿಸುವಂತಿತ್ತು. ಅದನ್ನು ಮೆಚ್ಚಿದ ಬಿಜ್ಜಳನು ಬಸವೇಶನನ್ನು ಕರಣಿಕನ ಸ್ಥಳದಿಂದ ಸಮ್ಮುಖದ ಕಾರ್ಯದರ್ಶಿಯ ಅಧಿಕಾರಕ್ಕೆ ಏರಿಸಿದ್ದನು. ಇದರಲ್ಲಿ ಬಲದೇವ ಮಹಾಮಂತ್ರಿಯ ಕಾರ್ಯ ಭಾರದ ಬಹುಭಾಗ ಸೇರಿದ್ದಿತು. ಇಷ್ಟರಲ್ಲಿ ಬಸವೇಶ ಮಹಮನೆಯ ಆವಾರ ದಲ್ಲಿ ತಮಗಾಗಿ ರಚಿಸಿದ ಬೇರೆ ವಾಸಗೃಹದಲ್ಲಿ ಬಂದು ನಿಂತನು. ಈ ವಾಸಗೃಹ ವನ್ನು ನಾಗಮ್ಮ ತಾನೇ ನಿಂತು ಸಾಧಾರಣ ಸ್ವರೂಪದಲ್ಲಿ ಕಟ್ಟಿಸಿದ್ದರು. ಬೇಗನೇ ಹಿರಿಯರಾದ ಸೊಡ್ಡಳ ಬಾಚರಸರನ್ನು ಮುಂದೆ ಮಾಡಿಕೊಂಡು ಸಂಗಮದಲ್ಲಿ ಯಂತೆ ತತ್ವವಿವೇಚನೆ-ಸತ್ಯಾನ್ವೇಷಣೆಗಳ ಗೋಷ್ಠಿಗಳನ್ನು ಮಹಮನೆಯಲ್ಲಿ ನಡಿಸಹತ್ತಿದರು. ಮೊದಲು ಬಾಚರಸರ ಪರಿಚಯದವರಷ್ಟೇ ಬಂದರು. ಕ್ಷಿಪ್ರ ದಲ್ಲಿಯೇ ಬಸವಣ್ಣನ ನಡೆನುಡಿಗಳಿಂದ ಸತ್ಯಬೋಧೆಯ ಮಧುರ ವಾಣಿಯಿಂದ ಆಕರ್ಷಿತರಾದ ನಗರದ ನೂರಾರು ಜಿಜ್ಞಾಸುಗಳು ಸೇರಿಕೊಂಡರು. ಬಲದೇವ ಬಯಸಿದ ಉದ್ದೇಶಕ್ಕೆ ಮಹಮನೆಯು ಎಡೆಗೊಟ್ಟಿತು. ಅದರ ವ್ಯವಸ್ಥೆಯು ನಾಗಮ್ಮನ ಧಾರ್ಮಿಕ ಕಾಯಕವಾಯಿತು. ರಾಜಕಾರ್ಯಕ್ಕಾಗಿ ಬಸವೇಶ್ವರ ಆಗಾಗ ಸಂಚಾರದಲ್ಲಿ ಇರಬೇಕಾಗುತ್ತಿತ್ತು. ಅವನಿಲ್ಲದಾಗಲೆಲ್ಲ ನಾಗಮ್ಮನೇ ಅನುಭವಗೋಷ್ಠಿ ಸಂಚಾಲಕಳಾಗಿರುತ್ತಿದ್ದಳು. ಅಚ್ಚ ಅನುಭವಿಗಳು ಗೋಷ್ಠಿ ಯಲ್ಲಿ ಸೇರಿ ನಡಿಸುವವರೆಗೆ ಅವಳೇ ಅದರ ನೇತಾರೆಯೂ ವಕ್ತಾರೆಯೂ ಆಗಿ ಅದರ ಅಭಿವೃದ್ಧಿಗೈದು, ಅಂತಹ ಮಹಾನುಭಾವಿಗಳನ್ನು ಆಕರ್ಷಿಸುವಂತೆ ಮಾಡಿದಳು. ಅದು ಅನುಭವಮಂಟಪವಾಯಿತು. ಹೀಗೆ ಎರಡು ಮೂರು ವರ್ಷ ಕಳೆಯುವವರೊಳಗಾಗಿ ನಾಗಮ್ಮನು ಗೃಹವಿಷಯದಲ್ಲೊಂದು ಗಹನ ಸಮಸ್ಯೆಯನ್ನು ಎದುರಿಸಬೇಕಾಯಿತು.

ಬಸವೇಶ ಬನವಾಸಿಯ ಕಡೆಗೆ ಹೋಗಿದ್ದನು. ಒಂದು ದಿನ ಮಹ ಮನೆಯ ಮುಂದೆ ಬಂದು ನಿಂತ ರಥದಿಂದ ಬಿಜ್ಜಳನ ರಾಣಿ ಮಲ್ಲಿಕಾಮೋದಿನಿ ದೇವಿ ಇಳಿದಳು. ಅದನ್ನು ತಿಳಿದು ನಾಗಲಾಂಬಿಕೆ ಧಾವಿಸಿ ಬಂದು ಸನ್ಮಾನ ದೊಡನೆ ಸ್ವಾಗತಿಸಿ ಒಳಗೆ ಕರೆದೊಯ್ದಳು. ಮಹಮನೆಯ ಮೇಲ್ಮಾಡಿನಲ್ಲಿ ಬಿಜಯಂಗೈಸಿಕೊಳ್ಳಬೇಕೆಂದು ಅತ್ತ ಸಾಗುತ್ತಿರಲು ರಾಣಿ—

"ಅಕ್ಕಾ, ಅಲ್ಲಿ ಬೇಡ. ನಾನು ನಿಮ್ಮ ವಾಸಗೃಹಕ್ಕೇ ಬರುವೆ. ಅದು ನನ್ನ ಅಣ್ಣನ ಮನೆಯಲ್ಲವೇ ? ಅದೇ ನನಗೆ ದೊಡ್ಡದು" ಎಂದಳು.

ರಾಣಿಯ ನಿಸ್ಪೃಹತೆಗೆ ಮೆಚ್ಚಿ ನಾಗಮ್ಮ—"ನನಗೆ ಬಹಳ ಸಂತೋಷ. ಎಲ್ಲವೂ ತಮ್ಮದೇ" ಎನ್ನುತ್ತ ತಮ್ಮ ವಾಸಗೃಹಕ್ಕೆ ಕರೆದೊಯ್ದು ಕೂಡ್ರಿಸಿ ಗಂಗಾಂಬಿಕೆಯೊಡಗೂಡಿ ಉಪಚರಿಸಿದಳು. ಕುಶಲವಾರ್ತೆಗಳಾದವು.

"ವಿಶ್ರಾಂತಿಯ ವೇಳೆಯಲ್ಲಿ ಆಯಾಸಗೊಂಡು ಬಂದಿರಿ. ಹೇಳಿಕಳಿಸಿದ್ದರೆ ನಾವಿಬ್ಬರೂ ಬರುತ್ತಿದ್ದೆವು" ನಾಗಮ್ಮ ಎಂದಳು.

"ನಾನೇ ಬರುವದು ಅಗತ್ಯವಾಗಿತ್ತು ಅಕ್ಕಾ ! ಅದರಂತೆ ನೀವು ಬರುವದೂ ಅಗತ್ಯವಾಗಿದೆ. ನೀಲಾಂಬೆಯ ಭವಿತವ್ಯದ ನಿರ್ಣಯ ಮಾಡುವದು ನಮಗೆ ನೀಗದ ಮಾತಾಗಿದೆ. ದೊರೆಗಳು ತಮ್ಮ ಆಕಾಂಕ್ಷೆಯಂತೆ ಸೂಚಿಸಿದ ಸಾಮಂತರಾದ ಎರಡು ವರಗಳನ್ನು ನೀಲಾಂಬೆಯು ಅಸಮ್ಮತಿಸಿದಳು. ಇದರಿಂದ ನಾವು ವಿವಂಚನೆಗೊಳಗಾಗಿದ್ದೇವೆ. ಅವಳ ನೆನಹು ಬೇರೆಯೇ ಇದ್ದಂತಿದೆ. ಉತ್ಸಾಹವಿಲ್ಲದ ಮುಖದಿಂದ, ಮೌನಧ್ಯಾನದಲ್ಲಿ ಕಾಲಕಳೆಯುತ್ತಿದ್ದಾಳೆ. ಆಹಾರ ಕಡಿಮೆಮಾಡಿ ಸೊರಗುತ್ತಿದ್ದಾಳೆ. ತನ್ನ ಮಾನಸಸಮುದ್ರದ ತಳದಲ್ಲಿರುವ ಅಲ್ಲೋಲಕಲ್ಲೋಲಗಳನ್ನು ಬಾಯಿಬಿಚ್ಚಿ ಹೇಳಲು ಅಸಮರ್ಥಳಾಗಿದ್ದಾಳೆ."

"ನೀಲಾಂಬೆಯ ಇಂಗಿತ ಏನಿದ್ದೀತು ದೇವಿಯವರೇ ? ಆಕೆ ಇಲ್ಲಿಗೆ ಬಾರದೆ ಬಹಳ ದಿನಗಳಾದವು."

"ಅವಳ ಈ ವರ್ತನೆಯ ಹಿಂದಿರುವ ಭಾವನೆಯು ಏನೆಂಬುದನ್ನು ಊಹಿಸಬಹುದಾಗಿದೆ. ಹೆಣ್ಣಿನ ದುಃಖ ಹೆಣ್ಣಿಗೇ ಗೊತ್ತಷ್ಟೇ ?"

"ಹೌದು ದೇವಿಯವರೇ, ತಾವದನ್ನು ಗುರುತಿಸಿರಲು ಶಕ್ಯವಿದೆ."

"ನೀಲಾಂಬೆ ತಾನು ಕಂಡ ಬಸವರಸರ ಆದರ್ಶ ವರ್ತನೆಗಳನ್ನು ಅರಮನೆ

ಯಲ್ಲಿ ಅಭಿಮಾನಿಯಂತೆ ವರ್ಣಿಸಿ ಹೇಳುತ್ತಿದ್ದಳು. ಈಗಲೂ ರಾಜರ-ನನ್ನ ಮಾತುಗಳಲ್ಲಿ ಬಸವರಸರ ಮಾತು ಬಂದರೆ ಮೌನವನ್ನು ಮುರಿದು ತಾನು ಸೇರಿ ಮಾತಾಡುತ್ತಾಳೆ. ಬಸವೇಶ ಅಣ್ಣನ ಜಾಣ್ಮೆಯನ್ನು ನಾವೂ ಕೊಂಡಾಡುತ್ತೇವೆ. ಆದರೆ ಅವಳ ಹೊಗಳಿಕೆಯ ಮಾತುಗಳಲ್ಲಿ ಒಂದು ಆರ್ತಧ್ವನಿ–ತೃಷೆ ತೋರಿ ಬರುತ್ತಿದೆ. ಯಾವಾಗಲೂ ವಚನಗಳ ಕಟ್ಟು ಮುಂದಿಟ್ಟುಕೊಂಡು ಹಾಡುತ್ತಾಳೆ. ಇದರಿಂದ ಅವಳ ಆಸೆ ಏನೆಂಬುದನ್ನು ತಿಳಿಯಬಹುದಲ್ಲವೇ ಅಕ್ಕ ?”

ನಾಗಮ್ಮನಿಗೆ ಸ್ವಲ್ಪ ದಿಗಿಲಾಯಿತು.ಹಿಂದೊಮ್ಮೆ ತೋರಿಬಂದ ಸಂದೇಹ ಇಂದು ನಿಜವಾಗಲಿದೆಯೆಂದು ಕಳವಳಿಸಿದಳು. ಆದರೂ ಅದನ್ನು ತೋರದೆ ಹೀಗೆಂದಳು. :

“ನಿಮ್ಮ ಊಹೆ ಬಹುಶಃ ನಿಜವಾಗಿದೆ. ಮಹಾರಾಣಿಯವರೆ, ಇವರೆಲ್ಲ ಸಂಗಮಕ್ಕೆ ಬಂದಾಗಲೇ ಅವಳಲ್ಲಿ ಈ ಆಸೆ ಅಂಕುರಿಸುತ್ತಿರುವದರ ಸಂದೇಹ ವುಂಟಾಗಿತ್ತು.”

“ನನ್ನ ಅನುಮಾನವನ್ನು ದೊರೆಗಳಿಗೆ ತಿಳಿಸಿದೆ. ‘ಬಸವೇಶ ಯೋಗ್ಯತೆ ಯಲ್ಲಿ ಸಾಮಂತ ರಾಜಪುತ್ರರಿಗಿಂತ ಕಡಿಮೆಯವನಲ್ಲ. ಆದರೆ ಅದು ಹೇಗೆ ಸಾಧ್ಯ’ ಎಂದು ಚಿಂತಿಸುತ್ತಾರವರು.”

“ಹೌದು ಬಸವೇಶ ವಿರವೃತಿ, ಆದರ್ಶ ಜೀವಿ !”

“ಅಣ್ಣನ ಮಾತು ಹಾಗೆ; ಇದಲ್ಲದೆ ನಮಗೆ ಗಂಗಾಂಬೆ ಬೇರೆಯೇ ? ಆಪ್ತಮಹಾಮಂತ್ರಿ ಬಲದೇವರ ಮಗಳು. ನೀಲಾಂಬೆ ಅರಮನೆಯಲ್ಲಿ ಬೆಳೆ ದುದನ್ನು ಬಿಟ್ಟರೆ ಇಬ್ಬರೂ ನಮಗೆ ಒಂದೇ ಎನ್ನುತ್ತಾರೆ ದೊರೆಗಳು.”

ಆಗ ಇಬ್ಬರ ದೃಷ್ಟಿಗಳು ಸಹಜವಾಗಿ ಗಂಗಾಂಬೆಯ ಕಡೆಗೆ ಹರಿದವು. ಗಂಗಾಂಬೆ ಕೆಳಗೆ ಮುಖಮಾಡಿ ಸಾವಧಾನವಾಗಿ ಕೇಳುತ್ತಿದ್ದಳು. ರಾಣಿ ಮತ್ತೆ ಹೇಳಿದಳು :

“ಆದ್ದರಿಂದ ಅಕ್ಕಾ, ನೀವೇ ದಯಮಾಡಿ ಅರಮನೆಯವರೆಗೆ ಬರ ಬೇಕು. ನೀಲಲೋಚನೆಗೆ ತಿಳಿಹೇಳಿ ನಿಮಗೆ ಸರಿಕಂಡ ಮಾರ್ಗಕ್ಕೆ ಅವಳ ಮನ ಸ್ಸನ್ನು ಒಲಿಸಬೇಕು. ಸುಜ್ಞಾನಿಗಳು ನೀವು. ನಿಮಗದು ಸಾಧ್ಯ. ಅವಳ ಕೊರಗಿನಿಂದ ನನಗೆ ದಿನಬೆಳಗು ಚಿಂತೆಯಾಗಿದೆ. ಎಂದು ಬರುವಿರಿ ? ರಥ ಕಳಿಸುವೆ.”

"ನಾಲ್ಕು ದಿನ ಹೋಗಲಿ ದೇವಿಯವರೇ, ಬುಧವಾರ ಬರುವೆವು."

ಮಹಾರಾಣಿಗೆ ಸಂತೋಷವಾಯಿತು. ಮಂಗಲದ್ರವ್ಯದೊಡನೆ ಬೀಳ್ಕೊಂಡಳು.

ನಾಲ್ಕು ದಿನವೂ ಗಂಗಾಂಬೆಯಲ್ಲಿ ನೀಲಾಂಬೆಯನ್ನು ಬೇಗ ಕಾಣಬೇಕೆನ್ನುವ ಮರುಕದಾತುರವನ್ನೇ ನಾಗಲಾಂಬೆ ಕಂಡಿದ್ದಳು. ಅಸಂತೋಷದ ಸುಳಿವೇ ತೋರಿರಲಿಲ್ಲ.

೫ ಪರಿಹಾರಕ್ಕೆ ಪ್ರಯತ್ನ

ಬುಧವಾರ ಮಹಾರಾಣಿಯು ಅವರಿಬ್ಬರನ್ನು ನೀಲಲೋಚನೆಯ ಕೋಣೆಗೆ ಕರೆದುಕೊಂಡು ಹೋದಾಗ ನೀಲಲೋಚನೆಯು—

'ತನು ನಿಮ್ಮದೆಂದ ಬಳಿಕ ಎನಗೆ ಬೇರೆ ತನುವಿಲ್ಲ;
ಮನ ನಿಮ್ಮದೆಂದ ಬಳಿಕ ಎನಗೆ ಬೇರೆ ಮನವಿಲ್ಲ;
ಧನ ನಿಮ್ಮದೆಂದ ಬಳಿಕ ಎನಗೆ ಬೇರೆ ಧನವಿಲ್ಲ.
ಇಂತೀ ತ್ರಿವಿಧವೂ ನಿಮ್ಮದೆಂದರಿದ ಬಳಿಕ
ಎನಗೆ ಬೇರೆ ವಿಚಾರವುಂಟೆ, ಕೂಡಲಸಂಗಮದೇವಾ.'

ಎಂದು ಕ್ಷೀಣ ಸ್ವರದಲ್ಲಿ ಸುಂದರವಾಗಿ ಹಾಡುತ್ತಿದ್ದಳು. ಅದನ್ನು ಕೇಳಿ ಈ ಮೂವರು ಬಾಗಿಲ ಮರೆಯಲ್ಲಿ ನಿಂತು, ಹಾಡು ಮುಗಿದ ಮೇಲೆ ಒಳಗೆ ಹೋದರು. ನೀಲಾಂಬೆ ಎದ್ದು ಮೂವರಿಗೂ ನಮಿಸಿದಳು. ನಾಗಲಾಂಬೆ ಅವಳ ಕೈಹಿಡಿದು ಅವಳೊಡನೆ ಹಾಸಿಗೆಯ ಮೇಲೆಯೇ ಕುಳಿತಳು. ಸ್ವಲ್ಪ ಹೊತ್ತಾದ ಮೇಲೆ ರಾಣಿ, ಗಂಗಾಂಬೆಯೊಡನೆ ಹೊರಗೆ ಹೋದಳು. ನಾಗಮ್ಮ ಕೇಳಿದಳು :

"ನೀಲಾ, ಯಾವ ಕಾರಣದಿಂದ ಹೀಗೆ ಸುಮ್ಮನೆ ಸೊರಗಿ ನವೆಯುತ್ತಿರುವೆ? ಇದರಿಂದ ರಾಜರು ಮೊದಲಾಗಿ ನಾವೆಲ್ಲ ವಿವಂಚನೆಗೊಳಗಾಗಿದ್ದೇವೆ."

ನೀಲಾಂಬೆ ಮಾತನಾಡಲಿಲ್ಲ. ಕಣ್ಣು ತೇವವಾದವು.

"ನಿನ್ನ ಇಷ್ಟವಾದರೂ ಏನು ? ನಿನಗೆ ನನ್ನಲ್ಲಿ ನಂಬಿಗೆಯಿದೆಯಷ್ಟೇ ?"

"ಇಲ್ಲದೆ ಏನು ಅಮ್ಮಾ ? ನನ್ನ ಅಳಲ ಕಾರಣವನ್ನು ನೀನು ಊಹಿಸಿಯೂ ಇರಬಹುದು. ಲೌಕಿಕದಲ್ಲಿ ಸಿದ್ಧಿಸಲು ಅಸಾಧ್ಯವಾಗಿರುವ ನನ್ನಿಷ್ಟವನ್ನು ಬಾಯಿಬಿಚ್ಚಿ ಯಾರಿಗಾದರೂ ತಿಳಿಸಿ ಏನು ಪ್ರಯೋಜನ ತಾಯಿ ? ಅದನ್ನು ನೆನಹಾಗಿ ಮನದಲ್ಲಿರಿಸಿಕೊಂಡು ಅದರಲ್ಲಿಯೇ ಅಂತ್ಯವಾದರೆ ಸಾಕು ಎನ್ನುವೆ."

"ಅದು ಶಿವಸಂಕೇತವಾಗಿರಲಿಕ್ಕಿಲ್ಲವೆಂದು ತಿಳಿಯಬೇಕು. ಶಿವನು ಕರುಣಿಸಿದುದನ್ನು ಸ್ವೀಕರಿಸಿ ಸಂತೋಷ ಪಡಬೇಕಮ್ಮಾ."

ನೀಲಲೋಚನೆ ಸುಮ್ಮನಾದಳು.

"ನಿನ್ನಿಷ್ಟ ಕೈಗೂಡುವದು ಹಾಗಿರಲಿ. ಹಾಗೆ ನೀನು ಬಯಸುವದಾದರೂ ಸರಿಯೆಂದು ನೀನು ತಿಳಿದಿರುವೆಯಾ ಮಗು ?"

"ಸರಿಯೆಂದು ಹೇಗೆ ತಿಳಿಯಲಿ ? ಅದು ಸಹೋದರಿಗೆ ದ್ರೋಹ! ಸಾಕಿದವರಿಗೆ ದ್ರೋಹ! ಬಂಧುಗಳಿಗೆಲ್ಲ ದ್ರೋಹ! ಅಂತೆಯೇ ಅದನ್ನು ಪಡೆಯುವ ಆತುರವನ್ನೇ ನಾನು ತಾಳಿಲ್ಲ."

"ಹಾಗಾದರೆ......"

"ಹಾಗಾದರೆ ಬೇರೆ ಬಯಸಲು ನನ್ನ ಮನದಲ್ಲಿ ಸ್ಥಳವೇ ಇಲ್ಲ ತಾಯಿ !"

ನಾಗಮ್ಮ ನಿರುಪಾಯಳಾದರೂ ನಿರಾಶಳಾಗದೆ ಮಾತಾಡಿದಳು :

"ಹೀಗೆಂದು ಕೊರಗಿಸಿ ಶರೀರವನ್ನು ನಾಶಗೊಳಿಸುವದೂ ಶಿವದ್ರೋಹ! ಶರೀರ ಶಿವನ ಪ್ರಸಾದ! ಅದು ಕ್ರಿಯಾ-ಜ್ಞಾನಗಳ ಕೃಷಿಭೂಮಿ! ಭೋಗ ಮೋಕ್ಷಗಳೆರಡಕ್ಕೂ ಸಾಧನ! ಭೋಗವು ತ್ಯಾಜ್ಯವಲ್ಲ; ಆದರೆ ಶಿವನು ಕರುಣಿಸಿದ ದಾರಿಯಲ್ಲೇ ಅದನ್ನು ಪ್ರಸಾದವಾಗಿ ಸ್ವೀಕರಿಸಿ ಭೋಗಿಸಬೇಕು. ಬಲ್ಲವರು ಶರೀರವನ್ನು ತ್ರಿವಿಧ ದಾಸೋಹಕ್ಕೆ ಆಧಾರವಾಗಿಸಿ ಶಿವಸಾಮರಸ್ಯಕ್ಕೆ ಸಾಧನಮಾಡಿಕೊಳ್ಳುವರು. ಬೇಕಾದರೆ ನೀನು ಸಂಸಾರದ ಹಂಗು ಹರಿದು ಪಾರಮಾರ್ಥಿಕ ಸಾಧನೆಗಾದರೂ ಈ ಶರೀರವನ್ನು ಉಪಯೋಗಿಸು. ಆ ಸಾರ್ಥಕತೆಗಾದರೂ ಅದನ್ನು ಪೋಷಿಸಬೇಕು."

"ಅಂತಹ ಭಾವಬಲ ನನಗೆ ಸಾಧ್ಯವಾದೀತೇ ಅಮ್ಮ ? ಪ್ರಯತ್ನಿಸುವೆ."

"ಆಗಲಿ ಪ್ರಯತ್ನಿಸು. ಶಿವನನೊಲಿಸಲಿರುವ ಕಾಯುವನ್ನು ಕೆಡಿಸುವದೆಂದರೇನು ? ಇದಲ್ಲದೆ ನಿನ್ನ ಹಿತಚಿಂತಕ ಬಂಧುಬಳಗದವರನ್ನೆಲ್ಲ ತೊಳಲಿಸುವ ಈ ದಾರಿ ಸರಿಯಲ್ಲ ನೀಲಾ. ನಿನ್ನ ಮನಸ್ಸು ಶಾಂತವಾಗಲಿ, ಉತ್ಸಾಹತಾಳು."

ಎನ್ನುತ್ತ ನಾಗಮ್ಮ ಎದ್ದು ಅವಳ ಮೈಮೇಲೆ ಕೈಯಾಡಿಸಿ ಹೊರಟಳು. ಇಬ್ಬರೂ ಅಶ್ರುಪೂರಿತರಾದರು.

"ಅಮ್ಮಾ, ಬಸವೇಶ ಮಾವಯ್ಯನಿಂದ ಕೆಲವು ವಚನಗಳ ಅರ್ಥ ತಿಳಿಯಬೇಕಾಗಿದೆ."

"ಆಗಲಿ, ಹೇಳುತ್ತೇನೆ."

ನಾಗಮ್ಮನ ಒಳಬಗೆಗೆ 'ಇದು ಬಿಡಲಾಗದ ಬಯಕೆಯೇ!' ಎನ್ನುವಂತೆ ಮತ್ತೆ ತೋರಿತು. ಬಾಗಿಲಲ್ಲಿ ಕಾದಿದ್ದ ಮಹಾರಾಣಿಯಿಂದ ಬೀಳ್ಕೊಂಡು ಗಂಗಾಂಬೆಯೊಡನೆ ಮಹಮನೆಗೆ ಮರಳಿದಳು.

ಅಷ್ಟರಲ್ಲಿ ಬಸವೇಶ್ವರ ಬಂದಿದ್ದನು. ಪ್ರವಾಸದಿಂದ ನಾಳೆ ಬರಬೇಕಾದವನು ಅರಸನ ಅವಸರದ ಕರೆ ಹೋದುದರಿಂದ ಇಂದೇ ಬಂದಿದ್ದನು. ಸಂಜೆಯ ಶಿವಾನುಭವ ಪೂಜಾ-ಪ್ರಸಾದಗಳು ಜರುಗಿದ ಬಳಿಕ, ಗಂಗಾಂಬೆ ನಾಗಲಾಂಬೆಯರೊಡನೆ ಆರಾಮವಾಗಿ ಕುಳಿತು, ಬಸವೇಶ ಪ್ರಯಾಣದಲ್ಲಿಯ ವಿಷಯಗಳನ್ನು ವರ್ಣಿಸುತ್ತಿದ್ದನು.

"ಚೆನ್ನಬಸವಣ್ಣನನ್ನು ನೋಡುವದಕ್ಕೆಂದೇ ಬಳ್ಳಿಗಾಂವಿಗೆ ಹೋಗಲಿಲ್ಲ. ರಾಜಿಕಕಾರ್ಯದ ಆವಶ್ಯಕತೆಯೂ ಇತ್ತು. ಬನವಾಸಿಗೆ ಹೋಗಿದ್ದ ಮೇಲೆ ಬಳ್ಳಿಗಾಂವಿ ಒಂದೇ ದಿನದ ದಾರಿ."

"ಏನೇ ಆಗಲಿ ನಿನ್ನ ಅಳಿಯ ಪುಣ್ಯವಂತನಪ್ಪ."

"ನಿಜವಾಗಿಯೂ ಹೌದು. ಶಾಸ್ತ್ರಾರ್ಥ ಮಾಡುವದರಲ್ಲಿ ಅವನು ಈಗಲೇ ಮುಂದುವರಿದಿದ್ದಾನೆ. ಟೀಕೆ, ಟಿಪ್ಪಣಿ, ಪ್ರಬಂಧಗಳನ್ನು ಬರೆಯುತ್ತಿದ್ದಾನೆ." ವಿದ್ಯಾಭರಣ ಪಂಡಿತರು ಬಹಳ ಪ್ರಂಶಸಿಸಿದರು ಅವನನ್ನು!"

"ಅಲ್ಲಿ ಪಾಠಪ್ರವಚನಗಳು ಚನ್ನಾಗಿ ನಡೆಯುತ್ತಿರಬಹುದು."

"ಹೌದು,ಆದರೆ ಹತ್ತುವರ್ಷಗಳ ಹಿಂದೆ ವಾಮಶಕ್ತಿಪಂಡಿತರಿರುವಾಗ ವಿದ್ಯಾಪೀಠದ ಸ್ಥಿತಿಯು ಇನ್ನೂ ಬಹಳ ಚೆನ್ನಾಗಿತ್ತಂತೆ. ಈಗ ಅಂತಹ ವಿದ್ವಾಂಸರೇ ಇಲ್ಲವೆಂದು ವಿದ್ಯಾಭರಣರೇ ಹೇಳುತ್ತಾರೆ. ಅವರು ಸ್ವತಃ ತೀರ ವೃದ್ಧರಾಗಿದ್ದಾರೆ."

"ವಾಮಶಕ್ತಿಗಳ ವಚನಗಳೆಂದು ಸಂಗಮಕ್ಕೆ ಬರುತ್ತಿದ್ದವು; ಅವರವೇ ಏನು?"

"ಹೌದು, ಆ ಪಂಡಿತರು ಉಪನಿಷದಾಗಮಗಳಿಗೆ ಬ್ರಹ್ಮಸೂತ್ರಗಳಿಗೆ ವ್ಯಾಖ್ಯಾನಗಳನ್ನೂ ಟಿಪ್ಪಣೆಗಳನ್ನೂ ಬರೆದಿದ್ದಾರೆ. ಆಮೇಲೆ ಅವುಗಳನ್ನು ಮೀರಿದ ಪರಮಾನುಭಾವ-ಸ್ವರೂಪದರ್ಶನಗಳ ವಚನಗಳನ್ನು ಅಗಣಿತವಾಗಿ

ಬರೆದಿದ್ದಾರೆ. ಅವರು ರಚಿಸಿದ ತಾಡವೋಲೆ ಗ್ರಂಥಗಳು ಒಂದು ಅಟ್ಟಣೆಯ ತುಂಬ ಇವೆ. ನಿನ್ನ ಮಗನು ಅವಕ್ಕೂ ಕೈ ಹಚ್ಚಿದ್ದಾನಮ್ಮ!"

"ಅದು ನೀವೇ ತೋರಿಸಿದ ದಾರಿಯಪ್ಪಾ!"

ಮೂವರ ಮೊಗದಲ್ಲಿ ಮಿದುನಗೆ ಮೂಡಿತು. ನಾಗಮ್ಮ ತಡೆದು ಬೇರೆ ಪ್ರಶ್ನೆ ಕೇಳಿದಳು. ಅದಕ್ಕುತ್ತರವಾಗಿ ಬಸವಣ್ಣ, ವಾಮಶಕ್ತಿಗಳ ಬಗೆಗೆ, ಸುರಪುರದಲ್ಲಿ ಕಂಡ ಹರಳಯ್ಯನ ಬಗೆಗೆ ತಾನು ಕೇಳಿದುದನ್ನೂ ಕಂಡುದನ್ನೂ ವಿವರಿಸಿದನು. ಬಳಿಕ ಬಸವೇಶನ ಮಾತು, ಅಕ್ಕನನ್ನು ರಾಣಿಯು ಅರಮನೆಗೆ ಆಮಂತ್ರಿಸಿದುದರ ಕಡೆಗೆ ತಿರುಗಿತು.

"ಏಕೆ ಕರೆಯಿಸಿದ್ದರಕ್ಕ ರಾಣಿಯವರು?"

"ಅದು ನೀಲಲೋಚನೆಯ ವಿಷಯ. ಅವಳ ಮದುವೆಯ ಬಗೆಗೆ ನಿರ್ಣಯಕ್ಕೆ ಬರಲಾಗದೆ ರಾಜರಾಣಿಯರು ತೊಳಲುತ್ತಿದ್ದಾರೆ. ನೀಲಲೋಚನೆ ಯಾವದರೋ ಸೊರಗಿ ಕೊರಗುತ್ತಿದ್ದಾಳೆ. ಅವಳಿಗೆ ಸಮಾಧಾನ ನೀಡಲೆಂದು ನಮ್ಮನ್ನು ಬರಮಾಡಿಕೊಂಡಿದ್ದಳು ರಾಣಿ."

"ನೀಲಾಂಬೆಯ ಇಚ್ಛೆಯನ್ನು ನೀನು ಕೇಳಿ ತಿಳಿಯಬಹುದಾಗಿತ್ತಲ್ಲವೇ?"

"ಕೇಳಿದೆ. ತನ್ನಿಷ್ಟ ಲೌಕಿಕದಲ್ಲಿ ಅಸಾಧ್ಯವೆಂಬುದನ್ನು ಆಕೆ ಸ್ವತಃ ತಿಳಿದಿದ್ದಾಳೆ. ಆಕೆಯ ಬಯಕೆ ಉಂಟುಮಾಡಬಹುದಾದ ಸಮಸ್ಯೆಯನ್ನು ಬಿಡಿಸುವದು ಸುಲಭವಾಗಿಲ್ಲ. ಅದೊಂದು ಒಡೆಯಲಾಗದ ಒಗಟು! ಹಲವು ಮಾತುಗಳ ನಂತರ ನಾನು ಹೊರಡಲು ಎದ್ದಾಗ 'ಅಮ್ಮಾ, ಒಂದೆರಡು ವಚನಗಳ ವಿವರಣೆಯನ್ನು ಬಸವೇಶ ಮಾವಯ್ಯನಿಂದಲೇ ಪಡೆಯಬೇಕಾಗಿದೆ' ಎಂದು ಪ್ರಶ್ನಾರ್ಥಕವಾಗಿ ಕಣ್ದುಂಬಿ ನನ್ನನ್ನು ನೋಡಿದಳು. 'ಆಗಬಹುದಮ್ಮಾ ತಿಳಿಸುತ್ತೇನೆ ಬಸವೇಶನಿಗೆ' ಎಂದೆ.

"ನೀನೇ ಅರ್ಥ ವಿವರಣೆ ಮಾಡಿ ಬರಬಹುದಾಗಿತ್ತಲ್ಲ!"

"ನನಗೆ ಅದು ನೀಗದಿದ್ದರೆ? ಅವಳ ಅಪೇಕ್ಷೆಯೂ ಹಾಗೆ ಕಾಣಲಿಲ್ಲ."

"ಹೌದು ಸ್ವಾಮೀ, ನೀವೇ ನೀಲಾಂಬೆಗೆ ಭೆಟ್ಟಿಯಾಗಿ ಅವಳ ಮನಸ್ಸಿನ ದುಗುಡವನ್ನು ಕಳೆಯಬೇಕು. ನೀವೇ ಆಕೆಯ ಅಳಲಿನ ನೆಲೆಯನ್ನು ತಿಳಿಯಬಲ್ಲಿರಿ."

—ಗಂಗಾಂಬೆಯು ಈ ನುಡಿಗೆ ಬಸವೇಶ ಹೊರಳಿ ಆಕೆಯ ಮುಖವನ್ನು ನೋಡಿದನು. ಮುಗ್ಧ ಲಲನೆಯ ಮಾತಿನಲ್ಲಿ ಸರಳಶುದ್ಧ ಭಾವವಲ್ಲದೆ ಮತ್ತೇನೂ ಅಲ್ಲಿ ಕಾಣಲಿಲ್ಲ. ನಾಗಲಾಂಬೆಯೂ ಆ ಭಾವವನ್ನು ನಿರೀಕ್ಷಿಸಿದಳು. ಆದರೆ ಬಸವಣ್ಣನ ಮೊಗದಲ್ಲಿ ಸತಿಯ ಆ ಸೂಚನೆಯನ್ನು ಸಮ್ಮತಿಸುವ ಯಾವ ಲಕ್ಷಣವೂ ಅಕ್ಕನಿಗೆ ಕಾಣಲಿಲ್ಲ.

೬ ಅಕ್ಕನ ಅಂತರಂಗಕ್ಕೆ ಶಾಂತಿ

ಬಸವೇಶ್ವರನ ಭಾಗ್ಯದ ಚಕ್ರ ವೇಗದಿಂದ ತಿರುಗುತ್ತಿತ್ತು. ಅಕ್ಕನಿಂದ ನಿತ್ಯ ಒದಗುತ್ತಿದ್ದ ಸ್ಫೂರ್ತಿ ಆ ಚಕ್ರದ ಅಚ್ಚಾಗಿತ್ತು. ಚಂದಲಾಪುರದಲ್ಲಿ ನೆಲ ಅಗಿವಾಗ ಒಂದು ನೆಲಮನೆ ಹತ್ತಿತು. ಅದರಲ್ಲಿ ಸಂಗ್ರಹಿಸಿಟ್ಟಿದ್ದ ಪ್ರತಿಮೆಗಳಲ್ಲಿ ಒಂದು ಅಪರಿಚಿತ ಲಿಪಿಯ ಸುವರ್ಣ ಶಾಸನವಿತ್ತು. ಅದನ್ನು ಓದುವದು ರಾಜಾಶ್ರಯದಲ್ಲಿರುವ ಯಾವ ಪಂಡಿತರಿಗೂ ಸಾಧ್ಯವಾಗಲಿಲ್ಲ. ಬಸವೇಶನು ಜಾಣತನದಿಂದ ಆ ಶಾಸನದಲ್ಲಿ ಬಳಸಿಕೊಂಡ ಕೃತ್ರಿಮ ಲಿಪಿಯ ವರ್ಣಮಾಲೆಯನ್ನು ಗೊತ್ತುಹಚ್ಚಿ ಆ ಶಾಸನವನ್ನು ಅರ್ಥಯಿಸಲು ಶಕ್ತನಾದನು. ಅದರಿಂದ ಹಳೆಯ ಅರಮನೆಯ ಕೆಳಗೆ ತ್ರಿಭುವನಮಲ್ಲ ವಿಕ್ರಮ ಮಹಾರಾಜರಿರಿಸಿದ ಅರವತ್ತು ಕೋಟಿ ಸುವರ್ಣ ನಾಣ್ಯಗಳ ಧನರಾಶಿ ಬಿಜ್ಜಳನಿಗೆ ದೊರೆಯಿತು. ಬಿಜ್ಜಳನು ಹರುಷದಿಂದುಬ್ಬಿ ಬಸವೇಶ್ವರನನ್ನು ಬಿಗಿದಪ್ಪಿ ಕೊಂಡಾಡಿದನು. ಅವನು ರೂಪಿಸಿದ ಯೋಜನೆಯಂತೆ ಆ ಧನದ ವಿನಿಯೋಗದ ವ್ಯವಸ್ಥೆಮಾಡಿದನು. ಬಸವೇಶ್ವರನನ್ನು ಮಹಾಮಂತ್ರಿಯ ಅಧಿಕಾರಕ್ಕೇರಿಸಿ, ದಂಡನಾಯಕ ಪದವಿಯನ್ನಿತ್ತು ರಾಜಸಭೆಯಲ್ಲಿ ಬಹಳವಾಗಿ ಗೌರವಿಸಿದನು.

ಸಭೆಯ ನಂತರ ಬಸವಣ್ಣ ರಾಜಾಧಿಕರಣದ ರಥದಲ್ಲಿ ಮಹಮನೆಗೆ ಬರಲು, ನಾಗಮ್ಮ ಹೆಬ್ಬಾಗಿಲಲ್ಲಿ ಕಾದಿದ್ದು ಗಂಗಾಂಬೆಯಿಂದ ಅವನ ಪಾದ ತೊಳೆಯಿಸಿ ಆರತಿ ಮಾಡಿಸಿ ಒಳಗೆ ಬರಮಾಡಿಕೊಂಳು.

"ಇದು ನಿಮಗೆ ವಿಶೇಷವೆನಿಸಿತೇ ಅಕ್ಕ?"

ಎಂದು ಬಸವೇಶ ಅಕ್ಕನಿಗೆ ನಮಸ್ಕಾರ ಮಾಡಿದನು. ಅವನ ತಲೆಯನ್ನಪ್ಪಿ ನಾಗಮ್ಮ ಹೇಳಿದಳು : "ವಿಶೇಷವೇ ಹೌದು; ಯಾಕಲ್ಲ? ಲೌಕಿಕದ ನಿನ್ನ ಉನ್ನತಿಯನ್ನು ನೀನು ನಿನ್ನ ಸ್ವಾರ್ಥಕ್ಕಾಗಿ ಉಪಯೋಗಿಸುವದಿಲ್ಲ. ಅದು ಶಿವನ ದಾಸೋಹಕ್ಕಾಗಿ ಜನರ ಅಜ್ಞಾನ-ದುಃಖಗಳ ನಿವಾರಣೆಗಾಗಿ ಮೀಸಲಾಗಿದೆ. ಇಂದಿನ ನಿನ್ನ ಅಭಿವೃದ್ಧಿ ನಿನ್ನ ಲೋಕಕಲ್ಯಾಣ ಕಾರ್ಯಕ್ಕೆ ಒಂದು ಶಕ್ತಿ ಎಂದು ನಾನು ತಿಳಿಯುತ್ತೇನೆ."

* * *

ಮುಂದೆ ಎರಡು ವಾರಗಳು ಕಳೆದ ಬಳಿಕ ಒಂದು ದಿನ ಬೇಗಿನ ಹೊತ್ತಿನಲ್ಲಿ ಅರಮನೆಯಿಂದ ಬಂದ ಗಂಗಾಂಬಿಕೆ ಒಳಗೆ ಬರುವಾಗ ದುಃಖಿಸುತ್ತಿರುವದನ್ನು ಮೊಗಸಾಲೆಯಲ್ಲಿ ನಾಗಮ್ಮ ಕಂಡು 'ಏನಾಯಿತು ಗಂಗಾ ?' ಎಂದು ಕೇಳುತ್ತ ಅವಳೊಡನೆ ಒಳಗೆ ಹೋದಳು.

"ನೀಲಲೋಚನೆ ಮೃತ್ಯುಶಯ್ಯೆಯಲ್ಲಿದ್ದಾಳೆ." ದನಿ ತೆಗೆದು ಅಳಹತ್ತಿದಳು ಗಂಗಾಂಬೆ. ನಾಗಲಾಂಬೆ ಅವಳ ಕೈಹಿಡಿದು ತಡೆದು ಕೇಳಿದಳು :

"ಅದು ಹೇಗೆ ? ಏನು ವಿಚಾರ ? ಶಾಂತವಾಗಿ ಹೇಳು."

"ರಾಜಸಭೆ ನಡೆದ ದಿನ 'ಇವರ' ಶ್ರೇಯೋಭಿವೃದ್ಧಿಯಾದುದನ್ನು ಕೇಳಿದಾಗಿನಿಂದ ತನ್ನ ಮನದ ನೆನಹಿನಲ್ಲಿಯೇ ಮಗ್ನಳಾಗಿ ನಿದ್ರಾಹಾರಗಳನ್ನು ತೊರೆದುಬಿಟ್ಟಿದ್ದಾಳಂತೆ. ಕೈಕಾಲು ವಿಚಲಿತವಾಗಿವೆ. ಇಂದು ಆರಂಭವಾದ ಬಿಕ್ಕಳಿಕೆಯಿಂದ ಯಾವಾಗ ಉಸಿರು ಹಾರುವದೋ ತಿಳಿಯದಾಗಿದೆ. 'ಮನೋರೋಗ, ಯಾರೇನು ಮಾಡುವದು ?' ಎಂದು ರಾಜವೈದ್ಯರು ನಿರಾಶೆಗೊಂಡಿದ್ದಾರೆ."

"ಬಿಜ್ಜಳರಾಜರ ವಿಚಾರವೇನು ?"

"ಇವರು ಒಪ್ಪುವದಾದರೆ ಇವರೊಡನೆ ಮದುವೆ ಮಾಡಿಕೊಡಲು ರಾಜ ರಾಣಿಯರು ಎಂದೋ ಸಿದ್ಧವಾಗಿದ್ದಾರೆ."

"ಈ ಮದುವೆಯಿಂದ ನಿನಗೆ ಅಸಮಾಧಾನವಾಗುವದಿಲ್ಲವೇ ?"

"ಅಸಮಾಧಾನವೇಕೆ ? ಸಮಾಧಾನವೇ ಆಗುವದು. ನಾನು ಮಾಡುವ ಸೇವೆಗೆ ನೀಲಾ ಅಡ್ಡಬರುವಳೇ ? ಅವಳು ನನ್ನ ಜತೆಗಾರ್ತಿಯಾಗುವಳು."

"ಹಾಗಾದರೆ ಬಸವೇಶನನ್ನು ಕೇಳಿನೋಡುತ್ತೇನೆ."

"ಅಷ್ಟು ಮಾಡು ತಾಯೀ ! ಇವರು ಒಪ್ಪಿದರೆ ಮಾತ್ರ ನೀಲಲೋಚನೆಯ ಪ್ರಾಣ ಉಳಿಯುತ್ತದೆ."

ಅಷ್ಟರಲ್ಲಿ ಹೊರಗಿನಿಂದ ಬಸವೇಶ್ವರರು ಬರಲು ನಾಗಲಾಂಬೆ ನೋಡಿ ಮುಂದೆ ಹೋಗಿ ಅವರನ್ನು ಗಂಗಾಂಬೆಯ ಕೋಣೆಗೇ ಕರೆದು ತಂದಳು. ಏನೋ ವಿಶೇಷವೆಂದು ಅವರು ಅಕ್ಕನ ಹಾಗೂ ಮಡದಿಯ ಮುಖನೋಡುತ್ತ ಆಸನದಲ್ಲಿ ಕುಳಿತರು. ನಾಗಲಾಂಬೆ ಮಾತಿಗೆ ಆರಂಭಮಾಡಿದಳು :

"ಬಸವೇಶಾ ನೀಲಾಂಬಿಕೆ ನಿನ್ನಲ್ಲಿ ಪ್ರೇಮಾನುರಕ್ತಳಾಗಿದ್ದಾಳೆ. ಸಂಗಮದಲ್ಲಿ ನಿನ್ನನ್ನು ನೋಡಿದಾಗಿನಿಂದ ಅವಳ ಮನದ ಆರಾಧ್ಯ ಮೂರ್ತಿಯಾಗಿರುವಿ ನೀನು. ನಿನ್ನನ್ನೇ ಮನಸಾ ವರಿಸಿ ನಿನ್ನ ಧ್ಯಾನದಲ್ಲಿ ಕೊರಗುತ್ತಿದ್ದಾಳೆ. ನಮಗೆಲ್ಲ ಇದು ತಿಳಿದರೂ ನಿನ್ನ ಆದರ್ಶ ವಿಚಾರಗಳನ್ನು ಕೆದಕುವ ಧೈರ್ಯ ಯಾರಿಗೆ? ಈಗವಳು ಮರಣಾಂತಿಕ ಅವಸ್ಥೆಯಲ್ಲಿದ್ದಾಳೆ. ನಿನ್ನ ನೆನಹನ್ನೇ ಮನದಲ್ಲಿ ನಿಲ್ಲಿಸಿ ಸಾವಿನ ಸ್ವಾಗತ ನಡೆಸಿದ್ದಾಳೆ. ನೀನು ಮನಸ್ಸುಮಾಡಿದರೆ ಅವಳನ್ನು ಬದುಕಿಸಬಲ್ಲೆ!"

"ಇದೇನು ಅಕ್ಕ, ನೀನು ಹೇಳುವದು ಸುಸಂಬದ್ಧವೇ ?"

"ಅಲ್ಲವೆಂದೇ ಇದುವರೆಗೆ ಸುಮ್ಮನಿದ್ದೆವು. ಈಗ ಸುಸಂಬದ್ಧವೆಂದೇ ಭಾವಿಸಬೇಕಾಗಿದೆ. ಈಗಿರುವ ಸಂಪತ್ತು-ಸತಿ-ಸೇವಕರು ನಿನ್ನನ್ನು ಲಂಪಟದಲ್ಲಿ ಸಿಕ್ಕಿಸಿವೆಯೇ ? ನಿನ್ನ ಪಾಲಿಗೆ ಸಂಸಾರಸಮುದ್ರವು ಉರದುದ್ದವಿದ್ದರೇನು, ಮರದುದ್ದವಿದ್ದರೇನು ? ಈಸಬಲ್ಲವರು ನೀರಿನ ಆಳವನ್ನೇಕೆ ಲಕ್ಷಿಸಬೇಕು ?"

ನಾಗಮ್ಮನ ಮುಖ ಗಂಭೀರವಾಗಿತ್ತು.

"ಹೌದು ಸ್ವಾಮೀ, ತಮಗೇನೂ ಬಾಧೆಯಾಗದು. ಸಹೋದರಿಯ ಪ್ರಾಣವನ್ನು ಉಳಿಸಿಕೊಡಿ." ಗಂಗಾಂಬೆ ಪಾದಕ್ಕೆರಗಿ ನುಡಿದಳು.

"ಭವಿಷ್ಯತ್ತಿನಲ್ಲಿ ನಿನಗೆ ತೊಡಕಾಗುವವನ್ನು ಗಮನಿಸಲಾರೆಯಾ ಗಂಗಾ?"

"ಇಲ್ಲ ಸಾಮೀ, ನಾನು ನನ್ನದು ಎಂಬುದೇ ಇಲ್ಲದಿರುವಾಗ ನನಗಾವ ತೊಡಕು? ನನಗೆ ಸಂತೋಷವೇ ಆದೀತು."

ಬಸವರಸರು ಅವರಿಬ್ಬರ ಮುಖ ನೋಡಿದರು.

"ಅವಳು ಅರಮನೆಯಲ್ಲಿ ಬೆಳೆದು ಪ್ರಭುಗಳ ತಂಗಿಯಾಗಿದ್ದಾಳೆ."

"ಸ್ವತಃ ಬಿಜ್ಜಳರಾಜರೇ ಇದುವರೆಗೆ ತಡೆದರೂ ಪರಿಸ್ಥಿತಿ ಕೈಮೀರುತ್ತ ಇರುವದರಿಂದ ತಾವೇ ನಿನ್ನನ್ನು ಕೇಳಬಹುದಾಗಿದೆ." ನಾಗಮ್ಮನ ವಾಣಿ ಸ್ಪಷ್ಟವಾಗಿತ್ತು.

ಬಸವೇಶ ತಲೆಯೆತ್ತಿ ಅಕ್ಕನನ್ನು ನೋಡಲೆಳಸಿದನು. ಆದರೆ ಆಕೆಯ ನಿರ್ಧಾರ ನಿಸ್ಖಲಿತ ದೃಷ್ಟಿಯನ್ನು ಎದುರಿಸಲಾರದೆ ಮುಖ ಕೆಳಗೆ ಮಾಡಿದನು.

ಮಾತಾಡಲಸಮರ್ಥನಾಗಿ ಸ್ತಂಭಿತನಾದನು. ನಾಗಮ್ಮನ ವಾಣಿ ನಿನದಿಸುತ್ತಿತ್ತು. ಆ ದೃಷ್ಟಿಯಲ್ಲಿ : "ಈಸಬಲ್ಲವರು ನೀರಿನ ಆಳವನ್ನೇಕೆ ಲಕ್ಷಿಸಬೇಕು ?"

ಅದೇ ದಿನ ಸಂಜೆಗೆ ಬಿಜ್ಜಳನು ಮಹಾರಾಣಿಯೊಡನೆ ಮಹಮನೆಗೆ ಬಂದು ನೀಲಾಂಬೆಯ ಆಸೆಯನ್ನು ಪೂರೈಸಿ ಅವಳನ್ನು ಉಳಿಸಬೇಕೆಂದು ಬಸವರಸರನ್ನು ಬಿನ್ನವಿಸಿದನು. ಮಹಾರಾಣಿಯು—'ಅಣ್ಣಾ ನಿಮ್ಮಂತಹ ಆದರ್ಶವರ್ತನದವರು ತಮ್ಮನ್ನೇ ತ್ರಿಕರ್ಣಪೂರ್ವಕ ನಂಬಿದ ಬಾಲೆಯ ಕಷ್ಟವನ್ನು ಗಮನಿಸದಿರುವದೇ? ನೀವೀಗ ನೀಲಾಂಬೆಯ ಪ್ರಾಣವನ್ನು ರಕ್ಷಿಸಬೇಕು' ಎಂದು ಕೈಮುಗಿದು ಕೇಳಿಕೊಂಡಳು. ಬಸವರಸರು ಎದ್ದು ರಾಣಿಗೆ ಕೈಮುಗಿದರು ಮಾತ್ರ; ಮಾತಾಡಲಿಲ್ಲ. ಅವರ ಮನಸ್ಸು ವಿಲಿವಿಲಿ ಒದ್ದಾಡುತ್ತಿತ್ತು. ಕಣ್ಣು ತೇವಾಗಿದ್ದವು. ಕೊನೆಗೆ ರಾಜನು—'ದಂಡನಾಯಕರೆ, ಅರಮನೆಗೆ ಬಂದು ಪ್ರಾಣೋತ್ಕ್ರಮಣದ ಕಾಲಕ್ಕೆ ನೀಲಾಂಬೆಗೆ ದರ್ಶನವನ್ನಾದರೂ ಕೊಡಿ. ಅವಳಿಗೆ ಅಷ್ಟಾದರೂ ಸಮಾಧಾನವಾಗಲಿ, ಅದೂ ತಡವಾಗುವಂತಿಲ್ಲ' ಎಂದನು. ಬಸವೇಶ್ವರ ತಲೆಯಾಡಿಸಿ ಒಪ್ಪಿಗೆಯಿತ್ತರು. ಸತ್ಕಾರದ ಸಾಮುಗ್ರಿಗಳೊಡನೆ ಗಂಗಾಂಬೆ ಬರಲುಬಿಜ್ಜಳರಾಜನು ಕೇಳಿದನು :

"ಗಂಗಾಂಬಿಕೆ ನಿನಗೊಂದು ಭಿಕ್ಷೆ ಕೇಳಲೇನಮ್ಮಾ ?"

"ಅಜ್ಞೆಯಾಗಲಿ ಪ್ರಭುಗಳೇ, ಭಿಕ್ಷೆಯೇಕೆ ?"

"ನಿಮಗೆಲ್ಲ ಪ್ರಭುವಲ್ಲ ನಾನು. ನೀಲಲೋಚನೆಯಂತೆ ನೀನೂ ನನಗೆ ಸಹೋದರಿ.ನಿನ್ನ ಸಹೋದರಿಗಾಗಿ ನೀನು ನನಗೆ ತ್ಯಾಗದ ಭಿಕ್ಷೆನೀಡಬೇಕಮ್ಮಾ."

"ಆಗಲಿ ಅಣ್ಣಾಜಿ, ನಾನು ಅದಕ್ಕೆ ಸಂತೋಷದಿಂದಲೇ ಸಿದ್ಧಳಿದ್ದೇನೆ."

ಅಷ್ಟರಲ್ಲಿ ಬಾಗಿಲ ಆಚೆಗೆ ಬರುತ್ತಿದ್ದ ನಾಗಮ್ಮನನ್ನು ಕಂಡು ಬಿಜ್ಜಳ ರಾಜನು ಎದ್ದು ಕೈಮುಗಿದನು :

"ಅಕ್ಕಾಜಿ, ನಮ್ಮ ಮನವಿಗೆ ನಿಮ್ಮ ಅಪ್ಪಣೆಯೇನು ?"

ನಾಗಮ್ಮ ಪ್ರತಿಯಾಗಿ ಕೈಮುಗಿದು ಹೇಳಿದಳು :

"ದೊರೆಗಳ ಅಭೀಷ್ಟ ನೆರವೇರಬೇಕೆಂದೇ ನಾನು ಹಾರೈಸುತ್ತೇನೆ."

ಎರಡು ರಥಗಳಲ್ಲಿ ಎಲ್ಲರೂ ಅರಮನೆಗೆ ಬಂದರು. ಮಹಾರಾಣಿ ಬಸವೇಶ್ವರರನ್ನು ಹಿಂದುಗೊಂಡು ನೀಲಲೋಚನೆಯ ಕೋಣೆಗೆ ಬಂದು—"ನೀಲಾ, ನ್ನ ದೇವರನ್ನು ಕರೆತಂದಿದ್ದೇವೆ ನೋಡು." ಎಂದಳು.

ಕಣ್ಣರಳಿಸಿ ಹೊರಳಿ ನೋಡಿದಳು ನೀಲಾಂಬೆ. ಸುಕ್ಕುಗೊಂಡ ಶರೀರ ನೋಡಿ ಬಸವರಸರ ಅಂತಃಕರಣ ಕರಗಿ ನೀರಾಯಿತು. ಆಕೆಯು ಹೊಳೆವ ಕಣ್ಣುಗಳ ಕಿಂಡಿಯಿಂದ ಹೃದಯದಲ್ಲಿಯ ನಿಶ್ಚಲ ಧ್ಯಾನದ ಪ್ರಕಾಶವನ್ನು ಕಂಡು ಅವರ ಮನ ಮುಗ್ಧವಾಯಿತು. ಗಂಗಾಂಬೆಯು ಕೈಯಾಸರದಿಂದ ನೀಲಲೋಚನೆ ಮೆಲ್ಲನೆ ಎದ್ದು ತಲ್ಪದಿಂದ ಕೆಳಗಿಳಿದು ಕುಸಿದು ಬಸವೇಶ್ವರರ ಪಾದದಲ್ಲಿ ತಲೆಯಿಟ್ಟು ಪಾದಧೂಳಿಯನ್ನು ಮುಡಿಯಲ್ಲಿ ತಳೆದಳು. ಬಸವಣ್ಣನವರು ಅವಳ ತೋಳುಗಳನ್ನು ಹಿಡಿದು ಎಬ್ಬಿಸಿ ಮೆಲ್ಲನೆ ಹಾಸಿಗೆಯ ಮೇಲೆ ಮಲಗಿಸಿದರು. ಅವರ ಕೈಗಳನ್ನು ಹಿಡಿದುಕೊಂಡು ಕ್ಷಣಹೊತ್ತು ಅವರ ಮುಖವನ್ನೇ ನೋಡಿದಳು ನೀಲಾಂಬೆ. ಒಳಗೂ ಬಸವೇಶ, ಹೊರಗೂ ಬಸವೇಶ. ಅವಳ ಮೊಗದಲ್ಲಿ ಬೆಳಗು ಮೂಡಿ ಅರಳಿದ್ದಿತು.

ಬಾಗಿಲಲ್ಲಿ ನಿಂತು ನೋಡುತ್ತಿದ್ದ ಅಕ್ಕನ ಅಂತಃಕರಣದ ತುಮುಲ ಶಾಂತವಾಗಿತ್ತು. ರಾಜ-ರಾಣಿಯರು ಸಮಾಧಾನದ ಉಸಿರು ಬಿಟ್ಟರು. ದಂಡನಾಯಕರು ಮಾತ್ರ ಸಂಸಾರದ ಬಲೆ ಬಲಿಯುತ್ತಿದೆಯೆಂದು ಸಂಗನಲ್ಲಿ ಮೊರೆಯಿಡುತ್ತಿದ್ದರು.

*　　*　　*

ಬೇಗನೆ ನೀಲಾಂಬೆಯ ಆರೋಗ್ಯ ಉತ್ತಮಗೊಂಡಿತು. ಅವಳಿಗೆ ಲಿಂಗಧಾರಣದೀಕ್ಷೆಯಾಗಿ ಬಸವೇಶ್ವರರೊಡನೆ ನಿರಾಡಂಬರದಿಂದ ಮದುವೆಯಾಯಿತು

೭ ಕ್ರಿಯಾಯೋಗ

ಐದು ವರ್ಷಗಳು ಕಳೆದವು. ಅಷ್ಟರಲ್ಲಿ ಅನುಭವ ಮಂಟಪದ ಕಾರ್ಯಕಲಾಪಗಳ ಕೀರ್ತಿ ಪಸರಿಸಿತು. ಅದರಿಂದ ಆಕರ್ಷಿತರಾದ ಅತಿಥಿ ಅಭ್ಯಾಗತರ ಹಾಗೂ ನೆಲೆಯಾಗಿ ನಿಲ್ಲುವವರ ಸಂಖ್ಯೆ ದಿನದಿನಕ್ಕೆ ಹೆಚ್ಚಾಗುತ್ತ ನಡೆಯಿತು. ಪ್ರಸಾದದ ಯೋಜನೆಯೂ ಜ್ಞಾನದಾಸೋಹದ ವ್ಯವಸ್ಥೆಯೂ ಬೆಳೆದವು. ಆದ್ದರಿಂದ ಅಕ್ಕ ನಾಗಮ್ಮನ ಕರ್ತವ್ಯದ ಹೊಣೆ ಬೆಳೆಯಿತು. ಬಸವರಾಜರು ಬನವಾಸಿಯ ಮಹಾಮಂಡಲೇಶ್ವರ ಅಧಿಕಾರದ ನಿರ್ವಹಣೆಗೆ ಅಲ್ಲಿ ಇರಬೇಕಾದಾಗ ಕೆಲವು ಹಿರಿಯ ಶರಣರು ಮತ್ತು ಅಕ್ಕನಾಗಮ್ಮ ಇವರ ಮೇಲೆಯೇ ಮಹಮನೆಯ ಕಾರ್ಯಭಾರವಿರುತ್ತಿತ್ತು. ಆಗ ಅಕ್ಕನು ಶಕ್ತಿಮೀರಿ ಶ್ರಮವಹಿಸಿ ಕ್ರಿಯಾನಿರತಳಾಗಿರುತ್ತಿದ್ದಳು. ಆಕೆಯ ದಿನಚರಿಯನ್ನು ಸ್ವಲ್ಪ ವಿವೇಚಿಸಿದರೆ ಸರಿಯಾದ ಕಲ್ಪನೆಯಾದೀತು.

ಬ್ರಾಹ್ಮೀ ಮುಹೂರ್ತದಲ್ಲಿ ಉಪ್ಪವಡಿಸಿ ಶೌಚಕರ್ಮವನ್ನಾಚರಿಸಿ, ಸ್ನಾನ ಶಿವಾರ್ಚನೆ ನೆರವೇರಿಸಿಕೊಳ್ಳುವಳು. ಬಳಿಕ ಬೆಳಗಿನ ಪ್ರಾರ್ಥನಾಯೋಗದಲ್ಲಿ ಸಮಾವೇಶಗೊಳ್ಳುವಳು. ಅಲ್ಲಿ ನೆರೆದ ಶರಣರು ಪ್ರಾರ್ಥನೆಯ ನಂತರ ತಾವು ಹಿಂದಿನ ದಿವಸ ಅನುಭವಮಂಟಪದಲ್ಲಿ ಹೇಳಿದಂತೆ ಬರೆದು ತಂದ ವಚನಗಳನ್ನು ಸಾಹಿತ್ಯ ಸಮಿತಿಗೆ ಒಪ್ಪಿಸುವರು. ಆ ಸಮಿತಿಯಲ್ಲಿ ಸದಸ್ಯಳಾಗಿರುವ ಅಕ್ಕನು ಆ ವಚನಗಳ ಪರಿಷ್ಕರಣದಲ್ಲಿ ಭಾಗವಹಿಸುವಳು. ಆ ವಚನಗಳು ಸ್ಥಲಕಟ್ಟು ಹೊಂದಿ ಪ್ರತಿಮಾಡುವವರ ಕಡೆಗೆ ಹೋದಬಳಿಕ ಆಕೆಯು ಗೋಶಾಲೆಗೆ ಧಾವಿಸುವಳು. ಅಲ್ಲಿಯ ಜೋಪಾನ ಮತ್ತು ಓರಣಗಳನ್ನು ವಿಚಾರಿಸಿ, ಹಾಲು ಕರೆಯಿಸಿ ಪಾಕಶಾಲೆಗೆ ಕಳುಹಿಸುವಳು. ಉಗ್ರಾಣಕ್ಕೆ ಬಂದು ಅಂದಿನ ಅಡುಗೆಯ ಅಂದಾಜು ಸೂಚಿಸಿ, ತರಕಾರಿ ತೆಗೆಯಿಸಿ ಕಾಯಿಪಲ್ಲೆ ಸೋಸುವದಕ್ಕೆ ಕೂಡ್ರುವಳು. ಉಳಿದವರಿಂದ ಆ ಕೆಲಸ ಮುಂದುವರಿದ ಬಳಿಕ ಅಲ್ಲಿಂದೆದ್ದು ಅಡುಗೆಯ ಮನೆಗೆ ಬರುವಳು. ಒಲೆಯ ಮೇಲೆ ಪಾತ್ರೆಗಳನ್ನೇರಿಸಿ ಭೋಜನ ಪದಾರ್ಥಗಳನ್ನು ಸಿದ್ಧಗೊಳಿಸುವದರಲ್ಲಿ ಸ್ವತಃ ಭಾಗವಹಿಸುವಳು. ನೂರೋ

ಸಾವಿರವೋ ಜನರ ಪ್ರಸಾದಗ್ರಹಣವು ಗದ್ದಲವಿಲ್ಲದೆ ನಡೆಯುವಂತೆ ನಿಂತು ವ್ಯವಸ್ಥೆಮಾಡುತ್ತಿದ್ದಳು. ಆ ಜಂಗಮಪ್ರಸಾದದೊಡನೆ ಪ್ರಸಾದಸೇವನೆ ನೆರವೇರಿಸಿಕೊಳ್ಳುತ್ತಿದ್ದಳು.

ಆಮೇಲೆ ಮಹಮನೆಯ ಶರಣೆಯರ ಗುಂಪಿನಲ್ಲಿ ಅನುಭಾವದ ಚರ್ಚೆಗಿಳಿದು ಅವರ ಸಂದೇಹಗಳಿಗೆ ಕೈಲಾದ ಮಟ್ಟಿಗೆ ಸಮಾಧಾನ ನೀಡುವಳು. ಬಳಿಕ ಸ್ವಲ್ಪ ವಿಶ್ರಾಂತಿ ಸಿಕ್ಕಿತೋ ಇಲ್ಲವೋ ಕೋಠಿಯಲ್ಲಿ ಕಣಜಗಳನ್ನು ನೋಡಬೇಕು; ದವಸಧಾನ್ಯಗಳನ್ನು ತರಿಸಿ ತುಂಬಬೇಕು. ಅಕ್ಕಿ, ಹಿಟ್ಟು, ಮಾಡಿಸಬೇಕು. ಗ್ರಾಮಾಂತರಗಳಿಂದ ಹೇರಿಬರುವ ತರಕಾರಿಗಳನ್ನು ಹೊಟ್ಟು ಸೊಪ್ಪೆಗಳನ್ನು ಧಾನ್ಯಗಳನ್ನು ಪಡೆದು ವ್ಯವಸ್ಥೆಗೊಳಿಸಬೇಕು. ಹೊಸದಾಗಿ ಬಂದ ಜಂಗಮರಿಗಾಗಿ ವಸ್ತ್ರವಸತಿಗಳ ಬಗೆಗೆ ನೀಲಾಂಬೆಗೆ ಸಲಹೆನೀಡಬೇಕು. ಆರೋಗ್ಯವಿಲ್ಲದವರನ್ನು ಕಂಡು ಕಷಾಯಗಳನ್ನು ಮಾಡಿಸಿ ಉಪಚಾರವನ್ನು ನಿರ್ದೇಶಿಸಬೇಕು. ಸಾಯಂಕಾಲ ಮಹಮನೆಯ ವಿಚಾರಸಮಿತಿ ಸೇರಿದರೆ ಅದರಲ್ಲಿ ಮಹಿಳಾ ಸದಸ್ಯೆಯಾಗಿ ಭಾಗವಹಿಸುವಳು. ಬಸವಣ್ಣನಿಲ್ಲದಾಗ ಅದರ ಕಾರ್ಯದರ್ಶಿಯೋ ತಾನಾಗಿ ನಡಿಸುವಳು. ಸಂಜೆಗೆ ಅನುಭವಗೋಷ್ಠಿಯಲ್ಲಿ ತೊಡಗುವಳು. ಮುಂದೆ ಎಲ್ಲರ ಪೂಜಾ-ಪ್ರಸಾದಸೇವನೆಗಳು ಪೂರೈಸಿದ ಬಳಿಕ ಬಸವೇಶ-ಗಂಗಾಂಬೆ-ನೀಲಾಂಬೆಯರೊಡನೆ ಆರಾಮವಾಗಿ ಕುಳಿತು ಬಸವಣ್ಣನ ಯೋಗಕ್ಷೇಮ ಲೋಕಕಲ್ಯಾಣ ಸಾಧನೆ ರಾಜಕಾರಣ ಮುಂತಾದವುಗಳ ಬಗೆಗೆ ಮಾತಾಡಿ ಸ್ವಲ್ಪ ವಿನೋದಪಡುವಳು. ಇಲ್ಲವೆ ವೀಣೆಯನ್ನು ಹಿಡಿದು ವಚನಗೀತಗಳನ್ನು ಹಾಡುವಳು. ಕೊನೆಗೆ ತನ್ನ ಏಕಾಂತದ ಧ್ಯಾನಸಮಾಧಿ ಸುಖಗಳನ್ನು ಅನುಭವಿಸಿ ಯೋಗನಿದ್ರೆಯನ್ನು ಪಡೆಯುವಳು. ಇದು ಆಕೆಯ ಕ್ರಿಯಾಂಗದ ದಿನಚರಿ!

ಅಕ್ಕನ ಯೋಜನೆಯಂತೆ ಈ ಎಲ್ಲ ಕಾರ್ಯ ನೆರವೇರಿಸುವವರು ಮಹಮನೆಯಲ್ಲಿ ನೆಲೆಯಾಗಿ ನಿಂತು ಒಂದೊಂದು ಕಾಯಕ ಕೈಕೊಂಡ ಶರಣಶರಣೆಯರೇ ಆಗಿರುತ್ತಿದ್ದರು. ಎಲ್ಲವೂ ದಾಸೋಹ ಭಾವನೆಯಿಂದ ನಡೆಯುತ್ತಿದ್ದವು.

ಗಂಗಾಂಬಿಕೆಯು ಬಸವೇಶ್ವರರ ಸೇವೆಯನ್ನು ಪೂರೈಸಿ, ಅವರು ರಾಜಾಧಿಕರಣಕ್ಕೆ ತೆರಳುವವರೊಳಗಾಗಿ ಅವರ ಶಿವಾರ್ಚನೆ, ಜಂಗಮಾರಾಧನೆ, ಪ್ರಸಾದ

ಸೇವನೆಗಳು ನೆರವೇರುವ ದಕ್ಷತೆ ವಹಿಸಿದ್ದಳು. ನೀಲಾಂಬೆ ನಿತ್ಯನಿತ್ಯ ಬರುವ ಹೊಸಹೊಸ ಅತಿಥಿ ಅಭ್ಯಾಗತರ ಸತ್ಕಾರದ ವ್ಯವಸ್ಥೆಯನ್ನು ನೋಡಿಕೊಳ್ಳುತ್ತಿದ್ದಳು. ಹೀಗೆ ಬೇರೆಬೇರೆ ಹೊಣೆ ಹೊತ್ತಿದ್ದರೂ ಈ ಮೂವರು ಮಹಾತಾಯಿಗಳು ಒಬ್ಬರಿಗೊಬ್ಬರು ಪೂರಕವಾಗಿ ಕಾರ್ಯ ಪೂರೈಸುತ್ತಿದ್ದರು. ಮಹಮನೆಯ ಕಾರ್ಯವ್ಯಾಪ್ತಿ ಮಿತಿಮೀರಿದಾಗ ಸೊಡ್ಡಳ ಬಾಚರಸು, ಮಡಿವಳ ಮಾಚರಸು, ಸಕಲೇಶ ಮಾದರಸು, ಕಿನ್ನರಿ ಬೊಮ್ಮಯ್ಯ, ಹಡಪದಪ್ಪಣ್ಣ, ಮುಂತಾದ ಹಿರಿಯ ಶರಣರು ಕಾರ್ಯಾಂಗದ ಒಂದೊಂದು ಭಾಗವನ್ನು ವಹಿಸಿ ಶ್ರಮಿಸುತ್ತಿದ್ದರು. ಆದರೂ ಹಿರಿಯಳಾದ ಅಕ್ಕನಾಗಮ್ಮ ಎಲ್ಲದರಲ್ಲಿಯೂ ಸೂತ್ರಧಾರಕಳಾಗಿರುತ್ತಿದ್ದಳು. ಕಾವಿಯ ಸೀರೆಯುಟ್ಟು ಸೆರಗು ಎದೆಗೆ ಬಿಗಿದು ಕಟ್ಟಿದ, ಕೊರಳಲ್ಲಿ ದೊಡ್ಡ ಗಾತ್ರದ ಮುಂಗೈಗಳಲ್ಲಿ ಚಿಕ್ಕ ಗಾತ್ರದ ರುದ್ರಾಕ್ಷಿ ಮಾಲೆಗಳನ್ನು ಧರಿಸಿದ, ಹಣೆಯಲ್ಲಿ ಭಸ್ಮತ್ರಿಪುಂಢ್ರ ಬೆಳಗುವ ಅಕ್ಕನಾಗಮ್ಮ ಎಲ್ಲೆಲ್ಲಿಯೂ ಕಾಣಸಿಗುತ್ತಿದ್ದಳು.

* * *

ಚಾಲುಕ್ಯ ತೈಲಪನು ಸಾಮ್ರಾಜ್ಯವನ್ನಾಳಲು ಅಸಮರ್ಥನಾದುದರಿಂದ ಪೂರ್ಣಾಧಿಕಾರವು ಬಿಜ್ಜಳನದಾಯಿತು. ಬಸವರಾಜ ದಂಡನಾಯಕರ ಆರ್ಥಿಕ ಯೋಜನೆಯ ಅನುಷ್ಠಾನದಿಂದಲೂ ಜಾಣತನದ ಆಡಳಿತದಿಂದಲೂ ಬಿಜ್ಜಳನ ರಾಜ್ಯಾಧಿಕಾರವು ನಿಷ್ಕಂಟಕವೂ ಭದ್ರವೂ ಆಯಿತು. ಆಗ ಚಾಲುಕ್ಯಸಿಂಹಾಸನವನ್ನು ಅಪಹರಿಸಬೇಕೆಂಬ ಬಿಜ್ಜಳನ ಆಕಾಂಕ್ಷೆ ಅತಿಯಾಯಿತು. ತನ್ನ ಈ ದುರಾಕಾಂಕ್ಷೆಗೆ ಬಸವರಾಜರು ಅನುಕೂಲವಾಗುವದಿಲ್ಲವೆಂಬುದು ಅವನಿಗೆ ಗೊತ್ತು. ತನ್ನ ಕಾರ್ಯಸಾಧನೆಗೆ ಅವರನ್ನು ಸೇರದ ಬೇರೆ ಸ್ವಾರ್ಥಿಗಳನ್ನು ಅಧಿಕಾರಕ್ಕೇರಿಸಿದನು. ತೈಲಪದೇವನಿಗಿತ್ತ ವಿಶ್ವಾಸವನ್ನು ಉಲ್ಲಂಘಿಸಿದನು. ಅದರಿಂದ ನೊಂದ ತೈಲಪನು ಸಾವನ್ನಪ್ಪಿದನು. ಬಿಜ್ಜಳನ ಈ ರಾಜ್ಯದಾಹಕ್ಕೆ ಅಸಹ್ಯಪಟ್ಟ ಬಸವರಾಜರು ಬನವಾಸಿ ಮಂಡಲದಿಂದ ಬಂದು ಅರಮನೆಯಲ್ಲಿ ಆತನನ್ನು ಕಂಡು ವಾದಿಸಿ ತಮ್ಮ ಅಧಿಕಾರನಿವೃತ್ತಿ ಪತ್ರವನ್ನು ಕೊಟ್ಟು ಮಹಮನೆಗೆ

ಬಂದರು. ಬಿಜ್ಜಳನು ಬಸವರಾಜರನ್ನು ಬಿಡುವದಕ್ಕೂ ಬಿಡವಿರುವದಕ್ಕೂ ಆಗದೆ ಚಡಪಡಿಸಿದನು.

ಬಸವರಾಜರು ಹೀಗೆ ಮಹಮನೆಗೆ ಬಂದಾಗ ಅಕ್ಕನಾಗಮ್ಮ ಇರಲಿಲ್ಲ. ಅನುಭವಗೋಷ್ಠಿಯ ಸಮಯವಾಗಿತ್ತು. ಬಹುದಿವಸಕ್ಕೆ ಬಂದ ಬಸವಣ್ಣನವರ ಪ್ರವಚನಕ್ಕೆ ಪ್ರಮಥರು ಆತುರರಾಗಿದ್ದರು. ಗೋಷ್ಠಿ ಆರಂಭವಾಯಿತು. ನಾಗಮ್ಮ ಅಲ್ಲಿಯೇ ಬಸವರಾಜರನ್ನು ನೋಡಿದ್ದು. ಗೋಷ್ಠಿಗೆ ಮಂಗಲವಾದ ಮೇಲೆ ಮೊದಲೇ ಮಾಸಗೃಹಕ್ಕೆ ಬಂದು ಅವರಿಗಾಗಿ ಕಾದಿದ್ದಳು.

"ಯಾವಾಗ ಬಂದೆ ಬಸವೇಶಾ ? ನಾವು ಮನೆಯ ಮುಟ್ಟುವದಕ್ಕೇ ವೇಳೆಯಾದ್ದರಿಂದ ನೇರವಾಗಿ ಅನುಭವ ಮಂಟಪಕ್ಕೇ ಬಂದೆವು. ಅಲ್ಲಿಯೇ ನಿನ್ನನ್ನು ನೋಡಿದ್ದು."

"ಮೂರನೆಯ ಪ್ರಹರದಲ್ಲಿ ನಗರಕ್ಕೆ ಬಂದೆನು. ಹಾಗೆಯೇ ಬಿಜ್ಜಳರಾಜರನ್ನು ಕಾಣಹೋದೆನು. ಅಲ್ಲಿಂದ ಮನೆಗೆ ಬಂದಾಗ ನೀನು ಕಾಣಲಿಲ್ಲ. ಅಷ್ಟರಲ್ಲಿ ಅನುಭವಗೋಷ್ಠಿಯ ವೇಳೆಯಾಗಿತ್ತು."

"ಬೇಲೀಬೀಡು ಹಳ್ಳಿಯ ಗೌಡರ ಆಳು ಮಹಮನೆಗೆ ಸೊಪ್ಪು ಕೊಡಲಿಕ್ಕೆ ಬಂದಾಗ ತಮ್ಮ ಹಳ್ಳಿಯಲ್ಲಿ ಮಾರೀಬೇನೆ ಹಬ್ಬಿದುದನ್ನು ಹೇಳಿದ್ದನು. ರೆಮ್ಮವ್ವೆ, ಲಕ್ಕಮ್ಮ, ರಾಯಮ್ಮ ಶರಣೆಯರೂ ನಾನೂ ಅಲ್ಲಿಗೆ ಹೋಗಿ ಕಷಾಯ ಮಾಡಿಸಿ, ಔಷಧಕೊಡುವದನ್ನು ತೋರಿಸಿ, ಉಪಚಾರವನ್ನು ಸರಿಗೊಳಿಸಿ ಬಂದೆವು. ಬಹುಜನ ರೋಗಗ್ರಸ್ತರು ಬಡವರೇ ಆಗಿದ್ದಾರೆ."

"ಒಳ್ಳೆಯದನ್ನೇ ಮಾಡಿದಿರಮ್ಮ ನೀವು. ಇದೇ ಆದರ್ಶ ಕರ್ತವ್ಯ. ಇದೇ ಈಶಸೇವೆ, ದೇಶಸೇವೆ. ಹಲವು ಕಡೆಗೆ ನಿನ್ನ ವಿಶಾಲ ಹೃದಯದ ಪ್ರಶಂಸೆ ಕೇಳಬರುತ್ತಿದೆಯಮ್ಮಾ !"

"ಪ್ರಶಂಸೆ ಏಕಾಗಬೇಕು ? ದೀನಜನರ ದುಃಖ ನಿವಾರಣೆಯಿಂದ ಆನಂದಪಡುವವರೇ ನಾವು. ನಮ್ಮ ಸಮಾಧಾನಕ್ಕೆ ನಾವು ಮಾಡುವದು. ಅರಮನೆಯಲ್ಲಿ ನಡೆದದ್ದೇನು ? ನಿನ್ನ ಮನಸ್ಸು ಕಳವಳಗೊಂಡಂತಿದೆ."

"ಕಳವಳಕ್ಕೆ ಪರಿಹಾರವನ್ನೂ ಪಡೆದಿದ್ದೇನೆ. ತೈಲಪದೇವನ ಮರಣದನಂತರ ರಾಜಕೀಯ ಸರ್ಪನ ವೇಗದಿಂದ ವಕ್ರಗತಿಯನ್ನು ಅನುಸರಿಸಿದೆ. ಬಿಜ್ಜಳ

ರಾಯರು ರಾಜ್ಯದಾಹದಲ್ಲಿ ಬೇಯುತ್ತಿದ್ದಾರೆ. ಸ್ವಾರ್ಥ, ದ್ವೇಷ, ಮತ್ಸರ, ವಂಚನೆಗಳು ತಲೆಯೆತ್ತಿವೆ. ಈಗ ಅಧಿಕಾರದ ಹೊಣೆಯನ್ನು ನ್ಯಾಯವಾಗಿ ನಿರ್ವಹಿಸುವುದು ಸಾಧ್ಯವಿಲ್ಲ. ನಿವೃತ್ತಿಪತ್ರವನ್ನು ಕೊಟ್ಟುಬಂದೆನು."

"ಮುಂದೆ ?"

"ಅದನ್ನವರು ಒಪ್ಪಲಿ ಬಿಡಲಿ; ಮುಂದೆ ನಾನು ಅಧಿಕಾರದಲ್ಲಿ ಉಳಿಯುವದು ಸಾಧ್ಯವಿಲ್ಲವೆಂದು ಸ್ಪಷ್ಟಪಡಿಸಿದ್ದೇನೆ. ಚೆನ್ನಬಸವಣ್ಣನ ಅಲ್ಲಿಯ ಅಧ್ಯಯನ ಮುಗಿದಿದೆ. ಹೇಳಿಕಳುಹಿದರೆ ಬನವಾಸಿಯಿಂದ ಮನೆಯವರನ್ನು ಕರೆದುಕೊಂಡು ಬರುವನು. ಬೇಕಾದರೆ ಇಲ್ಲಿಂದಲೇ ಎರಡು ಬಂಡಿಗಳನ್ನು ಹತ್ತು ಜನ ಭಟರನ್ನು ಕಳಿಸಿಕೊಡೋಣ."

"ಇನ್ನು ಉದ್ದೇಶಿಸಿದ ಕಾಯಕವೇನು ?"

"ಏನಾದರೂ ಮಾಡುವೆ. ಅಂದಿಂದಿಗೂ ಅಕ್ಕನೂ ತಾಯಿಯೂ ಆದ ನೀನೇ ನನಗೆ ಮಾರ್ಗದರ್ಶಿನಿ. ಇಂದು ನೀನು ತೋರಿದ ಆದರ್ಶವೇ ನನ್ನ ಕಾಯಶ್ರೀಗೆ ಬೆಳಕಾಗಿರಲಿ. ಕೈಗೂಲಿಯ ಮಾಡಿಯಾದರೂ ಗುರುಲಿಂಗಜಂಗಮಾರಾಧನೆಯ ನಡಿಸುವೆ. ಇದು ನನ್ನ ಪ್ರತಿಜ್ಞೆ !"

ಬಸವಣ್ಣನವರು ಅಕ್ಕನ ಪಾದಕ್ಕೆರಗಿದರು. ನಾಗಲಾಂಬೆ ಕೈಹಿಡಿದೆತ್ತಿ ತಲೆಯನ್ನಪ್ಪಿದಳು. ಹೃದಯ ತುಂಬಿಬಂದಿತ್ತು. ಹಲವು ವರ್ಷಗಳ ಹಿಂದಿನ ಮಾತೃವಾತ್ಸಲ್ಯ ಮರಳಿ ಬಂದಿತ್ತು. ಆ ಭಾವದಲ್ಲಿ ಬೆರೆತು ಸಣ್ಣಾಗಿ ಹಾಡಿದಳು:

'ಬಸವನೇ ಮುಖಸೆಜ್ಜೆ, ಬಸವನೇ ಅಮಳೋಕ್ಯ,
ಬಸವನ ನಾನೆತ್ತಿ ಮುದ್ದಾಡಿಸುವೆನು.
ಬಸವಾ ಸಂಗನಬಸವದೇವಾ ಜಯತು, ಬಸವಾ ಸಂಗನಬಸವಲಿಂಗಾ ಜಯತು.
ಬಸವಗೂ ಎನಗೂ ಭಾವಭೇದವಿಲ್ಲ; ಬಸವಗೂ ಎನಗೂ ರಾಶಿಕೂಟವುಂಟು.
ಬಸವಣ್ಣಪ್ರಿಯ ಚೆನ್ನಸಂಗಯ್ಯನಲ್ಲಿ
ಬಸವನ ಬೆಸಲಾದ ಬಾಣತಿ ನಾನಯ್ಯಾ, ಬಸವಾ, ಬಸವಾ, ಬಸವಾ.'

೮ ಕ್ರಿಯಾ ಜ್ಞಾನ ಸಮನ್ವಯ

ಬಸವರಾಜರನ್ನು ದೂರಮಾಡಿ, ಸಾಮ್ರಾಜ್ಯದಲ್ಲೆಲ್ಲ ಅವರ ಬಗೆಗೆ ಗೌರವಾದರ ತಾಳಿದ ಅಸಂಖ್ಯಾತ ಜನರನ್ನು ಎದುರು ಹಾಕಿಕೊಳ್ಳುವದು ಅಪಾಯಕರವೆಂದು ಬಿಜ್ಜಳನಿಗೆ ತೋರಿತು. ಇದಲ್ಲದೆ ಬಸವರಾಜರಿಂದಾದ ಉಪಕಾರದ ಸ್ಮರಣೆಯೂ ಇನ್ನೂ ಅಳಿದಿರಲಿಲ್ಲ. ಅದ್ದರಿಂದ ಬಸವಣ್ಣನವರಿಗೆ ವಿರಾಮವೇತನವನ್ನೂ ಮಂತ್ರಿಮಂಡಲದ ಗೌರವಸ್ಥಾನವನ್ನೂ ದಂಡನಾಯಕತ್ವ ಪದವಿಗೆ ನಿರಂತರತ್ವವನ್ನೂ ಸಲ್ಲಿಸಬೇಕೆಂದು ನಿರ್ಣಯಿಸಿ ಅವರಿಗೆ ತಿಳಿಸಿದನು. ವಿಚಾರಸಮಿತಿಯ ಸಲಹೆಯಂತೆ ಶಿವದಾಸೋಹಕ್ಕಾಗಿ, ಶರಣ ಧರ್ಮದ ಹಿತರಕ್ಷಣೆಗಾಗಿ ಬಸವಣ್ಣನವರು ಅದನ್ನು ಸ್ವೀಕರಿಸಿದರು. ಇದನ್ನೂ ಶರಣಧರ್ಮದ ಉತ್ಕರ್ಷವನ್ನೂ ಸಹಿಸದ ಅನ್ಯಮತೀಯ ಮಂತ್ರಿಗಳು—ಉನ್ನತಾಧಿಕಾರಿಗಳು ದ್ವೇಷವನ್ನು ತಾಳಹತ್ತಿದರು. ಬಿಜ್ಜಳನ ತಲೆ ಕೆಡಿಸುವದಕ್ಕೂ ಆರಂಭವಾಯಿತು.

ನಿಯಮಿತ ಅಧಿಕಾರದಿಂದ ಬೇರೆಯಾದ ಬಳಿಕ ಬಸವೇಶ್ವರರು ಸ್ವತಃ ಮಹಮನೆಯ ಕಾರ್ಯದರ್ಶಿಯಾದರು. ಪ್ರಭುದೇವರು, ಸಿದ್ಧರಾಮರು, ಅಕ್ಕಮಹಾದೇವಿ, ಮೋಳಿಗೆಯ ಮಾರಯ್ಯ ಮುಂತಾದ ಮಹಾಮಹಾ ಶಿವಯೋಗಿಗಳು ಶರಣ-ಶರಣೆಯರು ಅನುಭವಮಂಟಪದಲ್ಲಿ ಕಲೆತಾಗ, ಬಳ್ಳಿಗಾವಿಯಿಂದ ಬಂದ ಪರಿಸ್ಫುಟ ಷಟ್‌ಸ್ಥಲಜ್ಞಾನಿ ಚೆನ್ನಬಸವಣ್ಣ ಅದರ ಕಾರ್ಯದರ್ಶಿಯಾಗಿದ್ದನು.

ಅಲ್ಲಮಪ್ರಭುದೇವರು ಅನುಭವಮಂಟಪದ ಸ್ಥಾಯೀ ಅಧ್ಯಕ್ಷರಾದರು. ಯೋಗಸಿದ್ಧ ಸಿದ್ಧರಾಮಯ್ಯನಿಗೆ ಚೆನ್ನಬಸವಣ್ಣನಿಂದ ಇಷ್ಟಲಿಂಗಧಾರಣವಾಗಿ ಷಟ್‌ಸ್ಥಲಯೋಗದಿಂದ ಆತನು ಶಿವಯೋಗಿಯಾದನು. ವೈರಾಗ್ಯನಿಧಿ ಮಹಾದೇವಿಯಕ್ಕನ ಅನುಭವ ಪ್ರಮಥಗಣದಲ್ಲಿ ಪ್ರಭಾವವನ್ನು ಬೀರಿತು. ಇವೆಲ್ಲ ಸಂದರ್ಭಗಳು ಅಕ್ಕನಾಗಮ್ಮನಿಗೆ ಮಹಾಪರ್ವಗಳು. ಆಗ ಆಕೆ ಅವಿಶ್ರಾಂತವಾಗಿ ಪರಿಶ್ರಮಿಸಿ ಆನಂದವನ್ನು ಅನುಭವಿಸಿದಳು. ಅಕ್ಕನಿಗೆ ಮೊದಲಿನಿಂದಲೇ

ಯೋಗಸಾಧನೆಯ ಅಭ್ಯಾಸವಿತ್ತು. ಅದು ಇಂಗಳೇಶ್ವರದ ಗವಿಯಲ್ಲಿಯೇ ಆರಂಭವಾಗಿತ್ತು. ಈಗ ಆಕೆಯ ಸಾಧನೆಯ ಮಟ್ಟವನ್ನು ಗುರ್ತಿಸಿ ಪ್ರಭುವು ಅದನ್ನು ಮುಂದುವರಿಸಲು ಮಾರ್ಗದರ್ಶನ ಮಾಡಿದರು. ಕಲ್ಯಾಣದಲ್ಲಿ ಈಗಲೂ ಉಳಿದ 'ಅಕ್ಕನಾಗಮ್ಮನ ಗವಿ'ಯೆಂಬುದು ಆಕೆಯ ಯೋಗಸಾಧನೆಯ ನಿದರ್ಶನವಾಗಿದೆ.

ನಾಗಕ್ಕನು ತ್ರಿಮಲಗಳನ್ನು ಸಂಪೂರ್ಣವಾಗಿ ಅಳಿದವಳಾಗಿ ಮುಂದೆ 'ಇವ ತಮ್ಮ', 'ಇವ ಮಗ' ಎಂಬ ಮಾಯಾಭಾವ ಅವಳಲ್ಲಿ ಉಳಿಯಲೇ ಇಲ್ಲ. ಹೊರಗೆ ಭಕ್ತಿಭಾಂಡಾರಿಯಾಗಿ ಒಳಗೆ ಸುಜ್ಞಾನಿಯಾಗಿರುವ ಬಸವಣ್ಣನೂ ಚಿನ್ಮಯಾನಂದ ಷಟ್‌ಸ್ಥಲಬ್ರಹ್ಮಿ ಚೆನ್ನಬಸವಣ್ಣನೂ ತನ್ನ ಸಾಧನೆಯ ಮಾರ್ಗದಲ್ಲಿ ತನಗೆ ಗುರುಗಳೆಂದೇ ಭಾವಿಸಿದ್ದಳು. ಅವರಿಬ್ಬರು ತಿಳಿದಂತೆ—ಅವರಿಗೆ ತಾನು ಹಿರಿಯಳು, ಗುರು, ಮಾರ್ಗದರ್ಶಕಳು ಎಂಬ ಕಲ್ಪನೆಯೇ ಅವಳಿಗಿರಲಿಲ್ಲ. ಅವಳ ಹೃದಯದಲ್ಲಿ ಯಾವಾಗಲೂ ನಿನದಿಸುತ್ತಿದ್ದ ವಚನಗೀತ ಇದು :

"ಎನ್ನ ತನು ಚೆನ್ನಬಸವಣ್ಣನ ಬಯಲ ಬೆರಿಸಿತ್ತು;
ಎನ್ನ ಮನ ಸಂಗನಬಸವಣ್ಣನ ನಿಜಪದವ ಬೆರಿಸಿತ್ತು;
ಎನ್ನ ಪ್ರಾಣ ಅಲ್ಲಮಪ್ರಭುದೇವರ ಅರಿವ ಬೆರಿಸಿತ್ತು.
ಇಂತೀ ಮೂವರೂ ಒಂದೊಂದ ಹಂಚಿಕೊಂಡ ಕಾರಣ,
ಎನಗೇನೂ ಇಲ್ಲದೆ
ಬಸವಣ್ಣಪ್ರಿಯ ಚೆನ್ನಸಂಗಯ್ಯನಲ್ಲಿ ನಿಜನಿವಾಸಿಯಾಗಿದ್ದೆನು."

ಪ್ರಭುದೇವರು ಬಂದು ಬಸವಣ್ಣನವರ ಪರಮ ಭಾಕ್ತಿಕ ಜೀವನದಲ್ಲಿಯ ಕಸರು-ಕಲೆಗಳನ್ನು ತೊಳೆದು ಅದನ್ನು ಬೆಳಗಿಸಿದರು. ಉಳಿದ ಶರಣಶರಣೆಯರೂ ತಮಗಿರುವ ಸಂದಿಗ್ಧತೆಗಳನ್ನು ಪ್ರಭುವಾಣಿಯಿಂದ ತೊಡೆದುಕೊಳ್ಳುತ್ತಿದ್ದರು. ಅನುಭವಮಂಟಪದಲ್ಲಿ ಒಂದು ದಿನ ಅಧ್ಯಕ್ಷ ಪ್ರಭುದೇವರಿಂದಲೇ ಪ್ರಮುಖ ಪ್ರವಚನವಾಗಲೆಂದು ಪ್ರಮುಖರು ಏರ್ಪಡಿಸಿದ್ದರು. ಅಂದು ಪ್ರಭುವು ಇಷ್ಟಲಿಂಗದಿಂದ ಪ್ರಾಣಲಿಂಗ ಭಾವಲಿಂಗಗಳನ್ನು ಸಾಧಿಸುವ ಕ್ರಮವನ್ನು ಕುರಿತು ಜಂಗುಗಳಿಗೆ ಅಸ್ಖಲಿತವಾಗಿ ಲಲಿತವಾಗಿ ಪ್ರವಚನ ಮಾಡಿದರು. ಅದೆಂತಹ ಪರ

ಮಾನುಭಾವದ ವಾಣಿಯದು! ಪ್ರಪಂಚದಲ್ಲಿದ್ದೇವೆಂಬುದನ್ನೇ ಮರೆತಿದ್ದರು ಶ್ರೋತೃಗಳು! ಮಂಗಲದ ಮೊದಲು ಪ್ರಮಥರು ತಮತಮಗೆ ಆದ ಆನಂದದ ಭರದಲ್ಲಿ ಪ್ರಭುವನ್ನು ಸ್ತುತಿಸಿದರು. ಆಗ ಅಕ್ಕನಾಗಮ್ಮನೂ ಹೃದಯ ತುಂಬಿ ಹೇಳಿದುದು ಹೀಗೆ:

"ಎನ್ನ ಭವದ ಬಳ್ಳಿಯ ಬೇರು ಹರಿಯಿತ್ತಯ್ಯಾ
ಸಂಗನಬಸವಣ್ಣನ ಒಕ್ಕುದ ಕೊಂಡೆನಾಗಿ.
ಎನ್ನ ಮನದ ಕಪಟ ಹಿಂಗಿತ್ತಯ್ಯಾ
ಚೆನ್ನಬಸವಣ್ಣನ ಕರುಣವ ಪಡೆದೆನಾಗಿ.
ಎನ್ನ ಅಂತರಂಗದ ಸಂದು ಸಂಶಯ ತೊಲಗಿತ್ತಿಂದು
ಬಸವಣ್ಣಪ್ರಿಯ ಚೆನ್ನಸಂಗಯ್ಯನಲ್ಲಿ ಎನ್ನ ಪರಮಗುರು
ಅಲ್ಲಮಪ್ರಭುದೇವರ ಶ್ರೀಚರಣವ ಕಂಡೆನಾಗಿ."

ಮಹಮನೆಯ ದಾಸೋಹದಲ್ಲಿ, ತನ್ನ ಭೃತ್ಯಾಚಾರದ ಸೇವೆಯಲ್ಲಿ ಅಕ್ಕನಿಗೆ ಮಹಾನುಭಾವಿಗಳ ಅನುಭಾವದ ಅರಿವು ಉಂಟಾಗುತ್ತಿತ್ತು. ಅವರವರ ಸಾಧನೆಗಳ ವಿಶಿಷ್ಟ ನಿಲವುಗಳೆಲ್ಲ ಅಕ್ಕನ ಭಾವದಲ್ಲಿ ಮೂಡಿ ಪರಿಣಮಿಸುತ್ತಿದ್ದವು. ಅವರೆಲ್ಲರ ಕರುಣೆಯಿಂದಲೇ ತಾನು ನಿಜದ ನಿಲವಿಗಳಾದೆನೆಂದು ಹೇಳಿದುದು ಹೀಗೆ:

"ಗುರುಸಂಬಂಧಿ ಗುರುಭಕ್ತಯ್ಯನು,
ಲಿಂಗಸಂಬಂಧಿ ಪ್ರಭುದೇವರು,
ಜಂಗಮ ಸಂಬಂಧಿ ಸಿದ್ಧರಾಮನು,
ಪ್ರಸಾದ ಸಂಬಂಧಿ ಮರುಳಶಂಕರದೇವರು,
ಶರಣ ಸಂಬಂಧಿ ಘಟ್ಟಿವಾಳಯ್ಯನು,
ಐಕ್ಯ ಸಂಬಂಧಿ ಅಜಗಣ್ಣಯ್ಯನು,
ಸರ್ವಾಚಾರ ಸಂಬಂಧಿ ಚೆನ್ನಬಸವಣ್ಣನು,

ಇಂತಿವರ ಸಂಬಂಧ ಎನ್ನ ಸರ್ವಾಂಗದಲ್ಲಿ ನಿಂದು,
ಬಸವಣ್ಣಪ್ರಿಯ ಚೆನ್ನಸಂಗಯ್ಯನ ಹೃದಯಕಮಲದಲ್ಲಿ
ನಿಜನಿವಾಸಿಯಾಗಿದ್ದೆನು."

(ಇವರಲ್ಲಿ ಒಬ್ಬಿಬ್ಬರ ಸೇವಾಸಂಬಂಧ ಅಕ್ಕನಿಗೆ ಸಂಗಮದಲ್ಲಿ ಆಗಿರಬಹುದು.)

ಕೆಲವು ಕಾಲ ಪ್ರಭುದೇವರು ಕಲ್ಯಾಣದಲ್ಲಿದ್ದು ಬಳಿಕ ಲೀಲಾರ್ಥವಾಗಿ ದೇಶಾಟನಕ್ಕೆ ಹೋದರು. ಬಸವೇಶ್ವರರು ಶೂನ್ಯಸಿಂಹಾಸನವನ್ನು ವಿರಚಿಸಿ ಕೊಂಡು ಮತ್ತೆ ಪ್ರಭುದೇದರ ದಾರಿಯನ್ನು ಕಾಯುತ್ತಿದ್ದರು. ಅವರ ಭಕ್ತಿಗೆ ಆಕರ್ಷಿತನಾದ ಪ್ರಭು ಪ್ರಮಥರ ಅನುಭವ ಪರಿಣತಿಯನ್ನು ವೀಕ್ಷಿಸಲು ಎರಡ ನೆಯ ಸಾರೆ ಕಲ್ಯಾಣಕ್ಕೆ ದಯಮಾಡಿಸಿದರು. ಅವರನ್ನು ಬಿಜಯಂಗೈಸಿ ಕೊಳ್ಳುವ, ಶೂನ್ಯ ಸಿಂಹಾಸನಾರೋಹಣ ಮಾಡಿಸುವ ಉತ್ಸವಗಳು ಕಲ್ಯಾಣ ದಲ್ಲಿಯೇ ಅಪೂರ್ವವಾಗಿ ನಡೆದವು. ಅಂದು ಲಕ್ಷದ ಮೇಲೆ ತೊಂಭತ್ತಾರು ಸಾವಿರ ಗಣಂಗಳಿಗೆ ಪ್ರಸಾದಸಂತರ್ಪಣೆಯಾಗಿತ್ತು. ತಿರುಕನೊಬ್ಬನನ್ನು ತಂದು ಉತ್ಸವ ನಡಿಸುತ್ತಿರುವರೆಂದು ಕೊಂಡೆಯರು ಬಿಜ್ಜಳನ ಕಿವಿಯೂದಿದ್ದರು. ಬಿಜ್ಜಳರಾಜನು ಸ್ವತಃ ವೈಮರಿಸಿ ಬಂದು ಪ್ರಭುದೇವರ ಪ್ರವಚನವನ್ನು ಕೇಳಿ ದನು. ಬಳಿಕ ಅವನು ಬಸವಣ್ಣನವರನ್ನು ಕಂಡು ಹೀಗೆ ಉದ್ಗಾರ ತೆಗೆದನು :

"ನಿಮ್ಮ ಗುರುದೇವರು ನಿಜವಾಗಿ ಹಿರಿಯ ಅನುಭಾವಿಗಳು. ಪರಾ ಜ್ಞಾನದ ಪ್ರತ್ಯಕ್ಷ ಮೂರ್ತಿ! ಇಂತಹ ಮಹಾತ್ಮರು ಅವತಾರ ಪುರುಷ ರೆಂಬುದು ನಿಜ. ಅವರ ವಾಕ್‌ಶಕ್ತಿ ಸ್ಫೂರ್ತಿದಾಯಕವಾಗಿದೆ. ನಿಮ್ಮ ಪ್ರತಿ ಯೊಂದು ಕಾರ್ಯವು ಮಹತ್ತರವಾಗಿವೆ ಬಸವಣ್ಣನವರೇ! ಆದರೆ ಅವುಗಳಿಗೆ ರಾಜಕೀಯ ಬಣ್ಣ ಹಚ್ಚಿ ಹೇಳುತ್ತಿದ್ದಾರೆ ಕೊಂಡೆಯರು......"

ಇಲ್ಲಿಗೆ ಪ್ರಮಥರ ಉಚ್ಛ್ರಾಯವು ಶಿಖರವನ್ನು ಕಂಡಿತು. ಇಲ್ಲಿಂದ ಮುಂದೆ ಅವರಿಗೆ ತೊಂದರೆಗಳು ಆರಂಭವಾದವು.

ಒಂದು ವರ್ಷದ ಮೇಲೆ ಪ್ರಭುದೇವರು ತಮ್ಮ ಈ ನಿರಂಜನ ಪೀಠದ ಅಧಿಕಾರವನ್ನು ಚೆನ್ನಬಸವಣ್ಣನಿಗೆ ಒಪ್ಪಿಸಿ ಕೊನೆಯದಾಗಿ ಕಲ್ಯಾಣದಿಂದ ಶ್ರೀಶೈಲದ ಕಡೆಗೆ ಹೊರಟರು. ಕಲ್ಯಾಣದ ಕಟ್ಟೆಯೊಡೆದು ಆಧ್ಯಾತ್ಮಿಕ

ಸಂಪತ್ತೇ ಹೊರಟು ನಿಂತಾಯಿತು. ಪ್ರಭುದೇವರ ಪಾದಪೂಜೆ ಮಾಡಿ ಬೀಳ್ಕೊಡುವಾಗ ನಾಗಮ್ಮ ಹಾಡಿದ ಪರಿಣಾಮ ಗೀತೆ ಇದು :

"ಅರಿಯದೆ ಮರಹಿಂದ ಭವದಲ್ಲಿ ಬಂದೆನಲ್ಲದೆ
ಇನ್ನು ಅರಿದ ಬಳಿಕ ಬಳಲಲುಂಟೇ ?
ಹೃದಯ ಕಮಲದಲ್ಲಿ ನಿಜವು ನೆಲೆಗೊಂಡ ಬಳಿಕ
ಪುಣ್ಯಪಾಪವೆಂಬವಕ್ಕೆ ಹೊರಗಾದೆನು.
ಭುವನ ಹದಿನಾಲ್ಕರೊಳಗೆ ಪರಿಪೂರ್ಣ ನಿರಂಜನ ಜ್ಯೋತಿಯಾಗಿ
ಬೆಳಗುವ ಪ್ರಭುವ ಕಂಡು ಬದುಕಿದೆನು ಕಾಣಾ
ಬಸವಣ್ಣಪ್ರಿಯ ಚೆನ್ನಸಂಗಯ್ಯಾ."

ವಿಪ್ಲವ ಕಾಲದಲ್ಲಿ

೧ ಶರಣಧರ್ಮಕ್ಕೊದಗಿದ ಆಪತ್ತು

ಬಿಜ್ಜಳನು ಚಾಲುಕ್ಯ ತೈಲಪನ ತಮ್ಮ ಜಗದೇಕಮಲ್ಲ(ಜಗದ್ದೇವ)ನನ್ನು ಹೆಸರಿಗೆ ಪಟ್ಟಗಟ್ಟಿ ಸೆರೆಯಲ್ಲಿಟ್ಟುಬಿಟ್ಟನು. ತೈಲಪನ ರಾಣಿ ಮಾಹೇಶ್ವರಿಯು ಮಗನೊಂದಿಗೆ ಕರ್ಹಾಡದಲ್ಲಿ ಉಳಿದಳು. ಬಿಜ್ಜಳನಿಂದ ಅವಮಾನಿತನಾದ ನಿಡುಗಲ್ಲ ಕಂಪಣದ ಅಧಿಪತಿ ಮಲ್ಲಬೊಮ್ಮಯ್ಯ (ಬೊಮ್ಮರಸು) ಜಗದೇಕಮಲ್ಲನ ಮಿತ್ರನಾಗಿದ್ದನು. ಮಾಹೇಶ್ವರಿಯೂ ಜಗದೇಕಮಲ್ಲನೂ ಬೊಮ್ಮರಸನೂ ಗುಪ್ತ ಸಂಧಾನದಿಂದ ಸೇರಿ ಬಿಜ್ಜಳನನ್ನು ತಳ್ಳುವ ಸಂಚು ನಡಿಸಿದ್ದರು. ಬಿಜ್ಜಳನು ರಾಜ್ಯಾಪಹಾರ ಮಾಡಿದುದನ್ನು ಹಲವು ಸಾಮಂತ ಮಂಡಲೇಶ್ವರರು ಒಪ್ಪಿರಲಿಲ್ಲ. ಅವರ ಸಹಾಯದಿಂದ ಈ ಚಾಲುಕ್ಯವಂಶೀಯರ ಒಳಸಂಚು ರಾಜ್ಯದಲ್ಲೆಲ್ಲ ಪಸರಿಸಿತ್ತು. ಜಂಗಮವೇಷದಿಂದ ಮಹಮನೆಯಲ್ಲಿ ಸೇರಿ ಬೊಮ್ಮರಸನು ಶರಣರೊಡನೆ ವಾಸಮಾಡಿದ್ದನು. ಜಗದೇಕಮಲ್ಲನಿಗೆ ತತ್ವೋಪದೇಶಕನೊಬ್ಬನು ಬೇಕಾದಾಗ ಆ ನೆವದಿಂದ ತಾನೇ ಹೋಗಿ ಅವನನ್ನು ಕೂಡಿಕೊಂಡನು. ಅವರಿಬ್ಬರು ಗುಪ್ತಚಾರರ ಮುಖಾಂತರ ರಹಸ್ಯವಾಗಿ ಮಾಹೇಶ್ವರಿ ರಾಣಿಯೊಡನೆ ಸಂಚಿನ ಸಂಬಂಧ ಬೆಳಿಸಿದ್ದರು.

ಇತ್ತ, ಕೆಳಗಿನ ವರ್ಗದ ಜನರು ಶಿವದೀಕ್ಷೆಯಿಂದ ಸಮಾಜದಲ್ಲಿ ಸಮಾನತೆಯನ್ನು ಪಡೆದು ಉಚ್ಚವರ್ಣದವರ ಸಮನಾಗಿ ವರ್ತಿಸುವದನ್ನು ವರ್ಣಾಶ್ರಮ ಧರ್ಮಾಭಿಮಾನಿ ಸನಾತನಿಗಳು ಸಹಿಸದಾದರು. ಅವರು ಸಮಾಜವ್ಯವಸ್ಥೆಗೆ ಆಧಾರವಾದ ವರ್ಣಾಶ್ರಮಧರ್ಮದ ಅಳಿಗಾಲದಿಂದ ದೇಶಕ್ಕೆ ಕೇಡೆಂದೂ ಅದರ ರಕ್ಷಣೆ ರಾಜನ ಕರ್ತವ್ಯವೆಂದೂ ಹುಯ್ಯಲೆಬ್ಬಿಸಿ ಬಿಜ್ಜಳನ ತಲೆ ಕಾಯಿಸಿದರು. ಈ ಮತದ್ವೇಶಕ್ಕೆ ಪೋಷಕವಾಗಿ ಇನ್ನು ಕೆಲವು ಘಟನೆಗಳು ನಡೆದವು. ಉತ್ತರಕ್ಕೆ ಹೋದ ಶರಣರ ತಂಡವೊಂದು ಇಳಾಪುರಿಯಲ್ಲಿ ನಡೆದ ಯಜ್ಞಕರ್ಮವನ್ನು ವಿರೋಧಿಸಿ ತಡೆಯಿತು. ಬಿಜ್ಜಳನ ಸಾಮಂತಮಂತ್ರಿ ಮಧುವರಸು ಬ್ರಾಹ್ಮಣನು, ಬಸವೇಶ್ವರರ ತತ್ವವಿಚಾರಗಳನ್ನು ಮೆಚ್ಚಿ ಶಿವದೀಕ್ಷೆ ಹೊಂದಿ ಶಿವಶರಣನಾಗಿದ್ದನು. ಮಚ್ಚಿಗನಾದ ಹರಳಯ್ಯ ಶಿವದೀಕ್ಷೆ

ಯಿಂದ ಶರಣನಾಗಿ ಸದಾಚಾರಸಂಪನ್ನನಾಗಿದ್ದನು. ಮಂತ್ರಿ ಮಧುವರಸನ ಮಗಳು ಕಲಾವತಿ, ಹರಳಯ್ಯನ ಮಗ ಶೀಲವಂತ ಇವರಿಬ್ಬರು ಪ್ರತಿಭಾವಂತ ಕಲಾವಂತರಾಗಿದ್ದು ಪರಸ್ಪರ ಒಲಿದು ವಿವಾಹಕ್ಕೆ ಸಿದ್ಧರಾದರು. ಶರಣಸಂತಾನದ ವಧೂವರರ ಈ ಮದುವೆಯನ್ನು ಬಸವರಾಜರಾದಿಯಾಗಿ ಪ್ರಮಥರು ಒಪ್ಪಿದರು. ಮದುವೆ ನಡೆಯಿತು. ಬ್ರಾಹ್ಮಣನ ಮಗಳು, ಚರ್ಮಕಾರನ ಮಗ ಇವರ ಮದುವೆ ಅಘಟಿತಘಟನೆಯೆಂದು ಸನಾತನಿಗಳು ರೋಷಗೊಂಡರು. ಶಾಸ್ತ್ರವಿರೊಧ ಸಮಾಜಕ್ಕೆ ಕೇಡು, ರಾಷ್ಟ್ರದ್ರೋಹ, ಅನುಭವಮಂಟಪದ ಅನುಚಿತ ಕಾರಭಾರ ಎಂದು ಬಿಜ್ಜಳರಾಜನಲ್ಲಿ ದೂರಿದರು. ಅಪರಾಧಿಗಳನ್ನು ದಂಡಿಸಬೇಕಲ್ಲದೆ ಅನುಭವಮಂಟಪ-ಮಹಮನೆಗಳ ಆಟವನ್ನು ತಡೆಯಬೇಕೆಂದು ಆಗ್ರಹಪಟ್ಟರು. ಬಿಜ್ಜಳನು ನಡಿಸಿದ ವಿಚಾರಣೆಯಲ್ಲಿ ಬಸವಣ್ಣನವರು ಶರಣರ ನಿಲುಮೆಯನ್ನು ಸಮರ್ಥಿಸಿಕೊಂಡರು. ಆದರೂ ಬಿಜ್ಜಳನು ಹರಳಯ್ಯ ಮಧುವಯ್ಯಗಳ ಮೇಲೆ ವರ್ಣಸಂಕರ ಕನ್ಯಾಪಹಾರ ಪೈಶಾಚಿಕ ವಿವಾಹಗಳ ಆರೋಪವಿಟ್ಟು ನ್ಯಾಯಪೀಠದ ಮುಂದೆ ನಿಲ್ಲಿಸಿದನು. ಶರಣರ ಉಪಟಳ (?) ವನ್ನು ತಗ್ಗಿಸುವದಕ್ಕೆಂದು ಬಸವರಾಜರಿಗೆ ಒಮ್ಮೆಂದೊಮ್ಮೆ ಕಲ್ಯಾಣವನ್ನು ಬಿಟ್ಟು ಸಂಗಮಕ್ಕೆ ಹೋಗಲು ಆಜ್ಞೆಮಾಡಿದನು.

ಹೀಗೆ ಶರಣಧರ್ಮದ ಸಂಘಟನೆಗೆ ದೊಡ್ಡ ಗಂಡಾಂತರ ಪ್ರಾಪ್ತವಾಯಿತು. ಈಗ ಸಾಗರದಂತೆ ಗಂಭೀರವಾದ ಅಕ್ಕನಾಗಮ್ಮನ ಹೃದಯಕ್ಕೆ ಬಿರುಗಾಳಿಯಂತೆ ಬರುವ ವಿಪತ್ತು ಎದುರಾಯಿತು. ಆದರೂ ಆಕೆಯು ವಿವೇಕವನ್ನು ಕಳೆದುಕೊಳ್ಳಲಿಲ್ಲ; ಎದೆಗೆಡಲಿಲ್ಲ. ಮಹಾಜ್ಞಾನಿಗಳು, ಮಹಾತ್ಮರು, ಮಹಾನುಭಾವಿಗಳು ಸೇರಿ ರೂಪಿಸಿದ ಮತತತ್ವಗಳನ್ನೂ ಧರ್ಮಸಂಸ್ಥೆಗಳನ್ನೂ ಉಳಿಸುವದರಲ್ಲಿ ನಿಶ್ಚಲ ಮಾನಸಳಾಗಿ ನಿಂತಳು.

ತಮ್ಮ ವಿಚಾರಸಮಿತಿಯಲ್ಲಿ ಮಾಚಯ್ಯ ಮೊದಲಾದ ಗಣಾಚಾರದ ಶರಣರು ಬಿಜ್ಜಳನ ಆಜ್ಞೆಯನ್ನು ಪ್ರತಿಭಟಿಸಬೇಕೆಂದು ಸೂಚಿಸಿದರು. ಆದರೆ ಉದಾರಚರಿತರಾದ ಬಸವಣ್ಣನವರು ಅದನ್ನೊಪ್ಪದೆ ಶರಣರ ಹಾಗೂ ಬಹುಜನರ ಕಲ್ಯಾಣದ ದೃಷ್ಟಿಯಿಂದ ಕಲ್ಯಾಣ ತ್ಯಜಿಸಲು ನಿಶ್ಚಯಿಸಿದರು. ಅಕ್ಕನಾಗಮ್ಮನವರೂ ಈ ವಿಚಾರವನ್ನು ಅನುಮೋದಿಸಿದರು.

ಅಂದಿನ ರಾತ್ರಿ ಬಸವಣ್ಣನವರಿಗೆ ವಿಶ್ರಾಂತಿಗೊಳ್ಳಲು ಹೇಳಿ ಅಕ್ಕನು ಅವರ ಪ್ರಯಾಣದ ಸಿದ್ಧತೆಯಲ್ಲಿ ತೊಡಗಿದಳು. ಆಕೆಯ ವಾಕ್-ಪಾಣಿ-ಪಾದಗಳು ಆ ಕಾರ್ಯ ಮಾಡುತ್ತಿದ್ದರೂ ಅಂತರಂಗದಲ್ಲೊಂದು ತುಮುಲ ನಡೆದಿದ್ದಿತು. ಈ ದ್ವೀಪದ ವಾತಾವರಣದಲ್ಲಿ ಇದುವರೆಗೆ ಸಂಘಟಿಸಿ ಬೆಳಿಸಿದ ಅನುಭವಮಂಟಪದ ಧರ್ಮಪ್ರತಿಷ್ಠಾನದ ಗತಿಯೇನು? ಶರಣವೃಂದದ ಸಂರಕ್ಷಣೆ ಹೇಗೆ ಎಂಬುದೇ ಆ ಕಳವಳಕ್ಕೆ ಕಾರಣ. ಕೊನೆಗೆ ಆ ಧೀರೆ ಎಂಥ ಸಂಕಟ ಬಂದರೂ ಇವುಗಳ ಕೈ ಬಿಡಬಾರದೆಂದು ನಿರ್ಧರಿಸಿದ ಮೇಲೆಯೇ ಸಮಾಧಾನಗೊಂಡಳು.

ನಾಲ್ಕನೆಯ ಪ್ರಹರದ ಮೊದಲಲ್ಲಿ ಚೆನ್ನಬಸವಣ್ಣ ಎದ್ದಾಗ ನಾಗಮ್ಮೆಯ ಕೋಣೆಯಿಂದ ಹೃದಯದಾಳದ ಗೀತ ಕೇಳುತ್ತಿತ್ತು!

'ಎನ್ನ ಕುಲಸೂತಕವ ಕಳೆದಾತ ಬಸವಣ್ಣ,
ಎನ್ನ ಛಲಸೂತಕವ ಕಳೆದಾತ ಬಸವಣ್ಣ,
ಎನ್ನ ತನುಸೂತಕವ ಕಳೆದಾತ ಬಸವಣ್ಣ,
ಎನ್ನ ಮನಸೂತಕವ ಕಳೆದಾತ ಬಸವಣ್ಣ,
ಎನ್ನ ನೆನಹು ಸೂತಕವ ಕಳೆದಾತ ಬಸವಣ್ಣ,
ಎನ್ನ ಭಾವಸೂತಕವ ಕಳೆದಾತ ಬಸವಣ್ಣ,
ಎನ್ನರಹುಮರಹಿನ ಸಂದುಸಂಶಯವ ಬಿಡಿಸಿದಾತ ಬಸವಣ್ಣ,
ಎನ್ನ ತನ್ನೊಳಗೆ ಇಂಬಿಟ್ಟುಕೊಂಡಾತ ಬಸವಣ್ಣ,
ತನ್ನ ಎನ್ನೊಳಗೆ ಇಂಬಿಟ್ಟುಕೊಂಡಾತ ಬಸವಣ್ಣ,
ನಿಜದ ನಿರ್ಣಯದ ಬಾಗಿಲ ನಿಜವ ತೋರಿದಾತ ಬಸವಣ್ಣ,
ಬಸವಣ್ಣಪ್ರಿಯ ಚೆನ್ನಸಂಗಯ್ಯನ ಹೃದಯಕಮಲದಲ್ಲಿ
ನಿಜನಿವಾಸಿಯಾಗಿರಿಸಿದ ಎನ್ನ ತಂದೆ ಸಂಗನಬಸವಣ್ಣ.'

ಕುಳಿತು ಕೇಳಿದ ಬಳಿಕ ಚೆನ್ನಬಸವಣ್ಣ ಅಮ್ಮೆಯ ಮುಂದೆ ಬಂದನು. ಅವರಿಬ್ಬರು ಪರಸ್ಪರ ವಂದಿಸಿದರು. ಇಬ್ಬರೂ ಕೂಡಿ ಬಸವರಾಜರನ್ನು ಎಬ್ಬಿಸಲಿಕ್ಕೆ ಅವರು

ಪವಡಿಸಿದಲ್ಲಿಗೆ ಬಂದರು. ಬಸವಣ್ಣನವರು ಯಾವಾಗಲೋ ಎದ್ದು ಧ್ಯಾನಸ್ಥ ರಾಗಿ ಕುಳಿತಿದ್ದರು. ಅವರು ಪುರುಷತತ್ವದ ಕುಂಚಕಗಳನ್ನು ಕತ್ತರಿಸಿ ಪರತತ್ವದ ಪ್ರಕಾಶದಲ್ಲಿ ಸೇರಿದಾಗ ಹಿಂದುಮುಂದೆಂಬ ಭೇದವಿಲ್ಲದೆ ಅನೇಕ ಘಟನೆಗಳು ಚಿತ್ರದ ಪಟಗಳಂತೆ ಅವರ ಮುಂದೆ ಬಂದುಹೋದವು. ಅಸ್ಪಷ್ಟವಾಗಿ ಅವರು ಏನೋ ನುಡಿಯುತ್ತಿದ್ದರು. ಬರಬರುತ್ತ ನುಡಿ ಸ್ಪಷ್ಟವಾಗಲು ಚೆನ್ನಬಸ ವಣ್ಣನು ಅವುಗಳನ್ನು ಬರೆದುಕೊಳ್ಳಹತ್ತಿದನು. ಕೊನೆಗೆ :

'ಅರಸು ವಿಚಾರ ಸಿರಿಯು ಶೃಂಗಾರ ಸ್ಥಿರವಲ್ಲ, ಮಾನವಾ :
ಕೆಟ್ಟಿತ್ತು ಕಲ್ಯಾಣ, ಹಾಳಾಯ್ತು, ನೋಡಾ !
ಒಬ್ಬ ಜಂಗಮದಭಿಮಾನದಿಂದ
ಚಾಲುಕ್ಯರಾಯನ ಆಳಿಕೆ ತೆಗೆಯಿತ್ತು,
ಸಂದಿತ್ತು, ಕೂಡಲಸಂಗಮದೇವಾ, ನಿಮ್ಮ ಕವಳಿಗೆಗೆ !'

ಹೇಳಿ ಬಸವಣ್ಣನವರು ಕಣ್ದೆರೆದರು. ಎದುರಿದ್ದವರಿಂದ ವೇಳೆಯನ್ನು ತಿಳಿದು ಪ್ರಾತಃಕಾರ್ಯಕ್ಕೆ ಹೊರಟರು.

ರಾಜಾಜ್ಞೆಗನುಸರಿಸಿ ನಸುಕಿನಲ್ಲಿಯೇ ಪ್ರಯಾಣದ ಸಿದ್ಧತೆಯಾಯಿತು. ಅಕ್ಕ ತಾನೇ ಬಸವರಾಜರಿಗೆರಗಿದಳು. ಬಸವೇಶ ನಮಿಸಲು ಅವರ ತಲೆಯನ್ನೆತ್ತಿ ಮುಂಡಾಡಿದಳು. ಎಲ್ಲರೂ ವ್ಯಸನಪಟ್ಟು ಕಂಠ ಬಿಗಿದು ಕಣ್ದುಂಬಿ ನಿಂತರೂ ನಾಗಮ್ಮ ಧೈರ್ಯದಿಂದಲೇ ಬೀಳ್ಕೊಟ್ಟಳು.

ರಾಜನ ಕಟ್ಟಳೆ ಮೀರಿ ನಾಗರಿಕರ ತಂಡಗಳು ನಗರದ ಕಟ್ಟೊಡೆದು ಬಂದಂತೆ ಹೊರವಲಯಕ್ಕೆ ಬಂದು ಬಸವಣ್ಣನವರನ್ನು ಬೀಳ್ಕೊಟ್ಟು ದುಃಖ ದುಮ್ಮಾನದಿಂದ ಹಿಂತಿರುಗಿದವು. ಆಗ ಮೋಳಿಗೆಯ ಮಾರಯ್ಯನವರು ಶಾಂತಿ ಸುವ್ಯವಸ್ಥೆಗೆ ಪ್ರಯತ್ನಿಸಿರದಿದ್ದರೆ ರಾಜಾಜ್ಞೆಗೆ ರೋಷಗೊಂಡ ಜನಜಂಗುಳಿ ಯಿಂದ ಪ್ರಮಾದಗಳಾಗುವ ಸಂಭವವೇ ಇತ್ತು.

೨ ಅಕ್ಕನ ಅವಿಕೃತ ಭಾವ

ಬಸವಣ್ಣನವರ ನಿರ್ಗಮನದಿಂದ ಅನುಭವಮಂಟಪ - ಮಹಮನೆಗಳ ಕಾರ್ಯಕಲಾಪದಲ್ಲಿ ಮತ್ತೆ ಹೆಚ್ಚಿನ ಹೊಣೆಯನ್ನು ನಾಗಮ್ಮ ಹೊರಬೇಕಾಯಿತು. ಬಸವಣ್ಣನವರ ಕೀರ್ತಿ ದೇಶದ ದೂರದೂರ ಪ್ರಾಂತಗಳಲ್ಲಿ ಪಸರಿಸಿದಂತೆ ಅಲ್ಲಲ್ಲಿಂದ ಹೊರಟ ಧರ್ಮಜಿಜ್ಞಾಸುಗಳು, ಕಲ್ಯಾಣದಲ್ಲಿ ಇತ್ತೀಚೆಗೆ ಉಂಟಾದ ತೊಂದರೆಗಳನ್ನು ಅರಿಯದೆ ಹಾಗೆಯೇ ಬಂದೇಬರುತ್ತಿದ್ದರು. ಆ ಸಂಖ್ಯೆ ಮೊದಲಿಗಿಂತ ಹೆಚ್ಚು ಆಗಿತ್ತು. ನಾಗವ್ವೆಯ ಮೇಲಿನ ಭಾರ ಬೆಳೆಯುತ್ತಲೇ ಇತ್ತು. ಆಕೆ ವಜ್ರಶರೀರೆ, ನಿಶ್ಚಲ ಮಾನಸಧಾರೆಯಾದ್ದರಿಂದಲೇ ಗಟ್ಟಿಗೊಂಡು ನಿಂತಳು. ಪ್ರಭಾವಯುತ ಹಿರಿಯ ಶರಣರೂ ಇದ್ದರು. ಆದರೆ ರಾಜಾಧಿಕಾರಿಗಳ ಕೀಟಲೆಗಳು ಅವರನ್ನು ಕಾಡುತ್ತಿದ್ದವು. ಸಮತೆ-ಸಹೋದರತ್ವ, ಸ್ವಾತಂತ್ರ್ಯಗಳ ತಳಹದಿಯ ಮೇಲೆ ನಿಲ್ಲಿಸಿದ ಮತತತ್ವಗಳ ಪ್ರಭೆ ಬೆಳಗುತ್ತಿದ್ದುದು ಆ ಬೆಳಕಿನಲ್ಲಿ ಕಲ್ಯಾಣದಲ್ಲಿ ಜನ ತಂಡೋಪತಂಡವಾಗಿ ಬಂದು ಕೂಡುತ್ತಿದ್ದುದು ಸಾಂಪ್ರದಾಯಿಕ ವರ್ಗದ ಪರವಾದಿಗಳ ಭೀತಿಗೆ ಕಾರಣವಾದವು. ಅವರು ಈ ಹೊಸ ಸಮಾಜವನ್ನು ಹತ್ತಿಕ್ಕುವ ಪ್ರಯತ್ನವನ್ನು ಹಲವು ರೀತಿಯಿಂದ ನಡೆಸಿದರು. ಅವರ ಕೈವಾರಿಗಳಾದ ರಾಜಕರ್ಮಚಾರಿಗಳು ಯಾರೊಬ್ಬ ಶರಣರಿಗೆ ತೊಂದರೆ ಕೊಟ್ಟರೂ ಹಿರಿಯ ಶರಣರು ಅತ್ತ ಗಮನ ಕೊಡಬೇಕಾಗುತ್ತಿತ್ತು.

ಅಕ್ಕನಾಗಮ್ಮನು ಅಂತರ್ವ್ಯವಸ್ಥೆಯ ಭಾರವಲ್ಲದೆ, ಶರಣಧರ್ಮದ ಮೇಲೆ, ಈ ಸಮಾಜದ ಮೇಲೆ ಎದ್ದು ಬರಲಿರುವ ಗಂಡಾಂತರಗಳ ಸುದ್ದಿಯಿಂದ ಹಿರಿಯ ಸದಸ್ಯರೊಡನೆ ಗಾಢ ವಿಚಾರದಲ್ಲಿ ತೊಡಗಿ ಆ ಬಗೆಗೆ ಚಿಂತಿಸಲೂ ಬೇಕಾಗುತ್ತಿತ್ತು. ಹೀಗೆ ಇಮ್ಮಡಿ ಶ್ರಮದಿಂದಲೂ ಆಪತ್ತಿನ ಸಮ್ಮುಖದಲ್ಲಿಯೂ ಅಕ್ಕ ಧೃತಿಗೆಡದೆ ನಡೆದುದು ಸಾಮಾನ್ಯವಾದುದಲ್ಲ.

ತನ್ನ ಮೋಸ ತಂತ್ರಗಳಿಗೆ ಬಲಿಬೀಳದ ಚಾಲುಕ್ಯರಾಣಿಯ ವಿಷಯದಲ್ಲಿ ಬಿಜ್ಜಳನಿಗೆ ಸಂದೇಹವುಂಟಾಯಿತು. ಚಾಲುಕ್ಯ ರಾಜ್ಯವನ್ನು ಅಪಹರಿಸಿದುದಕ್ಕೆ

ಬೆಂಬಲ ನೀಡಿದ ಪಕ್ಷದವರಿಗೆ ಶರಣರ ಏಳಿಗೆಯನ್ನು ನಿಗ್ರಹಿಸುವದು ಬೇಕಾಗಿತ್ತು. ಚಾಲುಕ್ಯವಂಶೀಯದವರನ್ನೂ ಶರಣರನ್ನೂ ಏಕಕಾಲಕ್ಕೆ ಎದುರಿಸುವ ಪ್ರಸಂಗ ಬಿಜ್ಜಳನಿಗೆ ಬೇಡವಾಗಿತ್ತು. ಅದ್ದರಿಂದ ರಾಣಿಯು ಪಕ್ಕ ಮುರಿಯುವವರೆಗೆ ನೊಂದ ಶರಣರನ್ನು ಅಷ್ಟರಮಟ್ಟಿಗೆ ಸಂತೈಸಬೇಕೆಂದು ತಾನೇ ಮಹಮನೆಗೆ ಬಂದನು. ತನ್ನಾಜ್ಞೆಯಿಂದ ನೊಂದುಕೊಂಡಿರಬಹುದಾದ ನೀಲಾಂಬೆ ಮುಂತಾದವರ ಮುಂದೆಯೂ ತನ್ನ ಮುಖತೋಳೆದುಕೊಳ್ಳಬೇಕಾಗಿತ್ತು.

ಮಹಮನೆಯ ಅಂಗಳದಲ್ಲಿ ತನ್ನನ್ನು ಸ್ವಾಗತಿಸುತ್ತಿರುವ ಚೆನ್ನಬಸವಾದಿ ಶರಣಪ್ರಮುಖರ ಗುಂಪಿನೊಳಗಿಂದ ಹಾಯ್ದು ಬಿಜ್ಜಳನು ನೆಟ್ಟಗೆ ಸೋದರಿಯರ ವಾಸಗೃಹಕ್ಕೇ ಬಂದು ತಾನೇ ಅಸನವನ್ನು ಹಿಡಿದು ಕುಳಿತನು. ಒಳಗಿಂದ ನೀಲಾಂಬೆ ಬಂದು ನಮಿಸಿ ಮರೆಯಾಗಿ ಹೋದಳು. ಆಕೆಯ ಕಣ್ಣು ತೇವವಾದುದನ್ನು ಬಿಜ್ಜಳನು ಕಂಡನು. ಸಪ್ಪಗಾಗಿ ನಿಂತಿದ್ದ ಸಂಗಯ್ಯನನ್ನು ಬಿಜ್ಜಳನು ಕೈಹಿಡಿದೆಳೆದಾಗ ಅವನು ಮುಂದೆಬಂದನು. ಸ್ವಲ್ಪ ದೂರದಲ್ಲಿ ನಿಂತಿದ್ದ ನಾಗಮ್ಮ ರಾಜನ ದೃಷ್ಟಿ ತನ್ನ ಕಡೆಗೆ ಹೊರಳಿದಾಗ ಕೈಮುಗಿದು ಸುಮ್ಮನೆ ನಿಂತಳು. ಮೊಗದಲ್ಲಿ ಯಾವ ವಿಕಾರವೂ ಇರಲಿಲ್ಲ. ಬಿಜ್ಜಳನು ಎದ್ದು ಪ್ರತಿಯಾಗಿ ಕೈಮುಗಿದು ಕುಳಿತನು. ಈ ಎಲ್ಲ ಉದಾಸಮೌನದಿಂದ ಅವನ ಜೀವ ಹಿಂಡಿದಂತಾಯಿತು. ಆದರೂ ಆತನು ಸಮಯಕ್ಕೆ ತಕ್ಕ ಅನುನಯಕ್ಕಿಳಿಯಲು ಪಳಗಿದ ಕೈ. ಮುಂದಿದ್ದ ಶರಣರಿಗೆ ಕೂಡ್ರಹೇಳಿ ಮಿದುನಗೆಯಿಂದ ಚೆನ್ನಬಸವಣ್ಣನನ್ನು ಕುರಿತು 'ರಾಜಿಕವೊಂದು ಮುಳ್ಳಿನ ಹಾಸಿಗೆ' ಎಂದು ಮಾತಿಗಾರಂಭಿಸಿ ಅತ್ತಿತ್ತ ಸುತ್ತಾಡಿ ಮಾತಾಡುತ್ತ 'ನೀವು ಮಂತ್ರಿಮಂಡಲದಲ್ಲಿ ಬರಬೇಕು' ಎಂದು ಕೇಳಿಕೊಂಡನು.

ಅದೇ ಸಮಯಕ್ಕೇ ಮಹಮನೆಯಲ್ಲಿ ತುಂಬಿದ ನಾದದಿಂದ ಗೀತ ಕೇಳಿಸಿತು :

'ಭಾಂಡವ ತುಂಬಿದ ಬಳಿಕ ಸುಂಕವ ತೆತ್ತಲ್ಲದೆ
ವಿರಹಿತ ಹೋಗಬಾರದು.
ಕಳ್ಳನಾಣ್ಯ ಸಲುಗೆಗೆ ಸಲ್ಲದು : ಕಳ್ಳನಾಣ್ಯವ ಸಲ್ಲಲೀಯರಯ್ಯಾ !

ಭಕ್ತಿಯೆಂಬ ಭಾಂಡಕ್ಕೆ ಜಂಗಮವೇ ಸುಂಕಿಗ,
ಕೂಡಲಸಂಗಮದೇವಾ.'

"ಎಲ್ಲಿಂದ ಕೇಳುತ್ತದೆ ಈ ಗೀತ?" ಬಿಜ್ಜಳ ಅಚ್ಚರಿಯಿಂದ ಕೇಳಿದನು.

"ಮಹಮನೆಯಲ್ಲಿ ಪೂಜಾರಂಭವಾಗಿದೆ. ಯಾರೊ ಒಬ್ಬರು ಆವೇಶದಿಂದ ಹಾಡುತ್ತಾರೆ." ಎಂದು ನಾಗಲಾಂಬೆ ಹೇಳಿದಳು.

ಬಿಜ್ಜಳನು ಗೀತದ ಪರಿಣಾಮವಾಗಿ ನುಡಿದನು:

"ನಿಜ, ನಮ್ಮ ಆಗು ಹೋಗುಗಳ ಭಾಂಡ ತುಂಬಿದೆ; ಸುಂಕಕೊಡುವದೇ ಉಳಿದಿದೆ. ಅದನ್ನೇ ಈಗ ಯೋಚಿಸಬೇಕಾಗಿದೆ. ಸಾಮಾಜಿಕ ತೊಡಕಿನಿಂದ ಮಧುವಯ್ಯ-ಬಸವೇಶ್ವರರು ದೂರಾದರು. ನಮ್ಮ ಹೊಣೆ ಹಗುರಾಗಿಸಲು ನೀವೀಗ ಒಪ್ಪಲೇಬೇಕು, ಚೆನ್ನಬಸವೇಶ." ಎನ್ನುತ್ತವ ಮಂತ್ರಿಪದದ ಮಾತಿಗೆ ಮರಳಿ ಬಂದನು.

'ತಾನು ಧಾರ್ಮಿಕ ಜೀವಿ! ತತ್ವಾರ್ಥದ ಹೊರತು ತನಗೇನೂ ತಿಳಿಯದು' ಎಂದು ಚೆನ್ನಬಸವಣ್ಣ ನಿರಾಕರಿಸಿದರೂ ಬಿಜ್ಜಳ ಕೇಳಲಿಲ್ಲ. 'ರಾಜ್ಯಾಡಳಿತಕ್ಕೆ ಧಾರ್ಮಿಕ ಜ್ಞಾನದ ಕೊರತೆಯಾಗಿಯೇ ನಾವು ಎಡವಿಎಡವಿ ನಡೆಯುತ್ತಿದ್ದೇವೆ.' ಎಂದು ಒತ್ತಾಯಪಡಿಸಿ, ಕೊನೆಗೆ 'ಸಹಯೋಗಿಗಳೊಡನೆ ವಿಚಾರ ಮಾಡಿ ಒಂದು ವಾರದಲ್ಲಿ ತಿಳಿಸಿರಿ' ಎಂದು ಹೇಳಿ ಹೊರಟನು. ಕೋಣೆಯಿಂದ ಕಣ್ಣೀರು ತುಂಬಿದ ನೀಲಲೋಚನೆ ಹೊರಗೆ ಬಂದಳು. ಆ ಭಾವ ತಿಳಿಯಿತು ಬಿಜ್ಜಳನಿಗೆ!

"ನಿನ್ನ ಮನೋವ್ಯಥೆ ತಿಳಿದಿದೆ ನೀಲಾ! ನಿನ್ನ ದಾಂಪತ್ಯ ಜೀವನಕ್ಕೆ ಚ್ಯುತಿ ಬಾರದಂತೆ ನೋಡಿಕೊಳ್ಳುವೆ."

"ನನ್ನ ಪತಿಯು ಪ್ರಾಣವು ಅವರ ತನುವಿನ ಮಟ್ಟಿಗಿಲ್ಲ ಅಣ್ಣಾ!"

"ಆ ಮಹಾವಿಚಾರಕ್ಕೆ ಅವರು ಸಮರ್ಥರೇ ಇದ್ದಾರೆ. ಉಳಿದುದೆಲ್ಲ ನನ್ನೊಬ್ಬನ ಕೈಯೊಳಗಿನದಲ್ಲ ತಾಯಿ!"

"ಪ್ರಭುಗಳು ಯಥಾರ್ಥವನ್ನೇ ಹೇಳುತ್ತಾರೆ ನೀಲಾ"

ಎಂದು ನಾಗಲಾಂಬೆ ಆ ಮಾತು ಪ್ರತಿಮಾತುಗಳನ್ನು ಮುಕ್ತಾಯ

ಗೊಳಿಸಿದಳು. ಎಡರುಗಳಿಗೆ ಎದೆಗೆಟ್ಟು ಹರನನ್ನಲ್ಲದೆ ನರರನ್ನು ದೈನ್ಯದಿಂದ ಬೇಡುವದೇಕೆ ?' ಎಂದು ಆಕೆಯ ವಿಚಾರ. ಇದಲ್ಲದೆ ಬಿಜ್ಜಳನನ್ನು ಹರಗಿಸಿ ಹಿಂಸಿಸುವದು ಧರ್ಮವಲ್ಲವೆಂದು ಆಕೆಗೆ ಅನಿಸಿರಬೇಕು.

ಬಿಜ್ಜಳನು ಹೋಗಹೋಗುತ್ತ 'ಜಗದೇಕಮಲ್ಲರಿಗೆ ತತ್ವೋಪದೇಶಕ್ಕಾಗಿ ಶರಣರೊಬ್ಬರು ಬೇಕಂತೆ! ಒಬ್ಬರನ್ನು ಕಳಿಸಿಕೊಡಿರಿ' ಎಂದು ಕೇಳಿದನು. 'ಆಗಲಿ, ಅಂಥವರೊಬ್ಬರು ಒಪ್ಪಿದರೆ ತಿಳಿಸುತ್ತೇನೆ' ಎಂದು ಚೆನ್ನಬಸವಣ್ಣ ಹೇಳಿದನು. ಬಿಜ್ಜಳನು ಚಾಲುಕ್ಯ ವಂಶೀಯರ ಬಲೆಗೆ ಬೀಳಹತ್ತಿದ್ದನು.

ಜಗದೇಕಮಲ್ಲನಿಗೆ ಉಪದೇಶಮಾಡಲು ಶರಣ ಬ್ರಹ್ಮೇಂದ್ರನು ಮುಂದೆ ಬಂದನು. ಅವನೇ ವೇಷ ಬದಲಿಸಿಕೊಂಡು ಪ್ರವಚನ ಸಾಧನೆ ಮಾಡಿಕೊಂಡಿದ್ದ ಬೊಮ್ಮರಸನು. ಅದನ್ನು ತಿಳಿಯದ ಶರಣರು ಅವನಿಗೆ ಒಪ್ಪಿಗೆಯನ್ನಿತ್ತರು. ಈ ಬಗೆಯಾಗಿ ಸಂಧಿಸಾಧಿಸಿ ಮಲ್ಲಿಬೊಮ್ಮನು (ಬೊಮ್ಮರಸು) ಹೋಗಿ ಬಂಧನದಲ್ಲಿದ್ದ ಜಗದೇಕಮಲ್ಲನನ್ನು ಕೂಡಿದನು.

ಹಿರಿಯ ಶರಣರು, ಚೆನ್ನಬಸವಣ್ಣ ಸಚಿವನಾಗುವದರಿಂದ ಶರಣರ ರಕ್ಷಣೆಗೆ ಸಹಾಯವಾದೀತೆಂಬ ಆಸೆಯಿಂದ ಅವನನ್ನು ಒಡಂಬಡಿಸಿದರು.

೩ ವಿಪತ್ಪರಂಪರೆ

ಮಧುವಯ್ಯ - ಹರಳಯ್ಯ - ಶೀಲವಂತಯ್ಯಗಳನ್ನು ಬಂಧಿಸಿ ಒಯ್ದಾಗ ಅನಾಥಳಾದ ಕಲಾವತಿ ಮಹಮನೆಗೆ ಬಂದು ಉಳಿದಿದ್ದಳು. ಬಿಜ್ಜಳನು ನ್ಯಾಯಪೀಠವನ್ನು ರಚಿಸಿ ತಾನೇ ಅದರ ಅಧ್ಯಕ್ಷನಾಗಿ ಆ ಮೂವರಿಗೂ ಮರಣದಂಡನೆ ವಿಧಿಸಿದನು. ಶರಣರು ಸಂತಾಪಗೊಂಡರು. ಚೆನ್ನಬಸವಣ್ಣನು ಪ್ರತಿಭಟಿಸಿ ಮಂತ್ರಿ ಪದವನ್ನು ತ್ಯಜಿಸಿ ಬಂದನು. ಇನ್ನು ತಾವು ತೊಂದರೆಗೊಳಗಾಗುವೆವೆಂದು ಶರಣ ಸಂದೋಹ ಕಲ್ಯಾಣವನ್ನು ಬಿಟ್ಟು ಹೋಗುವ ನಿಶ್ಚಯ ಮಾಡಿತು. ನಗರದೊಳಗಿನ ಲಿಂಗವಂತರಿಗೂ ಅದೇ ಸಲಹೆ ನೀಡಿದರು. ಶೂನ್ಯಸಿಂಹಾಸನವನ್ನೂ ಹಿರಿದಾದ ಗ್ರಂಥರಾಶಿಯನ್ನೂ ಮೊದಲು ಪಾರುಗಾಣಿಸಿ ಸಹ್ಯಾದ್ರಿಯ ಹಳವುಗಳ ಕಡೆಗೆ ಕಳುಹಿದರು. ಕಲ್ಯಾಣದ ಹೊರವಲಯದಲ್ಲಿ ವಾಸಿಸುತ್ತಿದ್ದ ಮೋಳಿಗೆಯ ಮಾರಯ್ಯನವರು ಸಾಹಸದಿಂದ ಈ ಕಾರ್ಯ ಪೂರೈಸಿದರು. ಮಡಿವಳ ಮಾಚಯ್ಯನವರು ಗಣಾಚಾರದ ಯೋಧರನ್ನು ಕೂಡಿಸಿ ಶರಣರ ರಕ್ಷಣೆಗೆ ಸಿದ್ಧರಾಗಿದ್ದರು.

ಬಸವಣ್ಣನವರು ಹೋಗಿ ಮೂರುತಿಂಗಳಾಯಿತು. ಅತಿಥಿ ಅಭ್ಯಾಗತರು ಬರುವದು ನಿಂತುಹೋಯಿತು. ನಾಗಕ್ಕನು ಮಹಮನೆಯಲ್ಲಿ ನೆಲೆಯಾಗಿ ನಿಂತಿದ್ದ ಶರಣೆಯರಿಗೆ ಕೈಮುಗಿದು "ನಿಮ್ಮ ನಿಮ್ಮ ಮೂಲ ಸ್ಥಲಗಳಿಗೆ ಹೋಗಿ ಕೈಲಾದ ಲೋಕಸೇವೆಯನ್ನು ಮಾಡುತ್ತ ಸದ್ಗತಿಯನ್ನು ಸಾಧಿಸಬೇಕು" ಎಂದು ಹೇಳಿ ಕಳುಹಿಕೊಟ್ಟಳು.

ಮರಣದಂಡನೆ ಕಾರ್ಯಗತವಾಗುವ ದಿನ ಬಂತು. ಕಲಾವತಿಯು ತಂದೆ, ಮಾವ, ಪತಿ ಮೂವರ ಕೊಲೆಯಾಗುವದನ್ನು ನೆನಿಸಿ ಹೃದ್ರೋಗದಿಂದ ಅನ್ನ ನೀರು ಬಿಟ್ಟು ನೆಲಹಿಡಿದಿದ್ದಳು. ನಾಗಮ್ಮ ಅವಳನ್ನು ತೊಡೆಯ ಮೇಲೆ ಹಾಕಿಕೊಂಡು ಉಪಚರಿಸುತ್ತಿದ್ದಳು. ಆಕೆಯ ಉಪದೇಶದಿಂದ, ಅಪ್ರಬುದ್ಧಳಾದ ಕಲಾವತಿಗೆ ಆ ಸಂದರ್ಭದಲ್ಲಿ ಶಾಂತಿಯುಂಟಾಗುವದು ಸಾಧ್ಯವಿರಲಿಲ್ಲ. ಅದರಿಂದ ನಾಗಕ್ಕನ ಹೃದಯವೂ ತಲ್ಲಣಿಸಿ ಮತ್ತೆ ಕಲ್ಲಾಯಿತು. ನೀಲಾಂಬೆ

ನಿರಾಶೆಯಲ್ಲಿಯೇ ಆಸೆ ತಾಳಿ, ದೊರೆಯಾದ ಅಣ್ಣನನ್ನು ಕಂಡು ಆ ಮೂವರ ಪ್ರಾಣದಾನ ಪಡೆಯಲು ಅರಮನೆಗೆ ಹೋಗಿದ್ದಳು. ಬಿಜ್ಜಳನು ಅವಳಿಗೆ ನಿರಾಶೆಯನ್ನೇ ನೀಡಿದನು. ಮುಚ್ಚಂಜೆಯ ಹೊತ್ತಿಗೆ ನೀಲಾಂಬೆ ಮರಳಿದಾಗ ಆಕೆ ಮುಖದ ಮೇಲೆ ಹೊತ್ತುತಂದ ನಿರಾಶೆಯನ್ನು ಕ್ಷೀಣವಾದ ದೃಷ್ಟಿಯಿಂದ ನೋಡಿ ಕಲಾವತಿ ಕಣ್ಣುಮುಚ್ಚಿದಳು. ಅತ್ತ ಎಳೆಹೂಟೆಯ ಸಿದ್ಧತೆ ನಡೆದಿದ್ದಿತು. ರಾತ್ರಿ ಮೂವರನ್ನೂ ಕೊಲ್ಲಿಸಿದರು. ಅಂದಿನ ರಾತ್ರಿ ಶರಣರ ಸಮೂಹ ಅಖಂಡವಾಗಿ ನಡೆದ ಮಂತ್ರಪಠಣದಲ್ಲಿ ಆ ನಾಲ್ವರ ಪಾರ್ಥಿವ ಶರೀರಗಳನ್ನು ಸಮಾಧಿಗೊಳಿಸಿದರು.

ಇಲ್ಲಿಗೆ ಸನಾತನಿಗಳ ಪಕ್ಷದ ನಾಯಕರು ಕೃತಕೃತ್ಯರಾದಂತಾಗಿದ್ದರು.

* * *

ತನಗೆ ಮಣಿಯದ ಚಾಲುಕ್ಯರಾಣಿ ಮಹೇಶ್ವರಿಯ ಬಗೆಗೆ, ಸಾಮಂತರ ಆದರ ಭಾವ ಕಡಿಮೆಯಾಗುವದಕ್ಕಾಗಿ ಅವಳ ಶೀಲಕ್ಕೆ ಕಲಂಕ ಹಚ್ಚುವ ವಾರ್ತೆಗಳನ್ನು ಹುಟ್ಟಿಸಿ ಹರಡುವ ಕೀಳು ಕೆಲಸಕ್ಕೂ ಬಿಜ್ಜಳನಿಳಿದಿದ್ದನು. ಅದರಿಂದ ಕ್ರುದ್ಧಳಾದ ರಾಣಿ ಮೈದುನ ಜಗದೇಕಮಲ್ಲನಿಗೆ ಗುಪ್ತವಾಗಿ ಪತ್ರ ಬರೆದು ಮೊರೆಯಿಟ್ಟಳು. ತಮ್ಮ ಸಾರ್ವಭೌಮ ಮನೆತನದಲ್ಲಿ ಅವನ ಅಭಿಮಾನ ಜಾಗ್ರತಗೊಳ್ಳುವಂತೆ ಮಾಡಿ ಬಿಜ್ಜಳನನ್ನು ಕೊಲ್ಲಲು ಪ್ರಾರ್ಥಿಸಿದಳು. ತಮ್ಮ ಸಂಚಿನ ಕೊನೆಯ ಹಂತವೇ ಈಗ ಕಾರ್ಯಗತವಾಗಬೇಕಿತ್ತು.

* * *

ಶರಣರು ವಲಸೆ ಹೋಗುವರೆಂಬುದು ಬಿಜ್ಜಳನಿಗೆ ಗೊತ್ತಾಯಿತು. ಅದರಿಂದ ರಾಜ್ಯದಲ್ಲೆಲ್ಲ ತನ್ನ ಬಗೆಗೆ ಅಪಚಾರ ಹರಡುವದೆಂದು ಭಾವಿಸಿದ ಆತನು ಅದನ್ನು ತಡೆಯುವ, ಹಾಗೂ ಶರಣರ ಚಟುವಟಿಕೆ ನಿಲ್ಲಿಸಿಬಿಡುವ ವಿಚಾರ

ಕ್ಕಾಗಿ ರಹಸ್ಯವಾಗಿ ಮಂತ್ರಿಗಳ ದಳಪತಿಗಳ ಸಭೆಸೇರಿಸಿದನು. ಮುಖ್ಯ ಶರಣ ರನ್ನು ಸೆರೆಹಿಡಿದು, ಅನುಭವಮಂಟಪ - ಮಹಮನೆಗಳನ್ನು ವಿಧ್ವಂಸಗೊಳಿಸ ಬೇಕೆಂದು ಅಲ್ಲಿ ಗೊತ್ತು ಮಾಡಲ್ಪಟ್ಟಿತು. ಆದರೆ ಶರಣರ ಸಿದ್ಧತೆ ಪೂರ್ಣ ವಾಗಿತ್ತಾದ್ದರಿಂದ ಅವರು ಅದೇ ರಾತ್ರಿ ನಗರದಿಂದ ಹೊರಬಿದ್ದು ಹೋದರು. ರಾಜನ ಸಭೆಯ ಕಾಲಕ್ಕೆ ಸೆರೆಮನೆಯ ಕಾವಲು ಶಿಥಿಲಗೊಂಡುದನ್ನು ಸಾಧಿಸಿ ಜಗದೇಕಮಲ್ಲ ಬೊಮ್ಮರಸರು ಯುಕ್ತಿಯಿಂದ ಪಾರಾಗಿ, ವೇಷಮರೆಯಿಸಿ ಬಿಜ್ಜಳನ ಪರಿವಾರದಲ್ಲಿ ಸೇರಿ ಹಠಾತ್ತಾಗಿ ಆತನ ಕೊಲೆ ಮಾಡಿದರು. ಕೂಡಲೆ 'ಹರಳಯ್ಯ ಮಧುವಯ್ಯಗಳನ್ನು ಕೊಲ್ಲಿಸಿದ ಬಿಜ್ಜಳನನ್ನು ಕೊಂದ ವೀರರು ನಾವು! ಜಗದ್ದೇವ ಮಲ್ಲಿಬೊಮ್ಮಯ್ಯಗಳು ನಾವು!' ಎಂದು ಕೂಗುತ್ತ ಓಡು ತ್ತಿದ್ದರು. ತಡೆಯಲು ಯತ್ನಿಸಿದ ಭಟರಿಂದ ಜಗದೇಕಮಲ್ಲನು ಹತನಾದನು. ಬೊಮ್ಮರಸು ಪಾರಾದನು. ಕಲ್ಯಾಣ ನಗರವು ಪ್ರಕ್ಷುಬ್ಧವಾಯಿತು. ಮರುದಿನ ದಳಪತಿಯ ದಂಡಾಳುಗಳು ಮೊದಲು ಮಹಮನೆಗೇ ನುಗ್ಗಿ ಅದನ್ನೂ ಅನು ಭವ ಮಂಟಪವನ್ನೂ ನೆಲಸಮ ಮಾಡಿದರು. ಶರಣರ ಸಲಹೆಯನ್ನು ಅಲಕ್ಷಿಸಿ ನಗರದಲ್ಲಿಯೇ ಉಳಿದ ಲಿಂಗವಂತ ಮಠಾಧೀಶರ ಶರಣರ ಭಕ್ತರ ಕಗ್ಗೊಲೆ ಯಾಯಿತು. ಶಿವಪುರ ಮುಂತಾದ ಮಹಾನಗರದ ಭಾಗಗಳು ನಾಶವಾದವು. ಕಲ್ಯಾಣ ಹಾಳಾಯಿತು.

ಮಂಗಳವೇಡೆಯಿಂದ ಸೋವಿದೇವನು ಬಂದು ಆಡಳಿತವನ್ನು ವಹಿಸಿದ ಮೇಲೆಯೇ ನಗರಜೀವನದ ಪುನರಾರಂಭವಾಯಿತು. ಕೊಲೆಗಡಕರು ಕೂಗಿದ ಶಬ್ದದಿಂದ ಹರಳಯ್ಯ ಮಧುವಯ್ಯಗಳ ಕೊಲೆಯ ಸೇಡಿಗಾಗಿ ಶರಣರಿಂದಲೇ ಬಿಜ್ಜಳನ ಕೊಲೆಯಾಯಿತೆಂಬ ಹೇಳಿಕೆಯ ಪ್ರಸಾರವಾಯಿತು. ಸೋವಿದೇವನಿಗೆ ತಂದೆಯ ಕೊಲೆಯ ನಿಜವಾದ ಕಾರಣ ತಿಳಿಯಲು ಬಹಳ ದಿವಸ ಹಿಡಿಯಿತು. ಅಲ್ಲಿಯವರೆಗೆ ಆತನು ಶರಣರನ್ನು ದಂಡಿಸಲು ದಂಡು ಕಳಿಸುತ್ತಿದ್ದನು.

ವಲಸೆಗೆ ಹೊರಟ ಶರಣರ ತಂಡವು ತಂಗಡಿಯ ಹತ್ತಿರ ಕೃಷ್ಣೆಯನ್ನು ದಾಟಿ ಸಂಗಮದಲ್ಲಿ ಬಸವಣ್ಣನವರನ್ನು ಕಂಡು ಮುಂದೆ ಮಲಯದ ಕಡೆಗೆ ಹೋಗುವದಿದ್ದಿತು. ಮಾಚಯ್ಯನವರ ಮನವಿಯಂತೆ ಶರಣರ ರಕ್ಷಣೆಗೆ ಅಭಿ ಮಾನಿ ಸಾಮಂತರು ಕಳುಹಿದ ರಕ್ಷಣಾದಲಗಳು ಅವರನ್ನು ಕೂಡುತ್ತ ಅವರ

ಸಂಖ್ಯೆ ಬೆಳೆದಿದ್ದಿತು. ನಾಗಮ್ಮ ನೀಲಮ್ಮ ಗಂಗಾಂಬೆಯರು ಆ ತಂಡದೊಡ ನಿದ್ದರು. ನೀಲಾಂಬೆ ಮಾತ್ರ ಶಾರೀರಿಕವಾಗಿ ಮಾನಸಿಕವಾಗಿ ಬಹಳ ಹಣ್ಣಾಗಿ ದ್ದಳು. ಆಕೆ ಅಣ್ಣನ ಮನಸ್ಸು ತಿರುಗಿಸಿ ಮೂವರು ಶರಣರ ರಕ್ಷಣೆ ಮಾಡ ಬಹುದೆಂಬ ಆಸೆಯಿಂದ ಪತಿಯ ಸೂಚನೆಯನ್ನು ಅಲಕ್ಷಿಸಿ ಸಂಗಮಕ್ಕೆ ಹೋಗದೆ ಉಳಿದಿದ್ದಳು. ಆ ಆಸೆ ಮಣ್ಣುಗೂಡಿತ್ತು. ತಂಗಿಯಂತೆ ತನ್ನನ್ನು ಸಲುಹಿದ ಅಣ್ಣನ ಮರಣ, ಏಕಾಕಿಯಾದ ಪತಿಯ ನೆನಹು, ಶರಣರ ವನವಾಸ ಇವೆಲ್ಲ ಚಿಂತೆಗಳಿಂದ ಬಹಳ ಬಳಲಿದ ಆಕೆಯ ಶರೀರ ರೋಗಗ್ರಸ್ತವಾಗಿತ್ತು. ನಾಗಮ್ಮತಾಯಿಯ ಶುಶ್ರೂಷೆಯಿಂದಲೇ ಇನ್ನೂ ಪ್ರಾಣವು ತೊಲಗದೆ ಉಳಿ ದಿದ್ದಿತು. ಯಾತ್ರಾದಳವು ತಂಗಡಿಯ ಹತ್ತಿರ ಬೀಡುಬಿಟ್ಟಿತು. ಅಕಾಲವೃಷ್ಟಿ ಯಿಂದ ನದಿಗೆ ತುಸು ನೆರೆ ಬಂದುದರಿಂದ ಒಂದು ದಿನ ತಡೆದು ನದಿಯನ್ನು ದಾಟಬೇಕಾಗಿತ್ತು.

ಮರುದಿನ ಬೆಳಗಿನಲ್ಲಿ ಹಡಪದಪ್ಪಣ್ಣ ನದಿಯನ್ನು ದಾಟಿ ಸಂಗಮದಿಂದ ಬಂದು ಶರಣರನ್ನು ಕಂಡು, ಮೂರು ದಿನಗಳ ಹಿಂದೆ ಬಸವಣ್ಣ ಬಯಲಾದ ರೆಂದು ಗದ್ಗದಿತ ಕಂಠದಿಂದ ಹೇಳಿದನು. ಶಿಬಿರದ ಜನರೆಲ್ಲ ಅವನ ಹತ್ತಿರ ನೆರೆ ದರು. ಹೆಣ್ಣುಮಕ್ಕಳ ಗೂಡಾರದಿಂದ ನಾಗಮ್ಮನೂ ಬಂದಳು. ಅವರೆಲ್ಲರು ಅಣ್ಣನವರ ಲಿಂಗೈಕ್ಯದ ವಿವರವನ್ನು ಕಣ್ಣೀರು ಕರೆಯುತ್ತ ಕೇಳಿದರು. ಚೆನ್ನ ಬಸವಣ್ಣ ಭಾವಾವೇಶದಲ್ಲಿ ನುಡಿದನು :

'ಲಿಂಗಜಂಗಮ, ಜಂಗಮ ಲಿಂಗವೆಂಬುದ ತೋರಿ
ನಿಜೈಕ್ಯನಾದೆಯಲ್ಲಾ, ಬಸವಣ್ಣಾ!
ಪ್ರಸಾದ ಕಾಯ, ಕಾಯ ಪ್ರಸಾದವೆಂಬುದ ಎನ್ನ ಸರ್ವಾಂಗದಲ್ಲಿ ಪ್ರತಿಷ್ಠಿಸಿ,
ಎನ್ನನಾಗುಮಾಡಿ ಮುಂದುವರಿದೆಯಲ್ಲಾ ಬಸವಣ್ಣಾ!
ಲಿಂಗ ಪ್ರಾಣ-ಪ್ರಾಣಲಿಂಗವೆಂಬುದ ಎನ್ನಂತರಂಗದಲ್ಲಿ ಸ್ಥಾಪ್ಯವಮಾಡಿ
ಎನ್ನ ನಿನ್ನಂತೆ ಮಾಡಿ, ನಿಜಲಿಂಗದೊಳಗೆ ನಿರವಯವಾದೆಯಲ್ಲಾ ಬಸವಣ್ಣಾ!
ಎನ್ನ ಮನವ ಮಹಾಸ್ಥಲದಲ್ಲಿ ಲಯವ ಮಾಡಿ

ನಿರ್ವಯಲಾಗಿ ಹೋದೆಯಲ್ಲಾ ನಿಜಲಿಂಗೈಕ್ಯ ಬಸವಣ್ಣಾ !
ನಿನ್ನ ಒಕ್ಕುಮಿಕ್ಕ ಶೇಷವನಿಕ್ಕಿ ಆಗುಮಾಡಿ
ನಿನ್ನಂತರಂಗದಲ್ಲಿ ಅಪ್ಪೆ ನಾಗಾಯಿಯು ಇಂಬುಗೊಂಡೊಡೆ,
ಎನ್ನ ಮನ ನಿಮ್ಮ ಪಾದದಲ್ಲಿ ಕರಗಿ ಕೊರಗಿತ್ತಯ್ಯ ಬಸವಣ್ಣ !
ಕೂಡಲ ಚೆನ್ನಸಂಗಯ್ಯಂಗೆ ಸುಜ್ಞಾನವಾಹನವಾಗಬೇಕೆಂದು
ನಿರವಯವಾದೆಯಲ್ಲಾ, ಸಂಗನಬಸವಣ್ಣಾ !'

ಮೇರುವಿನಂತೆ ಧೀರೆಯಾದರೂ ನಾಗಲಾಂಬೆಯ ಕಳವಳಗೊಂಡ ಹೃದಯದಿಂದ ಹೊರಹೊಮ್ಮಿದ ದುಃಖೋದ್ಗಾರಗಳಿವು :

'ನೀವು ಮರ್ತ್ಯಕ್ಕೆ ಬಂದು ನಿಂದಡೆ
ಭಕ್ತಿಯ ಬೆಳವಿಗೆ ದೆಸೆದೆಸೆಗೆಲ್ಲಾ ಪಸರಿಸಿತಯ್ಯಾ ಬಸವಣ್ಣ !
ಸ್ವರ್ಗ ಮರ್ತ್ಯ ಪಾತಾಳದೊಳಗೆಲ್ಲಾ
ನಿಮ್ಮ ಭಕ್ತಿಯ ಬೆಳವಳಿಗೆಯನಾರು ಬಲ್ಲರೋ ಅಣ್ಣಾ ?
ಶಶಿಧರನಟ್ಟಿದ ಮಣಿಹ ಪೂರೈಸಿತ್ತೆಂದು ನೀವು ಲಿಂಗೈಕ್ಯರಾದರೆ
ಭಕ್ತಿ ನಿಮ್ಮೊಡನೆ ಹೋಯಿತ್ತಯ್ಯಾ !
ನಿಮ್ಮೊಡನೆ ಸದಾಚಾರ ಹೋಯಿತ್ತಯ್ಯಾ !
ನಿಮ್ಮೊಡನೆ ಅಸಂಖ್ಯಾತರು ಹೋದರೊ ಅಣ್ಣಾ !
ಮರ್ತ್ಯಲೋಕದ ಮಹಾಮನೆ ಶೂನ್ಯವಾಯಿತ್ತು ಬಸವಣ್ಣಾ,
ಎನ್ನನೊಯ್ಯದೆ ಹೋದೆಯಲ್ಲಾ ಪಂಚಪರುಷ ಮೂರ್ತಿ ಬಸವಣ್ಣಾ !
ಬಸವಣ್ಣಪ್ರಿಯ ಚೆನ್ನಸಂಗಯ್ಯಂಗೆ
ಪ್ರಾಣಲಿಂಗವಾಗಿ ಹೋದೆಯಲ್ಲಾ ಸಂಗನಬಸವಣ್ಣಾ !'

ಹಲವರು ಹಲವು ಬಗೆಯಾಗಿ ಬಸವರಾಜರನ್ನು ನೆನೆದು ನುಡಿದರು. ಮಾಚಯ್ಯನವರು ತೆಗೆದ ಉದ್ಗಾರ ಅವುಗಳಿಗೆ ಮುಡಿಯಿಟ್ಟಂತಿತ್ತು :

'ಆಕಾರ ನಿರಾಕಾರವಾಯಿತ್ತಲ್ಲಾ ಬಸವಣ್ಣಾ,
ಪ್ರಾಣ ನಿಃಪ್ರಾಣವಾಯಿತ್ತಲ್ಲಾ ಬಸವಣ್ಣಾ,

ಲಿಂಗಜಂಗಮದ ಮಾಟಕೂಟ ಸಮಾಪ್ತಿಯಾಯಿತಲ್ಲಾ ಬಸವಣ್ಣಾ,
ನಿಶ್ಶಬ್ದ ವೇದ್ಯವಾದೆಯಲ್ಲಾ ಬಸವಣ್ಣಾ
ಕಲಿದೇವರ ದೇವನ ಹೃದಯಕಮಲವ ಹೊಕ್ಕು
ದೇವರಿಗೆ ದೇವನಾಗಿ ಹೋದೆಯಲ್ಲಾ ಸಂಗನಬಸವಣ್ಣಾ !'

ನಾಗಲಾಂಬೆಗೆ ನೀಲಾಂಬೆಯು ನೆನಪಾಯಿತು. ಗಂಗಾಂಬೆಯೂ ಅಲ್ಲಿ ಕಾಣಲಿಲ್ಲ. ಆದರಿಂದ ಮರಳಿ ಗೂಡಾರದೊಳಗೆ ಬಂದಳು. ಅಲ್ಲಿ ಗಂಗಾಂಬಿಕೆ ನೀಲಾಂಬೆಯನ್ನು ತೊಡೆಯಮೇಲೆ ಹಾಕಿಕೊಂಡು ದುಃಖಿಸುತ್ತಿದ್ದಾಳೆ. ಸುತ್ತ ನಿಂತ ಶರಣೆಯರು ನೀಲಾಂಬೆಯ ಮೂಗು ಮೈಗಳನ್ನು ಮುಟ್ಟಿನೋಡು ತ್ತಿದ್ದಾರೆ. ತಟ್ಟನೆ ಮುಂದೆ ಬಂದ ನಾಗಲಾಂಬೆಯೂ ಮುಟ್ಟಿ ನೋಡಿದಳು. ನೀಲಾಂಬೆ ಲಿಂಗೈಕ್ಯಳಾಗಿದ್ದಳು.

ಸ್ವಲ್ಪೇ ಸಮಯದ ಮೊದಲು ನೀಲಾಂಬೆಯನ್ನು ಆಧಾರಕ್ಕೆ ಕೂಡ್ರಿಸಿ ಪೂಜೆಗೆ ತೊಡಗಿಸಿ ಗಂಜಿಯನ್ನು ತರಲು ಗಂಗಾಂಬೆ ಅಡುಗೆಯ ಗೂಡಾರಕ್ಕೆ ಹೋಗಿದ್ದಳು. ಅಗ ಹೊರಗಡೆ ಹೇಳಿದ ಬಸವಣ್ಣ ಬಯಲಾದ ಸುದ್ದಿ ನೀಲಾಂಬೆಯ ಕಿವಿಗೆ ಬಿದ್ದು ಆಕೆಯು :

"......ಸಂಗಯ್ಯಾ, ಗುರುಬಸವ,
ಕರಸ್ಥಲ ಬಯಲಾಗಿತ್ತೆನಗೆ ಎಲೆ ಅಯ್ಯಾ,
ಕರಸ್ಥಲ ಮನಸ್ಥಲವಾಯಿತ್ತು ಸಂಗಯ್ಯಾ,
ಬಸವ ಹೋದಸತ್ತ ನಾನಡಗಿದೆನಯ್ಯಾ ನಿಮ್ಮತ್ತ"

ಎನ್ನುತ್ತ ಲಿಂಗದರಿವಿನಲ್ಲಿ ಬೆರೆದಾಗ ಆಕೆಯ ಪ್ರಾಣ ಕೂಡ ಲಿಂಗದಲ್ಲಿ ಲೀನ ವಾಯಿತು. ಶರೀರ ಉರುಳುವದರೊಳಗಾಗಿ ಗಂಗಾಂಬೆ ಬಂದು ಹಿಡಿದಿದ್ದಳು. ಶರಣೆಯೊಬ್ಬಳು ಬಂದು ಗಂಗಾಂಬೆಗೂ ಹೇಳಿದಳು ಬಸವರಾಜರು ಬಯ ಲಾದುದನ್ನು. ಕೇಳಲಾಗದ ವಾರ್ತೆ! ನೋಡಲಾಗದ ದೃಶ್ಯ! ದುಃಖ ಇಮ್ಮಡಿ ಸಿತ್ತು ಗಂಗಾಂಬೆಗೆ! ಅಷ್ಟರಲ್ಲಿ ನಾಗಮ್ಮ ಬಂದು ನೋಡಿದ್ದು. ಆಕೆಯ ಹೃದಯ ಅದಿರಿದರೂ ಮುಂದಾಲೋಚನೆ ಕಳೆದುಕೊಂಡಿರಲಿಲ್ಲ. ತನ್ನನ್ನು ನೋಡಿ ಗಂಗಾಂಬೆ "ಅವರು ಹೋದರು; ಅವರೊಡನೆ ತಂಗಿ ಹೋದಳು; ನಾನೇಕೆ ಹೋಗಲಿಲ್ಲ ಅವ್ವಾ ?" ಎಂದು ಅಳಹತ್ತಲು "ಹಾಗೆಲ್ಲಾ ಅನ್ನ

ಬಾರದು ಗಂಗಾ. ಸಂಗಯ್ಯ ದೊಡ್ಡವನಾದ ಮೇಲೆ ನಿನ್ನ ಮಣಿಹ ಮುಗಿಯುವದು” ಎಂದು ಸಾಂತ್ವನದ ಮಾತು ಹೇಳಿದಳು. ಆಗ ನಾಗಮ್ಮನ ವಿಶಾಲವಾದ ಹಣೆಯ ಮೇಲಿನ ಮಡಿಕೆಗಳು ಆಪತ್ಕಾಲದ ಗಾಢ ವಿಚಾರದಲ್ಲಿಯ ಮಗ್ನತೆಯನ್ನು ಸೂಚಿಸುತ್ತಿದ್ದವು. ನೀಲಲೋಚನೆ ಲಿಂಗೈಕ್ಯಳಾದದ್ದು ಶರಣರಿಗೆ ಎರಡನೆಯ ಆಘಾತವಾಯಿತು. ತಂಗಡಿಯಲ್ಲಿ ನೀಲಮ್ಮನ ಗದ್ದುಗೆಯಾಗಿ ಅದು ತಂಗಡಗಿಯಾಯಿತು. ಬಸವಣ್ಣನ ನೀಲಮ್ಮನ ಗದ್ದುಗೆಗಳ ಸೇವೆ ಮಾಡುತ್ತ ಹಡಪದಪ್ಪಣ್ಣ ಅಲ್ಲಿಯೇ ಉಳಿಯುವವನಾದನು.

ಅಂದಿನ ರಾತ್ರಿ ಅಕ್ಕನು ಮಲಗುವ ಮುಂದಿನ ಆಕೆಯ ಶಿವಧ್ಯಾನ ಸರಿಯಾಗಿ ನಡೆಯಲಿಲ್ಲ. ಬಸವಣ್ಣ ಹೋದನೆಂದು ಮನಸ್ಸು ಒಳಗೊಳಗೆ ಹಣ್ಣಾಗಿತ್ತು. ಬಾಲಬಸವಣ್ಣನಲ್ಲಿ ತಾಳಿದ್ದ ತನ್ನ ಪವಿತ್ರ ವಾತ್ಸಲ್ಯದ ಭಾವವು ಬಸವಣ್ಣನವರ ದೇವತ್ವದಲ್ಲಿ ಪರಮ ಭಕ್ತಿಯ ಭಾವವಾಗಿ ಮಾರ್ಪಟ್ಟಿದ್ದಿತು. ಈ ಅಂದಿಂದಿನ ಆತ್ಮೀಯತೆಯ ಭಾವ ಉತ್ಕಟಗೊಂಡಿತ್ತು. ಆಕೆಯ ನಿತ್ಯದ ಪರಶಿವ ಚಿಂತನೆಯ ಪ್ರಖರತೆಯಲ್ಲಿ ಅಡಗಿ ಹಿಂದೆ ಕುಳಿತಿದ್ದ ಮಾಯೆ ಈ ಸಂಧಿ ಸಾಧಿಸಿ ಸಾತ್ವಿಕತೆಯ ಸೂಕ್ಷ್ಮರೂಪದಿಂದ ಮೈದೋರಿ, ಬಸವಣ್ಣ ಹೋದುದಕ್ಕೆ ದುಃಖಪಡುವಂತೆ ಮಾಡಿದ್ದಿತು. ಹಗಲೆಲ್ಲ ಅದನ್ನು ಅದುಮಿ ಜನರ ಮುಂದೆ ಧೈರ್ಯವನ್ನು ತೋರಿದ್ದರೂ ತಾನೊಬ್ಬಳೇ ಇರುವ ಏಕಾಂತದಲ್ಲಿ ಆ ದುಃಖ ಈ ಪ್ರಕಾರದಿಂದ ಹೊರಬಿದ್ದಿತು :

'ಭಕ್ತಿಯ ತವನಿಧಿಯೇ ಬಸವಾ, ಮುಕ್ತಿಯ ಮೂರುತಿಯೇ ಬಸವಾ,
ಲಿಂಗಜಂಗಮದ ಚೈತನ್ಯವೇ ಬಸವಾ,
ನಿಮ್ಮನಗಲಿಯಾನೆಂತು ಸೈರಿಸುವೆ ಎಲೆ ಅಯ್ಯಾ ಬಸವಾ,
ಎಲೆ ಪರಮ ಗುರುವೇ ಬಸವಾ,
ಎನ್ನಂತರಂಗದ ಜ್ಯೋತಿಯೇ ಬಸವಾ
ನಿಮ್ಮ ಒಕ್ಕುಮಿಕ್ಕ ಶೇಷಪ್ರಸಾದವನಿಕ್ಕಿ
ಎನ್ನ ಪಾವನವ ಮಾಡಿ ಉಳುಹಿದೆಯಲ್ಲಾ ಬಸವಲಿಂಗವೇ !
ಎನಗಿನ್ನಾರು ಗತಿಮತಿ ಹೇಳಯ್ಯಾ ಬಸವಣ್ಣಾ ನೀವಲ್ಲದೆ ?
ಬಸವಣ್ಣಪ್ರಿಯ ಚೆನ್ನಸಂಗಯ್ಯ
ನೀವಗಲಿದಡೆ ಎನ್ನ ಪ್ರಾಣ ನಿಮ್ಮೊಳಗಲಬಲ್ಲುದೇ ಬಸವಾ ?'

೪ ಬಸವಲಿಂಗಾ ಜಯತು

ಮರುದಿನವೆಲ್ಲ ಶರಣದಳದ ಶಿಬಿರದಲ್ಲಿ ದುಗುಡದುಮ್ಮಾನಗಳು ವ್ಯಾಪಿಸಿದ್ದವು. ಅನುಭಾವಿಗಳು ಅಲ್ಲಲ್ಲಿ ಕುಳಿತು ಧ್ಯಾನಾನುಸಂಧಾನದಲ್ಲಿ ತೊಡಗಿದ್ದರು. ಅಕ್ಕನಾಗಮ್ಮನ ಅಂತರಂಗ ಇನ್ನೂ ತಳಮಳಿಸುತ್ತಿತ್ತು. ಬಸವಣ್ಣ ಕೈಕೊಂಡ ಕಾರ್ಯಗಳ ಭವಿಷತ್ತಿನ ಚಿಂತೆ ತಲೆಸುತ್ತುತ್ತಿತ್ತು. ಸದಾಚಾರ-ಸದ್ಭಕ್ತಿ-ಶಿವಯೋಗಗಳನ್ನು ನೆಲೆಗೊಳಿಸುವಲ್ಲಿ ಬಸವಣ್ಣನಿಗೆ ನೆರವಾಗಿ ನಿಂತು ಇದುವರೆಗೆ ಅದನ್ನೇ ಮಾಡಿದ್ದಳು. 'ಇನ್ನು ಬಸವಣ್ಣನಿಲ್ಲ, ಬಸವಣ್ಣ ಹಣ್ಣಿದ ಕಾರ್ಯಗಳಿವೆ; ಚೆನ್ನಬಸವಣ್ಣನಿದ್ದಾನೆ, ಶರಣಧರ್ಮನಿಷ್ಠರಿದ್ದಾರೆ; ಮಹಾನುಭಾವಿಗಳಿದ್ದಾರೆ. ಇವರೆಲ್ಲರ ಸಂಯೋಜನೆ ಸಂಗನಬಸವನ ಕಾರ್ಯವನ್ನು ಮುಂದುವರಿಸಲಿಕ್ಕಿಲ್ಲವೇ ?' ಎಂದು ಎಣಿಕೆ ಹಾಕುತ್ತಿದ್ದಳು. ಚೆನ್ನಬಸವಣ್ಣ ಆತ್ಮಶಕ್ತಿಯಿಂದ ಅಪರಿಮಿತ ಸಂಯಮದಿಂದ ವರ್ತಿಸಿ ಎಲ್ಲರಿಗೂ ಧೈರ್ಯ ಹೇಳುತ್ತಿದ್ದನು.

ಅಂದಿನ ರಾತ್ರಿ ಕಳೆಯಿತು. ಬೆಳಗಿನಲ್ಲಿ ತಾಳಿಕೋಟೆಯ ವಿರುಪರಸರು ಶರಣರ ರಕ್ಷಣೆಗೆ ಕಳುಹಿದ ಭಟರ ತಂಡ ಬಂದು ಕೂಡಿತು. ಆದರೆ ಅವರು ತಂದ ಸುದ್ದಿಯೇನು ? 'ಶರಣರನ್ನು ಬೆನ್ನಟ್ಟಿ ಬಂದ ಮಾಧವನಾಯಕನು ಸಮೀಪದಲ್ಲಿ ಬಂದಿದ್ದಾನೆ.'

ಶರಣರು ಬೆದರಲಿಲ್ಲ. ನಾಗಮ್ಮ ಗೂಡಾರದಲ್ಲಿ ಕೂಡ್ರದೆ ಬೈಲಿಗೆ ಬಂದು ನಿಂತಳು. ಕಾಲಪರಿಸ್ಥಿತಿಗೆ ತಕ್ಕಂತೆ ಕಾರ್ಯಾವಸರ—ಕಾರ್ಯಪದ್ಧತಿ! ಕ್ರಿಯಾಚಾರಗಳಲ್ಲಿ ಬದಲಾವಣೆ ಅಗತ್ಯವೆಂದು ಅಕ್ಕನಿಗೆ ತೋರಿತ್ತು. ಅವಳ ಸ್ವಭಾವದಲ್ಲಿ ಕೆಚ್ಚು ತಲೆಹಾಕಿತ್ತು. ಮಾಚಯ್ಯ, ಕಿನ್ನರಿ ಬೊಮ್ಮಯ್ಯ ನಾಯಕರಾಗಿ ಶರಣದಳದಲ್ಲಿ ಸಂಘಟನೆ ಮಾಡಿ, ಮಾಧವನಾಯಕನ ದಳವನ್ನು ಕಣಿವೆಯ ದಾರಿಯಲ್ಲಿ ಹಣಿದು ಹಿಂದೋಡಿಸಿದರು. ಶರಣರ ಬಲ ಬೆಳೆದುದನ್ನು ಅರಿಯದೆ ಅವಸರದಿಂದ ಬಂದ ಕಲ್ಯಾಣದ ದಳಪತಿ ಕಂಗಾಲಾಗಿ ಹೋದನು.

ಮರುದಿನ ಶರಣರ ಪಡೆ ಕೃಷ್ಣೆಯನ್ನು ದಾಟಿ ಸಂಗಮಕ್ಕೆ ಬಂದಿತು. ಅದು ಜಾತವೇದಿ ಮುನಿಗಳ ಪುಣ್ಯಭೂಮಿ! ಬಸವಣ್ಣ ಚೈತನ್ಯವನ್ನು ಸಂಪಾದಿಸಿದ ಜ್ಞಾನಭೂಮಿ! ಅದನ್ನು ನಾಡಿನಲ್ಲಿ ಹರಹಿ ಬಯಲಾದ ಯೋಗ ಭೂಮಿ! ಅವರೆಲ್ಲರಿಗೆ ಸಂಗನಬಸವನ ಭಾವವೇ ಭಾವ! ಬಸವತತ್ವವೇ ತತ್ವ!

ಬಸವಣ್ಣನ ಗದ್ದುಗೆಯ ಎದುರು ಗಣಾಚಾರದ ಯೋಧರು ದಳಬದ್ಧರಾಗಿ ನಿಂತರು. ನಾಯಕರು ಅನುಭಾವಿಗಳು ಅವರ ಮುಂದೆ ನಿಂತರು. ಎಲ್ಲಕ್ಕೂ ಮುಂದೆ ಗದ್ದುಗೆಯ ಹತ್ತಿರ ಅಕ್ಕನಾಗಮ್ಮ ಗಂಗಾಂಬೆ ಚೆನ್ನಬಸವಣ್ಣ ನಿಂತರು. ಐದುನಿಮಿಷ ಮೌನಧ್ಯಾನವನ್ನು ಆಚರಿಸಿ ಶ್ರದ್ಧೆಯನ್ನು ಅರ್ಪಿಸಿದರು. ದಳಪತಿ ಮಾಚಯ್ಯನು ನಿಂತಲ್ಲಿಯೇ ಕುಳ್ಳಿರಲು ಸೂಚಿಸಿ ಅಕ್ಕನಾಗಮ್ಮನವರನ್ನು ನೋಡಿ ಕೈಮುಗಿದು 'ಅಕ್ಕನವರು ಅಪ್ಪಣೆಕೊಡಿಸಬೇಕು' ಎಂದನು. ನಿರ್ಧಾರದ ನಿಲುವೆಗೆ ಬಂದಿದ್ದ ಅಕ್ಕನಾಗಮ್ಮನಿಗೆ ಅದನ್ನು ವ್ಯಕ್ತಗೊಳಿಸುವ ಸಮಯ ಬಂದಿತು :

"ಬಸವ ಮಾಡಿದಡಾಯ್ತು ಬುವಿಗೆ ಭಕ್ತಿಯ ಬೆಳಕು.
ಬಸವ ಮಾಡಿದಡಾಯ್ತು ಗುರುಲಿಂಗಜಂಗಮ ಪೂಜೆ.
ಬಸವ ಮಾಡಿದಡಾಯ್ತು ಲಿಂಗಾಂಗ ಸಾಮರಸ್ಯದ ಸುಧೆಯು.
ಬಸವ ಮಾಡಿದಡಾಯ್ತು ಭಕ್ತಭಕ್ತರಲಿ ಸಮಭಾವ.
ಎನ್ನ ಕಂಗಳೊಳಗಿಂಬಾದ ಬಸವ,
ಎನ್ನ ಮನಭಾವಂಗಳೊಳಗಾದ ಬಸವ
ಎನ್ನಂತರಂಗವ ತುಂಬಿ ನಿಂದಾತ ಬಸವ.
ಎನ್ನೊಳಗೆ ಗುರುಬಸವನ ಮೂರುತಿ,
ಹೊರಗೆ ಗುರುಬಸವನ ಕೀರುತಿ
ಬಸವನ ಮಣಿಹವೇ ಎನ್ನ ಪ್ರಾಣವಿಂದಿಂಗೆ
ಬಸವಣ್ಣಪ್ರಿಯ ಚೆನ್ನಸಂಗಯ್ಯನ ಸಾಕ್ಷಿಯಾಗಿ.
ಬಸವಾ ಬಸವಾ ಜಯತು; ಗುರು ಸಂಗನಬಸವಾ ಜಯತು.

ಚೆನ್ನಸಂಗಯ್ಯನ ಶರಣರು ಒಡೆಯರು. ಅವರ ಆಣತಿ ಮಹಾಪ್ರಸಾದವೆನಗೆ. ಅವರ ಸೇವೆಗೆ ನನ್ನ ಉಳಿದ ಜೀವನ ಮುಡಿಪು" ಕೈ ಮುಗಿದಳು.

ಮಾಚಯ್ಯನ ದೃಷ್ಟಿ ಚೆನ್ನಬಸವಣ್ಣನತ್ತ ಹೊರಳಿತು. ಚೆನ್ನಬಸವಣ್ಣ ಹೇಳಿದನು :

"ನಿಧಾನವನಗಿವೆನೆಂದು ಹೋದರೆ ವಿಘ್ನ ಬಪ್ಪುದು ಮಾಬುದೇ ?
ಅಯ್ಯಾ ಸದಾಶಿವನ ಪೂಜಿಸುವೆನೆಂದು ಹೋದರೆ
ತುರುಂಬಿ ಓಡಿವವಯ್ಯಾ ಸಕಲ ವಿಪತ್ತುಗಳು.
ಏದೆ ಭಂಗವಿಲ್ಲದೆ ನಿಲಬಲ್ಲಡೆ ಪರಮ ಸುಖವನೀವ
ನಮ್ಮ ಕೂಡಲಚೆನ್ನಸಂಗಮದೇವ."

ಬಸವಣ್ಣನವರು ಹೇಳಿದ ಒಂದು ಮಾತು ಈಗ ನಮ್ಮ ನೆನಪಿಗೆ ಬರಲಿ :

ಅಂಜಿದರಾಗದು, ಅಳುಕಿದರಾಗದು,
ವಜ್ರ ಪಂಜರದೊಳಗಿಟ್ಟರಾಗದು :
ತಪ್ಪದುವೋ ಲಲಾಟ ಲಿಖಿತ !
ಕಕ್ಕುಲತೆಗೆ ಬಂದರೆ ಆಗದು, ನೋಡಾ !
ಧೃತಿಗೆಟ್ಟು ಮನ ಧಾತುಗೆಟ್ಟರೆ ಬಪ್ಪುದು ತಪ್ಪದು,
ಕೂಡಲಸಂಗಮದೇವಾ.

ಇನ್ನು ನಮ್ಮ ಕರ್ತವ್ಯವು ಸ್ಪಷ್ಟವಿದೆ. ನಿಮ್ಮೆಲ್ಲರ ಹೃದಯದಲ್ಲಿಯ ಚೆನ್ನ ಸಂಗಯ್ಯನು ದಾರಿ ತೋರಿದಂತೆ."

ಮಡಿವಳಮಾಚಯ್ಯ ಬಳಿಕ ಆವೇಶದಿಂದ ಹೇಳಿದನು :

"ನಮ್ಮ ಪ್ರಮಥ ಗಣಂಗಳು ಉಳಿವೆಯ ಮಹಮನೆಗೆ
ಪೋಹ ಪರಿಯಂತ ಒಬ್ಬರನು ಬಿಟ್ಟೆನಾದೊಡೆ
ನನ್ನ ಕೈಯೊಳಗಿರ್ಪ ವೀರಭದ್ರ ವಿಜಯವೆಂಬ ಖಡ್ಗ
ಉರಿದೆದ್ದು ಸಿಡಿದು ಪೋಗಲಿ ಕಲಿದೇವರ ಸಾಕ್ಷಿಯಾಗಿ ಚೆನ್ನಬಸವಣ್ಣ.

ಶರಣದಲವು ಅಲ್ಲಿಂದ ಸರಿದು ನದೀತೀರದಲ್ಲಿ ಶಿಬಿರಹಾಕಿತು. ಗುರುಕುಲದ ಕುಲಪತಿಗಳು ಪ್ರಾಧ್ಯಾಪಕರು ಬಂದು ಅಕ್ಕನಾಗಮ್ಮ, ಚೆನ್ನಬಸವಣ್ಣನವರನ್ನು

ಕಂಡು ಸನ್ಮಾನಿಸಿ ಆಶ್ರಮದಲ್ಲಿ ಬಿಜಯಂಗೈಸಿಕೊಂಡರು. ಅಕ್ಕ ಜಾತವೇದಿ ಗುರುಗಳ ಗದ್ದುಗೆಯನ್ನು ಸಾರಿ ಸಾಷ್ಟಾಂಗವೆರಗಿ ಪುಷ್ಪಾರ್ಚನೆಯನ್ನು ಸಲ್ಲಿಸಿ ತಂದೆಗಾಗಿ ಕುಳಿತ ಮಗಳಂತೆ ಮುಂದೆ ಕುಳಿತು ಕಂಬನಿಯ ಕರೆದಳು. ಗುರು ವರನ ನಗುಮುಖ, ನಲುಮೆಯ ನೋಟ, ಹುರುಪುಗೊಳಿಸುವ ಹಸ್ತವಿನ್ಯಾಸ, ಕರುಣಾರಸ ತುಂಬಿದ ವಿಶಾಲವಾದ ಎದೆ, ಪಾಂಡಿತ್ಯದ ಪ್ರತೀಕದಂತಿರುವ ದೊಡ್ಡ ಹಣೆ ಅವಳ ಒಳಗಣ್ಣ ಮುಂದೆ ಬಂದು ನಿಂತವು. ಚೆನ್ನಬಸವಣ್ಣನು ಗುರುವಿನ ಗುರು ಪರಮಗುರುವಿಗೆ ಸಾಷ್ಟಾಂಗವಾಗಿ ಎರಗಿದನು.

ಹದಿನಾರು ವರ್ಷಗಳ ಹಿಂದೆ ಅಕ್ಕನಾಗಮ್ಮನವರ ಅನುಚರ ಬಂಧು ಬಳಗವಾಗಿದ್ದ ಜನವೆಲ್ಲ ಬಂದು ಅಲ್ಲಿ ಸೇರಿತು. ಪ್ರೀತಿಯ ಒಡನಾಡಿಗಳು ಮುಪ್ಪಿನವರಾಗಿದ್ದಾರೆ. ಮಕ್ಕಳು ಪ್ರಾಯದವರಾಗಿದ್ದಾರೆ. ಅವರ ನೋಟ ದಲ್ಲಿ ಅಂದಿನ ಕ್ರಿಯಾತತ್ಪರ ಅಕ್ಕ ಇಂದು ಗಂಭೀರಳಾದ ಶಿವಯೋಗಿಣಿಯಾಗಿ ದ್ದಳು. ಆದರೆ ಎಲ್ಲರಿಗೂ ಮುಸುಕಿತ್ತು ಬಸವೇಶ-ನೀಲಬ್ಬೆಯರ ಲಿಂಗೈಕ್ಯದ ಕಳವಳದ ಕತ್ತಲು! ಅಕ್ಕನೇ ಸಂತೈಸಬೇಕಾಯಿತು ಎಲ್ಲರನ್ನು. ಸಂಗಮದವ ರಲ್ಲದೆ ನೆರೆಯ ಗ್ರಾಮಗಳ ಜನರೂ ಬಂದು ಸೇರಿದರು. ಬರಬರುತ್ತ ಆ ನೆರವಿ ಬಸವೋತ್ಸವದಲ್ಲಿ ಪರಿಣಮಿಸಿತು. ಆತ್ಮತೃಷೆಯ ಸ್ಥಳೀಯ ಸಾಧಕರು ಸಂಜೆಗೆ ಶಿವಾನುಭವ ಗೋಷ್ಠಿ ನಡೆಯಲೆಂದು ನಿರ್ಣಯಿಸಿದರು. ಪೂರ್ವದಲ್ಲಿಯೇ ತಮ್ಮ ಪೂಜ್ಯಭಾವನೆಗೆ ಪಾತ್ರಳಾದ ಕ್ರಿಯಾ-ಜ್ಞಾನಯೋಗ ಬಲ್ಲಿದಳೆಂದು ಖ್ಯಾತಿವೆತ್ತ ಶಿವಯೋಗಿಣಿ ಅಕ್ಕನಾಗಮ್ಮನವರನ್ನು ಅಂದಿನ ಪ್ರವಚನ ಸಭೆಗೆ ಅಧ್ಯಕ್ಷಿಣಿಯೆಂದು ಚೆನ್ನಬಸವಣ್ಣನವರನ್ನು ಪ್ರವಚನಕಾರರೆಂದು ನಿಯೋಜಿಸಿ ದರು. ಈ ಸಭೆಯು ನೀಲಾಂಬೆ-ಬಸವೇಶರು ಬಯಲಾದ ವ್ಯಥೆಯನ್ನು ಬದಿ ಗೊತ್ತಿ ಅವರ ನೀತಿತತ್ವಗಳ ಪರಿಪಾಲನೆಗೆ ಪುನಶ್ಚೇತನವನ್ನು ನೀಡುವ ದಾಯಿತು. ಚೆನ್ನಬಸವಣ್ಣನ ಪ್ರಕಾಶಮಯ ವಾಣಿ ಹರಿಯಿತು. ಸಂಗಮದ ಸಸಿ, ಗಿಡವಾಗಿ ಮರವಾಗಿ ರಸವತ್ಫಲವಾಗಿ ಬಂದು ಬಸವತತ್ವದ ರಸ ಸುರಿ ಯಿತು. ಆತನು ಬಸವಣ್ಣನವರ ಸತ್ಯ-ಶುದ್ಧ ಆಚರಣೆಯನ್ನು ಉದಾಹರಣೆ ಗಳೊಡನೆ ಹೃದಯಂಗಮವಾಗಿ ವಿವರಿಸಿದನು. ಅವರ ವಚನಗಳನ್ನು ಪ್ರಮಾಣವಾಗಿಸಿದನು. 'ವಂಚನೆ ಇಲ್ಲದುದು' ಒಳಗೂ ಹೊರಗೂ ಒಂದೇ

ಮನ, ಒಂದೇ ಮಾತು, ಒಂದೇ ನಡೆಯಾಗಿರುವದು ಸತ್ಯಾಚರಣೆ! ಮನೋವಾಕ್ಕಾಯುಗಳಿಂದ ತಿಲಮಾತ್ರವೂ ಪರರನ್ನು—ಸಕಲಪ್ರಾಣಿಗಳನ್ನು—ನೋಯಿಸದಿರುವದೇ ಶ್ರದ್ಧಾಚರಣೆ!' ಎಂಬುದನ್ನು ಬಿಂಬಿಸಿ ಆವೆರಡು ಇಲ್ಲದವರ ಅಂತರಂಗ ಕಲುಷಿತ! ಅಲ್ಲಿ ಶಿವನಿರಲಾರನೆಂದು ಹೇಳಿ ಕೊನೆಗೆ ಬಸವಣ್ಣನವರ ವಚನವನ್ನೇ ನುಡಿದನು :

"ಮನೆಯೊಳಗೆ ಮನೆಯೊಡೆಯನಿದ್ದಾನೋ ಇಲ್ಲವೋ ?
ಹೊಸ್ತಿಲಲ್ಲಿ ಹುಲ್ಲು ಹುಟ್ಟಿ, ಮನೆಯೊಳಗೆ ರಜ ತುಂಬಿ,
ಮನೆಯೊಳಗೆ ಮನೆಯೊಡೆಯನಿದ್ದಾನೋ ಇಲ್ಲವೋ ?
ತನುವಿನೊಳಗೆ ಹುಸಿತುಂಬಿ, ಮನದೊಳಗೆ ವಿಷಯ ತುಂಬಿ
ಮನೆಯೊಳಗೆ ಮನೆಯೊಡೆಯನಿಲ್ಲಾ,
ಕೂಡಲಸಂಗಮದೇವಾ."

ಬಳಿಕ ಕೈಮುಗಿದು :

"ಅಂತರಂಗದಲ್ಲಿ ಅರಿವು ಪರಿಪೂರ್ಣ,
ಬಹಿರಂಗದಲ್ಲಿ ದಾಸೋಹ ಸಂಪನ್ನ,
ಮನೋವಾಕ್ಕಾಯಕರ್ಮಂಗಳಲ್ಲಿ ಸದ್ಭಕ್ತಿ ಸಂಪನ್ನ,
ಎಡೆದೆರಹಿಲ್ಲದ ಲಿಂಗಸಂಪನ್ನ, ಸರ್ವ ಅಂಗದಲ್ಲಿ ಸರ್ವಾಚಾರ ಸಂಪನ್ನ !
ಇಂತಿಪ್ಪನಾಗಿ ಕೂಡಲಚೆನ್ನಸಂಗಮದೇವನಲ್ಲಿ ಬೆರೆದು ಬೇರಾಗದಿಪ್ಪ
ಸಂಗನಬಸವಣ್ಣನ ಸಂಪ್ರದಾಯದ ಕಂದ ನೋಡಾ ನಾನು.
ಶ್ರೀಗುರು ಬಸವಾ ಜಯತು ! ಬಸವ ತಂದೆ ಜಯತು !!"

ಎಲ್ಲರ ಗಮನ ಸೆಳೆಯುವಂತೆ ಮಾಚಯ್ಯ ಭಾವಪರವಶನಾಗಿ ನುಡಿದನು :

"ಬಸವಣ್ಣಂಗೆ ಚೆನ್ನಬಸವಣ್ಣನೆ ಶೃಂಗಾರ.
ಎನಗೆಯೂ ನಿನಗೆಯೂ ಚೆನ್ನಬಶವಣ್ಣನೆ ಶೃಂಗಾರ ಕಲಿದೇವರ ದೇವಾ.
ನಾ ನಿಮ್ಮ ಶರಣ ಚೆನ್ನಬಸವಣ್ಣನ ನಿಲವನರಿದು
ಶರಣೆಂದು ಸುಖಿಯಾದೆನು."

ಅದುವರೆಗೆ ಬಸವಭಾವದಲ್ಲಿ ನಿಬ್ಬೆರಗಾಗಿ ಕುಳಿತಿದ್ದ ಅಧ್ಯಕ್ಷಿಣಿ ಅಕ್ಕನಾಗಮ್ಮ ಪ್ರಜ್ಞೆಗೆ ಬಂದು ಕೈಮುಗಿದು ಪರಾತ್ಪರ ಚೈತನ್ಯವನ್ನು ಸ್ಮರಿಸಿ ನುಡಿದಳು :

ಆಚಾರವೆಂಬುದು ಅಗೋಚರ ನೋಡಯ್ಯ, ಅರಿಗೆಯೂ ಸಾಧ್ಯವಲ್ಲ.
ಮರ್ತ್ಯಲೋಕದಲ್ಲಿ ಆ ಸದಾಚಾರದ ಬೆಳವಿಗೆಯ ಮಾಡಲೆಂದು
ಬಸವಣ್ಣ ಬಂದು ಭಕ್ತಿಸ್ಥಲವ ಹರಹಿದ
ಗುರುಲಿಂಗಜಂಗಮ ದಾಸೋಹ ಪಾದೋದಕ ಪ್ರಸಾದದ
ಹಾದಿಯನೆಲ್ಲರಿಗೆ ತೋರಿದ.
ಶಿವಾಚಾರದ ಬೆಳವಿಗೆಯ ಘನವನು ಅಹುದಲ್ಲವೆಂದು ಬಿಜ್ಜಳ ತರ್ಕಿಸಲು
ಅನಂತ ಮುಖದಿಂದ ಒಡಂಬಡಿಸಿ ಅಹುದೆನಿಸಿದ.
ಬಂದ ಮಣಿಹ ಪೂರೈಸಿತ್ತೆಂದು, ಲಿಂಗದೊಳಗೆ ಬಗಿದು, ಹೊಕ್ಕಡೆ,
ಹಿಂದೆ ಲೋಕವರಿದು ಬದುಕಬೇಕೆಂದು ಸೆರಗ ಕೊಟ್ಟ.
ನಾನು ಹಿಂದುಳಿದವಳೆಂದು ಮುಂದಣ ಗತಿಯ ತೋರಿ
ಬಸವಣ್ಣಪ್ರಿಯ ಚೆನ್ನಸಂಗಯ್ಯನಲ್ಲಿ ತನ್ನ ಪ್ರಸನ್ನದೊಳಗೆ
ಇಂಬಿಟ್ಟುಕೊಂಡನು ಎನ್ನ ಹೆತ್ತ ತಂದೆ ಸಂಗನಬಸವಣ್ಣನು.

ಗುರು ಬಸವಣ್ಣ ಹಿಂದೆ ಲೋಕವರಿದು ಬದುಕಬೇಕೆಂದು ಕೊಟ್ಟ ಸೆರಗ ಅವನ ಆದರ್ಶ! ಆ ಪ್ರಕಾಶದಲ್ಲಿ ನಾವು ಮುಂದುವರಿಯಬೇಕು. ಎಡರು ತೊಡರುಗಳಿಗೆ ಎದೆಗೆಡದೆ ನೋಡಿ ತಡೆದು ಪರಿಹರಿಸಬೇಕು. ಸಕಲರಿಗೆ ಲೇಸಾಗುವದನ್ನೇ ಬಯಸಿ ಎಸಗಬೇಕು. ಅದೇ ಬಸವನ ಭಕ್ತಿ! ಇನ್ನು ದುಃಖ ದುಮ್ಮಾನಗಳು ಬೇಡ. ಶ್ರೀಗುರು ಬಸವಾ ಜಯತು. ಬಸವಲಿಂಗಾ ಜಯತು!"

ಮುಖ ತಗ್ಗಿಸಿ ವಿಚಲಿತಳಾಗಿ ಧ್ಯಾನಮಗ್ನಳಾಗಿ ಕುಳಿತ ಗಂಗಾಂಬೆಯನ್ನು ಸನಿಹದಲ್ಲಿದ್ದ ಮುಗ್ಧಲಲನೆಯರು ನೋಡಿ ಎದೆಗರಗಿ ಉಸಿರಿಡುತ್ತಿದ್ದರು. ಪ್ರವಚನದಲ್ಲಿ ಅವರಿಗೆ ಅಷ್ಟು ಗಮನವಿರಲಿಲ್ಲ.

ಮರುದಿನ ಅಕ್ಕಪಕ್ಕದ ದೊರೆದೊರೆಗಳು ಸಂಗಮದಲ್ಲಿ ಗಣಪರ್ವದ ಏರ್ಪಾಡು ಮಾಡಿದರು. ಅದು ಬಸವೇಶ್ವರರ ಸ್ಮೃತಿ, ಮಹಮನೆಯ ದಾಸೋಹದ ಸ್ಮೃತಿ ಆಗಿತ್ತು. ಮೂಲಾಧಾರಾದಿ ನವಚಕ್ರಗಳ ಪ್ರತೀಕವೆನ್ನುವಂತಹ ಶೂನ್ಯಸಿಂಹಾಸನವನ್ನು ವಿರಚಿಸಿದರು. ನಿರಂಜನ ಪೀಠಾಧಿಪತಿ, ಷಟ್‌ಸ್ಥಲಚಕ್ರವರ್ತಿ ಚೆನ್ನಬಸವೇಶನನ್ನು ಅದರ ಮೇಲೆ ಆರೋಹಣ ಮಾಡಿಸಿ ಪಾದಪೂಜಾಸಮಾರಂಭವನ್ನು ನೆರವೇರಿಸಿದರು. ಸಾವಿರಗಟ್ಟಲೆ ಜನರಿಗೆ ಅನ್ನಸಂತರ್ಪಣೆಯಾಯಿತು. ಯಾತ್ರೆ ನೆರೆಯಿತು.

೫ ಹೋರಾಟ

ಮುಖಭಂಗಿತನಾಗಿ ಪೊರಟು ಹೋದ ಮಾಧವನಾಯಕನು ಸೋವಿದೇವನ ಮುದೆ ನಿಂತನು. ಶರಣರು ಶಸ್ತ್ರ ಹಿಡಿದಿದ್ದಾರೆಂಬದನ್ನು ಕೇಳಿ ತನ್ನ ತಂದೆಯು ಕೊಲೆ ಶರಣರ ಸೇಡಿನ ಕಾರಣದಿಂದಲೇ ಆಗಿರಬಹುದೆಂಬ ಸೋವಿದೇವನ ಸಂದೇಹ ಇನ್ನೂ ಬಲವಾಯಿತು. ಚೆನ್ನಬಸವಣ್ಣನ ಬಗೆಗಿದ್ದ ಅವನ ಆದರಭಾವ ಮಾಯುವಾಯಿತು. ಅದೇ ವೇಳೆಗೆ ಅವನ ಭಾವನಾದ ಯಲಬುರ್ಗಿಯ ಚಾವುಂಡರಾಯನು* ಮಾವನ ಮರಣವಾರ್ತೆಯನ್ನು ಕೇಳಿ ಕಲ್ಯಾಣಕ್ಕೆ ಬಂದಿದ್ದನು. ಸೋವಿದೇವನು ಶರಣರನ್ನು ನಿಗ್ರಹಿಸುವದಕ್ಕಾಗಿ ಅವನ ಅಧಿಪತ್ಯದಲ್ಲಿ ಒಂದು ಸೈನ್ಯವನ್ನು ಕಳಿಸಿದನು. ಈ ವಿಪತ್ಕಾರಕ ಸುದ್ದಿ ಸಂಗಮಕ್ಕೆ ಬಂದು ತಲುಪಿತು.

ಶರಣರು ಬೇಗನೆ ಬಿಡಾರವನ್ನು ಕಿತ್ತು ಸಹ್ಯದ ಕಡೆಗೆ ಹೊರಟರು. ಅಲ್ಲಿಂದ ಅವರ ದಳ ಮತ್ತಿಷ್ಟು ಬೆಳೆಯಿತು. ಶ್ರದ್ಧೆಯುಳ್ಳ ಸಾಮಂತ ರಭಟರು ಬಂದು ಕೂಡುತ್ತಿದ್ದರು. ಅವರು ವೇಗದಿಂದ ಪಯಣಮಾಡಿ ತೊರಗಲ್ಲ ಸೀಮೆಗೆ ಬಂದರು.

ನಾಗಮ್ಮನ ಭಾವ ಬದಲಾಗುತ್ತಿತ್ತು. ದುಷ್ಟ ಶಕ್ತಿಗಳನ್ನು ನಿಗ್ರಹಿಸುವ ವೀರವೃತ್ತಿ ತಲೆದೋರಿತ್ತು. ಅದನ್ನು ಕಂಡು ಗಂಗಮ್ಮನಲ್ಲಿಯೂ ಶರಣ ಧರ್ಮದ ರಕ್ಷಣೆಯ ಛಲ ತಲೆಯೆತ್ತಿತು. ಆಕೆಯ ಮನಸ್ಸು ಭಯರಹಿತವಾಗಿ ವೀರಭಾವ ತುಂಬಿತು. ಆಕೆ ನಾಗಮ್ಮನ ಬಲದೋಳಾದಳು. ಈ ತಾಯಿಗಳಿಂದ ಗಣಾಚಾರದ ನಾಯಕರ ಸ್ಫೂರ್ತಿ ಇಮ್ಮಡಿಸಿತು. ಚೆನ್ನಬಸವಣ್ಣನ ಷಟ್‌ಸ್ಥಲಧ್ವಜದ ಕೆಳಗೆ ಅವಿರತವಾಗಿ ಹೋರಾಡಿ ಅದನ್ನು ರಕ್ಷಿಸಲು ಕಂಕಣ ಬದ್ಧರಾದರು.

---

* ಬಿಜ್ಜಳನ ಅಳಿಯ, ಅಳಿಯ ಬಿಜ್ಜಳನೆಂದರೂ ಅವನೇ! ಬಿಜ್ಜಳನ ಮಗಳು ಸಿರಿಯಾದೇವಿಯ ಪತಿ! ಯಲಬುರ್ಗಿಯಲ್ಲಿ ಮಂಡಲಾಧಿಕಾರಿಯಾಗಿದ್ದನು.

ದಾರಿಯಲ್ಲಿ ಗ್ರಾಮಗಳ ಜನರು ಶರಣದಳದ ಸೇವೆಮಾಡುತ್ತಿದ್ದರು. ಎಡಬಲದ ಊರುಗಳಿಂದಲೂ ಧಾನ್ಯಾದಿ ಸಾಮಗ್ರಿಗಳು ಅವರ ಶಿಬಿರಕ್ಕೆ ಬರುತ್ತಿದ್ದವು. ಅರವತ್ತು ವರ್ಷದ ವೃದ್ಧ ಶಿವಯೋಗಿಣಿ ಅಜ್ಜಿ ನಾಗಮ್ಮ ಆ ಆ ಗ್ರಾಮಗಳಲ್ಲಿ ಸಂಚರಿಸುತ್ತ ಮಹಾಜನರನ್ನು ಕಾಣುತ್ತ, ಕೀಳುಕುಲದವರು ದೀನದರಿದ್ರರು ಮುಂತಾದ ಸರ್ವರ ಕಲ್ಯಾಣ ಸಾಧಿಸುವಂತೆ ಬಸವಣ್ಣ ಬೋಧಿಸಿದ ಸಹೋದರ ಭಾವದ, ಶರಣಧರ್ಮದ ಆಚಾರವಿಚಾರಗಳನ್ನೂ ಶಿವಭಕ್ತಿಯ ಮಹಿಮೆಯನ್ನೂ ತಿಳಿಸಿಹೇಳುತ್ತಿದ್ದಳು. ಆಕೆಯ ಸಚ್ಚಾರಿತ್ರ ಕೇಳಿದವರೂ ನೋಡಿದವರೂ ಅಲ್ಲಲ್ಲಿಗಿದ್ದರು. ಅವಳ ವ್ಯಕ್ತಿತ್ವದ ಪ್ರಭಾವವು ಜನರ ಮೇಲೆ ಸತ್ಪರಿಣಾಮವನ್ನುಂಟು ಮಾಡುತ್ತಿತ್ತು. ಮಂಡಲಾಧಿಕಾರಿಗಳು ಸಾಮಂತ ಮನ್ನೆಯರು ಧರ್ಮಾಭಿಮಾನಿಗಳು ಅನುಭಾವಿಗಳು, ಒಡೆದುಹೋದ ಕಲಚೂರಿ ಪ್ರಭುತ್ವವನ್ನು ಅಲಕ್ಷಿಸಿ ಶರಣರಿಗೆ ಸಹಾಯ ಮಾಡಲು ಮುಂದಾಗುತ್ತಿದ್ದರು. ಅದರಿಂದ ಜನಧನಗಳ ಸಹಾಯವಲ್ಲದೆ ಶಸ್ತ್ರಗಳ ಸಹಾಯ ಕೂಡ ಸಿಗುತ್ತಿತ್ತು. ನಾಗಜ್ಜಿಯ ಕರೆಗೆ ಓಗೊಟ್ಟು ಅಲ್ಲಲ್ಲಿಯ ಭಕ್ತಿವಂತ ಮಹಿಳೆಯರೂ ಕೂಡ ಬಂದು ಗಂಗಮ್ಮನ ನೇತೃತ್ವದಲ್ಲಿ ಪಾಳಯದ ಪಾಕಶಾಲೆಯ ಕೆಲಸಮಾಡಿ ದಳದ ಜನರ ಪ್ರಸಾದಕ್ಕೆ ನೆರವಾಗಿ ಮುಂದೆ ಕಳಿಸುತ್ತಿದ್ದರು.

ಕಡಕೋಳ, ಗೊಡಚಿ, ಸತ್ತಿಗೇರಿಗಳಲ್ಲಿ ಬೀಡಾರ ಮಾಡುತ್ತ ಶರಣರು ಸಾಗಿರುವಾಗ ತಮ್ಮ ಬೆನ್ನ ಮೇಲೆಯೇ ವಿರೋಧಿ ಸೇನೆಯು ಸಾಗಿಬಂದುದು ತಿಳಿಯಿತು. ತಾವೂ ಯುದ್ಧದ ಜೋಡಣೆ ಮಾಡಿಕೊಂಡು ರಕ್ಷಕ ದಳವನ್ನು ಹಿಂಬಿಟ್ಟುಕೊಂಡು ಉದ್ದೇಶಿತ ಸ್ಥಳಕ್ಕಾಗಿ ಮುಂದೆ ಪ್ರಯಾಣಿಸುತ್ತಲೇ ಇದ್ದರು. ಅವರಾಗಿಯೇ ಯುದ್ಧವನ್ನು ಬಯಸಿರಲಿಲ್ಲ. ಆದಾಗ್ಯೂ ಮೊದಲೂರೆಂಬಲ್ಲಿ ಇವರನ್ನು ಮುತ್ತಿದ ಅಳಿಯ ಬಿಜ್ಜಳ (ಚಾವುಂಡ) ನಿಗೂ ಇವರಿಗೂ ನಿಕರದ ಕಾಳಗವಾಯಿತು. ಇದರಲ್ಲಿ ಶರಣರಿಗೆ ಜಯವಾದರೂ ಅವರಲ್ಲಿಯ ಪಲವು ಜನ ಭಟರು ಮರಣಹೊಂದಿದರು. ಇದರಿಂದ ನಾಗಮ್ಮನಿಗೂ ಗಂಗಮ್ಮನಿಗೂ ಕದನದ ಕಣದಲ್ಲಿಯೇ ಬಂದು ಹೋರಾಡುವ ಕೆಚ್ಚು ಉಂಟಾಯಿತು. ಮುಂದೆ ನಡೆದ ತಲ್ಲೂರು (ತಲೆಯೂರು), ಮುರಗೋಡಗಳ ಕಾಳಗಗಳಲ್ಲಿ ಅವರು ಶಸ್ತ್ರಗಳನ್ನು ಧರಿಸಿದರು. ಹೋರಾಟ ನಡೆದಿರುವಾಗಲೂ

ರಣದಲ್ಲಿ ಸಂಚರಿಸಿ ಗಾಯಾಳುಗಳನ್ನು ಹಿಂದಕ್ಕೆ ಸಾಗಿಸಿ ತಂದು ಸ್ವತಃ ಉಪಚರಿಸುತ್ತಿದ್ದರು. ಮುಖದಲ್ಲಿ ಮಾತಿನಲ್ಲಿ ವೀರರಸ! ಹೃದಯದಲ್ಲಿ ದಯಾರಸ! ಆ ತಾಯಿಗಳ ಕೈಯ ಉಪಚಾರ ಪಡೆವ ಗಣಾಚಾರದ ಯೋಧರು ತಾವು ಧನ್ಯರೆಂದು ಭಾವಿಸುತ್ತ, ಗಾಯಕ್ಕೆ ಮದ್ದು-ಪಟ್ಟಿಗಳನ್ನು ಹಾಕು-ಹಾಕುವದರೊಳಗಾಗಿ ಎದ್ದು ವಿರೋಧಿಗಳನ್ನು ಎದುರಿಸಲು ಓಡುತ್ತಿದ್ದರು. ಎಂತಹ ಪ್ರೋತ್ಸಾಹನೆ! ಏನು ಧೈರ್ಯ! ವೈರಿಭಟರೂ ಅದನ್ನು ಕಂಡು ಲಜ್ಜೆಪಡುತ್ತಿದ್ದರು. ಈ ಎರಡು ಕಾಳಗಗಳಲ್ಲಿಯೂ ಶರಣರು ವಿರೋಧಿಗಳನ್ನು ಹಿಮ್ಮೆಟ್ಟಿಸಿ ರಕ್ಷಣೆ ಮಾಡಿಕೊಂಡರು.

ವಿಶೇಷ ಹೃದಯದ್ರಾವಕವಾದ ಮುರಗೋಡ ಕಾಳಗದ ಕೊನೆಯನ್ನು ಇಲ್ಲಿ ಸ್ವಲ್ಪ ವಿವರಿಸಬೇಕಾಗುತ್ತದೆ. ಚಾವುಂಡರಾಯನ ಸೈನಿಕರು ಶಕ್ತಿಗುಂದಿದ್ದರು. ಅವರಿಗೆ ಸೋಲು ಕಾಣಹತ್ತಿತ್ತು. ಅಂದು ದಿನವೆಲ್ಲ ನಾಗಮ್ಮ ಕಾದುವ ಭಟರ ಹಿಂಬದಿಯಲ್ಲಿ ಸಂಚರಿಸಿ ಎತ್ತು ಕುದುರೆ ಬಂಡಿಗಳ ಮೇಲೆ ಬರುವ ರೊಟ್ಟಿ ನೀರು ಶಸ್ತ್ರಗಳನ್ನು ಯೋಧರಿಗೆ ಅವರವರು ನಿಂತಲ್ಲಿಯೇ ಒದಗಿಸುತ್ತ ಅವೇ ವಾಹನಗಳಲ್ಲಿಯೇ ಗಾಯಾಳುಗಳನ್ನು ಹಿಂದಕ್ಕೆ ಸಾಗಿಸುತ್ತ ಒಂದುಕಡೆ ನಿಲ್ಲದೆ ಓಡಾಡಿದಳು. ಛಾವಣಿಯಲ್ಲಿ ಗಂಗಮ್ಮ ಹೆಣ್ಣು ಗಂಡು ಕೈಯಾಳುಗಳೊಡನೆ ಆಳತೆಮೀರಿ ಬರುವ ಗಾಯದವರನ್ನು ಮದ್ದುಹಾಕಿ ಗಂಜಿ ನೀರು ಕೊಟ್ಟು ಉಪಚರಿಸುತ್ತಿದ್ದಳು. ಅದರಲ್ಲಿ ವೈರಿದಳದ ಗಾಯಾಳು ಕೂಡ ಇರುತ್ತಿದ್ದರು. ನಾಗಮ್ಮನಾಗಲಿ ಗಂಗಮ್ಮನಾಗಲಿ ಆಗ ಕರುಣೆಯನ್ನಲ್ಲದೆ ವೈರವನ್ನು ತಳೆಯುತ್ತಿರಲಿಲ್ಲ. ಬೇಗಿನ ಹೊತ್ತಿಗೆ ಕಲಚೂರ್ಯದಳದ ಛಿದ್ರತೆ ಛಿದ್ರವಾಯಿತು. ಅವರು ಜೀವರಕ್ಷಣೆಗೆ ಕೈಲಾದಷ್ಟು ಹೋರಾಡುತ್ತ ಕಂಡ ಕಂಡ ಕಡೆಗೆ ತಂಡತಂಡವಾಗಿ ಹಿಂದೋಡಹತ್ತಿದರು. ಶರಣದಲವೂ ತಂಡತಂಡವಾಗಿ ಅವರನ್ನು ಬೆನ್ನಟ್ಟಿ ಬಡಿಯಿತು. ಹೀಗಾಗಿ ಹೋರಾಟವು ದಿನ್ನೆಗಳ ಓರೆಯಲ್ಲಿ ತಗ್ಗುಗಳಲ್ಲಿ ಹಳ್ಳಗಳಲ್ಲಿ ಹಲವುಕಡೆ ನಡೆಯಿತು. ಉಭಯತರು ಸಮದಂಡಿಯಲ್ಲಿ ಕಾದಿದ ಕಣದಲ್ಲಿ ಶವಗಳು ಗಾಯಗೊಂಡವರು ಮಾತ್ರ ಉಳಿದರು. ನರಳುವವರ ಸಂಖ್ಯೆ ಹೆಚ್ಚಾದ್ದರಿಂದ ಅವರನ್ನು ಅಲ್ಲಿಯೇ ಉಪಚರಿಸುವ ಯೋಚನೆ ನಾಗಮ್ಮನ ತಲೆಯಲ್ಲಿ ಉಂಟಾಗುತ್ತಿತ್ತು. ಅಷ್ಟರಲ್ಲಿ

ಎಡಬದಿಯ ತಗ್ಗಿನಲ್ಲಿ ಹರಹರಾಮಹಾದೇವ ಗರ್ಜನೆಯೊಡನೆ ಭೀಕರ ಚೀತ್ಕಾರ ಆಕ್ರಂದನೆಗಳೂ ತೂರಿಬಂದು ಕೇಳಿಸಿದವು. ನಾಗಮ್ಮ ಅತ್ತ ಧಾವಿಸಿದಳು, ಮರಡಿಮೇಲಿರುವಾಗಲೇ ನೋಡಿದಳು. ಕೆಲವೇ ಜನ ವೈರಿಭಟರನ್ನು ಅಯ್ಯಾ ಹೊಳೆಯ ಗಣಾಚಾರದ ಯೋಧರು ಸುತ್ತುಗಟ್ಟಿ ಆವೇಶದಿಂದ ಇರಿಯುತ್ತಿದ್ದರು. ವೈರಿಭಟರಲ್ಲಿ ಪೆಟ್ಟುತಿಂದು ಮೂರ್ಛಿತನಾದ ಚಾವುಂಡನಿದ್ದುದು ಈ ಆವೇಶಕ್ಕೆ ಕಾರಣವಾಗಿತ್ತು. ವೈರಿಗಳು ಇವರ ಇರಿತಗಳಿಗೆ ಚೀತ್ಕರಿಸುತ್ತಿದ್ದರು. ಇನ್ನೇನು ಆ ಇರಿತಗಳ ಭರದಲ್ಲಿ ಚಾವುಂಡನೂ ಅದಕ್ಕೆ ಗುರಿಯಾಗಿ—ಬಲಿಯಾಗಿ—ಅಳಿಯುವದು ಸ್ವಲ್ಪದರಲ್ಲಿತ್ತು. ಆಗ ನಾಗಮ್ಮ ಬರಬರುತ್ತಲೇ ನಡುವಿಗೆ ಸುತ್ತಿದ ಬಿಳಿಯ ಪಾವಡವನ್ನು ತನ್ನ ಖಡ್ಗದ ತುದಿಗೆ ಕಟ್ಟಿ ಎತ್ತಿ ಹಿಡಿದು 'ತಡೆಯಿರಿ, ತಡೆಯಿರಿ.' ಕೂಗಿದಳು. ತಗ್ಗಿಗಿಳಿದು ಓಡಿಬಂದಳು. ಶರಣಯೋಧರು ವೈರಿಗಳ ಸುತ್ತಲೂ ಆಯುಧಗಳನ್ನು ಮೊನೆಮುಂದೆ ಮಾಡಿ ಬೇಲಿಯಾಗಿ ಹಿಡಿದು ಸರಿದು ನಿಂತರು. ಅಕ್ಕನವರ ಆದೇಶಕ್ಕೆ ಯಾವ ಆವೇಶವೂ ಹಿಂದೆಗೆಯದಿರುತ್ತಿರಲಿಲ್ಲ. ವೈರಿಭಟರು ಕೂಡಬಿದ್ದಿರುವ ತಮ್ಮ ದಳಪತಿಯ ಒಂದೇ ಬದಿಗೆ ಸರಿದು ತಲೆತಗ್ಗಿಸಿ ನಿಂತರು. ನಾಗಮ್ಮ ನಡುವೆ ಬಂದಳು. ಚಾವುಂಡನ ಎದೆಮುಟ್ಟಿ ನೋಡಿದಳು. "ಪ್ರಾಣವಿದೆ, ಶಿವನ ಕರುಣೆ. ಕರೆದುಕೊಂಡು ಹೋಗಿರಿ, ನಿಮ್ಮ ನಾಯಕನನ್ನು" ಎಂದಳು. ಗಣಾಚಾರಿಗಳು ಸರಿದು ಅವರಿಗೆ ಮಾರ್ಗಮಾಡಿಕೊಟ್ಟರು. ಅವರು ಚಾವುಂಡನನ್ನು ಹೆಗಲೇರಿಸಿಕೊಂಡು ಹೋದರು. 'ಜಯ ನಾಗಲಾಂಬೆ, ಜಯ ಚೆನ್ನಬಸವ, ಹರಹರಮಹಾದೇವ' ಎಂದು ವೀರರು ಘೋಷಿಸಿ ತಲೆವಾಗಿಸಿದರು. ನಾಗಮ್ಮ ಪ್ರಸನ್ನ ವದನದಿಂದ ನೋಡಿ ಕೈಯೆತ್ತಿ ಆಶೀರ್ವದಿಸಿದಳು. ಎಲ್ಲರೂ ಮರಡಿಯನ್ನೇರಿದರು.

ಒಂದು ಕಡೆ ಹೋರಾಡುತ್ತಿದ್ದ ಮಾಚಯ್ಯ ಆ ಕೆಲಸ ಪೂರೈಸಿ ಮರಳುವಾಗ ನಾಗಮ್ಮ ಇತ್ತ ಧಾವಿಸುವದನ್ನು ನೋಡಿದ್ದನು. ಅವನು ಅವಸರದಿಂದ ಬರುತ್ತಿದ್ದನು. ಕಿನ್ನರಯ್ಯ ಚೆನ್ನಬಸವಣ್ಣ ಇವರೂ ಮರಳುತ್ತಿದ್ದರು. ಸೂರ್ಯ ಪಶ್ಚಿಮದಂಚನ್ನು ಸಮೀಪಿಸಿದ್ದನು. ರಣರಂಗದ ಮಧ್ಯದ ದಿನ್ನೆಯಲ್ಲಿ ಆ ನಾಯಕರು ಕೂಡಿದರು. ಶಾಂತಿಸಂಕೇತದ ಕಪಿಳೆಯನ್ನೂದಿ ಅಲ್ಲಲ್ಲಿ

ಬೆನ್ನಟ್ಟಿ ಹೋಗುತ್ತಿದ್ದ ತಮ್ಮ ಬಲ್ಲಾಳರನ್ನು ಮರಳಿ ಕರೆದರು. ಅವರು ಜಯಘೋಷಮಾಡುತ್ತ ಹಿಂದೆ ಬಂದು ದಳಬದ್ಧರಾದರು. ದೂರಿನ ದಿನ್ನೆಯ ಕಲಚೂರಿ ಶಿಬಿರದಲ್ಲಿ ಶ್ವೇತಧ್ವಜ ಹಾರಿದುದನ್ನು ಕಂಡು ತಾವೂ ಬಿಳಿಯ ಬಾವುಟವನ್ನೇರಿಸಿದರು. ಅವರ ನಾಲ್ಕು ಜನ ಇತ್ತ ಬರುವದನ್ನು ನೋಡಿ ಮಾಚಯ್ಯನೂ ಈ ಕಡೆಯಿಂದ ನಾಲ್ವರನ್ನು ಕಳಿಸಿದನು. ಅವರು ಮಧ್ಯದಲ್ಲಿ ಕೂಡಿ ಉಭಯತರು ತಮ್ಮತಮ್ಮ ಮೃತರ ದೇಹಗಳನ್ನೂ ಗಾಯಾಳುಗಳನ್ನೂ ತೆಗೆದುಕೊಂಡು ಹೋಗಲು ಗೊತ್ತುಮಾಡಿಕೊಂಡರು. ಆ ಕಾರ್ಯ ನಡೆಯಿತು. ಶರಣದಳದಲ್ಲಿಯೂ ನೂರುಗಟ್ಟಲೆ ಜನರು ಮೃತರಾಗಿದ್ದರು. ಚೆನ್ನಬಸವಣ್ಣನ ಅಂತರಂಗಕ್ಕೆ ನೋವಾಗಿತ್ತು. ಆದರೇನು? ಅನ್ಯಉಪಾಯವೇ ಇರಲಿಲ್ಲ. ಹಳ್ಳದ ಬದಿಯ ಮೃದು ಭೂಮಿಯಲ್ಲಿ ಮೃತರ ಸಮಾಧಿಮಾಡಿ ಶಿವನ ಸಂಕಲ್ಪವೆಂದು ಭಾವಿಸಿ ಶಿಬಿರಕ್ಕೆ ಬಂದು ವಿರಮಿಸಿದರು.

ಬೆಳಗಿನಲ್ಲಿ ಎಲ್ಲ ಪಾಳಯಗಳಿಂದ ಶರಣದಲ ಬಂದು ಕೂಡಿ ಕೆಂಗೆರೆಯಲ್ಲಿ ಆಯುಧಗಳನ್ನು ತೊಳೆದು ಕ್ರಿಯಾಚಾರಸಂಪನ್ನರಾಗಿ ಪ್ರಸಾದ ಪಡೆದರು. ಒಂದು ದಿನ ವೈರಿಗಳ ಚಟುವಟಿಕೆಗಳನ್ನು ನಿರೀಕ್ಷಿಸುತ್ತ ವಿಶ್ರಾಂತಿ ಪಡೆದರು.

೬ ರುದ್ರಮುನಿಗಳಾಗಮನ

ಚಾವುಂಡರಾಯನ ಅಭಿಮಾನಕ್ಕೆ ಪೆಟ್ಟಾಗಿತ್ತು. ಎರಡನೆಯದಿನ ಉಳಿದ ಬಲದೊಡನೆ ಪಾಳಯವನ್ನು ಕಿತ್ತು ಹತ್ತು ಗಾವುದ ಹಿಂದೆ ಸರಿದು, ಹೆಚ್ಚಿನ ಸೇನೆ ಕಳಿಸಲು ಸೋವಿದೇವನಿಗೆ ಹೇಳಿಕಳುಹಿ ಕೃಷ್ಣೆಯ ತೀರದಲ್ಲಿ ಬೀಡುಬಿಟ್ಟನು. ಆಗ ಶರಣರು ಮೂಗಬಸವದ ಕಡೆಗೆ ಸಾಗಿದ್ದರು. ವೈರಿಗಳು ತಮ್ಮ ಬೆನ್ನು ಬಿಟ್ಟಿಲ್ಲ, ಹೆಚ್ಚಿನ ಸನ್ನಾಹದಿಂದ ಮತ್ತೆ ಬರಲಿದ್ದಾರೆಂಬುದು ಶರಣದಲದ ನಾಯಕರಿಗೆ ಗೊತ್ತಾಯಿತು. ಆದರೆ ಅದಕ್ಕೆ ಕೆಲವು ದಿವಸ ಹಿಡಿಯಬಹುದು. ನಾಗಮ್ಮ, ಚೆನ್ನಬಸವಣ್ಣ, ಮಾಚಯ್ಯ ಪ್ರಮುಖರು ಆಲೋಚನೆಗೊಳಗಾದರು. ಈಗ ಅವರಿಗೆ ಎರಡು ಮಾರ್ಗಗಳು ಮಾತ್ರ ಉಳಿದಿದ್ದವು.

೧. ಈ ಮಧ್ಯಂತರದ ಅವಕಾಶದಲ್ಲಿ ಬೇಗ ಬೇಗ ಪ್ರಯಾಣಿಸಿ ಸಹ್ಯದ ಪಳವುಗಳನ್ನು ಪ್ರವೇಶಿಸಿ ತಮ್ಮ ರಕ್ಷಣೆಯನ್ನು ಮಾಡಿಕೊಳ್ಳುವದು. ಗ್ರಂಥ ಭಾಂಡಾರವು ಈ ಮೊದಲೇ ಅಲ್ಲಿಯ ಉಳಿವಿಗೆ ಸಾಗಿಸಲ್ಪಟ್ಟಿದ್ದಿತು.

೨. ಈ ಮಧ್ಯಂತರ ಅವಕಾಶದಲ್ಲಿ ಜನಧನ ಸಾಮುಗ್ರಿಗಳಿಂದ ಸೇನಾ ಬಲವನ್ನು ಹೆಚ್ಚಿಸಿಕೊಂಡು ಮೇಲೇರಿ ಬರುವ ಕಲಚೂರ್ಯ ದಳವನ್ನು ಸಂಪೂರ್ಣವಾಗಿ ಸೋಲಿಸಿ ನಿಷ್ಕಂಟಕವಾಗಿ ಪ್ರಯಾಣಮಾಡುವದು.

ಈ ವಿಚಾರದಲ್ಲಿ ಶರಣಧರ್ಮದ ಉಳಿವು ಅಳಿವುಗಳ ಸಮಸ್ಯೆಯೂ ಅಡಕವಾಗಿತ್ತು. ಚೆನ್ನಬಸವಣ್ಣ ಹಿಂಸೆಗೆ ನೊಂದವನಾಗಿದ್ದನು. 'ಹೇಗೂ ಗ್ರಂಥರಾಶಿ ಅರಣ್ಯ ಮಧ್ಯದ ಉಳಿವೆಯನ್ನು ಕಂಡಿದೆ. ತಾವೂ ಅಲ್ಲಿ ಹೋಗಿ ನೆಲಿಸಬೇಕು. ಗಹನಾರಣ್ಯದಲ್ಲಿ ವೈರಿಸೈನ್ಯ ಬರುವದು ಸುಲಭವಲ್ಲ.' ಎಂದು ಆತನ ವಿಚಾರ! ನಾಗಲಾಂಬೆ ಇದನ್ನೊಪ್ಪಲಿಲ್ಲ. 'ಇದರಿಂದ ತಾವು ಪಾರಾಗಿ ಉಳಿಯಬಹುದು. ಮಹಾಮಹಾ ಅನುಭಾವಿಗಳು ಅನುಭವದ ಒರೆಗೆ ಹಚ್ಚಿ ರೂಪಿಸಿದ—ಬಸವೇಶ ಅದರಂತೆ ಜೀವನದುದ್ದಕ್ಕೂ ಆಚರಿಸಿ ಸಿದ್ಧಾಂತಗೊಳಿಸಿದ —ಶರಣಧರ್ಮದ ಕೈ ಬಿಟ್ಟಂತಾಗುವದು. ವೈರಿಗಳು ಅರಣ್ಯದಲ್ಲಿ ಬರದಿದ್ದರೂ

ನಾಡಿನಲ್ಲಿ ಅಲ್ಲಲ್ಲಿ ನೆಲಿಸಿರುವ ಈ ಮತದ ಅನುಯಾಯಿಗಳನ್ನು ನಾಶಮಾಡದೆ ಬಿಡುವದಿಲ್ಲ. ಹೀಗೆ ತನ್ನನ್ನು ಕಾಪಾಡಿಕೊಳ್ಳದ ಸಮಾಜಧರ್ಮದ ಮೇಲೆ ಸಾಮಾನ್ಯರ ಶ್ರದ್ಧೆ ಉಳಿಯುವದಿಲ್ಲ. ಆದ್ದರಿಂದ ಈ ಧರ್ಮದವರಲ್ಲಿ ವೀರ ವೃತ್ತಿಯನ್ನುಂಟುಮಾಡಬೇಕು. ಭೀರುತ್ವವನ್ನು ಅಳಿಯಬೇಕು. ತತ್ವಘನತೆ ಯಲ್ಲಿ ಅಭಿಮಾನವಿಟ್ಟಿರುವ ಪಾಳಯಗಾರ ದೊರೆಗಳೂ ಮಂಡಲಾಧಿಕಾರಿಗಳೂ ನಮಗೆ ನೆರವಾಗುವರು. ಬಿಜ್ಜಳನ ರಾಜ್ಯಾಪಹಾರಕ್ಕೆ ಬಲಿಗೊಂಡ ಇವರೆಲ್ಲರು, ದುರ್ಬಲವಾಗುತ್ತಿರುವ ಕಲಚೂರ್ಯ ಆಧಿಪತ್ಯಕ್ಕೆ ನಿಷ್ಠರಾಗಿರುವದಿಲ್ಲ. ಸ್ವತಂತ್ರರಾಗಲು ಯತ್ನಿಸುತ್ತಿದ್ದಾರೆ. ಮೇಲೇರಿ ಬರುವ ಅನಿಷ್ಟ ಶಕ್ತಿಗಳನ್ನು ನಿಗ್ರಹಿಸುವಾಗ ಹಿಂಸೆ ಅನಿವಾರ್ಯ! ಮತ್ತೊಮ್ಮೆ ಇತ್ತ ಬಾರದಂತೆ ವೈರಿಬಲ ವನ್ನು ನಾವು ಒಮ್ಮೆ ಸೋಲಿಸಿ ಅಟ್ಟಬೇಕು. ಆಗಮಗಳಲ್ಲಿ ಹೇಳಿದ ಶೈವ ಪ್ರಭೇದದ ಹೆಸರೊಂದಾಗಿರುವ ವೀರಶೈವ ಎಂಬ ನಾಮವನ್ನು ವಿಶಾಲತತ್ವದ ಈ ಮತವು ಒಳಗೊಂಡಿದೆ. ಅದಕ್ಕೆ ಅನ್ವರ್ಥವಾಗುವಂತೆ ಆಚರಿಸಿ ಉಳಿದು ಬೆಳೆದು ಬಾಳಬೇಕು.' ಇದು ನಾಗಮ್ಮನ ವಿಚಾರ! ಮಾಚಯ್ಯನ ವೀರ ವೃತ್ತಿಗೆ ಇದೇ ಸರಿಯೆನಿಸಿತು. ಕಿನ್ನರಯ್ಯ, ರೇಚಯ್ಯ, ವೃದ್ಧ ಕಕ್ಕಯ್ಯ ಇವರೆಲ್ಲರು ಇದನ್ನೇ ಅನುಮೋದಿಸಿದರು. ಕೇವಲ ತತ್ವಪ್ರಧಾನಮೂರ್ತಿ ಚೆನ್ನಬಸವಣ್ಣನು ಸಮಾಜಧರ್ಮದ ನೀತಿಗೆ ತಲೆವಾಗಿ ಒಪ್ಪಿಕೊಂಡನು. ಅವ ರೆಲ್ಲರು ಆತ್ಮರಕ್ಷಣೆಗಿಂತ ಧರ್ಮರಕ್ಷಣೆಯನ್ನು ಮುಂದಿಟ್ಟುಕೊಂಡು ಹೋರಾ ಡುವ ನಿಶ್ಚಯಮಾಡಿದರು.

ಈ ಹೊತ್ತಿಗೆ ಮಲೆನಾಡಿನಲ್ಲಿ ಮುಂಗಾರು ರಭಸದಿಂದ ಸುರಿಯಲಾರಂಭಿ ಸಿತ್ತು. ಆಗ ಅರಣ್ಯಮಧ್ಯದಲ್ಲಿ ವಸಹಾತು ಮಾಡುವದೂ ಸಾಧ್ಯವಿರಲಿಲ್ಲ. ಹೇಗೂ ವಿರೋಧಿಗಳು ಹಿಂದೆ ಸರಿದದ್ದರಿಂದ ಮಳೆಗಾಲ ಮುಗಿಯುವ ವರೆಗೆ ಶರಣದಲವು ಬೆಳವಲದಂಚಿನ ನಾಡಿನಲ್ಲಿಯೇ ಕಳೆಯುವದಾಯಿತು. ತಮ್ಮ ಪಾಳಯುವನ್ನು ಒಂದೇ ಕಡೆಯಲ್ಲಿ ದೊಡ್ಡದಾಗಿರುವದರಿಂದ ಅನ್ನಸಾಮಗ್ರಿಗಳ ಪೂರೈಕೆ ಕಷ್ಟದಾಯಕವಾಗುವದೆಂದು ಶರಣನಾಯಕರು ನಾಲ್ಕು ಗಾವುದಂತರದ ವಲಯದಲ್ಲಿಯ ಹಲವು ಗ್ರಾಮಗಳಲ್ಲಿ ಪಾಳಯಗಳನ್ನಿಟ್ಟರು. ನಾಗಮ್ಮ, ಚೆನ್ನಬಸವಣ್ಣ ಮುಂತಾದ ಪ್ರಮುಖರಿರುವ ಪಾಳಯವು ಕೇಂದ್ರ ಶಿಬಿರ

ವಾಗಿದ್ದಿತು. ಆಯಾ ಪಾಳಯಗಳಲ್ಲಿ ಶರಣರು ತಂಡತಂಡವಾಗಿ ಶಾಂತಿಯಿಂದ ಶಿವಾನುಭವ ವಿಚಾರದಲ್ಲಿ ತೊಡಗಿದ್ದರು. ಎಲ್ಲ ಪಾಳಯಗಳ ನಾಯಕರು ಆಗಾಗ ಕೂಡಿ ಪರಿಸ್ಥಿತಿಯ ಪರಿಶೀಲನೆ ಮಾಡಿ ಮುಂದಿನ ಕಾರ್ಯಾಚರಣೆ ಯನ್ನು ನಿರ್ಧರಿಸುತ್ತಿದ್ದರು. ಚೆನ್ನಬಸವ ನಾಗಲಾಂಬೆಯರ ಬೋಧೆಗಳೂ ಸ್ವಯಾಚಾರ ಸಾಧನೆಗಳೂ ಸುತ್ತುಮುತ್ತಲಿನ ಜನರ ಮೇಲೆ ಒಳ್ಳೆಯ ಪರಿಣಾಮವನ್ನು ಬೀರುತ್ತಿದ್ದವು.

ನಾಗಮ್ಮನ ಸ್ವಾನುಭವ ಅರಳುತಲಿತ್ತು. ಯೋಗಸಾಧನೆಯ ಸೌಖ್ಯ ದಲ್ಲಿ ಕೊರತೆ ಇರಲಿಲ್ಲ. ಹೊರಗಿನ ಸಮಾಜಧರ್ಮದ ಪ್ರಜ್ಞೆಯೂ ಪೂರ್ಣ ವಾಗಿತ್ತು. ಯಾವಾಗ ಏನು ಮಾಡಿದರೂ ಅದರಲ್ಲಿಯೇ ಯೋಗ ಪಡೆಯುತ್ತಿ ದ್ದಳು. ಮಹಾಯೋಗಿಣಿ ಆ ಶಿವಯೋಗಿಣಿ! ಚೆನ್ನಬಸವಣ್ಣನಂತೂ ಸುಜ್ಞಾನ ದಾಗರ ಅವನ ಕೀರ್ತಿ ಆ ನಾಡಿಗೆ ಹೊಸದಲ್ಲ. ಆ ಸನ್ನಿಧಿಯ ದರ್ಶನ ಹೊಸದು. ಸಮೀಪದ ಅನುಭಾವಿಗಳೂ ರಾಜಕಾರಣಿಗಳೂ ಬಂದು ಹೋಗುತ್ತಿದ್ದರು. ಅನುಭಾವಿಗಳು ಆ ತಾಯಿ ಮಗನ ಪರಮಾನುಭಾವ ಪರಿಪೂರ್ಣತೆಯನ್ನು ಮೆಚ್ಚಿದ್ದರೆ, ರಾಜಕಾರಣಿಗಳು ನಾಗಮ್ಮನ ವ್ಯಾವಹಾರಿಕ ಪ್ರಸಂಗಾವಧಾನವನ್ನೂ ನಿಷ್ಕಪಟದ ಮುಂಧೋರಣೆಯನ್ನೂ ಮೆಚ್ಚಿದ್ದರು.

ಮೊದಲನೆಯ ಪ್ರಹರದ ಹೊತ್ತು. ಚೆನ್ನಬಸವಣ್ಣನು ಕರಣ ಹಸಿಗೆಯ ದ್ವಿತೀಯ ಪ್ರತಿಯನ್ನು ಪರಿಶೀಲಿಸುತ್ತ ಅದರ ಕೆಲಸಂದರ್ಭಗಳನ್ನು ಮಾಚಯ್ಯನೊಡನೆ ವಿವೇಚಿಸುತ್ತ ತನ್ನ ಚಿಕ್ಕ ಗೂಡಾರದಲ್ಲಿ ಕುಳಿತಿದ್ದನು. ಜಂಗಮರ ತಂಡವೊಂದು ದಿನ್ನೆಯಿಳಿದು ಬರುತ್ತಿದೆಯೆಂದು ಹೊರಗಿನವರು ಒಳಗೆ ಬಂದು ವರದಿಮಾಡಿದರು. ಕೂಡಲೆ ಅವರಿಬ್ಬರು ಹೊರಗೆ ಬಂದು, ನೋಡಿದರು. ಸನ್ಮಾನಿಸಿ ದಾರಿತೋರಿ ಕರೆತರಲು ರೇಚಯ್ಯನನ್ನು ಮುಂದಕ್ಕೆ ಕಳುಹಿ ತಾವು ನಿರೀಕ್ಷಿಸುತ್ತ ನಿಂತರು. ಹರಹರಮಹಾದೇವ ಎನ್ನುತ್ತ ಆ ಗುಂಪು ಸನಿಹಕ್ಕೆ ಬಂದಿತು. ಅಲ್ಲಿಂದಲೇ ಕುದುರೆಯಿಂದಿಳಿದು ರುದ್ರಮುನಿ ದೇವರು ಮುಂದೆ ಬಂದರು. ಮಾಚಯ್ಯನ ನೆರವಿನಿಂದ ಗುರ್ತಿಸಿದ ಚೆನ್ನ ಬಸವಣ್ಣನು ಕೈಮುಗಿದುಕೊಂಡು ಮುಂದೆ ಹೋದನು. ಅವರಿಬ್ಬರು ಪರ ಸ್ಪರ ವಂದಿಸಿದರು. ಮಾಚಯ್ಯನೂ ಶರಣು ಶರಣೆಂದು ಬಾಗಿದನು. ಆದರ ದಿಂದ ಬರಮಾಡಿಕೊಂಡು ಗೂಡಾರದೊಳಗೆ ಕರೆದೊಯ್ದರು.

ರುದ್ರಮುನಿದೇವರ ಉತ್ಸಾಹದ ವಾಣಿ ಹೊರಹೊಮ್ಮಿತು :

"ಚೆನ್ನಬಸವಣ್ಣನವರೇ ನಿಮ್ಮ ಮೇಲಾಗುತ್ತಿರುವ ದಾಳಿಯನ್ನೂ ನೀವು ಅದನ್ನು ಧೈರ್ಯ-ಶೌರ್ಯಗಳಿಂದ ಎದುರಿಸಿ ಹಿಮ್ಮೆಟ್ಟಿಸಿದುದನ್ನೂ ನಾವು ಸಂಚಾರದಲ್ಲಿಯೇ ಕೇಳಿದೆವು. ಧರ್ಮರಕ್ಷಣೆಗಾಗಿ ನೀವು ಹೋರಾಡುತ್ತಿರುವಾಗ ನನ್ನಿಂದಾಗುವ ಸೇವೆ ಸಲ್ಲಿಸಲು ನಾನಿತ್ತ ಬಂದೆನು."

"ಬಹಳ ಸಂತೋಷ ಬುದ್ಧಿ, ಧರ್ಮವು ಧರ್ಮಮಾರ್ಗದಿಂದಲೇ ರಕ್ಷಿಸಲ್ಪಡಬೇಕು. ಮುಂದಿನ ದಾರಿಯನ್ನು ತಾವು ತೋರಿಸಬೇಕು."

"ದಾರಿ ಸ್ಪಷ್ಟವಿದೆ. ಅದನ್ನೇ ನೀವು ಅನುಸರಿಸುತ್ತಿದ್ದೀರಿ, ಚೆನ್ನಬಸವಣ್ಣನವರೇ, ಚಿಂತಿಸಬೇಕಾಗಿಲ್ಲ; ಸಾಮಾನ್ಯರೇ ಈ ಮಾಚಯ್ಯನವರು! ಇಂತಹರಿದ್ದಾರಲ್ಲ. ಇವರು ಭಾವಬಲ್ಲಿದರಾದಂತೆ ಬಾಹುಬಲ್ಲಿದರೂ ಆಗಿದ್ದಾರೆ. ದ್ರೋಹಿಗಳ ಮೇಲೆ ಮಾಚಯ್ಯ ಖಡ್ಗವೆತ್ತಿದುದನ್ನು ಕಂಡವರು ವೀರಭದ್ರ ಹೀಗೆಯೇ ಇದ್ದಿರಬಹುದೆಂದು ತರ್ಕಿಸುತ್ತಾರಂತೆ. ಅವ್ವ ಎಲ್ಲಿ? ಅವರ ಹೆಸರು ಬಹಳವಾಗಿ ಬಹುದೂರ ಕೇಳಿಸುತ್ತಿದೆ."

"ಆಗಲೇ ಅರ್ಚನೆ ತೀರಿಸಿಕೊಂಡು ಅಡುಗೆಯ ಗೂಡಾರಕ್ಕೆ ಹೋಗಿದ್ದಾರೆ. ಪ್ರಸಾದವ್ಯವಸ್ಥೆ ನೋಡಿಕೊಳ್ಳುತ್ತಿದ್ದಾರೆ." ರೇಚಯ್ಯ ಹೇಳಿದನು.

"ಅಲ್ಲಿಯೇ ಹೋಗಿ ಕಾಣುವಾ, ಬನ್ನಿ."

ಎದ್ದು ನಡೆದರು ರುದ್ರಮುನಿಗಳು. ಕೆಳಗೆ ಮಾವಿನ ತೋಪಿನಲ್ಲಿತ್ತು ಪ್ರಸಾದದ ಛಾವಣಿ. ಚೆನ್ನಬಸವಣ್ಣ, ಮಾಚಯ್ಯ ಮುಂದಾಗಿ ನಡೆದರು. ಉತ್ಸಾಹ ಉಕ್ಕುವ ರುದ್ರಮುನಿಗಳು ಸುಮ್ಮನೆ ಸಾಗಿರಲಿಲ್ಲ :

"ನಾಗಮ್ಮನವರ ಜೀವನವೊಂದು ಮಹಾನದಿಯ ಪ್ರವಾಹ. ಅದು ಹರಿಯದ ಭೂಮಿಯಿಲ್ಲ; ತಣಿಸದ ಜನವಿಲ್ಲ. ಅದರ ಸಂಪರ್ಕದಿಂದ ಅಜ್ಞಾನದ ಮರುಭೂಮಿ ಸುಜ್ಞಾನದ ಫಲ ಬೆಳೆಯಿತು. ಕೊಳಚೆ-ಕಂಟಕಗಳು ಕೊಚ್ಚಿಹೋದವು. ಇನ್ನೂ ಸಾಗರ ಸೇರುವ ವರೆಗೆ ಈ ನದಿಯ ಉದಕದಿಂದ ಆತ್ಮತೃಪ್ತಿ ಪಡೆವವರದೆಷ್ಟು ಜನರೋ? ಕಲ್ಯಾಣದಿಂದ ಹೊರಬಿದ್ದ ಶರಣ-ಶರಣೆಯರು ಈ ತಾಯಿಯ ಕೀರ್ತಿಯನ್ನು ಹಾಡುತ್ತಿದ್ದಾರೆ. ನಾವು ನಿನ್ನೆಮೊನ್ನೆ

ಬರುವಾಗ ಈ ಭಾಗದ ಜನರು ಅಲ್ಲಲ್ಲಿ ನಮ್ಮನ್ನು ಬರಮಾಡಿಕೊಂಡು ಧರ್ಮ ರಕ್ಷಣೆಗಾಗಿ ತಮ್ಮ ಪಾಲನ್ನು ಸಲ್ಲಿಸುವ ಸಿದ್ಧತೆ ನಡೆಸಿದ್ದುದು ಕಂಡುಬಂದಿತು."

ಹೊರಗಿನ ದನಿ ಕೇಳಿ ಬಾಗಿಲಿಗೆ ಬಂದು ಕಂಡು, ನಾಗಮ್ಮ ಸಂತಸದಿಂದ ಮುಹಿಗೆ ಪೈಯಿಕ್ಕಿ ವಂದಿಸಿದಳು. ನೆಲಮುಟ್ಟಿ ಬಾಗಿ ಆ ತಾಯಿಯ ವಂದನೆ ಸ್ವೀಕರಿಸಿದರು ರುದ್ರಮುನಿದೇವರು.

"ಭಲಾ, ತಾಯಿ, ಚೆನ್ನಬಸವಣ್ಣನ ಷಟ್‌ಸ್ಥಲ ಧ್ವಜ ಬಿರುಗಾಳಿಗೆ ಸಿಲುಕಿತ್ತು. ನಿನ್ನ ಸುಭದ್ರ ಪವಿತ್ರ ಹಸ್ತವನ್ನು ಕೊಟ್ಟು ಕಾಪಾಡಿದೆ."

"ನಾನು ಅಬಲೆ ಸ್ವಾಮೀ, ಇವರೆಲ್ಲ ವೀರರು. ಅದರಲ್ಲಿ ನಿಷ್ಠೆ ತಾಳಿದವರಿದ್ದಾರೆ. ಆ ಗಾಳಿ ಇನ್ನೂ ಊದುತ್ತಿದೆ."

"ಊದಲಿ, ಅದರ ಯೋಚನೆಯನ್ನೆಲ್ಲ ನಾನು ಹೇಳುತ್ತೇನೆ. ಇನ್ನು ಚಿಂತೆ ಬೇಡಮ್ಮ!"

ಒಳಗೆ ಆ ಮಗ್ಗಲಿಗಿದ್ದ ಗಂಗಮ್ಮ ನೋಡಿ, ಅವಸರದಿಂದ ಬಂದು ಗುರುಚರಣದ ಮೇಲೆ ತಲೆಯಿಟ್ಟರು. ಕಣ್ಣೀರಿನ ಬಿಸಿ ತೊಟ್ಟುಗಳೆರಡು ಅವರ ಪಾದದ ಮೇಲೆ ಬಿದ್ದವು.

"ಏಳು ಮಗಳೇ, ಬಸವಣ್ಣನವರು ಬಯಲಾದುದಕ್ಕೆ ನೀನು ವ್ಯಥೆಗೊಂಡಿರುವದು ಸಹಜವದೆ. ನೀನವರ ಮೂರ್ತಿಯನ್ನು ನಿನ್ನಂತರಂಗದಲ್ಲಿ ನೋಡು; ಹೊರಗೆ ಹರಡಿದ ನಿನ್ನ ಪತಿಯ ಬೆಳಕನೋಡು. ತಗ್ಗುದಿನ್ನೆಯಾಗಿ ಬೆಳೆಬಾರದಂತಾಗಿರುವ ವೀರಶೈವದ ಹೊಲವನ್ನು, ಬಸವಣ್ಣನವರು ಸಮನಾಗಿಸಿ, ಮುಳ್ಳುಪೊದೆ, ಕಸಕಡ್ಡಿ, ಕಲ್ಲುಗುಡ್ಡೆಗಳನ್ನು ಕಿತ್ತು ತೆಗೆದು ನಿತ್ಯ-ಸತ್ಯಶಾಂತಿಯ ಫಲಕೊಡುವ, ಸದ್ಭಕ್ತಿ-ಸದಾಚಾರ-ಸೇವೆ ಕಾಯಕ-ದಾಸೋಹಗಳ ಬೆಳೆ ಬಿತ್ತಿದ್ದಾರೆ. ಆ ಬೆಳೆಯನ್ನು ನಾವೆಲ್ಲ ಕಾಪಾಡಿಕೊಳ್ಳಬೇಕು. ಅದರಲ್ಲಿ ನೀನೀಗಾಗಲೇ ಪಾಲುಗೊಂಡು ಈ ಹಿರಿಯಪ್ಪೆಯೊಡನೆ ಮುಂದುವರಿದಿರುವೆ. ಅನುಭಾವಿಗಳ ಮಹತ್ವ ಆಪತ್ತಿನಲ್ಲಿ ಗೊತ್ತಾಗುವದು. ಇತ್ತೀಚಿನ ನಿಮ್ಮ ಸಂಕಟಗಳಲ್ಲಿ ನೀವು ತಾಳಿದ ನಿಲವಿನಿಂದ ನಿಮ್ಮೆಲ್ಲರ ಹೆಸರು ಬಹುದೂರ ಕೇಳುತ್ತವೆ. ನೀನು ಕರ್ತವ್ಯದ ಸಮ್ಮುಖದಲ್ಲಿರುವೆ. ದುಃಖಿಸಬೇಡ ಗಂಗಮ್ಮ ತಾಯೀ."

"ಆಗಲಿ ಅಪ್ಪಾ! ನಿಮ್ಮ ಸೂಚನೆ ಶಿರಸಾವಹಾನ್ಯ!"

ಬಾಲ್ಯದಲ್ಲಿ ಗಂಗಾಂಬೆ ತಂದೆಯೊಡನೆ ಸಂಗಮದಲ್ಲಿ ಲಿಂಗಧಾರಣಮಾಡಿ ಕೊಂಡಿದ್ದಳು. ಕಲ್ಯಾಣದಲ್ಲಿ ಮದುವೆಯ ಮೊದಲು ರುದ್ರಮುನಿಗಳಿಂದ ಅನುಗ್ರಹಿತಳಾಗಿ ಜ್ಞಾನೋಪದೇಶ ಪಡೆದಿದ್ದಳು. ಅವರು ಜ್ಞಾನ ಗುರುಗಳಾಗಿದ್ದರು.

ಮಾಚಯ್ಯ ಮುಂದೆ ಬಂದು ಹೇಳಿದನು:

"ದೇವರು, ಪ್ರಯಾಣದ ಆಯಾಸವಾಗಿದೆ ತಮಗೆ. ತಮ್ಮ ಸ್ನಾನದ ವ್ಯವಸ್ಥೆಯಾಗುತ್ತಿದೆ. ಗಣಂಗಳನ್ನೆಲ್ಲ ಸ್ನಾನಕ್ಕೆ ಕಳಿಸಿದ್ದೇನೆ. ಅರ್ಚನೆ-ಅರ್ಪಿತ ಳಾಗಿ ಸ್ವಲ್ಪ ವಿಶ್ರಾಂತಿಗೊಳ್ಳುವದಾಗಬೇಕು. ಆಮೇಲೆ ಸದ್ಯದ ಸಮಸ್ಯೆಯ ಪರಿಹಾರಕ್ಕೆ ಸಾವಧಾನವಾಗಿ ಸರಿಯಾಗಿ ಆಲೋಚಿಸಬೇಕಾಗಿದೆ."

"ಸರಿ ಹಾಗೆ ಆಗಲಿ" ರುದ್ರಮುನಿಗಳು ತಮ್ಮ ಸಾಮಾನುಗಳತ್ತ ನಡೆ ದರು ಚೆನ್ನಬಸವಣ್ಣನೊಡನೆ. ಗಂಗಮ್ಮ ಪೂಜಾಸ್ಥಳದಲ್ಲಿ ಸಲಕರಣೆಗಳ ಜೋಡಣೆ ಮಾಡಿದಳು. ನಾಗಮ್ಮ ಪಾಕಶಾಲೆಯ ಕೆಲಸ ಜಾಗ್ರತಗೊಳಿಸಿದಳು.

೭ ಕಾದರವಳ್ಳಿಯ ಕಾಳಗ

ಬೇಗಿನ ಹೊತ್ತಿನಲ್ಲಿ ಮುಂದಿನ ಗೂಡಾರದಲ್ಲಿ ಶರಣಪ್ರಮುಖರು ಸೇರಿದ್ದರು. ಪರಿಸ್ಥಿತಿಯ ವಿವೇಚನೆ ನಡೆದಿತ್ತು. ಚೆನ್ನಬಸವಣ್ಣನ ಪ್ರಶ್ನೆ:

"ಯುದ್ಧವು ಧರ್ಮಸಮ್ಮತವೇ ? ಮತಾಚರಣೆಗೆ ಇದು ಅನಿವಾರ್ಯವಾದ ವಿಧಾನವೇ ?"

"ಸಾಮಾನ್ಯವಾಗಿ ಸಮ್ಮತವಾದುದಲ್ಲ; ಅಗತ್ಯ ವಿಧಾನವೂ ಅಲ್ಲ. ಕೊನೆಯ ಪಕ್ಷಕ್ಕೆ ಧರ್ಮಸಮ್ಮತವಾಗುವದು. ಧರ್ಮವು ದೇಶಕಾಲ ಪರಿಸ್ಥಿತಿಯನ್ನು ಅನುಸರಿಸಿ ಬದಲಾಗುವದು. ಯಾಕೆ ಅಮ್ಮನವರೇ ನೀವು ಹೇಳಿರಿ."

ರುದ್ರಮುನಿಗಳು ನಾಗಮ್ಮನವರನ್ನು ಕೇಳಿದರು.

"ಹೌದು ದೇವರು, ಮತಾಚರಣೆಗೆ ಮೂರು ವಿಧಾನಗಳು: ಅದರ ನೈತಿಕ, ತಾತ್ವಿಕ ವಿಧಾನಗಳು ನಿತ್ಯವಾದವುಗಳು. ಅವು ದರ್ಶನ ಸ್ವರೂಪ; ಬದಲಾಗಬಾರದು. ಮೂರನೆಯದಾದ ಧಾರ್ಮಿಕ ವಿಧಾನವು ಕಾಲಪರಿಸ್ಥಿತಿಗೆ ಅಧೀನವಾಗಿ ಹೊಂದಿಕೊಳ್ಳುತ್ತ ಸಾಗಿ ನೈತಿಕ ತಾತ್ವಿಕ ವಿಧಾನಗಳಿಗೆ ರಕ್ಷಣೆ ನೀಡಬೇಕು. ಇದನ್ನೇನು ಚೆನ್ನಬಸವಣ್ಣ ಅರಿಯರೆ? ಅವರು ಜೀವ ಹಿಂಸೆಗೆ ರೋಷಿಕೊಂಡಿದ್ದಾರೆ. ರಕ್ಷಣೆ ಈಗ ಅಗತ್ಯವಾಗಿದೆ."

"ಅದೇ ಮುಖ್ಯ! ವಿರೋಧಿಗಳು ಒಮ್ಮೆ ಈ ನಿಮ್ಮ ದಳವನ್ನು ಸದೆಬಡಿದು ಚದುರಿಸಿದರೆಂದರೆ ತೀರಿತು ಕಟ್ಟೊಡೆಯಿತು! ದೇಶದಲ್ಲಿಯ ಲಿಂಗವಂತರ ಮಠಗಳು ಸಂಸ್ಥೆಗಳು ಅಲ್ಲಲ್ಲಿಯ ವಿರೋಧಿಗಳ ಉಪಟಳದಿಂದ ನಾಶವಾಗಿ ಬಿಡುವವು. ಬಸವಣ್ಣನವರು ಬಹುಮುಖದಿಂದ ಸ್ಥಾಪಿಸಿದ ಸಮಾನತೆ ಹಾಳಾಗಿ ಹೋಗುವದು; ಸಮಾಜಶೋಷಣೆ ಮತ್ತೆ ನಡೆಯುವದು. ನಿರಂತರ ಹಿಂಸೆಯನ್ನು ತಡೆಯುವದಕ್ಕಾಗಿ ಕೊನೆಗೆ ತಾತ್ಕಾಲಿಕ ಹಿಂಸೆ ಅಗತ್ಯ, ಅದು ಕ್ಷಮ್ಯ! ಇವರ ಹೊರತು ಹಿಂಸೆ ಇಲ್ಲಿ ಯಾರಿಗೆ ಸೇರುತ್ತದೆ? ರಕ್ತರಂಜನೆ ಯಾರಿಗೆ ಬೇಕಾಗಿದೆ ?"

ಚೆನ್ನಬಸವಣ್ಣನವರು ರುದ್ರಮುನಿಗಳ ತೀಕ್ಷ್ಣದೃಷ್ಟಿಯನ್ನು ಎದುರಿಸ ದಾದರು. ತತ್ವಸಿದ್ಧಾಂತ ಮುಖ್ಯ! ಅದರ ರಕ್ಷಣೆಗೆ ಯುದ್ಧ ಅನಿವಾರ್ಯ ವಾದರೆ ಆಗಲಿ!' ಎನ್ನತೊಡಗಿತ್ತವನ ಮನಸ್ಸು.

"ನಮ್ಮ ಈ ಹೋರಾಟಕ್ಕೆ ಲೋಕಾಭಿಪ್ರಾಯ ಅನುಕೂಲವಾಗಿದೆಯೇ ಸ್ವಾಮೀ?" ತಮ್ಮವರ ಎದೆಗಟ್ಟಿಗೊಳಿಸುವದಕ್ಕೆ ನಾಗಮ್ಮ ಬೇಕಂತೆ ಕೇಳಿದಳಿದನ್ನು.

"ಓಹೋ ಅನುಕೂಲವಿಷ್ಟೇ ಅಲ್ಲ, ವಿಪುಲ ಸಹಾಯವೂ ಸಲ್ಲಲಿದೆ. ಬಸ ವಣ್ಣನವರ ಆರ್ಥಿಕ ಮತ್ತು ಸಾಮಾಜಿಕ-ನೂತನ ವ್ಯವಸ್ಥೆಗೆ ಮೆಚ್ಚಿದ ಮಾಂಡ ಲಿಕರು-ಸಾಮಂತರು ಕಲ್ಯಾಣದ ಅಧಿಪತ್ಯಕ್ಕೆ ಅಂಕಿತರಾಗಿದ್ದರು. ಬಿಜ್ಜಳನು ಸ್ವಾರ್ಥಿಗಳ ಸಹಾಯ ಪಡೆದು ಚಾಲುಕ್ಯಸಿಂಹಾಸನವನ್ನು ಅಪಹರಿಸಿದ್ದರಿಂದ ಅಸಹ್ಯಪಟ್ಟ ಇವರೆಲ್ಲರು ಸ್ವತಂತ್ರರಾಗಲು ಯತ್ನಿಸಿ, ಸೋವಿದೇವನ ಅಧಿಕಾರ ವನ್ನು ನಿರಾಕರಿಸುತ್ತಿದ್ದಾರೆ. ನೂತನ ಸಮಾಜ ಧರ್ಮವನ್ನು ರಕ್ಷಿಸುವದಕ್ಕಲ್ಲದೆ ಸೋವಿದೇವನ ಬಲವನ್ನು ಮುರಿಯುವದಕ್ಕೂ ಅವರೆಲ್ಲರು ನಿಮಗೆ ಸಹಾಯ ಮಾಡುವದೆಂದು ನಿಶ್ಚಯಿಸಿದ್ದಾರೆ.

ನಾಗಮ್ಮ ಕೃತಜ್ಞತೆಯಿಂದ ನುಡಿದಳು:

"ಧರ್ಮರಕ್ಷಣೆಗೆ ಜನರಲ್ಲಿ ಉಂಟಾದ ಈ ಹುಮ್ಮಸು ತಮ್ಮ ಉಪ ದೇಶದ ಪರಿಣಾಮವೂ ಆಗಿರಬಹುದು. ಸೌದತ್ತಿಯ ರಟ್ಟದೊರೆಗಳು ಐವತ್ತು ಬಂಡಿಗಳಲ್ಲಿ ಧಾನ್ಯಗಳನ್ನು ಹೇರಿ ಕಳಿಸಿದ್ದಾರೆ. ಸಂಪದ್ಗ್ರಾಮದ ಒಡೆಯರು ತಮ್ಮ ಕಣಜಗಳನ್ನು ನಮ್ಮ ದಲದವರಿಗೆ ಮುಕ್ತದ್ವಾರವಿಟ್ಟಿದ್ದಾರೆ. ಪಲಾ ಸಿಕಾ ನಂದಿಗಡ ಕಂಪಣಗಳ ಅಧಿಪತಿಗಳು ಭತ್ತ ಕುಟ್ಟಿಸಿ ಸಾಕಷ್ಟು ಅಕ್ಕಿಯನ್ನೇ ಹೇರಿ ಕಳಿಸಿದ್ದಾರೆ."

"ಸಹಜವದೆ ನಾಗಮ್ಮನವರೆ, ಇವರಿಗೆ ಹಾಗೆ ಗೋವೆಯ ಕದಂಬರ ಕೇಶಿ ರಾಜರ ಆಜ್ಞೆಯಾಗಿದೆ. ಕೇಶಿರಾಜರ ತಂದೆ ಶಿವಚಿತ್ತರಾಜರು ಬಸವಣ್ಣನವರ ಭಕ್ತರು ಮಿತ್ರರೂ ಆಗಿದ್ದರು. ಬಿಜ್ಜಳನ ರಾಜ್ಯದಾಹವನ್ನು ಎದುರಿಸಿದ ಸಾಮಂತರಲ್ಲಿ ಅವರೇ ಮೊದಲಿಗರು."

"ನಮ್ಮ ಗ್ರಂಥಭಾಂಡಾರವು ಜಯಕೇಶಿರಾಜರ ರಕ್ಷಣೆಯಲ್ಲಿಯೇ ಸುರಕ್ಷಿತವಾಗಿದೆ" ಚೆನ್ನಬಸವಣ್ಣನೆಂದನು.

"ಉಳಿವೆಯ ವಸಹಾತಕ್ಕೆ ಅವರೇ ಮುಖ್ಯಾಧಾರ" ಮಾಚಯ್ಯ ಹೇಳಿದನು. ಉತ್ಸಾಹದಿಂದ ಮಾತು ಮುಂದುವರಿಸಿದರು ರುದ್ರಮುನಿಗಳು.

"ಕರವೀರಪುರ, ಕರ್ಹಾಡಗಳ ಶಿಲಾಹಾರ ರಾಜರು ತಮ್ಮ ತಲೆಯ ಮೇಲೆ ಕಲಚೂರ್ಯ ಪ್ರಭುತ್ವವನ್ನು ಒಪ್ಪುವ ಸಂಭವ ಹೇಗೆ? ಅವರೂ ಅದನ್ನು ನಿರಾಕರಿಸಿ ಸ್ವಾತಂತ್ರ್ಯವನ್ನು ಘೋಷಿಸಿದ್ದಾರೆ. ಕರ್ಹಾಡದ ವಿಜಯಾರ್ಕನು ಚಾಲುಕ್ಯ ಮಹಾರಾಣಿಯಾಗಿದ್ದ ತಮ್ಮ ತಂಗಿಯ ಅಪಚಾರ ಮಾಡಿದ ಬಿಜ್ಜಳನ ಮೇಲೆ ಕ್ರೋಧಸಂತಪ್ತನಾಗಿದ್ದನು. ಅವನ ತರುಣ ಪುತ್ರ ರವಿದೇವನು ನಿಮ್ಮೊಡನೆ ಕೂಡಿ ಸೋವಿದೇವನ ಬಲವನ್ನು ಮುರಿಯಲು ಆತುರನಾಗಿದ್ದಾನೆ. ಇನ್ನು ಸೊವಿದೇವನ ಸೈನ್ಯವು ಸೊನ್ನಲಾಪುರವನ್ನು ದಾಟಿ ಬರುವದನ್ನು ಯಾವ ಮಾಂಡಲೀಕನೂ ಸಹಿಸುವದಿಲ್ಲ. ಕ್ರಾಂತಿಯ ಪರಿಣಾಮವಾಗಿ ನೀವೀಗ ಸೋವಿದೇವನ ರಾಜ್ಯದಲ್ಲಿಲ್ಲ. ನೀವು ಈ ಪ್ರದೇಶದಲ್ಲಿ ಬೇಕಾದ ಹಾಗೆ ಸಂಚರಿಸಬಹುದು. ಮತಪ್ರಚಾರ ನಡಿಸಬಹುದು. ಶ್ರಾವಣವನ್ನು ಮುಗಿಸಿ ಮಲೆಯಲ್ಲಿ ಮಳೆ ಕಡಿಮೆಯಾದ ಬಳಿಕ ಅಲ್ಲಿ ವಸಹಾತು ಮಾಡಲಿಕ್ಕೂ ತೆರಳಬಹುದು."

"ಚಾವುಂಡರಾಯನು ಮತ್ತೆ ಬರುವದು ನಿಶ್ಚಿತವಿದೆ ಸ್ವಾಮೀ"—ಮಾಚಯ್ಯ ಎಂದನು.

"ನಿಶ್ಚಿತವೇ ಇರಲಿ. ನೀವೂ ಯುದ್ಧಜೋಡಣೆಯನ್ನು ಕಾಯ್ದುಕೊಂಡಿರ್ರಿ. ಇದುವರೆಗೆ ಹೇಳಿದ ಸಹಾಯ ಸಿಗುವಂತೆ ನಾನೂ ನೊಡಿಕೊಳ್ಳುವೆ."

ಮುಂದೆ ಮಾತು ಚೆನ್ನಬಸವಣ್ಣನ ಮುಂದಿರುವ ಕರಣಹಸಿಗೆಯ ವಿಷಯದ ಕಡೆಗೆ ಹೊರಳಿದವು.

ರುದ್ರಮುನಿಗಳು ನಾಲ್ಕು ದಿನ ಮಾಚಯ್ಯ ಮೊದಲಾದವರೊಂದಿಗೆ ಶಿರುಗಾಡಿ ಮೂಗಬಸವ, ಹುಣಸೀಕಟ್ಟಿ, ತುರಮುರಿ, ಹಿಂಚಲ, ಸಂಪಗಾಂವಿ,

ಮುರರೇಭಾವಿ, ನಂದೀಹಳ್ಳಿ, ಚಿವುಟಗುಂಡಿ ಗ್ರಾಮಗಳಲ್ಲಿಯ ಎಲ್ಲ ಪಾಳಯಗಳನ್ನು ನೋಡಿಕೊಂಡು ಬಂದರು. ಆಗ ಅಲ್ಲಲ್ಲಿ ಧಾರ್ಮಿಕ ಕರ್ತವ್ಯದರಿವನ್ನೂ ಅದರಿಂದ ಲೋಕಾನುರಾಗ ಉಂಟಾದುದನ್ನೂ ವಿವರಿಸಿ, ಧೈರ್ಯವನ್ನು ಗಣಾಚಾರದ ಯೋಧರಲ್ಲಿ ಮೂಡಿಸಿದರು. ನಾಯಕರ ಸಂದೇಹ ಸಮಸ್ಯೆಗಳಿಗೆ ಪರಿಹಾರ ನೀಡಿದರು. ಹುಣಸೀಕಟ್ಟಿ ಪಾಳಯದ ಹತ್ತಿರ ಅನುಕೂಲ ಸ್ಥಳ ಕಂಡದ್ದರಿಂದ ತಮ್ಮ ಜಪಾನುಷ್ಠಾನಗಳು ಅಲ್ಲಿ ನಡೆಯಬೇಕೆಂದು ನಿರ್ಣಯಿಸಿಕೊಂಡರು. ಇದರಿಂದ ಆ ಭಾಗದಲ್ಲಿಯೂ ಜಾಗ್ರತೆ ಭದ್ರತೆ ಉಂಟಾಗಲು ಸಹಾಯವಾಯಿತು. ಆ ಸ್ಥಳದಲ್ಲಿಯ ರುದ್ರಮುನಿ ಗವಿಯು ಅದಕ್ಕೆ ನಿದರ್ಶನವಾಗಿ ಈಗಲೂ ಉಳಿದಿದೆ.

ಶ್ರಾವಣಮಾಸದ ಗಣಪರ್ವಗಳಿಗೆ ನಾಗಮ್ಮ, ಚೆನ್ನಬಸವಣ್ಣ, ಮಾಚಯ್ಯ ಇವರಿಗೆ ಎಡೆಬಿಡದೆ ಬಿನ್ನಹ ಬರುತ್ತಿದ್ದವು. ಅವರ ಅನುಭಾವದ ವಾಣಿಯನ್ನು ಕೇಳಲು ಆತುರರಾಗಿ ಜನ ಕಾದಿರುತ್ತಿದ್ದರು. ನಾಗಮ್ಮ ಹೋದಲ್ಲೆಲ್ಲ ನಾಡಿನ ಸ್ತ್ರೀಯರು ಧರ್ಮಾಚಾರದಲ್ಲಿ ಹಿಂದುಳಿದುದನ್ನೇ ವಿವೇಚಿಸಿ, ಜಾಗ್ರತೆಗೊಳಿಸಿ ನೀತಿತತ್ವಗಳನ್ನು ಉಪದೇಶಿಸಿ ಅವರ ಮನ ತಣಿಯುವಂತೆ ಮಾಡುತ್ತಿದ್ದಳು. ಅದರಿಂದ ಸ್ಫೂರ್ತಿಗೊಂಡ ಸ್ತ್ರೀಯರು ಪುರುಷರ ಭಕ್ತಿಕ್ರಿಯೆಗಳಿಗೆ ಪೂರಕವಾಗಿ ನಿಲ್ಲುತ್ತಿದ್ದರು. ನಾಗಲಾಂಬೆಯ ಪ್ರಭಾವವು ಆ ಪ್ರದೇಶದಲ್ಲಿ ತುಂಬಾ ಮೂಡಿತು. ಆಕೆಯ ಮುಖ್ಯ ಶಿಬಿರವಿದ್ದ ಸ್ಥಳದಲ್ಲಿ ನಾಗಲಾಪುರ ಎಂಬ ಗ್ರಾಮವಾಗಿ ಅಲ್ಲಿ ನಾಗಲಾಂಬೆಯ ಮೂರ್ತಿಯು ಸ್ಥಾಪಿಸಲ್ಪಟ್ಟಿದೆ.* ಆ ಗುಡಿಯ ಹತ್ತಿರ ಚೆನ್ನಬಸವನ ಗುಡಿಯೂ ಇದೆ.

ಶ್ರಾವಣ ಕಳೆದು ಮಳೆ ಕಡಿಮೆಯಾಯಿತು. ಕೊನೆಯ ಸಲ ಬಿಜ್ಜಳನ ಅಳಿಯ ಚಾವುಂಡನು ದೊಡ್ಡ ಸೇನೆಯನ್ನು ಪಡೆದು ಶರಣರನ್ನು ಸದೆಬಡಿ

---

* ಗುಡಿಯಲ್ಲಿಯ ನಾಗಲಾಂಬೆಯ ಮೂರ್ತಿಯು ಎರಡು ಫೂಟು ಎತ್ತರವದೆ. ಅದಕ್ಕೆ ಇಳಿಬಿಟ್ಟ ತಲೆಗೂದಲು ಭುಜದ ಮೇಲೆ ಪಸರಿಸಿವೆ. ಕೊರಳಲ್ಲಿ ಲಿಂಗ, ರುದ್ರಾಕ್ಷಿ ಮಾಲೆಗಳೂ ಕೈಯಲ್ಲಿ ಜಪಮಾಲೆಯೂ ಇದು ಶಿವಯೋಗಿಣಿಯ ಸಲ್ಲಕ್ಷಣವಿದೆ.

ಯಲು ಹೊರಟನು. ಆದರೆ ಕಲಚೂರಿ ಒಡೆತನಕ್ಕೆ ವಿರೋಧಿಗಳಾದ ಮಂಡ ಲಾಧಿಪತಿಗಳು ಸಾಮಂತರಾಜರು ಶರಣರಿಗೆ ಸಹಾಯ ಮಾಡಿ ಚಾವುಂಡ ರಾಯನ ಸೈನ್ಯವನ್ನು ನಾಶಮಾಡಲು ಅತುರರಾಗಿ ಕುಳಿತಿದ್ದರು. ಕಾತರವಳ್ಳಿ (ಕಾದರವಳ್ಳಿ) ಯಲ್ಲಿ ಕಡುತರವಾದ ಕಾಳಗವೆಸಗಿತು. (ಕ್ರಿ. ಶ. ೧೧೬೮)

ಈ ಕಾಳಗದಲ್ಲಿ ಮಾಚಯ್ಯ ಕಿನ್ನರಿ ಬೊಮ್ಮಯ್ಯರು ತಮ್ಮ ಯುದ್ಧ ಚಾತುರ್ಯವನ್ನು ತುಂಬಾ ಉಪಯೋಗಿಸಿದರು. ಸಹಾಯಕ ಸೇನಾನಾಯ ಕರೂ ಕಲಿತನದಿಂದ ಕಾದಿದರು. ನಾಗಮ್ಮ, ಎಲ್ಲಿ ಶಕ್ತಿಗುಂದಿದೆ? ಎಲ್ಲಿ ಶಸ್ತ್ರ ಬೇಕು? ಎಲ್ಲಿ ಹಸಿವೆ? ಎಲ್ಲಿ ನೀರು ಬೇಕು? ಎನ್ನುತ್ತ ಅವೆಲ್ಲವನ್ನು ಒದಗಿಸುತ್ತ, ಗಾಯಗೊಂಡವರನ್ನು ಹಿಂದೆ ಸಾಗಿಸುತ್ತ ಮಿಂಚಿನಂತೆ ರಣದಲ್ಲಿ ಸಂಚರಿಸುತ್ತಿದ್ದಳು. ಕಾವಿಯ ಸೀರೆಯ ವೀರಕಾಸೆ-ಖಡ್ಗಗಳನ್ನೂ ಭಸ್ಮ-ರುದ್ರಾಕ್ಷಿಗಳನ್ನೂ ಏಕಕಾಲದಲ್ಲಿ ಧರಿಸಿದ, ಇಳಿಬಿಟ್ಟ ಬಿಳಿಯ ತಲೆಗೂದಲಿನ ಎತ್ತರ ನಿಲುವಿನ ಚಾಪುಗಾಲಿನ ಅರವತ್ತು ವಯದ ನಾಗಮ್ಮನವರನ್ನು, ಆ ಯುದ್ಧದಲ್ಲಿ ಬದುಕಿ ಉಳಿದವರು ತಮ್ಮ ಜೀವಮಾನದಲ್ಲೆಲ್ಲ ಎಳೆಯರಿಗೆ ವರ್ಣಿಸಿ ಹೇಳುತ್ತಿದ್ದರು. ಗಂಗಮ್ಮನು ಹಿಂದಿನ ಕಾಳಗದ ಅನುಭವದ ಹಿನ್ನೆಲೆ ಯಲ್ಲಿ ಹೊಣೆಹೊತ್ತು ನಿಂತಿದ್ದಳು.

ಮೂರು ಮಗ್ಗಲಿನ ಹೊಡೆತ ತಾಳದೆ ಕಲಚೂರ್ಯ ಸೇನೆ ಕಂಗೆಟ್ಟಿತು. ಹಿಂದಕ್ಕೆ ಹೋಗುವ ದಾರಿಗಳೂ ಕಟ್ಟಲ್ಪಟ್ಟಿದ್ದವು. ನಾಶವೊಂದೇ ಹಾದಿ. ಚಾವುಂಡರಾಯನು ಸೋತು ಮಡಿದನು. ಕರ್ಹಾಡದ ತರುಣ ವೀರ ರವಿ ದೇವನ ಖಡ್ಗಪ್ರಹಾರಕ್ಕೆ ಬಲಿಯಾಗಿದ್ದನು. ಅಳಿದುಳಿದವರು ಶಸ್ತ್ರವಿಟ್ಟು ಜೀವದಾನ ಪಡೆದರು. ಹಲವರು ಅತ್ತಿತ್ತ ನುಸುಳಿ ಓಡಿಯೂ ಹೋದರು. ಶರಣದಳಗಳು ಸಮರಾಂಗಣದಿಂದ ಚೆನ್ನಬಸವೇಶ್ವರನನ್ನು ಪಲ್ಲಕ್ಕಿಯನ್ನೇರಿಸಿ ಕೊಂಡು ಬಂದು ತಮ್ಮ ಪಾಳಯಗಳಲ್ಲೆಲ್ಲ ಮೆರವಣಿಗೆ ಮಾಡಿದರು. (ಈ ವಿಜಯೋತ್ಸವದ ಕುರುಹಾಗಿರುವ ಶಿಲೆಯು ಈಗ ಹುಣಸೀಕಟ್ಟಿಯ ಶಾಲೆ ಯಲ್ಲಿದೆ.) ನಾಗಮ್ಮನಿಗೆ ಆಗಂತುಕವಾಗಿ ಆಗಮಿಸಿದ ವೀರಾವೇಶವು ಇಲ್ಲಿಗೆ ಶಮನಗೊಂಡಿತ್ತು.

ಆಮೇಲೆ ಸೋವಿದೇವನು ಶರಣರ ಗೋಜಿಗೆ ಬರುವದನ್ನು ಬಿಟ್ಟು ಬಿಟ್ಟನು. ಅದರೊಡನೆ ರಾಜ್ಯದ ಈ ಭಾಗದ ಆಸೆಯನ್ನೂ ಬಿಟ್ಟನು. ಅಷ್ಟ ರಲ್ಲಿ ಅವನ ತಂದೆಯ ಕೊಲೆಯ ನಿಜವಾದ ಕಾರಣದ ಸುಳಿವೂ ಅವನಿಗೆ ಹತ್ತಿದ್ದಿತು.

ಉಳಿವೆಯಲ್ಲಿ

ಮತ್ತು

ಎಣ್ಣೆ ಹೊಳೆಯಲ್ಲಿ

೧ ಮಲೆನಾಡ ಮಹಮನೆ

ಕುರಗೋಡದಲ್ಲಿ ಶರಣರ ಮಹಾಪರ್ವ ನಡೆಯಿತು. ಅಲ್ಲಿ ಎಲ್ಲರೂ ಭವಿಷತ್ಕಾಲದ ತಮ್ಮ ತಮ್ಮ ನೆಲೆಗಳನ್ನು ನಿರ್ಧರಿಸಿಕೊಂಡರು. ರಕ್ಷಣೆಗೆ ಬಂದ ದೂರದ ರಾಜಸೈನಿಕರನ್ನೂ ಗಣಾಚಾರದ ದಳದವರನ್ನೂ ಅಲ್ಲಿಂದಲೇ ಸನ್ಮಾನಿಸಿ ಬೀಳ್ಕೊಟ್ಟರು. ಸಮೀಪದ ಪ್ರದೇಶದ ದಳಗಳು ಮಾತ್ರ ಉಳಿವೆಯ ವರೆಗೆ ಉಳಿಯುವದು ಗೊತ್ತಾಯಿತು. ಮುಂದಿನ ಪ್ರಯಾಣದ ರಕ್ಷಣೆಯ ನಾಯಕತ್ವವನ್ನು ಕಿನ್ನರಿ ಬೊಮ್ಮಯ್ಯನು ವಹಿಸಿಕೊಂಡದ್ದರಿಂದ ಮಾಚಯ್ಯನು ಸ್ವಸ್ಥಳವಾದ ಹಿಪ್ಪರಗಿಗೆ ಹೊರಟನು.

ಆ ಪ್ರದೇಶದ ಭಕ್ತರ ಆಗ್ರಹದಂತೆ, ರುದ್ರಮುನಿಗಳ ಆದೇಶದಂತೆ, ನಾಗಮ್ಮನ ಸಲಹೆಯಂತೆ ಗಂಗಮ್ಮನು ಸಂಗಯ್ಯನ ಪಾಲನೆ-ವಿದ್ಯಾಭ್ಯಾಸಗಳ ನಿರ್ವಹಣೆಗಾಗಿ (ಮುಗುಟಖಾನ) ಹುಬ್ಬಳ್ಳಿಯ ಹತ್ತಿರ ಮಲಪ್ರಭೆಯ ತೀರದಲ್ಲಿ ನೆಲಿಸಿ ನಿಂತಳು. ಹಿರಿಯ ಅನುಭಾವಿಗಳೂ ತತ್ವಜ್ಞಾನದಲ್ಲಿ ಆಸಕ್ತಿಯುಳ್ಳ ಸಾಧಕರೂ ಉಳಿವೆಗೆ ಹೊರಟರು. ಉಳಿದ ಹಲಕೆಲವರು ಅಲ್ಲಿಂದಲೇ ಬೇರೆ ಬೇರೆ ಕಡೆಗೆ ಹರಿದು ಹೋಗಿ ಆತ್ಮೋದ್ಧಾರ ಭಕ್ತೋದ್ಧಾರಗಳನ್ನು ಕೈಕೊಂಡರು. ಕಾಲಾಂತರದಲ್ಲಿ ಲಿಂಗೈಕ್ಯಳಾದ ಗಂಗಮ್ಮನ ಸಮಾಧಿಯ ಮೇಲಿನ 'ಗಂಗಮ್ಮನ ಗುಡಿ' ಮುಗುಟಖಾನ ಹುಬ್ಬಳ್ಳಿಯಲ್ಲಿದೆ. ಬಸವೇಶ ನೀಲಾಂಬೆ ಗಂಗಾಂಬೆಯರ ಸಮಾಧಿಗಳನ್ನು ಕೃಷ್ಣೆ-ಮಲಾಪಹಾರಿಣಿಯರು ಹೀಗೆ ಸೂತ್ರ ಬಂಧಗೊಳಿಸಿದುದು ಒಂದು ವಿಶೇಷವೇ ಆಯಿತು.

ಗೋವೆಯ ಕದಂಬ ಜಯಕೇಶಿರಾಜನು ಬಂದು ಚೆನ್ನಬಸವಣ್ಣನನ್ನು ಕಂಡು ನಾಗಮ್ಮನವರನ್ನು ಅಭಿವಂದಿಸಿ, ಒಂದು ದಿನ ನಿಂತು ಎಲ್ಲ ಏರ್ಪಾಡು ನೋಡಿಕೊಂಡು, ಕುರುಗೋಡಿನಿಂದ ಉಳಿವೆಯ ವರೆಗಿನ ಶರಣರ ಪ್ರಯಾಣಕ್ಕೆ ಹೆಚ್ಚಿನ ಸರಂಜಾಮು-ಸೌಕರ್ಯಗಳನ್ನು ಒದಗಿಸಿದನು.

ಶರಣರು ಮುಂದೆ ಎರಡು ಗುಂಪುಗಳಾಗಿ ಉಳಿವೆಗೆ ಹೊರಟರು. ಒಂದು ಗುಂಪಿನವರು ಬೀಡಿ, ಹಲಸಿಗೆ, ಕಕ್ಕೇರಿ, ಲಿಂಗನಮಠ, ಜಂಗಮಹಟ್ಟಿ ಇವು

ಗಳಲ್ಲಿ ಬೀಡಾರ ಮಾಡುತ್ತ ಸಾಗಿದರು. ಇಲ್ಲೆಲ್ಲ ಆ ಬಗೆಗೆ ಕುರುಹುಗಳೂ ದೇವಸ್ಥಾನಗಳೂ ಉಂಟಾಗಿವೆ. ಶರಣ ಕಕ್ಕಯ್ಯನು ಕಕ್ಕೇರಿಯಲ್ಲಿ ಮಡಿದುದರಿಂದ ಅಲ್ಲಿ ಅವನ ಸಮಾಧಿಯಾಗಿದೆ. ಅಲ್ಲಿಂದ ಗಹನಾರಣ್ಯವನ್ನು ಪ್ರವೇಶಿಸಿ ಜಗಳಬೆಟ್ಟ ಸಾಂಬ್ರಾಣಿಗಳಿಗೆ ಬಂದರು. ಅಲ್ಲಲ್ಲಿ ಇರುವ ಸನಾತನಿಗಳ ಸಂಪ್ರದಾಯಗಳಿಗೂ, ಬೇಡರು ಮುಂತಾದ ಕಾಡು ಜನರ ಮೂಢ ರೂಢಿಗಳಿಗೂ ತೀರ ಭಿನ್ನವಾಗಿರುವ ಶರಣಧರ್ಮದ ಕ್ರಾಂತಿಕಾರಕ ಆಚಾರವಿಚಾರಗಳು ಆ ಆ ಜನರಿಗೆ ಅರ್ಥವಾಗದೆ ಅವರು ಭಯಗ್ರಸ್ತರಾದರು. ಹೀಗೆ ಶರಣಧರ್ಮದ ಪ್ರಭಾವಕ್ಕೆ ಕರುಬಿದ್ದ ಪರಮತ-ಪಂಗಡಗಳೂ ಅಂತಹ ಪಾಳಯಗಾರ ನಾಯಕರುಗಳೂ ಈ ದಳಕ್ಕೆ ಉಪದ್ರವ ಕೊಟ್ಟರು. ಸಾಂಬ್ರಾಣಿಯಲ್ಲಿ ಇಂತಹ ಒಂದು ಪ್ರಸಂಗವನ್ನು ಎದುರಿಸಿ ಪಾರಾಗಬೇಕಾಯಿತು. ಈ ಹೋರಾಟದಲ್ಲಿ ಕಿನ್ನರಿ ಬೊಮ್ಮಯ್ಯನ ಶೌರ್ಯವು ಜಯಪಡೆಯಿತು. ಮುಂದೆ ನಾಲ್ಕು ಗಾವುದ ಪ್ರಯಾಣಮಾಡಿ ಎಲ್ಲಾಪುರಕ್ಕೆ ಬಂದರು.

ಎರಡನೆಯ ಗುಂಪಿನವರು ಕಿತ್ತೂರು, ರಣಗಟ್ಟಿ, ನರೇಂದ್ರ, ಧಾರವಾಡ, ಸತ್ತೂರು, ಅಮರಗೋಳ, ಉಣಕಲ್ಲು ಮಾರ್ಗವಾಗಿ ಮಲೆನಾಡು ಪ್ರವೇಶಿಸಿ ನಾಗರಕೊಪ್ಪ, ಗಂಜೀಗಟ್ಟಿ, ತಂಬೂರವರೆಗೆ ಬಂದು ಅಲ್ಲಿ ಕೆಲವು ದಿವಸ ತಂಗಿದ್ದರು. ಈ ಸ್ಥಳಗಳಲ್ಲೆಲ್ಲ ಈ ಬಗೆಗೆ ಕುರುಹುಗಳಿವೆ, ಗುಡಿಗಳಿವೆ. ತಂಬೂರಲ್ಲಿ ಅದರ ಸುತ್ತಲಿನ ಪ್ರದೇಶದಲ್ಲಿ ಅವು ವಿಶೇಷವಾಗಿವೆ. ಈ ತಂಡದವರಿಗೂ ಅಲ್ಲಲ್ಲಿ ಪರವಾದಿಗಳಿಂದ ವಾದಪ್ರಸಂಗಗಳೂ ಪ್ರತಿಭಟನೆಗಳೂ ಉಪದ್ರವ-ದಾಳಿಗಳೂ ಎದುರಾದವು. ಅವುಗಳನ್ನೆಲ್ಲ ಪಾಂಡಿತ್ಯ-ಬುದ್ಧಿ-ಶೌರ್ಯಗಳಿಂದ ನಿವಾರಿಸಿಕೊಳ್ಳುತ್ತ ಎಲ್ಲಾಪುರಕ್ಕೆ ಬಂದು ಮೊದಲಿನ ತಂಡವನ್ನು ಕೂಡಿದರು.

ಮುಂದೆ ಉನ್ನತವಾದ ಗಿಡಮರಗಳಿಂದ ಪರ್ವತಶ್ರೇಣಿಗಳಿಂದ ನದಿಯ ಕೊಳ್ಳಗಳಿಂದ ದುರ್ಗಮವಾದ ಮಾರ್ಗದಲ್ಲಿ ಬಹುಪ್ರಯಾಸದಿಂದ ಪ್ರಯಾಣ ಮಾಡಿ ಉಳಿವೆಯನ್ನು ಸೇರಿದರು.

ಶರಣರ ಉಳಿವೆಯ ವಸಹಾತು ಯಾತ್ರೆಯು ದೇಶದಲ್ಲೆಲ್ಲ ಹರಡಿದ ಮಹತ್ವದ ಸಮಾಚಾರವಾಗಿತ್ತು. ಅವರು ಕಲ್ಯಾಣದಿಂದ ಹೊರಟು ಒಮ್ಮೆಲೇ ನೇರವಾಗಿ ಬಂದಿರದೆ, ದಾರಿಯಲ್ಲಿ ಅಲ್ಲಲ್ಲಿ ತಂಗುತ್ತ ಲೋಕಸಂಗ್ರಹ ಪಡೆದು

ವಿರೋಧಿಗಳನ್ನು ಎದುರಿಸಿ ರಕ್ಷಣೆ ಮಾಡಿಕೊಳ್ಳುತ್ತ, ಧರ್ಮಪ್ರಚಾರ ಮಾಡುತ್ತ, ಕಷ್ಟಪರಿಹಾರಕ್ಕಾಗಿ ಅತ್ತಿತ್ತ ಹರಿದಾಡುತ್ತ ಅಗಲವಾದ ಪ್ರವಾಹ ವಾಗಿ ಉಳಿವೆಯನ್ನು ಸೇರಿದ್ದರು. ವಿಶೇಷ ಕಾಲಾವಧಿಯೂ ಹಿಡಿದಿತ್ತು. ಸುದ್ದಿ ಸುತ್ತಲೂ ಹಬ್ಬಲು ಇವೆಲ್ಲ ಕಾರಣವಾಗಿದ್ದವು. ಗ್ರಂಥರಾಶಿ ಮೊದಲೇ ಬಂದುದರಿಂದ ಮಲೆನಾಡ ಕೊಳ್ಳಗಳಲ್ಲಿ ಚೆನ್ನಬಸವಣ್ಣನು ಬರುವನೆಂಬ ಮಾತು ಆಗಲೇ ಕೇಳಬರುತ್ತಿತ್ತು. ಅಲ್ಲಿ ಗುಹೆ-ಗಂಹರಗಳಲ್ಲಿ ರಮ್ಯ ಪ್ರದೇಶಗಳಲ್ಲಿ ಸಾಧಕರಾಗಿ ವಾಸಿಸುತ್ತಿರುವ ಯತಿಗಳು - ಸನ್ಯಾಸಿಗಳು - ಸಂಯಮಿಗಳು, ಸುಜ್ಞಾನಿ-ಮಹಾಯೋಗಿ ಚೆನ್ನಬಸವಣ್ಣನ ದಾರಿಯನ್ನು ನೋಡುತ್ತಿದ್ದರು. ಆತ್ಮತೃಷೆಯಿಂದ ಮೊದಲೇ ಉಳಿವೆಗೆ ಬಂದವರು ಹಲವರಿದ್ದರು.

ಶರಣರು ಕೂಡಲೆ ಎರಡು ಕಾರ್ಯ ಕೈಕೊಳ್ಳಬೇಕಾಯಿತು. ಅರಣ್ಯ ಮಧ್ಯದ ಗುಡ್ಡುಗಾಡು ಪ್ರದೇಶವನ್ನು ನೂರಾರು ಜನರು ವಾಸಿಸಲು ಅನು ಕೂಲವಾಗುವಂತೆ ಸರಿಪಡಿಸಿಕೊಳ್ಳುವದೊಂದು. ತತ್ವಜಿಜ್ಞಾಸುಗಳ ಬರವಿ ನಿಂದಾಗಿ ಅನುಭವಗೋಷ್ಠಿಯನ್ನು ಏರ್ಪಡಿಸಬೇಕಾದುದೊಂದು. ಕಿನ್ನರಿ ಬೊಮ್ಮಯ್ಯನು ಗುಡ್ಡರ ಪಡೆಯನ್ನು ಬರಮಾಡಿಕೊಂಡು ಕಾಡು ಕಡಿದು ನೆಲ ಮಾಡಿ, ಹುಲ್ಲುಮನೆಗಳನ್ನು ನಿರ್ಮಿಸಿದನು. ಗುಹಾಂತರ್ಭಾಗಗಳನ್ನು ಹಸ ನಾಗಿಸಿ ತಗ್ಗುಮಿಟ್ಟೆಗಳನ್ನು ಸಮನಾಗಿಸಿದನು. ಅವೆಲ್ಲ ವಾಸಕ್ಕೂ ಯೋಗಾ ಭ್ಯಾಸಗಳಿಗೂ ಅನುಕೂಲವಾದವು. ಚೆನ್ನಬಸವಣ್ಣನು ಇನ್ನುಳಿದ ಅನುಭಾವಿ ಗಳು ತತ್ವವಿವೇಚನೆ, ಬೋಧೆ, ಸಾಧನೆಗಳನ್ನು ಕೈಕೊಂಡರು. ನಾಗಮ್ಮನು ಈ ಎರಡೂ ಕಡೆಯ ಕಾರ್ಯಕಲಾಪಗಳಲ್ಲಿ ತೊಡಗಿಕೊಳ್ಳುವದು ಅನಿವಾರ್ಯ ವಾಯಿತು. ಅತಿಥಿ ಸತ್ಕಾರ ದಾಸೋಹಗಳೊಡನೆ ತನ್ನ ಯೋಗಸಾಧನೆ ನಡಿ ಸುವದೂ ಇದ್ದದ್ದೇ! ಇವೆಲ್ಲವುಗಳನ್ನು ಎಡೆಬಿಡದೆ ನಡಿಸಿ ಮೈಯುಂಡವಳೇ ಆಗಿದ್ದಳು ನಾಗಮ್ಮ!

ಯೋಗಸಾಧಕರು ಚೆನ್ನಬಸವಣ್ಣನನ್ನು ಮೊದಲು ಮುತ್ತಿದರು. ಅವರು ಯೋಗದ ವಿವಿಧ ಪ್ರಕಾರಗಳನ್ನು ಅನುಸರಿಸಿದವರಾಗಿದ್ದರು. ಅವರೆಲ್ಲ ರಿಗೆ ಶಿವಯೋಗದ ಮಹತಿಯನ್ನು ಚೆನ್ನಬಸವಣ್ಣನು ಮನಗಾಣಿಸಬೇಕಾಗಿತ್ತು.

ಶಿವಯೋಗವನ್ನು ಅವಲಂಬಿಸಿದರೆ ಮಂತ್ರ, ಹಠ ಮೊದಲಾದ ಉಳಿದ ಯೋಗಗಳ ಮೇಲೆ ಕೈಯೂರಬೇಕಾಗಿಲ್ಲ. ಅವುಗಳನ್ನು ಅಂಶತಃ ಒಳಗೊಂಡ ಶಿವಯೋಗವು ಭಕ್ತಿಯ ಆಧಾರದಲ್ಲಿ ಸುಲಭವಾಗಿ-ಸಹಜವಾಗಿ ಸಾಮರಸ್ಯಕ್ಕೆ ಅವಕಾಶವನ್ನು ಒದಗಿಸುತ್ತದೆ. ರಾಜಯೋಗದ ದೃಷ್ಟಿಯೋಗಸಿದ್ಧಿಯನ್ನು ಶಿವಯೋಗಿಯು ಕರದಿಷ್ಟಲಿಂಗದಲ್ಲಿ ಸಾಧಿಸಿ ಮುಂದುವರಿಯುವನು. ಅಲ್ಲಿಂದ ಪ್ರಾಣಲಿಂಗಿಯಾಗಿ ಭಾವೈಕ್ಯವನ್ನು ಪಡೆಯುವನು. ಲಿಂಗಾಂಗ ಸಾಮರಸ್ಯ ಸುಖವನ್ನು ಅನುಭವಿಸುವನು. ಈ ಸಿದ್ಧಿಗೆ ಷಟ್‌ಸ್ಥಲವು ಸಾಧನಮಾರ್ಗವು. ಶಿವಭಕ್ತಿ, ಶಿವಮಂತ್ರ,ಶಿವಧ್ಯಾನ, ಶಿವಜ್ಞಾನಗಳನ್ನೊಳಗೊಂಡ ಶಿವಪೂಜೆಯು ಸಾಧನ. ಅದರಲ್ಲಿ ಪ್ರಾಣಲಿಂಗಿಯ ಘಟ್ಟವು ಬಹಳ ಮಹತ್ವದ್ದು. ಅಲ್ಲಿಗೆ ಬಂದವರು ಲಿಂಗಾಂಗಸಂಯೋಗ ಹೊಂದುವದು ಕಠಿಣವಲ್ಲ. ಶಿವಭಕ್ತಿ-ಕ್ರಿಯಾ-ಜ್ಞಾನ ಸಮನ್ವಯಗೊಂಡು ಅಂತರಂಗವು ಪಾರದರ್ಶಕವಾಗಿ—ಒಳಗೆ ಹೊರಗೆ ಒಂದಾಗಿ—ಉಂಟಾಗುವ ಸಾಮರಸ್ಯದಿಂದ ಲಿಂಗ-ಅಂಗ, ಪೂಜ್ಯ-ಪೂಜಕ ಇತ್ಯಾದಿ ದ್ವಂದ್ವಗಳು ಅಳಿದು ಒಂದಾಗಿ ಅದುವೆ ಪರಶಿವನಾಗುವದು. ಇದು ಶಿವಶರಣರ ಶಿವಯೋಗದ ರಹಸ್ಯ ಎಂಬದನ್ನು ಶಾಸ್ತ್ರಾಗಮಗಳಿಂದ ಅನುಭವದ ವಾಣಿಯಿಂದ, ಆತ್ಮ-ದೇಹ-ಪ್ರಾಣ-ಮನಸ್ಸುಗಳ ಪರಸ್ಪರ ಸಂಬಂಧದ ವಿವರಣೆ ಮಾಡುವದರಿಂದ ವಿವರಿಸಿ ಅವರಿಗೆ ಒಪ್ಪಿಗೆಯಾಗುವಂತೆ ಚೆನ್ನಬಸವಣ್ಣ ಮಾಡುತ್ತಿದ್ದನು. ಇದರಿಂದ ಅನುಭವಗೋಷ್ಠಿಯ ಕಾರ್ಯ ಮತ್ತೆ ಮುಂದುವರಿಯಿತು.

೨ ಮುತ್ತಿನ ಚಿಪ್ಪು

ನಾಗಮ್ಮನಿಗೆ ವಿಶ್ರಾಂತಿಯಿಲ್ಲ. ಆಕೆಯ ಕ್ರಿಯಾಜ್ಞಾನಗಳು ಒಂದರೊಳಗೊಂದು ಬೆರೆತು ಪ್ರವಹಿಸುತ್ತಿದ್ದವು. ಆ ಓಘದಲ್ಲಿ ಶರೀರವು ಬಿಡುವಿಲ್ಲದೆ ಸಂಚಲಿಸಬೇಕಾಗಿತ್ತು. ಕಿನ್ನರ ಬೊಮ್ಮಯ್ಯನ ಗುಡ್ಡರ ಕೆಲಸದ ಕಡೆಗೆ ಹೋಗಲು ಗುಹೆಯ ಹೊರಗೆಬ ಂದಾಗ ಬೊಮ್ಮಯ್ಯನೇ ಎದುರಿಗೆ ಬರುತ್ತಿದ್ದನು. ಅವನ ಹಿಂದೆ ಸ್ವಲ್ಪ ಅಂತರದಲ್ಲಿ ನಾಲ್ಕು ಜನ ಅಶ್ವಭಟರ ಮಧ್ಯದಲ್ಲಿ ಸಿಂಗರಿಸಿದ ದೊಡ್ಡ ಎತ್ತು ಹೂಡಿದ ಬಂಡಿಯೊಂದು ಬರುತ್ತಿತ್ತು. ನಾಗಮ್ಮ ದಿಟ್ಟಿಸಿ ನೋಡುತ್ತಿರಲು ಬೊಮ್ಮಯ್ಯ ಕೈಮುಗಿದು ಹೇಳಿದ.

"ಅಮ್ಮಾ, ಕೊಳ್ಳದ ದಾರೀ ಹಿಡಿದು ಬರುವ ಈ ಜನರನ್ನು ಕಂಡು, ಮುಂದಕ್ಕೆ ಹೋಗಿ ತಿಳಿದು ಕರೆದುಕೊಂಡು ಬಂದೆನು. ಸೂಪಕಂಪಣದ ವೃದ್ಧ ರಾಣಿಯರಿಬ್ಬರು ತಮ್ಮ ದರ್ಶನಕ್ಕೆ ಬಂದಿದ್ದಾರೆ. ಕಾದರವಳ್ಳಿಯಲ್ಲಿ ನಮ್ಮ ನೆರವಿಗೆ ಬಂದಿದ್ದ ಕದಂಬ ದಳದ ದಳಪತಿ ರಾಜಪ್ಪ ಇವರ ದತ್ತಪುತ್ರ. ಈ ಕುದುರೆಯ ಭಟರೂ ಅಲ್ಲಿ ಬಂದವರೇ ಇದ್ದಾರೆ."

ನಾಗಮ್ಮ ಆನಂದಾಶ್ಚರ್ಯಗಳಿಂದ ಕಲ್ಲುಪಡೆಗಳನ್ನಿಳಿದು ಬೀದಿಗೆ ಬಂದಳು. ಅಷ್ಟರಲ್ಲಿ ಸ್ವಲ್ಪದೂರದಿಂದಲೇ ಗುರ್ತಿಸಿದ ಅಶ್ವಭಟರು ಬಂಡಿಯನ್ನು ಅಲ್ಲಿಯೇ ನಿಲ್ಲಿಸಿ ಹಿಂಬದಿಗೆ ಹೋಗಿ ತಿಳಿಸಿ, ಅದರೊಳಗಿಂದ ಇಬ್ಬರು ಶ್ರೀಮಂತ ಮುದುಕೆಯರನ್ನು ಕೆಳಗಿಳಿಸಿಕೊಂಡರು. ಅವರು ಬರಿಗಾಲಿನಿಂದ ನಡೆಯುತ್ತ ಮುಂದಕ್ಕೆ ಬಂದರು. ನಾಗಮ್ಮ ಕೈಮುಗಿದು 'ಬನ್ನಿ ತಾಯೀ' ಎನ್ನುವಾಗ ಅವರು ನಾಗಮ್ಮನ ಕಾಲಿಗೆ ಎರಗುತ್ತಿದ್ದರು. ನಾಗಮ್ಮ ತಡೆದು ಎಂದಳು :

"ನೀವು ಹಿರಿಯರು ತಾಯಿಗಳೇ, ನಾ ನಿಮ್ಮ ಮಗಳು."

"ಹಿರಿಯತನ ಮುದಿತನವನ್ನು ಅನುಸರಿಸಿರುವದಿಲ್ಲ ಅಮ್ಮನವರೇ, ನೀವು ಮಹಾತ್ಮರ ತಾಯಿ, ಮಹಾಶಿವಯೋಗಿಣಿ, ನಿಮ್ಮ ಪಾದಧೂಳಿಯಿಂದ ನಾವು ಪವಿತ್ರರಾಗಬೇಕು"

ಎನ್ನುತ್ತ ಮತ್ತೆ ಕುಸಿದು ಕಾಲಿಗೆರಗಿದರು. ನಾಗಮ್ಮ ಕೈಗೊಟ್ಟು ಇಬ್ಬರನ್ನೂ ಮೇಲಕ್ಕೆಬ್ಬಿಸಿದಳು. ಬಳಿಕ ಆಕೆಯ ದೃಷ್ಟಿ ಮುಂದೆ ಸಾಲಾಗಿ ನಿಂತಿದ್ದ ನಾಲ್ವರು ಭಟರ ಕಡೆಗೆ ಹರಿಯಿತು. ಅವರು ಖಡ್ಗ ಹಿರಿದು ನೆಲ ಮುಟ್ಟಿ ಗೌರವದ ವಂದನೆ ಸಲ್ಲಿಸಿದರು. 'ಜಯವಾಗಲಿ ಮಕ್ಕಳೆ ನಿಮಗೆ! ನಿಮ್ಮ ಶೌರ್ಯ ಹೀಗೆ ಸಜ್ಜನರನ್ನು ಕಾಪಾಡುತ್ತಲೇ ಇರಲಿ' ಎಂದು ಕೈಯೆತ್ತಿ ಹರಸಿ ವಂದನೆ ಸ್ವೀಕರಿಸಿದಳು. ಮುದುಕಿಯರ ಕಣ್ಣು ಹನಿಗೂಡಿದ್ದವು.

"ನಿಮ್ಮ ಮಹಿಮೆ ಅಮ್ಮನವರೇ ಅದು. ರಾಜಪ್ಪ ಬಹುವಾಗಿ ಕೊಂಡಾಡುತ್ತಾನೆ ನಿಮ್ಮ ಮಹಿಮೆಯನ್ನು, ಚೆನ್ನಬಸವಣ್ಣನವರ ಹಾಗೂ ಶರಣರ ಮಹಿಮೆಯನ್ನು!"

"ರಾಜಪ್ಪ ಕಡುಗಲಿ, ಕೆಚ್ಚೆದೆಯ ವೀರ! ಆಗ ಸಮಯವಿಲ್ಲದ್ದರಿಂದ ಅವನ ಸ್ವಂತದ ಸಂಗತಿಗಳನ್ನೇ ತಿಳಿಯಲಾಗಲಿಲ್ಲ. ಬನ್ನಿ ವಿಶ್ರಾಂತಿಗೊಳ್ಳಿರಿ. ಆಮೇಲೆ ಎಲ್ಲವನ್ನೂ ಕೇಳಿಕೊಳ್ಳುತ್ತೇನೆ."

ಅವರನ್ನು ಮೆಲ್ಲಗೆ ಗುಹೆಯಲ್ಲಿ ಕರೆದೊಯ್ದಳು. ಎತ್ತು, ಕುದರೆ, ಆಳು, ಭಟರು ಇವರನ್ನೆಲ್ಲ ಕರೆದುಕೊಂಡು ಬೊಮ್ಮಯ್ಯ ಹುಲ್ಲುಮನೆಗಳ ಕಡೆಗೆ ಹೋದನು. ನಾಗಮ್ಮ ಹಣ್ಣು ಕಾಯಿ ಗಂಜಿಗಳನ್ನಿತ್ತು ಮಾಡಿದ ಉಪಚಾರದಿಂದ ವೃದ್ಧ ರಾಣಿಯರು ಆನಂದಭರಿತರಾದರು. ಮೂವರೂ ಮುಂದಿನ ಹಾಸುಪಡೆಯ ಮೇಲೆ ಬಂದು ಕುಳಿತರು. ಹಿರಿಯ ರಾಣಿ ಕೇಳಿದಳು:

"ಅಪ್ಪನವರು ಎಲ್ಲಿ? ಅವರ ದರ್ಶನವಾಗಬಹುದೇ?"

"ಅವರು ನದಿಯಾಚೆಯ ದೊಡ್ಡ ಗವಿಯಲ್ಲಿದ್ದಾರೆ. ಬರೆಯುತ್ತಿರಬಹುದು. ಇನ್ನೊಂದು ಗಳಿಗೆಗೆ ಇಲ್ಲಿಗೆ ಬರುವರು. ಅದುವರೆಗೆ ಮಾತನಾಡೋಣ. ನಿಮ್ಮ ಮನೆತನದ ಉನ್ನತ ಚರಿತ್ರ ಹೇಳಬೇಕು. ರಾಜಪ್ಪನಿಗಿಂತ ನೀವೇ ಹೆಚ್ಚು ಬಲ್ಲವರಾಗಿರುವದು ಶಕ್ಯವಿದೆ."

"ಹೌದು ಅಮ್ಮಾ, ಅದನ್ನು ಅರಿಕೆಮಾಡಲು ನಾನೂ ಆತುರಳಾಗಿದ್ದೇನೆ. ನಮ್ಮ ಮನೆತನದ ಮೂಲಪುರುಷನು, ಕದಂಬರ ಮೂಲಪುರುಷ ಮಯೂರವರ್ಮನನ್ನು ಶೌರ್ಯದಿಂದ ಮೆಚ್ಚಿಸಿ ಸೂಪಮಂಡಲದ ಅಧಿಕಾರವನ್ನು ಪಡೆದನು. ಕದಂಬರ ರಾಜ್ಯದಲ್ಲಿ ಪಾಲು ಆದಾಗ ನಮ್ಮ ಮಂಡಲವು

ಗೋವೆಯು ಕದಂಬರ ಅಂಕಿತಕ್ಕೊಳಗಾಯಿತು. ನಮ್ಮ ಮಾವ ಮುದ್ದಪ್ಪರಸು ಚಕ್ರವರ್ತಿಗಳಿಗೆ ಜಯ ಸಂಪಾದಿಸಿ ಮೆಚ್ಚಿಸಿ ಹೆಚ್ಚಿನ ಉಂಬಳಿ ಪಡೆದರು. ಅವರಿಗೆ ಹರಿಯಪ್ಪರಸು ಬೊಪ್ಪರಸು ಇವರು ಮಕ್ಕಳು. ಈ ತಂಗಿ ಹರಿಯಪ್ಪರಸರ ಎರಡನೆಯ ಮಡದಿ. ಹೆಸರು ಜಕ್ಕಬ್ಬೆ."

ನಾಗಮ್ಮ ಸುಮ್ಮನೆ ಕುಳಿತಿದ್ದ ಮುಗ್ಧ ಮುದುಕಿ ಜಕ್ಕಬ್ಬೆಯನ್ನು ನೋಡಿದಳು. ಹಿರಿಯ ಮುದುಕಿ ಮುಂದುವರಿದಳು.

"ಬೊಪ್ಪರಸರು ನನ್ನ ಪತಿ. ನನ್ನ ಹೆಸರು ಜಗದಬ್ಬೆ. ಸೋಮವಂಶದ ಕ್ಷತ್ರಿಯರ ಮನೆತನ ನಮ್ಮದು. ಅಂಬಾವಲಿಯ ಚಂದ್ರಚೂಡ ನಮ್ಮ ಕುಲದೇವರು. ನನ್ನ ಪತಿ ದೈವಭಕ್ತ, ವೀರ. ಚಕ್ರವರ್ತಿಗಳ ಯುದ್ಧಗಳನ್ನು ಆತನೇ ಸಾಗಿಸುತ್ತಿದ್ದನು. ಹರಿಯಪ್ಪರಸು ಕಂಪಣದ ಆಡಳಿತ ನಡಿಸುತ್ತಿದ್ದರು. ಹರಿಯಪ್ಪನ ಹೆಂಡತಿ ಭದ್ರಬ್ಬೆಗೆ ಸಂತಾನವಾಗಿರಲಿಲ್ಲ. ನಾನು ಗರ್ಭಿಣಿಯಾದಾಗ ಆಕೆ ತುಂಬಾ ಮತ್ಸರಿಸಿದಳು......

"ಈ ದುರ್ಗುಣವೇ ಕೆಡಕಿಗೆ ಕಾರಣ." ನಾಗಮ್ಮ ಎಂದಳು.

"ಹಾಗೆಯೇ ಆಯಿತು ಅಮ್ಮನವರೇ ! ಹುಟ್ಟುವ ಮಗು ಮಹಾಪುರುಷನಾಗುವನೆಂದು ಭವಿಷ್ಯ ಬೇರೆ ಹೇಳಿದ್ದರಂತೆ. ಹೆರಿಗೆಯ ಕಾಲದಲ್ಲಿ ಮೂರ್ಛಿತಳಾದ ನನಗೆ ಎರಡು ದಿವಸ ಸ್ಮೃತಿಯೇ ಇರಲಿಲ್ಲ. ಎಚ್ಚರಾದಾಗ 'ಗಂಡು ಕೂಸು ಮೃತವಾಗಿಯೇ ಜನಿಸಿತ್ತು. ಮಣ್ಣು ಮಾಡಿತು' ಎಂದು ಕೇಳಿ ದುಃಖವಾಯಿತು. ಆಗ ಗಂಡ ಊರಲ್ಲಿರಲಿಲ್ಲ. ಬಂದ ಮೇಲೆ ಕೇಳಿ ಕೊರಗಿರಬೇಕು. ಹರಿಯಪ್ಪರಸು ಹೆಚ್ಚು ಗಮನಿಸಿರಲಿಲ್ಲ. ನಾನು ನೆಲಬಿಟ್ಟು ಏಳಲಿಕ್ಕೆ ಆರು ತಿಂಗಳು ಆಗಿತ್ತಂತೆ !"

"ಶಿವಶಿವಾ, ಸಜ್ಜನರಿಗೆ ಕಷ್ಟನೋವುಗಳು ಹೆಚ್ಚು."

"ಆಗ ನಡೆದ ಮೋಸ ಮೂರು ವರ್ಷಗಳ ಮೇಲೆ ಬಯಲಿಗೆ ಬಂದಿತು. ಭದ್ರಾಂಬೆ ಕೈತುಂಬ ಹೊನ್ನ ಕೊಟ್ಟು ಒಬ್ಬ ದಾಸಿಯನ್ನು ಹಸಿಕೂಸಿನೊಂದಿಗೆ ದೂರಕ್ಕೆ ಕಳಿಸಿದ್ದಳೆಂದು ತಿಳಿಯಿತು; ಖಚಿತವಾಯಿತು. ಅಣ್ಣತಮ್ಮಂದಿರು ಕೋಪಾವಿಷ್ಟರಾದರು. ಶೋಧಿಸಿದರು, ಆ ದಾಸಿ ಸಿಗಲಿಲ್ಲ. ಭದ್ರಬ್ಬೆಯನ್ನು ಹೊಡೆದು ತವರಿಗೆ ಅಟ್ಟಿದರು. ಹೃದ್ರೋಗದಿಂದ ಆಕೆ ಮಡಿದಳು. ಹಲವು

ದಿನ ಅತ್ತು ನಾನು ಸುಮ್ಮನಾದೆನು. ಅದೂ ಸಾಲದುದಕ್ಕೆ ಪತಿಯೂ ಹೋದನು. ಯಾವದೋ ರಣದಲ್ಲಿ ವೀರಮರಣವನ್ನಪ್ಪಿದನು. ಆಗಲೇ ಶಿವನು ನನ್ನನ್ನು ಒಯ್ಯಲಿಲ್ಲ."

ರಾಣಿಯ ಕಂಠ ಬಿಗಿದು ಬಂದಿತ್ತು; ಕಣ್ಣೊರಿಸಿಕೊಂಡಳು.

"ಶಿವನಾಟದ ಗೊಂಬೆಗಳು ನಾವು ತಾಯೀ! ಅವನು ಮನಸ್ಸು ಬಂದವುಗಳನ್ನು ಹೊರಗಿಟ್ಟು ಆಡುವನು. ಸಾಕಾದವುಗಳನ್ನು ತೆಗೆದು ಒಳಗಿಟ್ಟುಕೊಳ್ಳುವನು. ನಾವಿನ್ನೂ ಅವನಾಟಕ್ಕೆ ಸಲ್ಲುವ ಒಡವೆಗಳಾಗಿರಬೇಕು!"

ಅಷ್ಟರಲ್ಲಿ ಹಾವುಗೆಗಳ ಸಪ್ಪಳ ಕೇಳಿ ಹೊರಳಿ ನೋಡಿ ನಾಗಮ್ಮ 'ಚೆನ್ನಬಸವಣ್ಣ ಬಂದರಲ್ಲ' ಎಂದಳು. ವೃದ್ಧೆಯರು ಬಳಕುತ್ತ ಎದ್ದು ಸಾಷ್ಟಾಂಗವಾಗಿ ಎರಗಿದರು. ನಾಗಮ್ಮ ಹೇಳಿದಳು:

"ಈ ತಾಯಿಗಳು ಸೂಪೆಯ ರಾಣಿಯರು. ನಮ್ಮ ನೆರವಿಗೆ ಬಂದ ಕದಂಬ ದಳಪತಿ ರಾಜಪ್ಪನ ಅಜ್ಜಿಯರು. ದರ್ಶನಕ್ಕೆ ಬಂದಿದ್ದಾರೆ."

"ಅಯ್ಯೋ ಹಣ್ಣಾದ ಶರೀರದವರು ಅಜ್ಜಿಯವರೇ ನೀವು! ಕಷ್ಟಕರವಾದ ದಾರಿಯಲ್ಲಿ ಎಷ್ಟು ಪ್ರಯಾಸಪಟ್ಟು ಬಂದಿರಲ್ಲ?"

"ತಮ್ಮ ಪಾದದರ್ಶನ ಅಪ್ಪನವರೇ! ಅದರ ಆನಂದದಲ್ಲಿ ಕಷ್ಟಕೊಂದು ಗಣನೆಯೇ? ನಾವು ಧನ್ಯರಾದೆವು."

"ಕುಳ್ಳಿರಿ ಕುಳ್ಳಿರಿ. ರಾಜಪ್ಪ ಎಲ್ಲಿದ್ದಾರೆ?"

"ಗೋವೆಗೆ ಹೋಗಿದ್ದಾನೆ ಬುದ್ಧೀ, ಎರಡು ದಿನಗಳಲ್ಲಿ ಬರುವನು."

"ಇವರ ಮನೆತನದ ಸಂಗತಿಗಳನ್ನು ಕೇಳುತ್ತಿದ್ದೆನು. ಇವರ ಪೂರ್ವವಯಸ್ಸಿನ ಕಥೆ ಬಹಳ ಕರುಣಾಜನಕವಾಗಿದೆ" ಎಂದು ನಾಗಮ್ಮ ಇದುವರಗೆ ಕೇಳಿದುದನ್ನು ನಾಲ್ಕು ಮಾತುಗಳಲ್ಲಿ ತಿಳಿಸಿ, "ನೀವೂ ಸ್ವಲ್ಪ ಕುಳಿತುಕೊಳ್ಳಿರಿ. ಪೂರ್ಣವಾಗಿ ಕೇಳೋಣ" ಎಂದು ಹೇಳಿ, ರಾಣಿಯರ ಕಡೆ ತಿರುಗಿ,

"ಹೇಳಿರಿ ತಾಯೀ, ನಿಮ್ಮ ಕಥೆ, ನಮ್ಮ ಮನದಲ್ಲಿ ನಿಮಗಾಗಿ ಮನೆ ಮಾಡುತ್ತಿದೆ" ಎಂದಳು.

"ಏನು ನಮ್ಮಂಥ ಸಂಸಾರಿಗಳ ಕಥೆ ಅಮ್ಮಾ! ಇನ್ನೆರಡು ಮಾತುಗಳಲ್ಲಿ ಮುಗಿಸಿಬಿಡುತ್ತೇನೆ. ಹರಿಯಪ್ಪರಸು ಮುಂದೆ ಈ ತಂಗಿಯನ್ನು ಮದುವೆ

ಯಾವರು. ಈ ದೊರೆಸಾನಿ ನನ್ನನ್ನು ಬಹಳ ಗೌರವದಿಂದ ಕಂಡು ನಡೆದಳು. ಗಂಡಹೆಂಡಿರು ನನ್ನ ಯಾವ ಇಚ್ಛೆಗೂ ಆತಂಕ ಮಾಡಿಲ್ಲ. ನನ್ನ ಕೈಯ ವೆಚ್ಚಕ್ಕೆಂದು ವಿಪುಲ ಆದಾಯವನ್ನು ನನಗೆ ಒಪ್ಪಿಸಿದ್ದಾರೆ. ಇವರಿಗೆ ಒಬ್ಬಳೇ ಮಗಳು ಮಾತ್ರ ಹುಟ್ಟಿದಳು. ಅವಳ ಮಗನೇ ರಾಜಪ್ಪ! ಹರಿಯಪ್ಪರಸು ಅವಸಾನಕಾಲದಲ್ಲಿ ಈ ಮೊಮ್ಮಗನನ್ನು 'ದತ್ತು' ಮಾಡಿಕೊಂಡಿದ್ದಾರೆ. ಇವನಂತೂ ಏನೂ ಭೇದವಿಲ್ಲದೆ ನಡೆದಿದ್ದಾನೆ."

ನಾಗಮ್ಮ ಸಂತಸದ ಕಣ್ಣುಗಳಿಂದ ಜಕ್ಕಬ್ಬೆಯನ್ನು ನೋಡಿದಳು; ಜಕ್ಕಬ್ಬೆ ಕೈಮುಗಿದು ಹೇಳಿದಳು:

"ಅಮ್ಮಾ, ಈ ಅಕ್ಕನವರು ಬಹಳ ಒಳ್ಳೆಯವರು, ಜಾಣರು. ನನ್ನ ಹೊಟ್ಟೆಯಿಂದ ಹುಟ್ಟಿದ ಮಗಳು ಇವರ ಮಗಳೇ ಆಗಿ ಬೆಳೆದಳು. ನಾನು ಮಬ್ಬು; ನನ್ನಹಿರಿಯ ಹೋದಮೇಲೆ ಇವರೇ ನಮ್ಮ ಮನೆತನದ ಘನತೆ-ಗೌರವಗಳನ್ನು ಕಾಯ್ದುಕೊಂಡು ಬಂದರು."

"ನೀವಿಬ್ಬರೂ ಲೋಕಮಾತೆಯರಂತೆ ಇದ್ದೀರಿ; ಪುಣ್ಯವಂತರು. ಮುಂದೆ ಅಪಹೃತ ಶಿಶುವಿನ ಬಗೆಗೆ ಏನೂ ತಿಳಿಯಲಿಲ್ಲವೇ?"

ಜಗದಬ್ಬೆ ಮುಖವೆತ್ತಿ ನೋಡಿ ನೆನಪು ಮಾಡಿಕೊಂಡಳು:

"ಏನೂ ತಿಳಿಯದಂತೆಯೇ ಸರಿ. ಮುಂದೆ ಮೂವತ್ತು ವರ್ಷಗಳಾದ ಬಳಿಕ ನಮ್ಮ ಅರಮನೆಗೆ ಅತಿಥಿಗಳಾಗಿ ಒಬ್ಬ ಪಂಡಿತರು ಬಂದಿದ್ದರು. ಅವರು ತಮ್ಮ ಅಧ್ಯಯನದ ಕಥೆ ಹೇಳುವಾಗ ಹೇಳಿದ ಒಂದು ಮಾತು:

'ಬಳ್ಳಿಗಾವಿಯ ಪಂಚಲಿಂಗೇಶ್ವರ ದೇವಾಲಯದ ನರ್ತಕಿಯೊಬ್ಬಳು ತಾನು ಸಾಕಿದ ಐದು ವರ್ಷದ ಮಗುವಿನಲ್ಲಿ ವಿಶೇಷ ಕಳೆ, ತೇಜಸ್ಸು, ಪ್ರಖರವಾದ ಬುದ್ಧಿ, ಶಿವಾಚಾರದ ಒಲವು ಮುಂತಾದವುಗಳನ್ನು ಕಂಡು ಈ ಮಗು ತನಗೆ ಸಲ್ಲದೆಂದು ಅಲ್ಲಿಯ ಕೋಡೀಮಠದ ಸ್ವಾಮಿಗಳಿಗೆ ಅದನ್ನು ಒಪ್ಪಿಸಿದಳು. ಅಲ್ಲಿ ಆ ಮಗು ಬೆಳೆದು ಘನವಿದ್ವಾಂಸನಾದನು. ಕೆಲಕಾಲ ಪ್ರಾಧ್ಯಾಪಕನಾಗಿ ಶಾಸ್ತ್ರಗ್ರಂಥಗಳನ್ನು ರಚಿಸಿದನು. ಬಳಿಕ ಒಮ್ಮಿಂದೊಮ್ಮೆ ವೈರಾಗ್ಯ ತಾಳಿ ಎಲ್ಲಿಯೋ ಹೊರಟು ಹೋದನು.'

ಈ ಮಾತು ಕೇಳಿದಾಗ ಕೆಲಹೊತ್ತು ನನ್ನ ಕರುಳು ಮಿಡಿಯಿತು. ಕೆಟ್ಟ ಮಮಕಾರದ ಇರಿತ! ಏನು ಸಂಬಂಧ? ಎಲ್ಲಿಯ ಮಾತು?"

ನಾಗಮ್ಮ ಚೆನ್ನಬಸವಣ್ಣ ಪರಸ್ಪರ ಮುಖ ನೋಡಿದರು.

"ನಿಮ್ಮ ಮಗುವೇ ಆ ಮಹಾ ವ್ಯಕ್ತಿಯಾಗಿರಬಾರದೇಕೆ? ಅವನು ಮುಂದೆ ಶಿವಯೋಗಿಯೂ ಆಗಿರಬಹುದು. ನೀವು ಪುಣ್ಯೋದರಿ" ಎಂದು ನಾಗಮ್ಮ ಕೈಮುಗಿದಳು.

"ಪರಶಿವನ ಅವತಾರ ಈ ಅಪ್ಪನವರು! ಇವರನ್ನು ಹೆತ್ತ ನೀವು ಪುಣ್ಯೋದರಿ ಅವ್ವಾ! ಲೋಕಮಾತೆ ನೀವು." ಪ್ರತಿಯಾಗಿ ಕೈಮುಗಿದಳು ಜಗದಬ್ಬೆ.

"ಮುತ್ತು ಹೋದರೇನು? ಅದು ಹೊಳಪು ಪಡೆದುದು ಚಿಪ್ಪಿನಲ್ಲಿಯೇ ಅಲ್ಲವೇ? ಮುತ್ತಿನ ಮಹತ್ವ ಚಿಪ್ಪಿನಲ್ಲಿಯದೇ! ನೀವು ಪೂಜ್ಯರು" ಎಂದು ಚೆನ್ನಬಸವಣ್ಣ ಎದ್ದು ಕೈಮುಗಿದನು.

"ಹುರುಳಿಲ್ಲದ ಆಲಾಪ ದೇವರು, ಸುಮ್ಮನೆ ಹೇಳಿದಂತಾಯಿತು. ಈಗ ತಮ್ಮ ಪಾದಕ್ಕೆ ಬಿನ್ನಹವೊಂದಿದೆ. ಅದನ್ನು ನಡಿಸಿಕೊಡಬೇಕು." ಎನ್ನುತ್ತ ಜಗದಬ್ಬೆ ಪಾದಕ್ಕೆ ಬಿದ್ದಳು.

"ಏನು ಹೇಳಿರಿ ಅಜ್ಜಿಯವರೇ! ನಾನೂ ನಿಮ್ಮ ಮೊಮ್ಮಗ!"

"ನನಗೊಂದು ಸೇವೆ ಸಲ್ಲಿಸಲು ಅಪ್ಪಣೆಯಾಗಬೇಕು. ನನ್ನ ಹತ್ತಿರದ ಐವತ್ತು ಸಾವಿರ ವರಹಗಳನ್ನು ಇಲ್ಲಿ ಆಶ್ರಮರಚನೆಗಾಗಿ ಅಪ್ಪನವರು ಸ್ವೀಕರಿಸಬೇಕು."

"ನಾನು ಸ್ವೀಕರಿಸುವದೇಕೆ ಅಜ್ಜಿಯವರೇ? ನನ್ನ ಅಪ್ಪಣೆಯಾದರೂ ಯಾಕೆ ಬೇಕು! ನಾನೂ ಶಿವನ ಸೇವಕನು. ಶಿವಭಕ್ತರು ಶಿವನ ಸೇವೆಮಾಡಲು ಯಾರ ಅಪ್ಪಣೆಯೂ ಬೇಡ. ಆದರೆ ಒಂದು ಮಾತು. ಶಿವಭಕ್ತರೆಲ್ಲ ಸೇರಿ ತಮ್ಮತಮ್ಮ ಸೇವೆಯನ್ನು ಪರಸ್ಪರ ಹೊಂದಿಕೆಯೊಡನೆ ಮಾಡಿದರೆ ಅದೊಂದು ಧಾರ್ಮಿಕ ಸಾಮಾಜಿಕ ವ್ಯವಸ್ಥೆಯಾಗುವದು. ಅದು ಶಿವಸಿದ್ಧಾಂತವನ್ನು ನೆಲೆಗೊಳಿಸುವದು; ಅದರ ನೀತಿತತ್ವಗಳನ್ನು ಪೋಷಿಸಿ ರಕ್ಷಿಸುವದು. ನಿಮ್ಮಿಚ್ಛೆಯನ್ನು ತಿಳಿದು ನನಗಂತೂ ಬಹಳ ಸಂತೋಷ! ರಾಜಪ್ಪನವರೇ ಆಶ್ರಮ ರಚ

ನೆಯು ಕಾರ್ಯ ನಿರ್ವಹಿಸಿ ಆ ಹಣವನ್ನು ಅದಕ್ಕಾಗಿ ವಿನಿಯೋಗಿಸಲಿ. ಈಗಾಗಲೇ ಕಾರ್ಯಾರಂಭ ಮಾಡಿದ ಕಿನ್ನರಿಬೊಮ್ಮಯ್ಯನವರು ಅವರನ್ನು ಕೂಡುವರು. ಕೆಲಸಮಾಡುವ ಜನಸಮುದಾಯದ ಅನ್ನ ಸಂತರ್ಪಣೆಗೆ ಆ ನಿಧಿ ಉಪಯೋಗವಾಗುವದು. ನನ್ನ ಮಾತು ನಿಮಗಿಷ್ಟವೇ ?"

"ಹಾಗೆಯೇ ಆಗಲಿ ಅಪ್ಪನವರೇ, ನಾವು ಕೃತಾರ್ಥರಾದೆವು"

ಎಂದು ಇಬ್ಬರೂ ರಾಣಿಯರು ನಮಸ್ಕಾರ ಮಾಡಿದರು. ಗಾಡಿಯ ಆಳು ತಂದಿಟ್ಟ ಹಣ್ಣುಹಂಪಲಗಳ ಬುಟ್ಟಿಯನ್ನೂ ಜೇನುತುಪ್ಪದ ಕೊಡವನ್ನೂ ನಾಗಮ್ಮನಿಗೆ ಅರ್ಪಿಸಿದರು.

ನಾಲ್ಕು ದಿನ ಆ ವೃದ್ಧ ರಾಣಿಯರು ನಾಗಮ್ಮನ ಉಪಚಾರದಲ್ಲಿದ್ದು ಪ್ರಸಾದದಿಂದ ಪುನೀತರಾಗಿ ಮರಳಿದರು.

೩ ಕಿನ್ನರಿ ಒಡೆಯಿತು

ಭಕ್ತಾಗ್ರಣಿ ರಾಜಪ್ಪ ಜಗದಬ್ಬೆಯ ಇಚ್ಛೆಯಂತೆ ವಿಪುಲ ಧನಸಾಮಗ್ರಿಯೊಡನೆ ಬೇಗನೆ ಉಳಿವಿಗೆ ಬಂದನು. ಅಲ್ಲಿ ಅವಶ್ಯವಿದ್ದ ಅನುಕೂಲತೆಗಳನ್ನು ಏರ್ಪಡಿಸಲು ಜಯಕೇಶಿರಾಜನ ಆದೇಶವೂ ಆಗಿತ್ತು. ಅವನು ತಮ್ಮ ಮಂಡಲದ ಹಳ್ಳಿಗಳಿಂದ ಹಲವು ಕಾರ್ಮಿಕರನ್ನು ಕರೆಯಿಸಿದನು. ಮಹಮನೆಯ ಗವಿಯನ್ನು ವಿಸ್ತರಿಸಿ ಸಮಗೊಳಿಸಿ ಅದರ ಹಿಮ್ಮಲಿಗೆ ದ್ವಾರವನ್ನು ತೆರೆಯಿಸಿ ಅದರಾಚೆಗೆ ಸಾವಿರಾರು ಜನರು ಕುಳಿತುಕೊಳ್ಳಬಹುದಾದ ಪಟಾಂಗಣಗಳನ್ನೂ ಅವುಗಳಿಗೆ ಆವಾರವನ್ನೂ ನಿರ್ಮಿಸಿದನು. ಶಿವಪುರದ ರಚನೆಯಾಯಿತು. ನಾಗಮ್ಮ-ಚೆನ್ನಬಸವಣ್ಣನವರ ಸ್ವಸಾಧನಗೆ ಪ್ರಶಾಂತ ಗುಹಾಸ್ಥಳಗಳು ಉಂಟಾದವು. ಬೆಳೆಯಲಿರುವ ದಾಸೋಹಕ್ಕೆ ತಕ್ಕ ಪಾಕಶಾಲೆ ಗುಡಾಣಗಳು ಏರ್ಪಟ್ಟವು. ಅದುವರೆಗೆ ಪಶ್ಚಿಮವಾಹಿನಿಯಾಗಿ ಹರಿದ ಹೊಳೆಯ ಪ್ರವಾಹವನ್ನು ಕಿನ್ನರಿ ಬೊಮ್ಮಯ್ಯನು ಗುಡ್ಡರ ಪಡೆಯಿಂದ ಬೆಟ್ಟವನ್ನು ಕಡೆಯಿಸಿ ಮಹಮನೆಯ ಕಡೆಗೆ ತಿರುಗಿಸಿದನು. ಆ ಪ್ರವಾಹವು ಮಹಮನೆಗೆ ಜಲಸೌಕರ್ಯ ನೀಡಿತಲ್ಲದೆ ಜಲಕೋಟೆಯಾಗಿ ಭದ್ರತೆಯನ್ನೂ ನೀಡಿತು. ಈ ಪ್ರವಾಹಕ್ಕೆ ಕಿನ್ನರಿ ಬೊಮ್ಮಯ್ಯನ ಹೊಳೆಯೆಂದು ಹೆಸರಾಗಿದೆ. ಈ ಬಗೆಯಾಗಿ ಸುರಮ್ಯವಾದ ನಿಸರ್ಗದ ಮಡಿಲಲ್ಲಿ ಶಿವಲೀಲೆ ವಿಜೃಂಭಿಸಿದಂತೆ ಶಿವಾಚಾರ-ಶಿವಜ್ಞಾನ-ಶಿವಯೋಗಗಳ ಕಳೆ ಹಲವು ಮುಖದಿಂದ ಕಂಗೊಳಿಸಿತು. ಕಲ್ಯಾಣದ ಬೆಳಕು ಉಳಿವೆಯ ದರಿಕಂದರಗಳನ್ನು ಬೆಳಗಿತು.

ನೂತನ ಮಹಮನೆಯಲ್ಲಿ ಗ್ರಂಥಭಾಂಡಾರ ತೆರೆಯಿತು. ಪ್ರವಚನ ಪರ್ವ ಮುಂತಾದ ಜ್ಞಾನಸತ್ರಗಳು ಎಡೆಬಿಡದೆ ನಡೆದವು. ಅದು ನಾಡಿನಲ್ಲೆಲ್ಲ ಪ್ರಚುರವಾಯಿತು. ಕಲ್ಯಾಣದಲ್ಲಿ ಕಟ್ಟೆಯೊಡೆದ ಆಧ್ಯಾತ್ಮಿಕಸರೋವರದ ಅನುಭಾವ ಜಲವು ಎರಡು ಹೊನಲಾಗಿ ಶ್ರೀಶೈಲಕ್ಕೂ ಉಳಿವೆಗೂ ಹರಿದಿದ್ದಿತು. ಇವೆರಡರ ನಡುವಿನ ಪ್ರದೇಶದಲ್ಲಿ ಧರ್ಮಜಾಗ್ರತಿ ಉಂಟಾಗಿತ್ತು. ಪೂರ್ವ ದಕ್ಷಿಣಗಳಲ್ಲಿ ಬಹುದೂರದ ರಾಜರು ಮಂಡಲಾಧಿಪತಿಗಳು ಜ್ಞಾನಿಗಳು ಉಳಿ

ವೆಗೆ ಬರಹೋಗಹತ್ತಿದರು. ಹೊಸ ಅಭ್ಯಾಸಿಗಳು ಅನುಭಾವಿಗಳು ಅಲ್ಲಿ ನೆರೆದರು. ಕಲ್ಯಾಣದಲ್ಲಿಯ ಕಾರ್ಯಭಾರ ಮತ್ತೆ ಅಲ್ಲಿಯೂ ನಾಗಮ್ಮನ ಮೇಲೆ ಬಿದ್ದಿತು. ಆಕೆಯ ಉತ್ಸಾಹ ಕುಗ್ಗಿರಲಿಲ್ಲ. ದಾಸೋಹದ ಅನ್ನಸಂತರ್ಪಣೆಗೆ ಮತ್ತೆ ಟೊಂಕಕಟ್ಟಿದಳು. ಆಕೆಯ ಶರೀರ ಆಲಸಿಕೆಯೆಂಬುದನ್ನು ಮೆಟ್ಟಿ ಹಿಂದಿಟ್ಟುಬಿಟ್ಟೇ ಹುಟ್ಟಿಬಂದಿತ್ತು. 'ಕ್ರಿಯೆಯಿಲ್ಲದ ಜ್ಞಾನವಿಲ್ಲ, ಜ್ಞಾನವಿಲ್ಲದ ಕ್ರಿಯೆಯಿಲ್ಲ' ಎಂಬ ಚೆನ್ನಬಸವಣ್ಣನ ಸೂತ್ರದ ನಿದರ್ಶನಮೂರ್ತಿಯಾಗಿ, ಸರ್ವತ್ರ ಸಂತೃಪ್ತಿಯನ್ನು ಕಾಣುವದರಲ್ಲಿಯೇ ತಾನು ತೃಪ್ತಿಯನ್ನು ಹೊಂದುತ್ತಿದ್ದಳು.

ಕಿನ್ನರಯ್ಯನನ್ನು ಬಿಟ್ಟರೆ, ಕಲ್ಯಾಣದಲ್ಲಿದ್ದಂತಹ ಹಿರಿಯ ಪರಿಣತ ಶರಣರ ನೆರವು ನಾಗಮ್ಮ-ಚೆನ್ನಬಸವಣ್ಣರಿಗೆ ಈಗ ಇರಲಿಲ್ಲ. ಹಡಪದ ರೇಚಣ್ಣ ಹಿಂದಿನಿಂದ ಬಂದು ತಲುಪಿದ. ನುಲಿಯ ಚಂದಯ್ಯ ಇನ್ನು ಕೆಲವರು ಮಾತ್ರ ಮೊದಲಿನವರಿದ್ದರು. ಹೆಚ್ಚಾಗಿ ಇದ್ದವರು ಹೊಸ ಅನುಭಾವಿಗಳು. ಭಕ್ತಿಭರದ ದರ್ಶನೋತ್ಸುಕರು ತೆರಪಿಲ್ಲದೆ ಬರುತ್ತಿದ್ದರು. ದೊಡ್ಡ ಪರ್ವಗಳು ನಡೆಯುತ್ತಿದ್ದವು.

*　　　*　　　*

ರಾತ್ರಿಯ ಎರಡನೆಯ ಪ್ರಹರ. ಶಿವಯೋಗಿಣಿ ನಾಗಮ್ಮ ಹಾಸಿಗೆಯ ಮೇಲೆ ಕುಳಿತು, ಇನ್ನು ಕೊನೆಯದಾಗಿ ಅಂದಿನ ಆಗುಹೋಗುಗಳನ್ನು ಶಿವನಿಗರ್ಪಿಸಿ ಯೋಗನಿದ್ರೆಗೊಳಗಾಗಬೇಕು. ಅಷ್ಟರಲ್ಲಿ ಹೊರಗೆ ಕಿನ್ನರಿಯ ನಾದ ಕೇಳಿಸಿತು. ಆಶ್ಚರ್ಯ. ಅದರಲ್ಲಿ ಬ್ರಹ್ಮಯ್ಯನದೇ ಹಾಡಿನ ಧ್ವನಿ. ನಿಜವೇ ? ಕಿವಿಗೊಟ್ಟು ಕೇಳಿದಳು, ಹೌದು.

'ಶಿವಶಕ್ತಿಯಿಂದ ಬೇರೆ ಸಂಪದವಿಲ್ಲ;
ಶಿವತತ್ವದಿಂದ ಬೇರೆ ಅಮೃತವಿಲ್ಲ;
ಶ್ರೀಮಹಾಲಿಂಗ ತ್ರಿಪುರಾಂತಕೇಶ್ವರನ
ಒಡಲಿನಲ್ಲಲ್ಲದೆ ಬೇರೆ ಎಡೆಯಿಲ್ಲ......'

'ಬೊಮ್ಮಯ್ಯ ಹೇಗೆ ಬಂದನು ?' ನಾಗಮ್ಮ ಎದ್ದು ಕಕ್ಕಡ ಹಚ್ಚಿ ಗುಡಿಸಲಿನಿಂದ ಹೊರಗೆ ಬಂದಳು. ಅಷ್ಟರಲ್ಲಿ ಕಿನ್ನರಿ ಬೊಮ್ಮಯ್ಯನು ಇತ್ತ ಕೈಮುಗಿದು ಮುಂದೆ ಹೊರಟಿದ್ದನು. ಚೆನ್ನಬಸವಣ್ಣನ ಗುಹೆಯ ಮೆಟ್ಟುಗಟ್ಟೆಗೆ ತಲೆಯಿಟ್ಟು ವಂದಿಸಿ ಬೀಳುವದರಲ್ಲಿದ್ದನು. ನಾಗಮ್ಮ ಹೋಗಿ ಹಿಡಿದಳು. ಚೆನ್ನಬಸವಣ್ಣನೂ ಎದ್ದು ಬಂದಿದ್ದನು. ಇಬ್ಬರೂ ಅವನ ರಟ್ಟೆಯನ್ನು ಹಿಡಿದು ಎಬ್ಬಿಸಿ ನಿಲ್ಲಿಸಿದರು. ತಂಗಾಳಿಯಲ್ಲೂ ಅವನ ಮೈ ಕೆಂಡವಾಗಿತ್ತು. ಕಣ್ಣು ಶೂನ್ಯದತ್ತ ನಿಶ್ಚಲವಾಗಿ ನಿಂತಿದ್ದವು. ಅವರಿಬ್ಬರು ಕೊಳ್ಳದ ಮಗ್ಗಲಿನ ದಾರಿಯಲ್ಲಿ ಮೆಲ್ಲಗೆ ಮರಳಿ ಕರೆದುಕೊಂಡು ಹೊರಟರು. ಕೃಶ ಶರೀರದ ಚೆನ್ನಬಸವಣ್ಣ ತಡವರಿಸುತ್ತ ಹಿಡಿದಿದ್ದನು. ಬೊಮ್ಮಯ್ಯನ ಕೈಯ ಕಿನ್ನರಿಯು ಆ ಮೂವರ ಕೈಯಿಂದಲೂ ತಪ್ಪಿ ಜಾರಿತು. ಅದು ಟಬ್, ಥಮ್, ಠಂಪ್ ಎನ್ನುತ್ತ ಕಂದರದಲ್ಲಿ ಉರುಳಿ ಹೋಯಿತು. ಕಿನ್ನರಯ್ಯನ ಗುಡಿಸಲು ಕಡೆಯಿಂದ ಬಂದ ಅವನ ಜೊತೆಗಾರರು ನಾಲ್ವರು ಅವನನ್ನು ಎತ್ತಿಕೊಂಡರು. ಎಲ್ಲರೂ ಕೂಡಿ ಹೋಗಿ ಮಲಗಿಸಿದರು. ಬಾಹ್ಯಪ್ರಜ್ಞೆ ಏನೂ ಇರಲಿಲ್ಲ. ತುಟಿಗಳು 'ಓಂ ನಮಃಶಿವಾಯ' ದಿಂದ ಚಲಿಸುತ್ತಿದ್ದವು.

ಉಳಿವಿಗೆ ಬಂದು ಎರಡು ವರ್ಷವಾಗುತ್ತ ಬಂದಿತ್ತು. ಕಲ್ಯಾಣ ಬಿಟ್ಟಂದಿನಿಂದ ಕಿನ್ನರಯ್ಯನ ದೇಹ ನುಗ್ಗುನುಗ್ಗಾಗುತ್ತಲಿತ್ತು. ಧ್ಯೇಯದಲ್ಲಿ ತಲ್ಲೀನನಾದ ಅವನಿಗೆ ಅದರ ಪರವೆ ಇರಲಿಲ್ಲ. ವಿರೋಧಿಗಳೊಡನೆ ಕಾದುವದಕ್ಕಿಂತ ಬೆಟ್ಟದ ನಾಡಿನಲ್ಲಿ ವಸಹಾತು ಸ್ಥಾಪಿಸುವಲ್ಲಿ, ಬೆಟ್ಟ ಕಡಿದು ಹೊಳೆಯ ಹೊನಲು ಹೊರಳಿಸುವಲ್ಲಿ ಅದು ತೀರ ಹಣ್ಣಾಗಿತ್ತು. ಪತ್ತು ದಿನಗಳಿಂದ ಆತನು ಜ್ವರದಿಂದ ಪೀಡಿತನಾಗಿದ್ದನು. ಎರಡು ಮೂರು ದಿನಗಳಿಂದ ಆಹಾರ ತೊರೆದು ಚೆನ್ನಬಸವಣ್ಣನ ಪಾದತೀರ್ಥವನ್ನೇ ಸೇವಿಸಿದ್ದನು. ಇಂದು ಸಾಯಂಕಾಲ ನಾಗಮ್ಮ ಕುಳಿತು ದಿನದಂತೆ ಶಿವಾರ್ಚನೆ ಮಾಡಿಸಿದ ಬಳಿಕ ಸ್ವಲ್ಪ ಅಕ್ಕಿಯ ಗಂಜಿಯನ್ನು ಪ್ರಸಾದವಾಗಿ ಕುಡಿಸಿದ್ದಳು. ಸ್ವಲ್ಪ ಚೇತರಿಸಿದಂತೆ ಕಂಡಿದ್ದನು. ಇನ್ನು ಗುಣವಾಗುವದೆಂದು ಆಸೆ ತಾಳಿ ನಾಗಮ್ಮ ಅಲ್ಲಿ ಮಲಗುವ ಜತೆಯ ಜಂಗಮರಿಗೆ ಜಾಗ್ರತೆ ಹೇಳಿ ಬಂದಿದ್ದಳು. ಆದರೆ ಹತ್ತಿರದವರು ನಿದ್ರೆ ಹೋದಬಳಿಕ ತನ್ನ ವ್ರತದ ನಿತ್ಯ ಕ್ರಮದಂತೆ ಒಳಗಿನ ಪ್ರಜ್ಞೆಗೆ ಒಳಗಾಗಿ ರೋಗಬಾಧೆಯ ಅರಿವಿಲ್ಲದೆ ಹಾಗೆ ಎದ್ದು ಬಂದಿದ್ದನು.

ಮುರಳಿ ಕರೆದೊಯ್ದು ಮಲಗಿಸಿದ ಬಳಿಕ ಎಲ್ಲರೂ ಕಿನ್ನರಯ್ಯನ ಹತ್ತಿರವೇ ಕುಳಿತರು. ಶರಣಸುತೆ ನಾಗಮ್ಮ ಅವನ ತಲೆಯನ್ನು ತೊಡೆಯ ಮೇಲಿಟ್ಟುಕೊಂಡು ಕಷಾಯ ಕುಡಿಸಲು ಯತ್ನಿಸಿದಳು; ಅದು ಫಲಿಸಲಿಲ್ಲ. ಪಾದೋದಕವನ್ನೇ ತುಟಿಯ ಮೇಲೆ ಬಿಡುತ್ತ ಮನದಲ್ಲಿ ಶಿವನೇ ಶರಣ ಸಂದೋಹವನ್ನು ಮತ್ತೆ ಕಷ್ಟಕ್ಕೀಡುಮಾಡಬೇಡ ಎನ್ನುತ್ತ ಪ್ರಾರ್ಥಿಸುತ್ತಿದ್ದಳು. ಚೆನ್ನಬಸವಣ್ಣನು ನೀರವವಾಗಿ ಧ್ಯಾನಮಗ್ನನಾಗಿ ಕುಳಿತಿದ್ದನು. ಇನ್ನುಳಿದವರು ಮಂತ್ರಜಪದಲ್ಲಿದ್ದರು. ಬೆಳಗಿನ ಒಂದು ಗಳಿಗೆಗೆ ಮೊದಲು ಕಿನ್ನರಯ್ಯನ ಪ್ರಾಣವಾಯು ಮಹಾಲಿಂಗದಲ್ಲಿ ಲೀನವಾಯಿತು. ಅತ್ತ ಹೊಳೆಗೆ ಬಿದ್ದ ಕಿನ್ನರಿ ಆತ್ಮನಾದದೊಡನೆ ಮಹಾನಾದದಲ್ಲಿ ಬೆರೆಯಲು ಸಾಗರದತ್ತ ವೇಗವಾಗಿ ಸಾಗಿತ್ತು.

ಗುಡ್ಡರೆಲ್ಲ ಕೂಡಿ ಗೋಳಾಡಿದರು. ಕಿನ್ನರಿ ಬೊಮ್ಮಯ್ಯನ ಅಗಲಿಕೆ ಎಲ್ಲರಿಗೂ ದುಃಖವನ್ನುಂಟುಮಾಡಿತ್ತು. ಚೆನ್ನಬಸವಣ್ಣ ಮೂಕನಂತಾಗಿದ್ದನು. ಎಂಥೆಂಥ ದುರ್ಘಟನೆಗಳಿಗೂ ಅಳುಕದ ನಾಗಮ್ಮ 'ತಂದೆ ಕಿನ್ನರಯ್ಯಾ ನಮ್ಮ ಕೈಬಿಟ್ಟು ನಡೆದೆಯಾ ?' ಎಂದು ಹಲುಬಿದಳು. ಕಿನ್ನರಯ್ಯನ ಶ್ರದ್ಧೆ, ಸೇವೆ, ಧೀರ, ವೀರಗಳ ನೆನಹಿನ ಪರಿಣಾಮವಾಗಿತ್ತು ಈ ವ್ಯಥೆ !

ಚೆನ್ನಬಸವಣ್ಣನು ಸರ್ವರೊಡನೆ ಕಿನ್ನರಯ್ಯನ ಪಾರ್ಥಿವ ಶರೀರವನ್ನು ಸುವಿಧಾನದಿಂದ ಸಮಾಧಿಗೊಳಿಸಿದನು. ಉಳಿವೆಯಲ್ಲಿಯ ಈ ಸಮಾಧಿಯ ಮೇಲೆ 'ಕಿನ್ನರಯ್ಯ' ಎಂಬ ಅಕ್ಷರಗಳಿರುವದನ್ನು ನೋಡಬಹುದು.

೪ ಬೆಳಕು ಅಡಗಿತು

ಉಳಿವೆಯ ವಸಾಹತಿನ, ಅಲ್ಲಿಯ ಮಹಾಮನೆ ಅನುಭವ ಮಂಟಪಗಳ ಕಾರ್ಯಕಲಾಪಗಳ ಉತ್ಸಾಹ ಬಹುದಿವಸ ಉಳಿಯಲಿಲ್ಲ. ಕಲ್ಯಾಣದಲ್ಲಿ ಒಡೆದ ಪ್ರಣತಿಯನ್ನು ಉಳಿವೆಯಲ್ಲಿ ತಂದು ಹೊಂದಿಸಿ ಮತ್ತೆ ಹೊತ್ತಿಸಿದರೂ ಬೆಸುಗೆ ಬಹುದಿವಸ ಬಾಳಲಿಲ್ಲ. ಆದರೆ ಅದು ಆರುವ ಮೊದಲು ಅದರಿಂದ ಹಲವು ದೀಪಗಳು ಹತ್ತಿಕೊಂಡವು. ಚೆನ್ನಬಸವಣ್ಣನ ಅಸಂಖ್ಯಾತ ವಚನಗಳ ಪ್ರತಿಗಳು ನಾಡಿನಲ್ಲಿ ಹೋಗಿದ್ದವು. ಕರಣಹಸಿಗೆ, ಮಂತ್ರಗೋಪ್ಯ, ಪದ ಮಂತ್ರ ಗೋಪ್ಯ, ಸಕೀಲಗಳು ಮುಂತಾದ ಗ್ರಂಥಗಳ ಪ್ರತಿಗಳು ಸಿದ್ಧವಾಗಿದ್ದವು. ನಾಗಮ್ಮನ ಅನುಭವ ಪೂರ್ಣ ವಾಣಿಯಿಂದ ಸಂಗ್ರಹಿಸಿ ಆತನು ರಚಿಸಿದ ಮಿಶ್ರಾರ್ಪಣ ಗ್ರಂಥವು ಮುಗಿಯುತ್ತ ಬಂದಿತ್ತು. ಮಲೆನಾಡ ಹವೆಗೆ ಚೆನ್ನಬಸವಣ್ಣನ ಆರೋಗ್ಯ ಕೆಟ್ಟಿತ್ತು, ಕಿನ್ನರಯ್ಯ ಬಯಲಾದ ಮೇಲೆ ವಸಹಾತಿನ ಬೆನ್ನುಮೂಳೆ ಮುರಿದಂತಾಗಿತ್ತು. ಘೋರಾರಣ್ಯದ ಮಧ್ಯದಲ್ಲಿ ವರ್ಷದಲ್ಲಿ ನಾಲ್ಕುತಿಂಗಳು ರಭಸದಿಂದ ಸುರಿಯು ಮಳೆಯಲ್ಲಿ ಇರಲಾಗದೆ ಹಲವರು ಚದರಿ ಹೋಗುವ ಇಚ್ಛೆ ತಾಳಿದ್ದರು. ಇನ್ನು ತನ್ನ ಮಣಿಹ ಮುಗಿದಂತೆಯೇ ಎಂದು ಭಾವಿಸಿದ ಚೆನ್ನಬಸವಣ್ಣನು ಹೆಚ್ಚುಹೆಚ್ಚಾಗಿ ಅಂತರ್ಮುಖಿಯಾದನು. ಒಂದು ದಿನ ತಮ್ಮ ನಿರಂಜನ ಪೀಠದ ಅಧಿಕಾರವನ್ನು ನಿರ್ವಹಿಸುವಂತೆ ಸಿದ್ಧರಾಮ ಶಿವಯೋಗಿಗಳಿಗೆ ನಿರೂಪಣ ಪತ್ರವನ್ನು ಬರೆದು ಅದನ್ನೂ ಟೊಪ್ಪಿ ಕಮಂಡಲು, ಯೋಗದಂಡಗಳನ್ನೂ ಕರಣಹಸಿಗೆ ಮುಂತಾದ ಗ್ರಂಥಗಳ ಪ್ರತಿಗಳನ್ನೂ ರೇಚಣ್ಣನ ಅಂಕಿತದಲ್ಲಿ ಸಮರ್ಥನಿಷ್ಠರಾದ ಜಂಗಮ ಮೂರ್ತಿಗಳೊಡನೆ ಸೊನ್ನಲಾಪುರಕ್ಕೆ ಕಳುಹಿದನು. ಇಲ್ಲಿಗೆ ಚೆನ್ನಬಸವಣ್ಣನವರ ಜೀವನದ ಧ್ಯೇಯವು ಪೂರೈಸಿದಂತಾಗಿ ಅವರು ಯೋಗನಿರತರಾದರು.

ಕಿನ್ನರಿಬೊಮ್ಮಯ್ಯ ಬಯಲಾದ ಸುದ್ದಿಯನ್ನು ಒಂದೆರಡು ತಿಂಗಳಾದಮೇಲೆ ಸಂಚಾರದಲ್ಲಿದ್ದ ರುದ್ರಮುನಿಗಳು ಕೇಳಿ ಉಳಿವೆಗೆ ಬಂದರು. ಪರಸ್ಥಿತಿಯನ್ನು ವಿಶ್ಲೇಷಿಸಿ ನೋಡಿ, ಚೆನ್ನಬಸವಣ್ಣನವರ ಅವತಾರ ಸಮಾಪ್ತಿ ದೂರವಿಲ್ಲೆಂದು

ತಿಳಿದರು. ಧ್ಯಾನಯೋಗದ ಹೊರತು ಚೆನ್ನಬಸವಣ್ಣನವರ ಎಲ್ಲ ಇಂದ್ರಿಯ ಗಳ ಕ್ರಿಯೆಗಳು ನಿಂತುಹೋಗಿದ್ದವು. ಆತ್ಮಜ್ಯೋತಿಯು ಪರಂಜ್ಯೋತಿಯಲ್ಲಿ ಬೆರೆವ ಭರವು ಅವರ ಮುಖದಲ್ಲಿ ತೇಜಃಪುಂಜವಾಗಿ ಸ್ಫುರಿಸುತ್ತಿತ್ತು. ಮಹದ ಬೆಳಗೇ ದರ್ಶನಕೊಟ್ಟಂತಾಗಿ ರುದ್ರಮುನಿಗಳು ಪರವಶತೆಯಿಂದ ಮೈಯಿಕ್ಕಿ ವಂದಿಸಿದರು. ನಾಗಮ್ಮ ಸಾಷ್ಟಾಂಗವಾಗಿ ಎರಗಿದಳು. ಶರಣರು ಓಲೈಸಿದರು, ಭಕ್ತರು ಭಜಿಸಿದರು. ಆಗ ನಾಗಮ್ಮನ ಹೃದಯದಲ್ಲಿ ದುಗುಡವೊಂದು ತಲೆ ದೋರಿತು. ಚೆನ್ನಬಸವಣ್ಣ ತನ್ನ ಮಗನೆಂಬ ಮಾಯಾ ಮೋಹದ ವ್ಯಥೆಯೇನೂ ಅದಲ್ಲ. ಅದು ಕೊಂಚವೂ ಇರಲಿಲ್ಲ. ಆತನು ಗುರು, ತಂದೆ ಎಂದೇ ಭಾವಿ ಸಿದ್ದಳು. ಷಟ್‌ಸ್ಥಲಚಕ್ರವರ್ತಿ ಶಿವಯೋಗಿ ಎಂದು ಪೂಜ್ಯನನ್ನಾಗಿ ಕಾಣು ತ್ತಿದ್ದಳು. ಬಸವ, ಚೆನ್ನಬಸವ, ಅಲ್ಲಮಪ್ರಭು ಇವರಿಗೆ ಹಾಗೆಯೇ ಇನ್ನುಳಿದ ಶಿವಶರಣರಿಗೆ ತಾನು ಕರುಣೆಯ ಕೂಸು ಎಂದೇ ಎಂದೆಂದಿಗೂ ಭಾವಿಸಿದ್ದಳು. 'ಸಂಗನಬಸವಣ್ಣನ ಪ್ರಸಾದದಿಂದ ಎನ್ನ ಭವದ ಬಳ್ಳಿಯ ಬೇರು ಹರಿಯಿತ್ತು.' 'ಚೆನ್ನಬಸವಣ್ಣನು ಕರುಣಿಸಿದ್ದರಿಂದ ಎನ್ನ ಮನದ ಕಪಟ ಹಿಂಗಿತ್ತು.' 'ಪ್ರಭು ದೇವರ ಶ್ರೀಚರಣದ ಸೇವೆಯಿಂದ ಎನ್ನ ಅಂತರಂಗದ ಸಂದು ಸಂಶಯ ತೊಲ ಗಿತ್ತು' ಎಂದು ಯಾವಾಗಲೂ ಹಾಡುತ್ತಿದ್ದಳು. ಹಾಗಾದರೆ ಈಗಾದ ದುಗು ಡದ ಕಾರಣವೇನು? ಬಸವಣ್ಣ ಸಂಸ್ಥಾಪಿಸಿದ ಶರಣಧರ್ಮ—ಸರ್ವರೂ ಸಮಾನತೆಯಿಂದ ಆತ್ಮೋದ್ಧಾರ ಸಾಧಿಸುವ ಧರ್ಮ— ನಾಡಿನಲ್ಲಿ ಸುಸ್ಥಿರವಾಗಿ ನೆಲೆಗೊಳ್ಳುವದು ತನ್ನ ಜೀವನದ ಗುರಿ. ಅದಾಗದ ಮೊದಲೇ ಚೆನ್ನಬಸವಣ್ಣ ತೊಲಗುವನೆಂಬುದು ಕಾರಣವಾಗಿತ್ತು. ಆಧಾರ ತಪ್ಪಿದ ಬಳ್ಳಿಯಂತೆ, ತಾಯ ನಗಲಿದ ಕರುವಿನಂತೆ ಆಗಿತ್ತು ಆಕೆಯ ಅಂತರಂಗದ ಸ್ಥಿತಿ. ಚೆನ್ನಬಸವಣ್ಣ ನವರ ಮುಖದ ಆ ಬೆಳಗು ಮಹಾಬೆಳಗ ಕೂಡಿದಾಗ ಶರಣರು 'ಶಿವಶಿವಾ' ಎಂದು ಉಸಿರುಗರೆದರು. ಭಕ್ತರೆಲ್ಲ ಗೋಗರೆದರು. ಗಿಡಮರಗಳೆಲ್ಲ ಸ್ತಬ್ಧ ವಾಗಿ ಧ್ಯಾನದಲ್ಲಿ ಮುಳುಗಿದಂತಿದ್ದವು. ನಾಗಮ್ಮ,

"ಅಯ್ಯಾ ನಾನದವೆ, ಅಯ್ಯಯ್ಯಾ ಕೈಯ ಕೊಲ ಕೊಂಬರೇ?
ಅಯ್ಯಾ ಎಳೆಗರುವಿನ ಎಳಗಂದಿಯನೆಳೆದೊಯ್ವರೇ ಭಕ್ತರು?
ಅಯ್ಯೋ ಅಯ್ಯೋ ಎನಲೊಯ್ವರೇ
ಬಸವಣ್ಣ ಪ್ರಿಯಚೆನ್ನಸಂಗಯ್ಯಾ?"

ಎಂದು ಬಾಯ್ಬಿಟ್ಟು ಪ್ರಲಾಪಿಸಿದಳು.

ರುದ್ರಮುನಿಗಳ ನೇತೃತ್ವದಲ್ಲಿ ಚೆನ್ನಬಸವಣ್ಣನವರ ಪಾರ್ಥಿವ ಶರೀರಕ್ಕೆ ಸುವಿಧಾನಪೂರ್ವಕವಾಗಿ ಸಮಾಧಿಯಾಯಿತು. (ಕ್ರಿ. ವ. ೧೧೭೦). ಅಲ್ಲಿ ಅವರ ದೇವಸ್ಥಾನ ಉಂಟಾಗಿ ಪ್ರತಿವರ್ಷ ಮಹೋತ್ಸವ ನಡೆಯುತ್ತಿದೆ.

ಮುಂದೆ ಮೂರು ದಿವಸಕ್ಕೆ ಸೊನ್ನಲಾಪುರದಿಂದ ಮರಳಿದ ರೇಚಣ್ಣ ಮೊದಲಾದವರು ತಮ್ಮ ಮಹಾಶಿವಯೋಗಿಯನ್ನು ಕಾಣದೆ ಮರುಗಿದರು.

ಈ ಮೂರು ದಿವಸ ನಾಗಮ್ಮ ಬಹುತರವಾಗಿ ಮೌನವಾಗಿಯೇ ಇದ್ದಳು. ಆಶ್ರಮದಲ್ಲೆಲ್ಲ ಔದಾಸೀನ್ಯವೇ ಆವರಿಸಿತ್ತು. ನಾಗಮ್ಮನಿಗೆ ಲೌಕಿಕದ ಯಾವ ಸೂತ್ರ ತಂತ್ರಗಳೂ ಉಳಿಯಲಿಲ್ಲ. ಸರ್ವಸ್ವತಂತ್ರಳು. ಜೀವನ ಹೇಗೆಂಬ ವಿಚಾರವಂತೂ ಮೊದಲೇ ಇಲ್ಲ. ಶರಣಧರ್ಮದ ಮೇಲಿನ ಶ್ರದ್ಧೆ ನಿಷ್ಠೆ ಇತ್ಯಾದಿ ಭಕ್ತಿಪಾರಮ್ಯದಲ್ಲಿ ತಲ್ಲೀನಳಾಗಿದ್ದಳು. ಅದರ ಹೊರತು ಬಾಳುವ ಇಲ್ಲವೆ ಬಯಲಾಗುವ ಭಾಗವೇ ಇಲ್ಲ. ಧ್ಯೇಯವೆಂದರೆ ಒಂದೇ, ಧರ್ಮೋದ್ಧಾರ. ಸ್ಮರಣವೆಂದರೆ ಪ್ರಭುದೇವ, ಬಸವಣ್ಣ, ಚೆನ್ನಬಸವಣ್ಣ ಇವರ ಆತ್ಯಂತಿಕ ಅಮೃತವಾಣಿ. ಇದ್ದಷ್ಟು ದಿವಸ ಅದನ್ನೇ ಮಾಡುವದು. ಅದಕ್ಕಾಗಿಯೇ ಶ್ರಮಿಸುವವರ ಸಹಕಾರ. ಅದರ ವಿಚಾರವನ್ನೇ ಹೇಳುವದು, ಕೇಳುವದು. ಧ್ಯೇಯದಲ್ಲಿಯೇ ಮನಸ್ಸು ಪೂರ್ಣವಾಗಿ ಎರಕಗೊಂಡಿತ್ತು. ಈ ಧ್ಯೇಯಾಸಕ್ತಿಗಾಗಿಯೇ ಇನ್ನು ಬಾಳುವದು. ಈ ನಿರ್ಧಾರದಿಂದ ಮತ್ತೆ ಮೈದೋರಿತು ಉತ್ಸಾಹ ಅವಳಲ್ಲಿ.

ಆದರೆ ಅನುಭವಮಂಟಪ ಸಂಸ್ಥೆ ಮತ್ತೆ ಒಡೆಯಿತು. ಅನುಭಾವಿಗಳು ಅಲ್ಲಿ ನಿಲ್ಲದಾದರು. ಅವರು ಗ್ರಂಥಭಾಂಡಾರವನ್ನು ಹಂಚಿಕೊಂಡು ತಮ್ಮಿಷ್ಟ ಬಂದಕಡೆಗೆ ಸಾಗಿಹೋದರು. ನಾಡಿನ ಬೇರೆಬೇರೆ ಭಾಗಗಳಲ್ಲಿ ತಮ್ಮ ಮಠಗಳನ್ನು ಸ್ಥಾಪಿಸಿ ಲಿಂಗವಂತ ಧರ್ಮಪ್ರಸಾರವನ್ನು ಕೈಕೊಂಡರು. ಕೊನೆಗೆ ಉಳಿದ ಪ್ರಮುಖರೆಂದರೆ ರುದ್ರಮುನಿದೇವರು,ನಾಗಮ್ಮ, ನುಲಿಯಚಂದಯ್ಯ. ರುದ್ರಮುನಿದೇವರು ದೇಶದಲ್ಲಿ ಅಲ್ಲಲ್ಲಿ ಸ್ಥಾಪಿಸಿದ ತಮ್ಮ ಮಠಗಳನ್ನು ನಿರೀಕ್ಷಿಸುತ್ತ ಶ್ರೀಶೈಲದ ಕಡೆಗೆ ಹೋದರು.

೫ ಕಡೆಯ ರಂಗಸ್ಥಾಪನೆ

ನಾಗಮ್ಮನೂ ಚಂದಯ್ಯನೂ ಹತ್ತೆಂಟು ಜನ ಅನುಯಾಯಿಗಳೊಡನೆ ಉಳಿವೆಯನ್ನು ಬಿಟ್ಟು ಮುಂಡಗೋಡ ಶಿರಸಿ ಬನವಾಸಿ ಸಾಗರ ಶಿರಾಳಕೊಪ್ಪ ಗಳ ಕಡೆಗೆ ಅಲೆದಾಡುತ್ತ ತುಂಗಭದ್ರಾ ನದಿಗಳ ಪ್ರದೇಶಕ್ಕೆ ಬಂದರು. ಈ ಭಾಗವೆಲ್ಲ ಸಮಗ್ರ ಶೈವಸಾಮ್ರಾಜ್ಯದ ಪ್ರದೇಶವಾಗಿತ್ತು. ಆದರೆ ಎಲ್ಲ ಶೈವ ಮಠಗಳೂ ಷಟ್‌ಸ್ಥಲಮಾರ್ಗದ ಅನುವರ್ತಿಗಳಾಗಿರಲಿಲ್ಲ. ಬಸವಣ್ಣನವರು ಬನವಾಸಿಯ ಆಡಳಿತದಿಂದ ಕಲ್ಯಾಣಕ್ಕೆ ಮರಳಿದ ಬಳಿಕ, ಚೆನ್ನಬಸವಣ್ಣ ಅಧ್ಯಯನ ಮುಗಿಸಿ ಕಲ್ಯಾಣದಲ್ಲಿ ಅನುಭವಮಂಟಪದ ಕಾರ್ಯಾಚರಣೆ ಕೈಕೊಂಡ ಬಳಿಕ, ಪ್ರಭುದೇವರು ಅನುಭವಮಂಟಪ ಅಧ್ಯಕ್ಷರಾದ ಬಳಿಕ, ಪ್ರಮಥಗಣದ ವಿಚಾರ ಮಂಥನದಿಂದ ಪರಿಷ್ಕೃತಗೊಂಡ ಷಟ್‌ಸ್ಥಲಸಿದ್ಧಾಂತದ ಪ್ರಚಾರ ಈ ಭಾಗದಲ್ಲಿ ಬಹಳವಾಗಿ ಆಗಿರಲಿಲ್ಲ. ಅದನ್ನು ನಾಗಮ್ಮನ ಈ ಸಂಚಾರವು ಬಹುಮಟ್ಟಿಗೆ ಪೂರೈಸಿತು. ಹೋದಹೋದಲ್ಲೆಲ್ಲ ಆ ವೃದ್ಧ ಶಿವಯೋಗಿಣಿಯನ್ನು ಪೂಜ್ಯಭಾವನೆಯಿಂದ ಸ್ವಾಗತಿಸಿ, ತಮ್ಮಲ್ಲಿರಿಸಿಕೊಂಡು ತತ್ವೋಪದೇಶ ಪಡೆಯುತ್ತಿದ್ದರು. ಅಲ್ಲಲ್ಲಿ ಉಳಿದ ಶೈವಮಠಾಧೀಶರೆಲ್ಲ ಒಬ್ಬರಿಂದೊಬ್ಬರಂತೆ ಶಿಷ್ಯತ್ವ ಪಡೆದು, ಅಷ್ಟಾವರಣ ಅಂಗ, ಪಂಚಾಚಾರ ಪ್ರಾಣ, ಷಟ್‌ಸ್ಥಲ ಆತ್ಮ ಆಗಿರುವ ವೀರಶೈವರ ಮಠಾಧೀಶರಾದರು. ಮತತತ್ವಗಳ ಗ್ರಂಥಗಳ ಪ್ರತಿ ಮಾಡಿಕೊಂಡರು. ಶಿವಯೋಗದ ಬೆಳಗು ಪಸರಿಸಲು ಅನುಕೂಲತೆ ಉಂಟಾಗ ಹತ್ತಿತು.

ಶಿವಯೋಗಿಣಿಯ ಈ ಸಂಚಾರವು ಬಹುಜನ ಭಕ್ತರನ್ನು ಶರಣರ ಬಳಗವನ್ನು ಒಳಗೊಂಡಿತು. ಬನವಾಸಿಯಲ್ಲಿ ಬಸವಣ್ಣನವರ ನಂಬಿಗೆಯ ಭಕ್ತಮಿತ್ರನಾದ ಸೂರಣಶೆಟ್ಟಿ ಶಿವಶರಣರ ಸೇವೆಯ ಒಲವಿನಿಂದ-ತ್ಯಾಗಭಾವನೆಯಿಂದ ತನ್ನ ಸಂಪತ್ತನ್ನು ಕಟ್ಟಿಕೊಂಡು ಶಿವಯೋಗಿಣಿಯನ್ನು ಅನುಸರಿಸಿ ದಾಸೋಹ ನಡೆಸಿದನು. ವೃದ್ಧನಾಗಿದ್ದ ಬನವಾಸಿಯ ಕದಂಬರಾಜ ಕೀರ್ತಿದೇವರಸು (ಈತನು, ಪ್ರಭುದೇವರನ್ನು ಒಲಿಸಹೋಗಿ ಸೋತ ಮಾಯಾಂಗನೆಯ ತಂದೆ)

ಬಸವೇಶ್ವರರ ಸವಿನೆನಪಿನಿಂದ ಪ್ರೇರಿತನಾಗಿ, ವಿಪುಲಧನವನ್ನು ಶಿವಯೋಗಿಣಿಯ ಅನುಯಾಯಿಗಳ ಪ್ರಸಾದಕ್ಕೆಂದು ಸೂರಣಶೆಟ್ಟಿಯ ವಶಕ್ಕೆ ಕೊಟ್ಟಿದ್ದನು. ಚಿಕ್ಕಪುಟ್ಟ ದೊರೆಗಳು ಅಲ್ಲಲ್ಲಿ ಅನ್ನಸಂತರ್ಪಣೆ ಮಾಡುತ್ತಿದ್ದರು. ಧನಧಾನ್ಯಗಳ ಕಾಣಿಕೆ ನೀಡುತ್ತಿದ್ದರು. 'ಬಸವಣ್ಣನವರ ಅಕ್ಕ, ಚೆನ್ನಬಸವಣ್ಣನವರ ತಾಯಿ, ನಾಗಮ್ಮ ಶಿವಯೋಗಿಣಿ ಉಳಿವೆಯನ್ನು ಬಿಟ್ಟು ಬರುತ್ತಿದ್ದಾರೆ' ಎಂದರೆ ಸಾಮಾನ್ಯರಿಗೂ ಕೂಡ ಕುತೂಹಲ! ದರ್ಶನದ ಆತುರ! ಒಡನೆ ಒಂದೆರಡು ದಿನವಾದರೂ ಪ್ರಯಾಣಿಸುವ ಹಂಬಲ! ಹೀಗೆ ಶಿವಯೋಗಿಣಿ ಬೆಳೆದ ಬಳಗದೊಡನೆ ಮೆಲ್ಲನೆ ಸಾಗುತ್ತ ಶಿವಾನುಭವ ಪ್ರವಚನ ನಡಿಸುತ್ತ, ಧರ್ಮಾಧಿಕಾರಿಗಳಿಗೆ ಸಂತಸ ನೀಡುತ್ತ, ತತ್ವಾರ್ಥಿಗಳನ್ನು ತಣಿಸುತ್ತ ತರಿಕೆರೆಯ ಹತ್ತಿರದ ಎಣ್ಣೆಹೊಳೆಯ ಭಾಗಕ್ಕೆ ಬಂದಳು.

ಮಹೇಶ್ವರ ಹಳ್ಳಿಯ ಸಿದ್ಧವೀರಸ್ವಾಮಿಗಳು ಆದರದ ಸ್ವಾಗತ ನೀಡಲು ಸಿದ್ಧವಾಗಿ ಕಾದಿದ್ದರು. ಇವರು ಎರಡು ವರ್ಷಗಳ ಹಿಂದೆ ಉಳಿವೆಗೆ ಹೋಗಿ ಚೆನ್ನಹಸವಣ್ಣನವರ ಸಹವಾಸದಲ್ಲಿ ಕೆಲವು ದಿವಸ ಶಿವಯೋಗ ಸಾಧನೆಯ ಅಳವಡಿಸಿಕೊಂಡು ಬಂದವರಾಗಿದ್ದರು. ಅಲ್ಲಿ ಈ ಶಿವಯೋಗಿಣಿಯ ನಿಲವಿನಿಂದ ಪ್ರಭಾವಿತರಾಗಿದ್ದರು. ಭೂಸ್ವಾಸ್ತ್ಯವನ್ನೂ ರಾಜಮನ್ನಣೆಯನ್ನೂ ಪಡೆದ ಇವರ ಶೈವಮಠವು ಈಗ ವೀರಶೈವ ಮಠವಾಗಿದ್ದಿತು. ನಾಗಮ್ಮನವರು ಅಲ್ಲಿ ಬಂದ ಬಳಿಕ ಈ ಸ್ವಾಮಿಗಳ ಯೋಜನೆಯಂತೆ ಪ್ರವಚನ ಪರ್ವಗಳು ಆರಂಭವಾದವು. ಆಗ ಅರವತ್ತೈದು ವರ್ಷ ಮಿಕ್ಕಿದ ಶಿವಯೋಗಿಣಿಯ ಶರೀರ ಇದುವರೆಗಿನ ಸಂಚಾರದಿಂದ ಬಹಳ ಬಳಲಿದೆಯೆಂದೂ ಇನ್ನು ಅಂತಹ ಆಯಾಸವನ್ನು ಅದು ತಡೆಯಲಾರದೆಂದೂ ಸ್ವಾಮಿಗಳೂ ಹಿರಿಯ ಅನುಭಾವಿಗಳೂ ಕಂಡುಕೊಂಡರು. "ಇನ್ನು ನೀವು ಒಂದು ಕಡೆಗೆ ನಿಂತು ಶರೀರವನ್ನು ಆರೈಕೆಗೊಳಪಡಿಸಿ, ನಿಮ್ಮ ಪರಮಾನುಭಾವ ಸಾರದ ಶ್ರವಣಸುಖವು ಭಕ್ತರಿಗೆ ನಾಲ್ಕು ದಿವಸ ಹೆಚ್ಚಿಗೆ ದೊರೆಯುವಂತೆ ಮಾಡಬೇಕು" ಎಂದು ಬಿನ್ನವಿಸಿದರು. ನಾಗಮ್ಮ ಅದನ್ನು ಒಪ್ಪಲೇ ಬೇಕಾಯಿತು. ಎಣ್ಣೆಹೊಳೆಯ ಪ್ರಶಾಂತ ಸುರಮ್ಯ ಪ್ರದೇಶವು ಒಳ್ಳೇ ಆಕರ್ಷಣೀಯವೂ ಆಗಿತ್ತು.

ಚಂದಯ್ಯ ತನ್ನ ಅನುಯಾಯಿಗಳೊಡನೆ ಕೂಡಿ, ಬಿದಿರು ಕಡಿದು, ಹುಲ್ಲು ಕೊಯ್ದು, ಸೊರಬಿ ನುಲಿಗಳನ್ನು ಹೊಸೆದು ಈಗ ಬೀಡಾರ ಮಾಡಿದ ಸ್ಥಳ

ದಲ್ಲಿಯೇ ಹುಲ್ಲುಮನೆಗಳನ್ನು ಕಟ್ಟಿದನು. ಒಳಮುಗ್ಗಲು ಶಿವಯೋಗಿಣಿಯ ಸಾಧನೆಯ ಯೋಗಮಂದಿರ, ಅದರ ಮುಂದುಗಡೆ ದರ್ಶನಾರ್ಥಿಗಳೊಡನೆ ಅನುಭವಗೋಷ್ಠಿ ನಡಿಸುವ ಸ್ವಲ್ಪ ದೊಡ್ಡದಾದ ಯೋಗಮಂಟಪ ರಚಿತವಾದವು. ಚಂದಯ್ಯನು ತನಗಾಗಿ ಹತ್ತಿರದಲ್ಲಿ ಬೇರೆ ಕುಟೀರವನ್ನು ನಿರ್ಮಿಸಿಕೊಂಡನು. ಶಿವಯೋಗಿಣಿಯ ಶಿಷ್ಯತ್ವ ಪಡೆದು ಅಲ್ಲಿಯೇ ಉಳಿಯಲಿಚ್ಛಿಸಿದ ವೈರಾಗ್ಯಶೀಲ ಶರಣೆಯರು, ಶರಣರು ಬೇರೆ ಬೇರೆ ಚಿಕ್ಕಪುಟ್ಟ ಹುಲ್ಲುಮನೆಗಳನ್ನು ಮಾಡಿಕೊಂಡರು. ಅವೆಲ್ಲವು ಒಂದು ಕ್ರಮದಿಂದ ಏರ್ಪಡುವಂತೆ ಮಾಡಿ ಚಂದಯ್ಯನು ಆಶ್ರಮವನ್ನು ಓರಣಗೊಳಿಸಿದನು.

೬ ಶಿವನೊಲುಮೆಗೆ ಸರ್ವರ ಕಲ್ಯಾಣ ಚಿಂತನೆ

ತಮ್ಮಿಚ್ಛೆಯಂತೆ ಶಿವಯೋಗಿಣಿಯು ಅಲ್ಲಿ ತಮ್ಮ ಸಮೀಪದಲ್ಲಿ ನೆಲೆಯಾದುದಕ್ಕೆ ಸಂತೊಷಪಟ್ಟ ಸಿದ್ಧವೀರಸ್ವಾಮಿಗಳು ಆ ಮಹಾಮಾತೆಗೆ ಒಂದು ಒಳ್ಳೆಯ ಮಠವನ್ನು ಕಟ್ಟಿಕೊಡುವ ಮನಸ್ಸು ಮಾಡಿದರು. ಶ್ರೀಮಂತ ಭಕ್ತರೂ ಅವರ ಅಭಿಪ್ರಾಯಕ್ಕೆ ಬೆಂಬಲವಿತ್ತಿದ್ದರು. ಅವರೊಂದು ದಿನ ಹಲವುಭಕ್ತರನ್ನು ಕರೆದುಕೊಂಡು ಆಶ್ರಮಕ್ಕೆ ಬಂದರು. ನಾಗಮ್ಮ ಎದುರೆದ್ದು ಹೋಗಿ ವಂದಿಸಿ ಸನ್ಮಾನಿಸಿ ಆಶ್ರಮದ ಮುಂದುಗಡೆಯ ಪೀಠದ ಮೇಲೆ ಕುಳ್ಳಿರಿಸಿ, ಬಂದ ಭಕ್ತರಿಗೆ ಕೂಡ್ರುಹೇಳಿ ಹತ್ತಿರ ಹುಲ್ಲುಚಾಪೆಯ ಮೇಲೆ ತಾನು ಕುಳಿತಳು. ಸಿದ್ಧವೀರ ದೇವರು ಮುಂದಕ್ಕೆ ಬಾಗಿ ವಿನಯದಿಂದ ಕೇಳಿದರು :

"ಅಮ್ಮನವರೇ ಏನಾದರೂ ಈ ಹುಲ್ಲುಮನೆಗಳು ಸರ್ವಋತುಗಳಲ್ಲಿಯೂ ಸುರಕ್ಷಿತವಾಗಿರಲಾರವು. ಸೂರುಗಳಿಂದ ತಂಗಾಳಿ, ಬಿಸಿಲು, ಮಳೆಯ ಧಾರೆಗಳು ಒಳಗೆ ಬಂದೇ ಬರುವವು. ಹಣ್ಣಾದ ದೇಹಕ್ಕೆ ಅದೆಲ್ಲ ತಾಳದು. ಆದರಿಂದ ಇಲ್ಲಿ ತಮ್ಮ ವಾಸಕ್ಕಾಗಿ ಒಂದು ಮಠವನ್ನು ಕಟ್ಟಿಸಬೇಕೆಂದಿದ್ದೇವೆ. ಮಾತೆಯವರ ಅಪ್ಪಣೆಯಾಗಬೇಕು."

"ಅದೇಕೆ ಬೇಕು ಗುರುಗಳೆ ನನಗೆ ? ಶಿವನು ಕರುಣಿಸಿದ ಈ ವಿಶ್ವವೆಲ್ಲ ನನಗಿದೆ. ನಿಮ್ಮ ಸನ್ನಿಧಿಯ ಸುಮಂಗಲ ವಾತಾವರಣ ವಿಶಾಲವಾಗಿ ಹರಡಿದೆ. ಇದೆಲ್ಲವನ್ನು ಮನದಣಿಯೆ ಸವಿದು ಸುಖಿಸುವ ಬದಲು ನಾಲ್ಕು ಗೋಡೆಗಳ ನಡುವಿನ ಸೀಮಿತ ಸಂಕುಚಿತ ಭೋಗಕ್ಕೆ ಎಡೆಯಾಗುವದು ಒಳ್ಳೆಯದೇ ದೇವರು ?......"

ಕಣ್ಣರಳಿಸಿ ಸುತ್ತು ನೋಡಿ ಮತ್ತೆ ಹೇಳಿದಳು.

"ಮೇಲೆ ಕೆಳಗೆ ಸುತ್ತು ಮುತ್ತು ದೃಷ್ಟಿಹರಿದಷ್ಟೂ ಶೋಭಾಯಮಾನವಾಗಿದೆ ಶಿವನ ಸಿರಿ. ಅದರಾಚೆಗೆ ಮತ್ತದರಾಚೆಗೂ ಇದೇ ಶೋಭೆಯೆಂದು ಈ ದೃಷ್ಟಿ ಒಳದೃಷ್ಟಿಗೆ ತೋರಿಸುತ್ತದೆ."

ಮುಖ ಪ್ರಫುಲ್ಲಿತವಾಗಿತ್ತು. ದೃಷ್ಟಿ ಶೂನ್ಯವನ್ನು ನೋಡುತ್ತಿತ್ತು.

"ಬರಲಿ, ಬಿಸಿಲು ಗಾಳಿ ಬಾಗಿಲಿನಿಂದ ಬರಲಿ, ಸೂರಿನಿಂದ ಬರಲಿ; ಬಂದು ಮೈಗೂಡಲಿ; ಅದೆಲ್ಲ ಶಿವನ ಪ್ರಸಾದ! ಅದು ಒಳಹೊರಗೆ ಒಂದಾಗಿರಲಿ!!" ತನ್ನಷ್ಟಕ್ಕೆ ಹೊರಬಿದ್ದ ವಾಣಿಯಿದು.

ಶಿವಯೋಗಿಣಿಯ ಕಣ್ಣುಗಳಲ್ಲಿ ಹೊಳೆದ ಬೆಳಕ ಕಂಡು ಸ್ವಾಮಿಗಳು-ಭಕ್ತರು ಸ್ತಂಭಿತರಾದರು. ಸ್ವಲ್ಪ ವೇಳೆಯ ನಂತರ ನಾಗಮ್ಮನವರು ಆ ಭಾವಯೋಗದಿಂದಿಳಿದು ಪ್ರಕೃತಕ್ಕೆ ಬಂದು ಮುಂದಿನವರನ್ನು ನೋಡಿದರು. ಕಣ್ಣುಗಳಲ್ಲಿ ಆನಂದಬಾಷ್ಪ ಬಂದಿದ್ದಿತು. ಸಿದ್ಧವೀರದೇವರು ಸಾವರಿಸಿಕೊಂಡು ನುಡಿದರು :

"ತಮಗೆ ಹೇಗೆ ಸಂತೋಷವೋ ಹಾಗೆ ಆಗಲಿ. ತಮಗಾಗಿ ಬೇಡ; ಆದರೆ ಇಲ್ಲಿ ಬರುಹೋಗುವವರ ವಸತಿಗಾಗಿ ದಾಸೋಹದ ವ್ಯವಸ್ಥೆಗಾಗಿ ಒಂದು ಮಠ ಇರುವದು ಅವಶ್ಯವೆನಿಸಿದೆ. ಅದಕ್ಕಾದರೂ ಅಪ್ಪಣೆಯಾಗಬೇಕು."

"ಆಗಲಿ ಅಪ್ಪನವರೇ, ಅದೆಲ್ಲ ಶಿವನ ಸೇವೆ. ಅದು ಆಗಲೇ ಬೇಕು. ಶಿವನವರು ಬಂದಾಗ ಅವರ ಸೇವೆಗೆ ಸದಾ ಸಿದ್ಧವಾಗಿರುವದು ಒಳ್ಳೆಯದು. ಜನರ ನೆರವಿ ಮಾಡುವ ಗಣಪರ್ವ ಸಮಾರಾಧನೆಗಳಿಗಿಂತ ಬಂದವರ ಪರಾಮರಿಕೆ ಮಾಡುವದು ನೂರ್ಮಡಿ ಒಳ್ಳೆಯದು. ಇದರ ಬಗೆಗೆ ಬಸವಣ್ಣ ಹೇಳಿದ ವಚನ ನೆನಪಾಗುತ್ತಿದೆ.

> ಹರಸಿ ಮಾಡುವದು ಹರಕೆಯ ದಂಡ,
> ನೆರಹಿ ಮಾಡುವದು ಡಂಭಿನ ಭಕ್ತಿ,
> ಹರಸಬೇಡ, ನೆರಹಬೇಡ;
> ಬಂದ ಭರವನರಿದಡೆ ಕೂಡಿಕೊಂಡಿಪ್ಪ ನಮ್ಮ
> ಕೂಡಲಸಂಗಮದೇವ.

ಇದು ದಾಸೋಹದ ಮರ್ಮ. ಅತಿಥಿಸತ್ಕಾರಕ್ಕೆ ಅಗತ್ಯವಿದ್ದ ಮಠ ಮಾಡಬಹುದು ಗುರುಗಳೇ!"

"ಸಂತೋಷ ತಾಯಿ, ಕೂಡಲೆ ಕಾರ್ಯ ಕೈಕೊಳ್ಳುವೆನು."

ಭಕ್ತರೂ ಸಂತಸದ ಸಮ್ಮತಿ ಸೂಚಿಸಿದರು.

ಹಿರಿಯ ಭಕ್ತನೊಬ್ಬ ಕೈಮುಗಿದು ಕೇಳಿದ :

"ಅಮ್ಮನವರೆ, ಬಸವಣ್ಣನವರ ನುಡಿಯೆಂದರೆ ನಮ್ಮ ಮನಸ್ಸಿಗೆ ಮಹದಾನಂದ. ಈಗವರ ಒಂದು ಮಾತು ಹೇಳಿದಿರಿ. ಮತ್ತೆ ನಾಲ್ಕು ಮಾತುಗಳಿಂದ ಆನಂದಗೊಳಿಸಬೇಕು ತಾಯೀ !"

"ಆಗಲಿ ಅಪ್ಪಾ, ಶಿವನಿಗೆ ಶರಣುಹೋದುದೇ ಬಸವಣ್ಣನ ಜೀವನದ ಘನತೆ. ಶಿವನೊಲುಮೆಗಾಗಿ ಅವನು :

ಅರಿಸಿನವನೇ ಮಿಂದು, ಹೊಂದೊಡಿಗೆಯನೆ ತೊಟ್ಟು,
ಪುರುಷನ ಒಲವಿಲ್ಲದ ಲಲನೆಯಂತಾಗಿರ್ದೆನಯ್ಯಾ !
ವಿಭೂತಿಯನೆ ಹೂಸಿ, ರುದ್ರಾಕ್ಷಿಯನೆ ಕಟ್ಟಿ
ಶಿವ ನಿಮ್ಮೊಲವಿಲ್ಲದಂತೆ ಆಗಿರ್ದೆನಯ್ಯಾ
ಕೆಟ್ಟು ಬಾಳುವರಿಲ್ಲ ಎಮ್ಮವರ ಕುಲದಲ್ಲಿ
ನೀನೊಲಿದಂತೆ ಸಲಹಯ್ಯಾ ಕೂಡಲಸಂಗಮದೇವಾ.

ಎಂದು ಹಂಬಲಿಸುವನು. ಶಿವನೊಲಿಯುವದಕ್ಕೆ ತಾನೆಷ್ಟು ಭಕ್ತಿಯನ್ನು ಮಾಡಿದರೂ ಶಿವಪೂಜೆ ಗೈದರೂ ಅವನಿಗೆ ಸಾಲದು.

ಉದಯಾಸ್ತಮಾನವೆನ್ನ ಬೆಂದ ಬಸುರಿಂಗೆ ಕುದಿಯಲ್ಲಲ್ಲದೆ
ನಿಮ್ಮ ನೆನೆಯಲು ತೆರಹಿಲ್ಲವಯ್ಯಾ !
ಎಂತೊ ! ಲಿಂಗ ತಂದೆ, ಎಂತಯ್ಯಾ ? ಎನ್ನ ಪೂರ್ವ ಲಿಖಿತ !
ಬೆರಣಿಯನಾಯಲಲ್ಲದೆ ಅಟ್ಟುಣ್ಣ ತೆರಹಿಲ್ಲವೆನಗೆ !
ನೀ ಕರುಣಿಸು, ಕೂಡಲಸಂಗಮದೇವಾ.

ಎಂದು ಬೇಡುವನು. ತನುಮನಧನಗಳನ್ನು ಗುರುಲಿಂಗಜಂಗಮಗಳಿಗೆ ಅರ್ಪಿಸಿ ಮಾಡುವ ಭಕ್ತಿಯೇ ಶಿವನನೊಲಿಸುವ ಮುಖ್ಯ ಮಾರ್ಗ. ಅದನ್ನು ಸಾಧಿಸುವದಕ್ಕೆ ವಿರೋಧವೃತ್ತಿ ತಾಳಿರುವ ಅಂತಃಕರಣಗಳೊಂದಿಗೆ ಹೋರಾಡಬೇಕು. ಅದರಲ್ಲಿ ಗೆಲವು ನೀಡೆಂದು ಶಿವನನ್ನೇ ಬೇಡುವನು.

"ಅಂಕ ಓಡಿವರೆ ತೆತ್ತಿಗಂಗೆ ಭಂಗವಯ್ಯಾ :
ಕಾದಿ ಗೆಲಿಸಯ್ಯಾ ಎನ್ನನು
ಕಾದಿ ಗೆಲಿಸಯ್ಯಾ ಕೂಡಲಸಂಗಮದೇವಯ್ಯಾ,
ಎನ್ನ ತನುಮನಧನದಲ್ಲಿ ವಂಚನೆ ಇಲ್ಲದೆ."

"ಭಲೆ, ಗೆಲುಮೆಯು ಹೊಣೆಯೂ ಶಿವನದೇ !" ಆ ಭಕ್ತನು ತೊಡೆ ತಟ್ಟಿ ಉದ್ಗರಿಸಿದನು. ನಲುಮೆಯು ನಗೆ ಸುಳಿದಿತ್ತೆಲ್ಲರ ಮುಖದಲ್ಲಿ.

ಚಿಕಿತ್ಸಕ ಭಕ್ತನೊಬ್ಬ ನಡುವೆ ಬಾಯಿಹಾಕಿ ಕೇಳಿದ :

"ಶಿವನನೊಲಿಸುವದಕ್ಕೆ ಸಾಮಾಜಿಕ ವಿಚಾರಗಳು ಬಸವಣ್ಣನವರಿಗೆ ಅವಶ್ಯವಾಗಿದ್ದವೇ ಅಮ್ಮಾ ?"

"ಹೌದು, ಸಕಲಪ್ರಾಣಿಗಳಲ್ಲಿಯೂ ಶಿವನಿರುವದನ್ನು ನಂಬಿರುವ ಆತನು ಶಿವನನೊಲಿಸಲು ಸಕಲಪ್ರಾಣಿಗಳ ಲೇಸನೇ ಬಯಸಿ ಎಸಗುತ್ತಿದ್ದನು. ಶಿವ ಚೈತನ್ಯ ಮೈದೋರುವದಕ್ಕೆ ಆಸ್ಪದವಿರುವದು ಮಾನವರಲ್ಲಿ ಮಾತ್ರ! ಮಾನವರೆಲ್ಲ ಶಿವಾಭಿವ್ಯಕ್ತಿಯಿಂದ ಸದ್ಗತಿ ಹೊಂದಲೆಂದು ಅವನ ಉತ್ಕಟ ಅಭಿಲಾಷೆ! ಸರ್ವರ ಈ ಮಹಾಸಾಧನೆಗೆ ಅಡ್ಡಬರುವ ಸಮಾಜದಲ್ಲಿಯ ವರ್ಣಭೇದ, ಡಂಭ, ದಾರಿದ್ರ್ಯ, ಶೋಷಣೆ, ಹಿಂಸೆ, ಬಲಾತ್ಕಾರ, ಮೂಢತನ ಮೊದಲಾದ ಅನಿಷ್ಟಗಳನ್ನು ನಿವಾರಿಸಬೇಕಾಯಿತು. ಅದಕ್ಕಾಗಿ ಅವನಿಗೆ ಸಾಮಾಜಿಕ ಸುಧಾರಣೆಯು ವಿಚಾರಗಳು ಅಗತ್ಯವಾದವು."

"ಹೌದು ! ಹೌದು !" ಮೊದಲು ಕೇಳಿದ ಭಕ್ತ ಕೈಮುಗಿದನು.

ಸಿದ್ಧವೀರಸ್ವಾಮಿ ಹೇಳಿದರು :

"ಅಣ್ಣನವರ ಸತ್ಯಸಂಕಲ್ಪವನ್ನೇ ಅಮ್ಮನವರು ನಿಮಗರುಹಿದರು. ನಾವೆಲ್ಲ ಶಿವಾಂಶ ಸಂಭೂತರು. ನಾವದನ್ನು ಮರೆತಿದ್ದೇವೆ. ಮರವೆ ಹರಿದು, ಅರಿವಾಗಿ ತನ್ನಂಶಭೂತರು ತನ್ನಲ್ಲಿ ಸೇರಲೆಂಬುದು ಶಿವನಿಗೆ ನಿತ್ಯ ಆತುರ! ಈ ಆತುರವು ಶಿವಸ್ವರೂಪಿಗಳಾದ ಶಿವಯೋಗಿಗಳಿಂದ ಕಾರ್ಯಗತವಾಗುತ್ತಿರುತ್ತದೆ. ಅದನ್ನು ನೀವೀಗ ಪ್ರತ್ಯಕ್ಷ ಕಾಣುತ್ತಿರುವಿರಿ. ಮಹಾ ಅನುಭಾವದಿಂದ ಆತ್ಮೋದ್ಧಾರ ಹೊಂದಿದ ಈ ಅಮ್ಮನವರಿಗೆ ಧರ್ಮ, ಧರ್ಮ, ಎಂದು ಲೋಕೋದ್ಧಾರಕ್ಕೆ ಹೆಣಗುವದು ಏಕೆ ಬೇಕಾಗಿತ್ತು ? ಸರ್ವರಲ್ಲಿಯೂ

ಶಿವಸ್ವರೂಪವನ್ನೇ ಕಾಣುವ ಅವರ ಭಾವಸತ್ಯತೆ ಈ ಕಾರ್ಯ ಮಾಡುತ್ತಿದೆ. ಹಾಗೆಯೇ ಶಿವಭಾವದಲ್ಲಿ ಬೆರೆದ ಬಸವಣ್ಣ ಸರ್ವರ ಉದ್ಧಾರಕ್ಕೆ ಇರುವ ಬಾಹ್ಯ ಅಡೆತಡೆಗಳನ್ನು ಮೊದಲು ಪರಿಹರಿಸುವದಕ್ಕಾಗಿ ಸಾಮಾಜಿಕ ರಾಜಕೀಯ ವಿಚಾರ ಮಾಡಬೇಕಾಯಿತು.

"ಹೌದು, ಹೌದು." ಭಕ್ತರೆಲ್ಲ ಚಪ್ಪಾಳೆ ತಟ್ಟಿದರು.

ಹೀಗೆ ಶಿವಯೋಗಿಣಿಯ ಮಾತನ್ನೇ ಮತ್ತೊಂದು ಬಗೆಯಿಂದ ವಿವರಿಸಿದರು ಸಿದ್ಧವೀರದೇವರು. ಬಳಿಕ ಆ ಮೊದಲ ಭಕ್ತ ಕೈಮುಗಿದು ಬಿನ್ನವಿಸಿದನು :

"ಬಸವೇಶ್ವರ-ಚೆನ್ನಬಸವೇಶ್ವರರ ಅಮೃತವಾಣಿಗಳನ್ನು ನಿತ್ಯವೂ ಕೇಳಬೇಕೆಂಬಾಸೆ ನಮಗಿದೆ. ದಿನಾಲು ಬರುವೆವು ಅಮ್ಮನವರೇ. ತಾವು ಅಪ್ಪಣೆ ಕೊಡಿಸಬೇಕು."

"ಆಗಲಿ ಅಪ್ಪಗಳಿರಾ, ಈ ದೇಹವಿರುವವರೆಗೆ ಇನ್ನು ನನ್ನಿಂದಾಗುವ ಕಾಯಕ ಇದೊಂದೇ ! ಸಂಜೆಯ ಹೊತ್ತು ಇಲ್ಲಿ ಶರಣಶರಣೆಯರು ಅನುಭವ ಗೋಷ್ಠಿ ನಡಿಸುವರು. ಆಗ ನೀವು ಬನ್ನಿ. ನಿಮಗೆ ಬೇಕಾದುದನ್ನು ನಾನೂ ಹೇಳುವೆ."

ಭಕ್ತಗಣ ಸಂತೋಷದಿಂದ ಜಯಘೋಷ ಮಾಡಿತು.

ಸಿದ್ಧವೀರಸ್ವಾಮಿ ಮನವುಕ್ಕಿ ನುಡಿದರು :

"ತಾವಿಲ್ಲಿಗೆ ಬಂದುದು, ನಮ್ಮ ಪ್ರಾಂತಕ್ಕೊಂದು ಬೆಳಕು ಬಂದಂತಾಯಿತು."

"ಅದು ತಮ್ಮ ಕರುಣೆಯ ದೀಪದ ದೀಪ್ತಿ ಗುರುವೇ." ನಾಗಮ್ಮ ನಮಿಸಿದಳು.

* * *

ಆ ಗುರುಭಕ್ತರ ಉತ್ಸಾಹದ ಪರಿಣಾಮವಾಗಿ ಆಶ್ರಮದ ಮಗ್ಗುಲಲ್ಲಿ ಮಠದ ಕಟ್ಟಡ ಬೇಗನೇ ತಲೆಯೆತ್ತಿತು. ಉದ್ದೇಶಿಸಿದ ಕ್ರಿಯೆಗಳಿಗೆ ಅದು ಆಧಾರವಾಯಿತು.

೭ ಮಹಾಸಾಧನೆಯ ಪ್ರತೀಕ

ಏಳು ವರ್ಷಗಳ ಬಳಿಕ ಒಂದು ಮುಂಜಾವು. ಯೋಗಮಂಟಪದ ಎದುರಿಗೆ ಅಂಗಳದಾಚೆಯ ಗಿಡದ ಕೆಳಗಿನ ಜಗುಲಿಯ ಮೇಲೆ ಕೆಲವು ಯಾತ್ರಿಕರು ಅಮ್ಮನವರ ದರ್ಶನಕ್ಕೆ ಕಾದು ಕುಳಿತಿದ್ದರು. ಶಿವಯೋಗಿಣಿಯ ಮುಂಜಾನೆಯ ಲಿಂಗಾರ್ಚನೆಗೆ ಸೇವೆ ಸಲ್ಲಿಸಿ, ಶರಣೆ ಗೌರಮ್ಮ ಪಾತ್ರೆ-ತಟ್ಟೆ-ಬಟ್ಟೆಗಳನ್ನು ಹಿಡಿದಕೊಂಡು ಹೊರಗೆ ಬಂದಳು. ಯಾತ್ರಿಕರು ಗಡಬಡಿಸಿ ಮೇಲೆದ್ದರು. ಭಸ್ಮರುದ್ರಾಕ್ಷಿಭೂಷಿತೆಯಾಗಿದ್ದರೂ ಆ ತಾಯಿ ನಡುವಯದವಳಾದ್ದರಿಂದ ಹೌದೋ ಅಲ್ಲವೋ ಎಂದು ಕಕ್ಕಾವಿಕ್ಕಿಯಾಗಿದ್ದರು. ಅದನ್ನು ತಿಳಿದು ಗೌರಮ್ಮ 'ಅಮ್ಮನವರು ಈಗ ಬರುತ್ತಾರೆ, ಕುಳಿತುಕೊಳ್ಳಿರಿ ಅಪ್ಪಗಳೇ' ಎಂದು ಹೇಳಿದಳು. ಯಾತ್ರಿಕರು ಸಮಾಧಾನದಿಂದ ಕುಳಿತರು. ಕೆಲವು ನಿಮಿಷಗಳ ಮೇಲೆ ಭಸ್ಮತ್ರಿಪುಂಢ್ರದಿಂದ ವಿರಾಜಿಸುವ ವಿಶಾಲ ಹಣೆಯ, ಕುಳಿಬಿದ್ದ ಕೆನ್ನೆಗಳ, ಗೂಡುಸೇರಿದ ಕಣ್ಣುಗಳ, ಉದ್ದ ಮೂಗಿನ, ಹೊಳೆಯುವ ಮುಖ, ಕರಗುವದರಲ್ಲಿದ್ದ ವಿರಲವಾದ ಕಿರಿದಾಗಿ ಇಳಿಬಿದ್ದ ಬಿಳಿಯ ಜಡೆ, ಉದ್ದುದ್ದ ಬೆರಳುಗಳ ಕೈಕಾಲು, ಕೊರಳು ತೋಳು ಮುಂಗೈಗಳಲ್ಲಿ ರುದ್ರಾಕ್ಷಿಮಾಲೆ, ಕಾವಿಯ ಸೀರೆ, ಬಡಕಲು ಶರೀರದ ಮೇಲೆತ್ತರಾಳು, ಅಷ್ಟೇ ಉದ್ದವಾದ ಕೋಲು ಎಡಗೈಗೆ, ಜಪಮಾಲೆ ಬಲಗೈಗೆ. ಹೀಗೆ ಇರುವ ಮುದುಕಿ ನಾಗಮ್ಮ ಶಿವಯೋಗಿಣಿ ದಪ್ಪವಾದ ಹಾವುಗೆ ಎತ್ತಿ ಎತ್ತಿ ಹೆಜ್ಜೆಹಾಕುತ್ತ ಯೋಗಮಂದಿರದ ಒಳಗಡೆಯಿಂದ ಹೊರಗೆ ಬಂದಳು. ಯಾತ್ರಿಕರು ಅಂಗಳದಲ್ಲಿ ಸಾಲಾಗಿ ಸಾಷ್ಟಾಂಗವಾಗಿ ಎರಗಿದರು.

"ಶಿವನಿಗೆ ಶಿವನಿಗೆ ಶಿವಶರಣು. ಏಳಿ ಅಪ್ಪಗಳಿರಾ ಏಳಿರಿ. ಯಾವೂರೆಪ್ಪಾ ? ಎಲ್ಲಿಂದ ಬಂದುದು ?" ಎಂದು ಕೈಯೆತ್ತಿ ಹರಸುತ್ತ ಕೇಳಿದಳು. ಹಿರಿಯನೊಬ್ಬ ಹೇಳಿದ :

"ನಮ್ಮದು ಮುಗಳೂರು ಅಮ್ಮಾ ! ಪಂಪಾಪತಿಯ ದರ್ಶನಕ್ಕೆ ಹೊರಟಿದ್ದೇವೆ. ಈ ಪಾದದರ್ಶನ ಪಡೆದು ಹೋಗಲೆಂದು ಇತ್ತ ಬಂದೆವು."

"ಒಳಿತಾಯಿತು ಅಪ್ಪಾ, ಪಂಪಾಪತಿಯ ಹಂಬಲ ಮನದಲ್ಲಿ, ಹಂಪಿಯ ಮಾರ್ಗಕ್ರಮಣದ ಬಲ ಮೈಯಲ್ಲಿ! ನೀವು ಬಂದುದು ವಿರೂಪಾಕ್ಷನೇ ಬಂದಂತೆ. ನನ್ನ ಪುಣ್ಯ! ಇಲ್ಲಿ ಇರ್ರೈಪಾ ಎರಡು ದಿನ......ಗೌರಕ್ಕ, ಶಂಕರಣ್ಣನನ್ನು ಕರೆ ಇವರ ಸಾಮಾನು ಇಡಿಸಿ ಸ್ನಾನ ಮಾಡಿಸಿಕೊಂಡು ಬರಲಿ."

ಹೀಗೆ ಹೇಳುತ್ತ ಅಮ್ಮ ದಾಸೋಹ ಮಠದ ಕಡೆಗೆ ನಡೆದಳು. ಶಂಕರಣ್ಣ ಬಂದು ಯಾತ್ರಿಕರನ್ನು ಕರೆದುಕೊಂಡು ಹೋದನು. ಶಿವಯೋಗಿಣಿ ಮಠದ ಬಾಗಿಲ ಮುಂದಿನ ಮೆಟ್ಟಿಲುಗಳನ್ನು ಗೌರಮ್ಮನ ಆಸರ ಹಿಡಿದು ಹತ್ತಿ ಹೋಗಿ ಕಟ್ಟಿಯಮೇಲೆ ಕುಳಿತಳು. ನಿತ್ಯದಂತೆ ಅಲ್ಲಿಯ ಕ್ರಿಯೆಗಳನ್ನು ನಿರೀಕ್ಷಿಸ ಹತ್ತಿದಳು.

ಮುಂದೊಂದುದಿನ ಮುಂಜಾನೆ ಚಂದಯ್ಯ ಆಶ್ರಮದಿಂದ ಸ್ವಲ್ಪ ದೂರ ನದೀ ತೀರದಲ್ಲಿ ತನ್ನ ಕಾಯಕದ ಹುಲ್ಲುಕೊಯ್ಯುತ್ತಿದ್ದನು. ದಿನ್ನೆಯಮೇಲಿನ ದಾರಿಯಲ್ಲಿ ಇಬ್ಬರು ಸ್ವಾಮಿಗಳು ಬರುವದು ಕಾಣಿಸಿತು. ಆದರೂ ಕಾಯದಲ್ಲಿ ಕಡುನಿಷ್ಠ ಚಂದಯ್ಯ ಯಾರುಯಾರೊ ಬರುತ್ತಾರೆ, ಹೋಗುತ್ತಾರೆ ಎನ್ನುತ್ತ ತಲೆತಗ್ಗಿಸಿ ಕ್ರಿಯಾನಿರತನಾಗಿದ್ದನು. ಅವರು ದಿನ್ನೆ ಇಳಿದು ಗಿಡಮರಗಳ ನಡುವಿನ ತಿರುವುಮುರುವಿನ ದಾರಿಗುಂಟ ನದಿಯ ಒಡಲಿಗೆ ಬರುವಾಗ ಅವರ ಮಾತುಗಳು ಚಂದಯ್ಯನಿಗೆ ಕೇಳಹತ್ತಿದವು. ಒಂದು ದನಿ ಪರಿಚಿತ; ಇನ್ನೊಂದು ಹಿಂದೆ ಕೇಳಿದಂತಿದೆ, ಅದೂ ಗೊತ್ತಾಯಿತು; ಒಬ್ಬರು ಸಿದ್ಧವೀರ ಸ್ವಾಮಿ, ಇನ್ನೊಬ್ಬರು ರುದ್ರಮುನಿದೇವರು. ಬಹುದಿವಸಕ್ಕೆ ಬಂದರು. ಮಾತು ತನ್ನ ಅಮ್ಮನವರ ವಿಷಯವಾಗಿತ್ತು. ಎದೆತುಂಬಿ ಬಂದಿತು. ಅವರಿನ್ನೂ ಸ್ವಲ್ಪ ದೂರ ಇದ್ದಾರೆ. ಅತ್ತ ಕಿವಿಗೊಟ್ಟು, ಇತ್ತ ಕೈ ಅವಸರವಾಗಿಸಿದ.

ತಮಗಿಷ್ಟವೆನಿಸಿದ ರೀತಿಯಲ್ಲಿ ವೀರಶೈವೋದ್ಧರಣ ಕಾರ್ಯ ನೆರವೇರಿಸುವದಕ್ಕೆ ಸಂಚರಿಸುತ್ತಿದ್ದ ರುದ್ರಮುನಿದೇವರು ನಾಗಮ್ಮನವರ ದರ್ಶನಾಕಾಂಕ್ಷಿಗಳಾಗಿ ನಿನ್ನೆ ಮಹೇಶ್ವರ ಹಳ್ಳಿಗೆ ಬಂದಿದ್ದರು. ಬೆಳಗಿನ ಲಿಂಗಾರ್ಚನೆ ನೆರವೇರಿಸಿಕೊಂಡು ಇಬ್ಬರೂ ಸ್ವಾಮಿಗಳು ಪಾದಚಾರಿಗಳಾಗಿ ಅಮ್ಮನ ಆಶ್ರಮಕ್ಕೆ ಹೊರಟಿದ್ದರು. ಅವರ ಮಾತು ಅಮ್ಮನವರ ವಿಷಯಕ್ಕೆ ಹೊರಳಿದ್ದವು. ಸಿದ್ಧವೀರದೇವರ ಮಾತು:

"ಇಲ್ಲಿ ಅವರ ಪ್ರಭಾವ ತುಂಬ ಹರಡಿದೆ. ನಿತ್ಯವೂ ಅವರ ದರ್ಶನಕ್ಕೆ ಬರುವ ಹೊಸ ಜನರು ಇದ್ದೇ ಇರುತ್ತಾರೆ. ಅನುಭಾವಿಗಳು ಶಿವಯೋಗ ಸಾಧಕರು ಬರುತ್ತಾರೆ. ಎಲ್ಲರ ಆತ್ಮತೃಪೆಗೂ ತೃಪ್ತಿದಾಯಕ ಅಮ್ಮನ ಮಾತು. ಎಂತಹ ತಪಸ್ವಿನಿ! ಎಂತಹ ಸಾಧಕಳು! ಈ ಶಿವಯೋಗಿಣಿ ಮಹಾಸಾಧನೆಯ ಒಂದು ಪ್ರತೀಕ."

"ಹೌದು ಇವರ ವೃತ್ತಿಯೇ ತತ್ವಸಾಧನೆಯಾಗಿತ್ತು. ನಿತ್ಯ ಸತ್ಯತತ್ವಗಳಿಗೆ ತೊತ್ತಾಗಿ, ತತ್ವವೇತ್ತರಿಗೆ ತೊತ್ತಾಗಿ ಜನ್ಮಾರಭ್ಯ ಕೈಕೊಂಡ ಇವರ ಕಾಯಕವೇ ತಪ. ಇನ್ನೇ ಇವರು ಕ್ರಿಯಾ-ಜ್ಞಾನಗಳ ಸಮನ್ವಯದ ಸಾಧನ ಮಾಡಿಕೊಂಡರು. ಇವರ ಜ್ಞಾನ-ಕ್ರಿಯೆಗಳನ್ನು ವಿಂಗಡಿಸಿ ತಿಳಿಯುವದೇ ಸಾಧ್ಯವಿರಲಿಲ್ಲ. ಆ ಸ್ವರೂಪವೇ ಶಿವಶಕ್ತಿಯರ ಸಾಮರಸ್ಯವನ್ನು ನೀಡಿದೆ. ಶಿವಪೂಜೆ ಯೋಗಾಭ್ಯಾಸಗಳೂ ಅದರಲ್ಲಿಯೇ ಅಡಕವಾಗಿದ್ದವು."

"ಅಲ್ಲವೇ? ಅಮ್ಮನ ಚರಿತ್ರ ಕೇಳಿದರೆ ಕೌತುಕವಾಗುತ್ತದೆ."

"ನಿಜ ನಿಜ. ಕೌತುಕದಲ್ಲಿ ಕೌತುಕವಾಗಿದೆ ನಾಗಮ್ಮನವರ ಉಜ್ವಲ ಚರಿತ್ರೆ. ಬಸವಣ್ಣನವರ ಚರಿತ್ರೆಯಲ್ಲಿ ನಾಗಮ್ಮನವರ ಪಾತ್ರ ಅತಿ ಮಹತ್ವದ್ದು. ಬಸವಣ್ಣನವರ ಸರ್ವಸಾಧನೆಗೆ, ಸರ್ವಕಾರ್ಯ ತತ್ಪರತೆಗೆ ಇವರು ಹಿನ್ನೆಲೆಯ ಶಕ್ತಿಯಾಗಿದ್ದರು. ಬಸವಣ್ಣನವರ ವ್ಯಕ್ತಿತ್ವವನ್ನು ರೂಪಿಸಿದ ಶ್ರೇಯಸ್ಸಿನಲ್ಲಿ ಬಹುಭಾಗ ಈಕೆಯದು. ಈ ಶರಣೆ ಅನುಭವಮಂಟಪ ಮಹಮನೆಗಳ ಧುರೀಣೆಯಾಗಿದ್ದಳು. ಜಟಿಲ ಸಮಸ್ಯೆಗಳಲ್ಲಿ ಮಾರ್ಗದರ್ಶಿನಿಯಾಗಿದ್ದಳು. ಶರಣ ಸಮುದಾಯದ ಆಪತ್ಕಾಲದಲ್ಲಿ ಧೈರ್ಯದ ಬೆಳಕಾಗಿದ್ದಳು. ರಣರಂಗದಲ್ಲಿ ಪ್ರೋತ್ಸಾಹಕಳಾಗಿದ್ದಳು. ವೃದ್ಧಾಪ್ಯದಲ್ಲಿ ಉಳಿವೆಯ ವಸಹಾತಿನ ಸ್ಥಾಪನೆಯಲ್ಲಿ ಮುಖ್ಯಳೇ ಆಗಿದ್ದಳು. ಇದನ್ನು ನೀವೂ ಬಲ್ಲಿರಿ. ಅಲ್ಲಿ ಎಲ್ಲರೂ ಅಗಲಿದ ಮೇಲೆಯೂ ಧೃತಿಗೆಡದೆ ತನ್ನ ಗುರಿಯಾದ ಧರ್ಮೋನ್ನತಿಯ ಕಾರ್ಯವನ್ನು ಜೀವಾಂತ್ಯದವರೆಗೂ ನಡಿಸುವ ನಿಶ್ಚಯ ಮಾಡಿ ಹೊರಟು ಇಲ್ಲಿ ಬಂದಿದ್ದಾಳೆ......"

ಬಂಡೆಯನ್ನೇರಿ ಹಾದಿಯ ಮೇಲೆ ಹುಲ್ಲುಹೊರೆಯನ್ನಿಟ್ಟುಕೊಂಡು ನಿಂತಿದ್ದ ಚಂದಯ್ಯ 'ಶರಣು ಶರಣು, ಗುರುಗಳಿಗೆ ಶರಣು ಶರಣು' ಎನ್ನುತ್ತ

ಇಬ್ಬರ ಪಾದಕ್ಕೂ ಎರಗಿದನು. ರುದ್ರಮುನಿ ನೋಡಿದರು ಅವನನ್ನು, ಹೊರೆಯನ್ನು.

"ಭಲೆ ಕಾಯಕದ ಕೈಲಾಸಪತಿ ಚಂದಯ್ಯನವರು"

ಎನ್ನುತ್ತ ತಲೆಹಿಡಿದೆತ್ತಿ ಆಲಿಂಗಿಸಿದರು.

ಈಶ್ವರನ ಮುಂದಿನ ನಂದಿಯಂತೆ ಅಮ್ಮನವರ ಮುಂದಿನ ಚಂದಯ್ಯನ ದರ್ಶನ ಅಮ್ಮನವರ ದರ್ಶನಕ್ಕೆ ನಾಂದಿ" ಎಂದು ನಲಿದು ನುಡಿದರು ಸಿದ್ಧ ವೀರದೇವರು.

ಹೊರೆಹೊತ್ತು ಚಂದಯ್ಯ 'ಬನ್ನಿ' ಎಂದು ಮುಂದಾದನು. ತನ್ನ ಕುಟೀರದ ಮುಂದೆ ಹೊರೆ ಇಟ್ಟು ಯೋಗಮಂಟಪದ ಆಸನದಲ್ಲಿ ಗುರುದ್ವಯರನ್ನು ಕೂಡ್ರಿಸಿ ದಾಸೋಹ ಮಠಕ್ಕೆ ಓಡಿದನು.

ಚಂದಯ್ಯನ ಹೆಗಲ ಮೇಲೆ ಕೈಯಿಟ್ಟು ಕೈಯ್ಯ ಕೋಲನ್ನು ಮುಂದೆ ಮುಂದೆ ಚಾಚಿ ಊರುತ್ತ ದೊಡ್ಡದೊಡ್ಡ ಹೆಜ್ಜೆಹಾಕುತ್ತ ಅವಸರದಿಂದ ಅಮ್ಮ ಬಂದಳು. ಪಾದರಸವು ಪಾದರಸದಿಂದ ಆಕರ್ಷಿಸಲ್ಪಟ್ಟಂತಾಗಿತ್ತು. ತೇಗುತ್ತ ಬಾಗಿಲಿಗೆ ಬರಲು ಸ್ವಾಮಿಗಳು ಎದ್ದುನಿಂತರು. ಆಕೆ ಕೋಲು ಚೆಲ್ಲಿ 'ಶರಣು, ಶರಣು, ಶಿವಶರಣು' ಎನ್ನುತ್ತ ಅವರ ಪಾದಕ್ಕೆ ತಲೆಹಚ್ಚಿ ನಮಿಸಲು ಬಾಗುತ್ತಿರುವಾಗ ಅವರು ತಡೆದು ಎಡಬಲದಲ್ಲಿ ತೋಳು ಹಿಡಿದು ಪೀಠದ ಮೇಲೆ ಕೂಡ್ರಿಸಹೋದರು. ಆದರೆ ಅಮ್ಮ ಕುಸಿದು ಕೆಳಗೇ ಕುಳಿತಳು.

ಆನಂದಾಶಯುದ ಮಾತು ನಡೆದು ಮುಂದೆ ರುದ್ರಮುನಿಗಳು ತಮ್ಮ ಕೈಕೊಂಡ ಸಂಚಾರದ ವಿವರಗಳನ್ನು ತಿಳಿಸಿದರು. ಶರಣಧರ್ಮ ಪ್ರಚಾರ ನಡೆದ ವಿಷಯದಲ್ಲಿ ಹೀಗೆ ಹೇಳಿದರು :

"ಮೊದಲು ಕಲ್ಯಾಣದಿಂದ ಬಳಿಕ ಕುರಗೋಡಿನಿಂದ, ಉಳಿವೆಯಿಂದ ಹರಡಿಹೋದ ಶರಣರು ಜಂಗಮಮೂರ್ತಿಗಳು ನಾಡಿನ ಮೂಲೆಮೂಲೆಗೂ ಬಸವಸಂದೇಶವನ್ನು ತಲುಪಿಸುತ್ತಿದ್ದಾರೆ. ಪ್ರಮಥರ ಮಹಿಮೆಯನ್ನು ಹಾಡು ಕಟ್ಟಿ ಹಾಡುತ್ತಿದ್ದಾರೆ. ವಚನಗಳ ಪ್ರತಿಮಾಡಿ ಕಳಿಸುತ್ತಿದ್ದಾರೆ. ಪಂಡಿತರು ಮತ್ತೆ ಬರೆಯುತ್ತಲೂ ಇದ್ದಾರೆ. ವೀರಶೈವ ಮತಾನುಯಾಯಿಗಳು ಸಾಕಷ್ಟು ಇರುವ ಪ್ರತಿಯೊಂದು ಹಳ್ಳಿಗೂ ಒಂದು ಮಠವಾಗಿದೆ. ಕ್ರಿಯಾಮೂರ್ತಿ

ಯಾಗಿ ಒಬ್ಬ ಸ್ವಾಮಿ ಅಲ್ಲಿ ನಿಂತಿದ್ದಾರೆ. ಭಕ್ತರ ಧಾರ್ಮಿಕ ಕಾರ್ಯಕರ್ತರು ಗಳಾಗಿ ಮಠಪತಿ, ಗಣಾಚಾರಿ, ಸಾರುಪಯ್ಯ ಮುಂತಾದವರ ಯೋಜನೆ ಯಾಗಿದೆ. ಮಹತ್ವದ ಸ್ಥಳಗಳಲ್ಲಿ ದಾಸೋಹದ ಮಠಗಳಾಗಿವೆ. ಭಕ್ತರು ಕಾಯಕ ಭಾವನೆಯಿಂದ ಕೃಷಿಕೈಗಾರಿಕೆಗಳಲ್ಲಿ ಉತ್ಸಾಹಿತರಾಗಿ ಮುಂದುವರಿ ಯುತ್ತಿದ್ದಾರೆ. ಅಮ್ಮನವರೆ, ಪ್ರಮಥರಿಂದ ಪರಿಪೂರ್ಣತೆಗೊಂಡ ವೀರಶೈವ ಧರ್ಮ ಈಗ ವ್ಯಕ್ತಿಯದಲ್ಲ, ಕುಟುಂಬ ಮಾತ್ರದ್ದಲ್ಲ, ಸಾಮಾಜಿಕ ಧರ್ಮವಾಗಿ ಬೇರೂರುತ್ತಲಿದೆ. ಬಸವಣ್ಣನವರನ್ನು ಸಲಹಿದ ನಿಮ್ಮ ಹಸ್ತಗುಣ! ಚೆನ್ನಬಸ ವಣ್ಣನವರನ್ನು ಹೆತ್ತ ನಿಮ್ಮ ಉದರ ಮಹಿಮೆ! ಅಮ್ಮಾ ನಿಮ್ಮ ಜೀವನ ಸಾರ್ಥಕ......" ಎನ್ನುತ್ತ ಎದೆದುಂಬಿ ಕೈಮುಗಿದರು.

"ಶಿವನ ಹಸ್ತ, ಶಿವನ ವಾಣಿ, ಬಸವಣ್ಣ ಪ್ರಿಯ ಚೆನ್ನಸಂಗಯ್ಯ ನೀವಾಗಿ ಮಾಡಿದ್ದಲ್ಲದೆ ಬೇರೆ ಆದುದುಂಟೇ ಗುರುವೇ ?" ಮುಖವೆತ್ತಿ ಕೈಮುಗಿದಳು.

"ಧನ್ಯೆ, ಧನ್ಯೆ" ಎಂದರು ಸಿದ್ಧವೀರದೇವರು.

ಬಳಿಕ ರುದ್ರಮುನಿಗಳು ಅಮ್ಮನವರಿಗೆ ಗೊತ್ತಿದ್ದ ಮಹಾನುಭಾವಿಗಳು, ಶರಣರು ಯಾರುಯಾರು ಎಲ್ಲಿದ್ದಾರೆ ? ಯಾರು ಬಯಲಾಗಿದ್ದಾರೆ ಎಂಬದನ್ನು ತಮಗೆ ಗೊತ್ತಿದ್ದಷ್ಟು ಹೇಳಿದರು. ಮಧ್ಯಾಹ್ನದ ಸ್ನಾನಶಿವಾರ್ಚನೆಗಳು ನಡೆ ದವು. ಅಂದು ನಾಗಮ್ಮ ಸಂಭ್ರಮದಿಂದ ಗುರುಲಿಂಗಜಂಗಮದ ಪಾದೋದಕ ಪ್ರಸಾದ ಪಡೆದು ಪರಮಾನಂದಭರಿತಳಾದಳು. ಆ ಶರಣೆ ಬಾಹ್ಯ ಪ್ರಜ್ಞೆಯಿಂದ ವೀರಶೈವ ಪ್ರಕ್ರಿಯೆ ನಡಿಸುತ್ತಿರುವದು ಬಹುಶಃ ಇದೇ ಕೊನೆಯದಾಯಿತು. ಶ್ರೀಗಳಿಬ್ಬರೂ ಅಂದು ಸಾಯಂಕಾಲ ಮಹೇಶ್ವರ ಹಳ್ಳಿಗೆ ಮರಳಿದರು.

ಇಲ್ಲಿಗೆ ನಾಗಮ್ಮನ ಧ್ಯೇಯ ಪೂರೈಸಿದಂತಾಗಿತ್ತು. ಮಣಿಹ ಮುಗಿದಂತಾ ಗಿತ್ತು. ಸಫಲ ಕ್ರಿಯೆಯು ಪರಿಣಾಮವನ್ನು ಪರಶಿವನಿಗೆ ಅರ್ಪಿಸಿ ಆ ಆನಂದ ದಲ್ಲಿ ಬೆರೆದು ತನ್ನನ್ನು ತಾನು ಮರೆತು ಬಿಟ್ಟಳು. ಬರಬರುತ್ತ ವ್ಯಾವಹಾರಿಕ ಅರಿವು ಅರಗಿಹೋಯಿತು. ವೃತ್ತಿ ಅಂತರ್ಮುಖವಾಯಿತು. ಮಾತು, ಕೃತಿ, ನಗೆ, ಕರಚರಣಗಳ ಚಲನ ಇವೆಲ್ಲ ಹೊರಗಿನ ಸಂಗತಿಗಳಿಗೆ ಸಂಬಂಧಿಸಿರಲೇ ಇಲ್ಲ. ಎಲ್ಲರನ್ನೂ ಶಿವ, ಬಸವ, ಎಂದೇ ಸಂಬೋಧಿಸುವಳು. ಹೀಗೆ ಲೀಲಾ ಮಯಿಯಾಗಿಯೂ ಕೆಲವು ತಿಂಗಳು ಬದುಕಿದ್ದಳು. ಗೌರಮ್ಮ, ಗಿರಿಯಮ್ಮ,

ಚಂದ್ರಮ್ಮ, ಮುತ್ತಬ್ಬೆ ಶರಣೆಯರು ಆ ಶಿವಯೋಗಿಣಿಯ ಜೋಪಾನ ಮಾಡುತ್ತಿದ್ದರು. ಪೂಜಾದಿಗಳನ್ನು ಮಾಡಿಸುತ್ತಿದ್ದರು. ಕರಣಗಳಡಗಿದ ದೇಹ ಉಳಿಯುವದೆಷ್ಟು ದಿನ ? ಒಮ್ಮೆ ಮಹಾ ಶಿವಯೋಗಿಣಿಯ ಆ ಬಯಲಭಾವ ಸೀಮಾತೀತವಾದ ಬಯಲಲ್ಲಿ ಬೆರೆಯಿತು. (ಕ್ರಿ. ಶ. ಸುಮಾರು ೧೧೮೦).

ಸಿದ್ಧವೀರ ದೇಶಿಕರ ನೇತೃತ್ವದಲ್ಲಿ ಆ ಶರೀರಕ್ಕೆ ಸಮಾಧಿಯಾಯಿತು. ಅದನ್ನು ಈಗಲೂ ಅಲ್ಲಿ ಕಾಣಬಹುದು. ಆ ಆಶ್ರಮ-ದಾಸೋಹಮಠಗಳು ಕಾಲಗರ್ಭದಲ್ಲಿ ಕರಗಿ ಹೋಗಿವೆ. ಚಂದಯ್ಯ ಅಲ್ಲಿಂದ ಏಳೆಂಟುಮೈಲು ದೂರವಾಗಿದ್ದ ನಂದೀಹಳ್ಳಿ*ಯಲ್ಲಿ ಕೆಲವು ದಿವಸ ಇದ್ದು ಬಯಲಾದನೆಂದು ಹೇಳುತ್ತಾರೆ.

ಅಕ್ಕನಾಗಮ್ಮನ ದಿವ್ಯಜೀವನ ಮುಕ್ತಾಯವಾಯಿತು. ಕ್ರಾಂತಿದೂತರು ಹುಟ್ಟುವ ಮೊದಲೇ ಹುಟ್ಟಿ, ಕ್ರಾಂತಿ ಕೈಗೂಡಿ ಕೊನೆಗೊಂಡ ಮೇಲೆಯೂ ಬಾಳಿ, ಕ್ರಿಯಾಸಿದ್ಧಿಯ ಮಹದಾನಂದದಲ್ಲಿ ಬೆರೆದ ಅಕ್ಕನಾಗಮ್ಮನ ಹೆಸರು ಚಿರಸ್ಥಾಯಿಯಾಗಿದೆ.

* ಶರಣರು ಪಾಳಯಬಿಟ್ಟಿದ್ದ ಸಂಪಗಾಂವಿಯ ಹತ್ತಿರದ ನಂದೀಹಳ್ಳಿ ಬೇರೆ.

ಒಪ್ಪೋಲೆ

ಪುಟ	ಪಂಕ್ತಿ	ತಪ್ಪು	ಒಪ್ಪು
೧೬	೨೧	ಇಕೆ	ಈಕೆ
೨೪	೧೧	ಮಾಗ	ಮಾರ್ಗ
೩೭	೧೩	ಪಡಿಗಳನ್ನು	ಪಡಿಗಗಳನ್ನು
೩೯	೨೫	ಕೊಳಿ	ಕೋಳಿ
೪೧	೯	ಅಧಿಕಾರಿಯಾದನೆಂಬ	ಅಧಿಕಾರಿಯಾದಾನೆಂಬ
೪೯	೧	ಅದಂತೆ	ಅದಂತೆ
೬೩	೧೪	ಬಸವಣನು	ಬಸವಣ್ಣನು
೬೪	೧೫	ಅದರೋಡನೆ	ಅದರೊಡನೆ
೬೭	೫	ಧವುಶ್ರೀ	ಧರ್ಮದರ್ಶಿ
೬೮	೧೦	ಜೋಡೆಸಿ	ಜೋಡಿಸಿ
೭೦	೬	ಚಟುವಚಿಕೆ	ಚಟುವಟಿಕೆಯು
೭೩	೧೬	ಪಿರವ್ರ	ವೀರವ್ರತಿ
೭೭	೧೬	ಪ್ರಂಶಸಿಸಿದರು	ಪ್ರಶಂಶಿಸಿದರು
೭೮	೪	ಮೂವರ	ಮೂವರ
೮೦	೧೭	ಬರಮಾಡಿಕೊಂಳು	ಬರಮಾಡಿಕೊಂಡಳು
೮೨	೧	ಬಸವೆಶಾ	ಬಸವೇಶಾ
೮೨	೧೭	ಸಾಮೀ	ಸ್ವಾಮೀ
೮೩	೨೬	ನ್ನ	ನಿನ್ನ
೮೮	೧	ಬಿಡವಿರು	ಬಿಡದಿರು
೯೭	೨೦	ದ್ವೇಶಕ್ಕೆ	ದ್ವೇಷಕ್ಕೆ
೧೧೬	೩	ಶ್ರದ್ಧಾ ಚರಣೆ	ಶುದ್ಧಾ ಚರಣೆ
೧೧೮	೨೦	ಕಾರಣ	ಕಂಕಣ
೧೨೩	೧೬	ಸೊಲಿಸಿ	ಸೋಲಿಸಿ
೧೨೪	೨೩	ದೊಡ್ಡದಾಗಿರುವದರಿಂದ	ದೊಡ್ಡದಾಗಿಡುವದರಿಂದ
೧೨೭	೧	ನಮ್ಮನ್ನು	ನಿಮ್ಮನ್ನು
೧೩೨	೧	ಮುರರೇಭಾವಿ	ಮುರಕೀಭಾವಿ
೧೩೨	೨೪	ಇದು	ಇದ್ದು

೧೪೩	೭	ಜಗದಜ್ಜಿ	ಜಗದಬ್ಬೆ
೧೫೨	೧೩	ಸುರಿಯು	ಸುರಿಯುವ
೧೫೩	೭	ಮೂಹದ	ಮೋಹದ
೧೫೩	೨೪	ಕೊಲ	ಕೋಲ
೧೫೩	೨೫	...ಒಯ್ವರೇ ಭಕ್ತರು?	...ಒಯ್ವರೇ? ಭಕ್ತರು
೧೫೪	೧೧	ತಲೀನ	ತಲ್ಲೀನ
೧೫೪	೧೨	ಭಾಗ	ಭಾವ
೧೫೪	೧೫	ಸಹಕಾರ	ಸಹವಾಸ
೧೫೫	೪	ತುಂಗಭದ್ರಾ	ತುಂಗಾ, ಭದ್ರಾ
೧೫೫	೧೫	ಲಿಂಗ	ಅಂಗ
೧೬೦	೧೫	ಕುದ್ಧಿಯಲ್ಲಿಲ್ಲದೆ	ಕುದಿಯಲಲ್ಲದೆ
೧೬೩	೪	ದರ್ಶಿನಕ್ಕೆ	ದರ್ಶನಕ್ಕೆ
೧೬೫	೨೦	ವೃದ್ಧಾಷ್ಯ	ವೃದ್ಧಾಪ್ಯ
೧೬೫	೨೫	ಬಂಡೆ	ಒಂಡೆ

ಶ್ರೀ ಶಿರಹಟ್ಟಿಯವರ ಇತರ ಕೃತಿಗಳು

೧ ಚಿತ್ತೂರಿನ ಪುನರುದ್ಧಾರ
(ಐತಿಹಾಸಿಕ ಕಥೆ)

೨ ಕನ್ನಡಿಗನ ಕಲಿತನ
(ಐತಿಹಾಸಿಕ ನಾಟಕ)

೩ ನೀತಿಮುಕ್ತಾವಲಿ
(ಖಂಡಕಾವ್ಯ)

೪ ಸಿದ್ಧರಾಮೇಶ್ವರ ಚರಿತ್ರ
(ವಿಜಾಪುರ ಶ್ರೀ ಸಿದ್ಧೇಶ್ವರ ಸಂಸ್ಥೆಯಿಂದ ಪ್ರಕಾ...)

೫ ಯೋಗಿರಾಜ ವಿಜಯ
(ಹಾಲಕೆರೆಯ ವಿರಕ್ತ ಮಠದಿಂದ ಪ್ರಕಾಶಿತ)

೬ ನೂರೊಂದು ನೆಲೆಯ ನಿಲವು
(ಷಟ್‌ಸ್ಥಲ ತತ್ವ ಕಾವ್ಯ; ಹರಳೇಶ್ವರಾಶ್ರಮದಿಂದ ಪ್ರಕಾಶಿ...)

೭ ಬಯಲಾದ ಸಂಚು
(ಐತಿಹಾಸಿಕ ಕಥೆ; ಅರವಿಂದ ಗ್ರಂಥಾಲಯ ಚಡಚಣ ...
ರಿಂದ ಪ್ರಕಾಶಿತ)

೮ ಬಸವರಾಜದೇವರು
(ಬಸವನ ಬಾಗೇವಾಡಿಯ ಬಸವೇಶ್ವರ ಲಿಂ. ಜಾ. ಸಂಸ್ಥೆ ಅವ
ರಿಂದ ಪ್ರಕಾಶಿತ)

ಶ್ರೀ ಲಕ್ಕಪ್ಪ ಶಿರಹಟ್ಟಿ ಅವರದು ಶುದ್ಧ, ಸರಳ, ಸಾತ್ವಿಕ ಜೀವನ. ಶಿಕ್ಷಕರಾಗಿ, ಶಿಕ್ಷಣದ ಅಧಿಕಾರಿಗಳಾಗಿ ಅವರು ಕಾಯಕಯೋಗ ಸಾಧಿಸಿ ಕಾಯಕಭೋಗಿಗಳಾದರು. ಅವರ ಜೀವನದಂತೆ ಅವರ ಸಾಹಿತ್ಯವೂ ಶುದ್ಧ, ಸರಳ.

ಕಥೆಯನ್ನೇ ಬರೆಯಲಿ, ಕಾದಂಬರಿಯನ್ನೇ ಬರೆಯಲಿ, ತತ್ವಗ್ರಂಥವನ್ನೇ ಬರೆಯಲಿ, ಮಹಾತ್ಮರ ಚರಿತ್ರೆಯನ್ನೇ ಬರೆಯಲಿ, ಏನೇ ಬರೆಯಲಿ — ಅದರಲ್ಲಿ ಅವರ ಸಾತ್ವಿಕ ವ್ಯಕ್ತಿತ್ವದ ಕುರುಹು ಕಾಣುತ್ತೇವೆ. ಪ್ರಾಮಾಣಿಕತೆ, ಪ್ರಾಸಾದಿಕತೆಗಳು ಅವರ ಬರವಣಿಗೆಯ ಮುಖ್ಯ ಲಕ್ಷಣಗಳು.

ತತ್ವವನ್ನು ಸುಲಭವಾಗಿ, ಸುಂದರವಾಗಿ, ಕಾವ್ಯಮಯವಾಗಿ ಅವರು ಹೇಳುವರೆಂಬುದಕ್ಕೆ ಅವರ 'ನೂರೊಂದು ನೆಲೆಯ ನಿಲವು' ಉತ್ತಮ ನಿದರ್ಶನ. ಚಿತ್ತೂರಿನ ಪುನರುದ್ಧಾರ, ಕನ್ನಡಿಗರ ಕಲಿತನ, ಬಯಲಾದ ಸಂಚು — ಈ ಐತಿಹಾಸಿಕ ಕೃತಿಗಳು ಅವರ ಸತ್ತ್ವಸ್ಥ ಶೈಲಿಗೆ ನಿದರ್ಶನಗಳು; ಇತಿಹಾಸವನ್ನು ಕಥೆಯನ್ನಾಗಿಸಿ—ಚರಿತ್ರೆಯನ್ನು ಕೆಡಿಸದಂತೆ—ಹೇಳಿ ಓದುಗರಲ್ಲಿ ಅಭಿಮಾನ ಕೆಚ್ಚುಗಳನ್ನು ಮೂಡಿಸುತ್ತವೆ—ಈ ಗ್ರಂಥಗಳು. 'ಬಸವರಾಜ ದೇವರು' ಅವರ ಉದ್ಗ್ರಂಥ. ಅವರ ಪಾಂಡಿತ್ಯ, ಆಳವಾದ ಚಿಂತನೆ, ಪ್ರಾಮಾಣಿಕ ಪರಿಶ್ರಮ— ಈ ಗ್ರಂಥದಲ್ಲಿ ನಾವು ಕಾಣುತ್ತೇವೆ.

ಬಸವಣ್ಣ ಮತ್ತು ಶರಣರ ಸಮಗ್ರ ಕ್ರಾಂತಿಗೆ ಮೂಲಿಗಳು ಅಕ್ಕನಾಗಮ್ಮ. ಆಕೆಯದು ಮಹಾವ್ಯಕ್ತಿತ್ವ. ಆಕೆಯ ಪೂರ್ಣ ಜೀವನವನ್ನು ಕುರಿತಾದ ಗ್ರಂಥಗಳಿರಲಿಲ್ಲ. "ಕ್ರಾಂತಿಗಂಗೋತ್ರಿ"ಯನ್ನು ಬರೆದು ಶ್ರೀ ಲಕ್ಕಪ್ಪನವರು ಕನ್ನಡ ಸಾಹಿತ್ಯಕ್ಕೆ ದೊಡ್ಡ ಉಪಕಾರ ಮಾಡಿದ್ದಾರೆ.

ಶ್ರೀ ಲಕ್ಕಪ್ಪನವರದು ಸುಸಂಸ್ಕೃತವಾದ, ಸರಳ ಸುಂದರವಾದ ಶೈಲಿ. ಹದಗೊಂಡ ಭಾಷೆ. ಕಣ್ಣೆದುರಿಗೆ ನಿಂತು, ಮನವನ್ನು ತಟ್ಟಿ, ಹೃದಯವನ್ನು ಮುಟ್ಟುವ ನಿರೂಪಣೆ. ಆತ್ಮಿಕ ಸೌಂದರ್ಯವನ್ನು, ತತ್ವಸೌಂದರ್ಯವನ್ನು ಸಾಹಿತ್ಯಸೌಂದರ್ಯದೊಂದಿಗೆ ಬೆರಿಸಿ ಸದ್ದುಗದ್ದಲವಿಲ್ಲದೆ ಸಾಗುತ್ತದೆ, ನಿರಾಡಂಬರವಾದ ಅವರ ಬರವಣಿಗೆ.

— ಶಾಂತರಸ ರಾಯಚೂರು

୨୭
୨୫
୫୨

୨୨୨
୧୧୬
୩୩୮

୩୨୮
୨୧
୮

୮୪
୨୦
୧୦୪

୮୨
୩୦
୧୧୨

୩୨୮
୨୦